ಹುಬ್ಬಳ್ಳಿ
ಬುಧವಾರ, 6 ಮೇ 2026
ಸಂಪುಟ 16, ಸಂಚಿಕೆ 42, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

**ಗಾದಿ ಬಿಡದ ದೀದಿ**

ನಾನು ಸೋತಿಲ್ಲ, ರಾಜೀನಾಮೆ ನೀಡಲ್ಲ ಎಂದ ಮಮತಾ

• ಪುಟ ೨



ಧಾರವಾಡ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಂತರ್ ಕಾಲೇಜು ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಧಾರವಾಡ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜು ಚಾಂಪಿಯನ್ ಪಟ್ಟ ಅಲಂಕರಿಸಿದೆ. ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್, ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಸೇರಿ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹರ್ಷವ್ಯಕ್ತಪಡಿಸಿದ್ದಾರೆ.

## ದೇಶಗತಿ ಮನೆತನದಿಂದ ನಿಸ್ವಾರ್ಥ ಸೇವೆ

**ಧಾರವಾಡ:** ಜಮಖಂಡಿ ದೇಶಗತಿ ಮನೆತನಕ್ಕೆ ಸೇರಿದ ವಾಮನರಾವ್ ಹಾಗೂ ಪದ್ಮಾವತಿ ದಂಪತಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ನಿಸ್ವಾರ್ಥದಿಂದ ದೇಶ ಸೇವೆ ಮಾಡಿದ್ದಾರೆ ಎಂದು ವಕೀಲ ತಾತಾಸಾಹೇಬ ಬಾಂಗಿ ಹೇಳಿದರು. ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಲೀಲಾವತಿ ಹಾಗೂ ಜೀವಣ್ಣಗೌಡ ಪಾಟೀಲ ಕುಲಕರ್ಣಿ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪದ್ಮಾವತಿ ಗರ್ಭಿಣಿಯಾಗಿದ್ದಾಗಲೂ ಸ್ವಾತಂತ್ರ್ಯ ಹೋರಾಟ ಬಿಡಲಿಲ್ಲ. ಅಲ್ಲದೇ ಮಗ ಹುಟ್ಟಿದಾಗಲೂ ಕೂಡ ಒಂದು ಕೈಯಲ್ಲಿ ಮಗು, ಇನ್ನೊಂದು ಕೈಯಲ್ಲಿ ಧ್ವಜ ಹಿಡಿದು ಹೋರಾಟ ಮಾಡಿದ್ದಾರೆ ಎಂದು ಸ್ಮರಿಸಿದರು. ನಮ್ಮ ಜೀವಣ್ಣ ವಿಷಯದ ಕುರಿತು ಮಾತನಾಡಿದ ಕಲಘಟಗಿ ಶಿಕ್ಷಣ ಸಮಿತಿ ಕಾರ್ಯದರ್ಶಿ ಕೆ.ಬಿ.ಪಾಟೀಲ, ವಾಮನರಾವ್ ವೇಷವನ್ನು ಮರೆಸಿಕೊಂಡು, ಭೂಗತರಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದರು ಎಂದರು. ಜೀವಣ್ಣ ಅಂಚೆ ಇಲಾಖೆಯಲ್ಲಿ ವೃತ್ತಿಯನ್ನು ಪ್ರಾರಂಭಿಸಿ, ನಂತರ ಶಿಕ್ಷಕ ವೃತ್ತಿಯಲ್ಲಿ ತೊಡಗಿ, ಆದರ್ಶ ಶಿಕ್ಷಕರಾಗಿ ಸಲ್ಲಿಸಿದ್ದಾರೆ ಎಂದರು. ನಮ್ಮ ಲೀಲಕ್ಕ ವಿಷಯ ಕುರಿತು ಮಾತನಾಡಿದ ಪ್ರಾಧ್ಯಾಪಕ ಡಾ.ಸುಭಾಷ ಹಿರೇಮಠ ಮಾತನಾಡಿದರು. ಸಮಾಜ ಸೇವಕಿ ಪ್ರೇಮಾ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಆರ್.ಎಂ.ಷಡಕ್ಷರಯ್ಯ ದಂಪತಿಯನ್ನು ಸನ್ಮಾನಿಸಲಾಯಿತು. ಸೀತಾ ಛಪ್ಪರ, ಮನೋಜ ಪಾಟೀಲ, ಪ್ರೊ. ದುಷ್ಯಂತ ನಾಡಗೌಡ, ಮಹಾದೇವ ಹೊರಟ್ಟಿ, ವಿಶ್ವೇಶ್ವರಿ ಹಿರೇಮಠ, ಶೈಲಜಾ ಮನೋಜ ಅನೇಕರು ಪಾಲ್ಗೊಂಡಿದ್ದರು.




ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಲೀಲಾವತಿ ಹಾಗೂ ಜೀವಣ್ಣಗೌಡ ಪಾಟೀಲ ಕುಲಕರ್ಣಿ ದತ್ತಿ ಕಾರ್ಯಕ್ರಮವನ್ನು ವಕೀಲ ತಾತಾಸಾಹೇಬ ಬಾಂಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರೊ. ಆರ್.ಎಂ.ಷಡಕ್ಷರಯ್ಯ ದಂಪತಿಯನ್ನು ಸನ್ಮಾನಿಸಲಾಯಿತು.

## ಕಿರುಸುದ್ದಿ

### ಚಿಣ್ಣರ ನಾಟಕೋತ್ಸವ



**ಧಾರವಾಡ:** ಅಗಾಧ ಇತಿಹಾಸವುಳ್ಳ ರಂಗಭೂಮಿ ಕುರಿತು ಮಕ್ಕಳಿಗೆ ತಿಳುವಳಿಕೆ ನೀಡಿ, ಅವರನ್ನು ರಂಗಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳಲು ರಂಗಾಯಣ ಸಹಕಾರಿಯಾಗಿದೆ ಎಂದು ಮಕ್ಕಳ ಸಾಹಿತಿಗಳಾದ ನಿಂಗಣ್ಣ ಕುಂಟಿ ಹೇಳಿದರು. ರಂಗಾಯಣ ಧಾರವಾಡವು ಪಂ.ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ ಅಭಿನಯ-ಅಭಿವ್ಯಕ್ತಿ ಧ್ಯೇಯವಾಕ್ಯದಡಿ ಆಯೋಜಿಸಿದ್ದ ಮಕ್ಕಳ ರಂಗ ತರಬೇತಿ ಶಿಬಿರ ಹಾಗೂ ಚಿಣ್ಣರ ನಾಟಕೋತ್ಸವದ ಕುರಿತು ಸಮಾರೋಪ ಭಾಷಣ ಮಾಡಿದರು. ಇಂದಿನ ಆಧುನಿಕ ಸಮಾಜ ಮಕ್ಕಳ ಬಾಲ್ಯವನ್ನು ಕಿತ್ತುಕೊಂಡಿದೆ. ಬೇದ-ಭಾವ ಇಲ್ಲದ ರಂಗಭೂಮಿಯಲ್ಲಿ ಮಕ್ಕಳು ಸಂಗೀತ, ನಾಟಕ, ಚಿತ್ರಕಲೆಗಳ ರಂಗ ಚಟುವಟಿಕೆಗಳ ಶಿಬಿರದಲ್ಲಿ ತೊಡಗಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ರಂಗಸಮಾಜ ಮಯೂರ ಶಿಂದೆ ಮಾತನಾಡಿ, ಪಾಲಕರು ಕೆಲಸದ ಒತ್ತಡದಲ್ಲಿ ಮಕ್ಕಳಿಗೆ ಸರಿಯಾದ ಸಮಯ ನೀಡುತ್ತಿಲ್ಲ. ಇದರಿಂದ ಮಕ್ಕಳು ಮನೆಯಲ್ಲಿಯೇ ದಿನಗಳು ಕಳೆಯುವಂತಾಗಿದೆ. ರಂಗಾಯಣ ಮಕ್ಕಳ ಪ್ರತಿಭೆ ಗುರುತಿಸುವುದು ಶ್ಲಾಘನೀಯ. ಈ ಸಂದರ್ಭದಲ್ಲಿ ಚಿಣ್ಣರಮೇಳದ ಸಂಚಾಲಕರಾದ ಅರುಣಕುಮಾರ ಮೇದಾರ ಅವರನ್ನು ಸನ್ಮಾನಿಸಲಾಯಿತು. ರಂಗಾಯಣ ನಿರ್ದೇಶಕ ರುತಿಕರ ನಸಾಬ್ ಅಧ್ಯಕ್ಷತೆ ವಹಿಸಿದ್ದರು. ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಇದ್ದರು. ನಂತರ ಮಕ್ಕಳಿಂದ ನಾಟಕ, ನೃತ್ಯ ಕಾಯಕ್ರಮ ಜರುಗಿದವು. ವಿನೋದ ದಂಡಿನ ನಿರೂಪಿಸಿ, ವಂದಿಸಿದರು.

### ಪ್ರವೇಶ ಆರಂಭ



**ಧಾರವಾಡ:** ಮರಾಠ ವಿದ್ಯಾ ಪ್ರಸಾರಕ ಮಂಡಳದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕಲಾ, ವಾಣಿಜ್ಯ, ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಬಿಎ, ಬಿಕಾಂ, ಬಿಎಸ್ಸಿ ಹಾಗೂ ಎಂಎ ಇತಿಹಾಸ ವಿಭಾಗದ ಪ್ರವೇಶ ಈಗಾಗಲೇ ಪ್ರಾರಂಭವಾಗಿದೆ. ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬಹುದು. ಇಲ್ಲವೇ ನೇರವಾಗಿ ಕಾಲೇಜಿಗೆ ಖುದ್ದಾಗಿ ಭೇಟಿ ನೀಡಿ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿ ಮೊ: 9902681922ಕ್ಕೆ ಸಂಪರ್ಕಿಸಬಹುದೆಂದು ಮರಾಠ ವಿದ್ಯಾಪ್ರಸಾರಕ ಮಂಡಳದ ಅಧ್ಯಕ್ಷ ಎಂ.ಎನ್. ಮೋರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

**ಧಾರವಾಡ:** ಜಿಲ್ಲೆಯ ನೋಂದಾಯಿತ ಕಾರ್ಯನಿರತ ಕೈಮಗ್ಗ ನೇಕಾರ ಸಹಕಾರ ಸಂಘಗಳು, ಸಂಘದ ಉತ್ಪಾದನಾ ಚಟುವಟಿಕೆ ಹೆಚ್ಚಿಸಿಕೊಳ್ಳಲು, ಸಂಘಕ್ಕೆ ಸುಧಾರಿತ ಕೈಮಗ್ಗಗಳ ಖರೀದಿ ಮತ್ತು ದುಡಿಮೆ ಬಂಡವಾಳ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಕೈಮಗ್ಗ ನೇಕಾರ ಸಹಕಾರ ಸಂಘಗಳು ಮೇ 15, 2026 ರೊಳಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ (ಪ್ರಸ್ತಾವನೆ) ಸಲ್ಲಿಸಬೇಕು.

### ಪ್ರವೇಶಕ್ಕೆ ಅವಕಾಶ

**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಯುನಿವರ್ಸಿಟಿ ಪಬ್ಲಿಕ್ ಶಾಲೆಯ 2026-2027ನೇ ಶೈಕ್ಷಣಿಕ ಸಾಲಿಗೆ 5ರಿಂದ 10ನೇ ತರಗತಿಯವರೆಗೆ ಶಾಲೆ ಮತ್ತು ವರದಾ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಆಹ್ವಾನಿಸಿದೆ. 8ನೇ ತರಗತಿಯಿಂದ ಕನ್ನಡ ಹಾಗೂ ಆಂಗ್ಲ (ಇಂಗ್ಲಿಷ್) ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅವಕಾಶವಿರುತ್ತದೆ. ವಿಶ್ವವಿದ್ಯಾಲಯದ ಅಂತರ್ ಜಾಲತಾಣದಲ್ಲಿ www.kud.ac.in ಪ್ರವೇಶ ಮಾಹಿತಿ ಪಡೆಯಬಹುದು.

### ಅರ್ಜಿ ಆಹ್ವಾನ

**ಧಾರವಾಡ:** ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ 2026-27ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯ ಬಿ.ವಿ.ಎ ಪದವಿ ತರಗತಿಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ ಉತ್ತೀರ್ಣ ಅಥವಾ ಐ.ಟಿ.ಐ., ಡಿಪ್ಲೋಮಾ ಅಥವಾ ಪಿಯುಸಿ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಅರ್ಹ ವಿದ್ಯಾರ್ಥಿಗಳು ಮೇ 30ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾಹಿತಿ
# ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

**ಹುಬ್ಬಳ್ಳಿ:** ರಾಜಕೀಯದಲ್ಲಿ 50 ವರ್ಷ ಪೂರೈಸಿದ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಬಿಎಸ್‌ವೈ ಅಭಿಮಾನೋತ್ಸವ ಸಮಾರಂಭ ಮೇ 9ರಂದು ಹಮ್ಮಿಕೊಳ್ಳಲಾಗಿದೆ ಎಂದು ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ಅಭಿಮಾನೋತ್ಸವ ಸಮಿತಿಯಿಂದ ಚಿತ್ರದುರ್ಗದಲ್ಲಿ ಸಮಾರಂಭ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ಸಂಸದ ಗೋವಿಂದ ಕಾರಜೋಳ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಅನೇಕ ನಾಯಕರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.



**ಬಿಎಸ್‌ವೈ ಅಜಾತಶತ್ರು**

ರಾಜ್ಯದ ವಿವಿಧ ಭಾಗದಿಂದ 500ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಳ್ಳಲಿದ್ದು, ಅವರಿಗೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿದೆ. ಪಕ್ಷದ ರಾಷ್ಟ್ರೀಯ ನಾಯಕರ ಜೊತೆಗೆ ರಾಜ್ಯದ ನಾಯಕರೂ ಭಾಗವಹಿಸಲಿದ್ದಾರೆ. ಬೇರೆ ಪಕ್ಷದ ಮುಖಂಡರು ಸಹ ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಬಿ.ಎಸ್. ಯಡಿಯೂರಪ್ಪ ಅವರು ಅಜಾತಶತ್ರು ಆಗಿದ್ದಾರೆ. ಈ ಭಾಗದಿಂದಲೂ ಸಾವಿರಾರು ಮಂದಿ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ ಎಂದು ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು.

ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್, ಮುಖಂಡರಾದ ಜಯತೀರ್ಥ ಕಟ್ಟಿ, ಮಹೇಂದ್ರ ಕೌತಾಳ, ಲಿಂಗರಾಜ ಪಾಟೀಲ, ವಸಂತ ನಾಡಜೋಶಿ, ರಾಜು ಕೋರ್ಯಾಣಮಠ ಇದ್ದರು.

## ಮೆರವಣಿಗೆಗೆ ಕುಂಭಮೇಳ ಮೆರಗು

**ಧಾರವಾಡ:** ನಗರದ ಹಾವೇರಿಪೇಟೆಯ ದ್ಯಾಮವ್ವ-ದುರ್ಗವ್ವ ದೇವಿಯರ ಜಾತ್ರಾ ಮಹೋತ್ಸವವು ಮಂಗಳವಾರ ಸಂಭ್ರಮದಿಂದ ಜರುಗಿತು. ಭಕ್ತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯರ ಕೃಪೆಗೆ ಪಾತ್ರರಾದರು.

ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಬೆಳಗ್ಗೆ ಉಭಯ ದೇವಿಯರ ಭವ್ಯ ಮೆರವಣಿಯಲ್ಲಿ ಮುತ್ತೈದೆಯರು ಪೂರ್ಣಕುಂಭ ಹೊತ್ತು ಸಾಗುತ್ತಿದ್ದರೆ, ಮೆರವಣಿಗೆಯುದ್ದಕ್ಕೂ ಮಂಗಳವಾದ್ಯಗಳು, ಕಹಳೆ ಹಾಗೂ ಜಯಘೋಷಗಳು ಮೊಳಗಿದವು. ಪುಷ್ಪಾಲಂಕೃತ ರಥದಲ್ಲಿ ವಿರಾಜಮಾನರಾಗಿದ್ದ ದ್ಯಾಮವ್ವ-ದುರ್ಗವ್ವ ದೇವಿಯರನ್ನು ಕಂಡ ಭಕ್ತರು ಭಕ್ತಿಪರವಶರಾಗಿ ಪೂಜೆ ಸಲ್ಲಿಸಿದರು. ಹಾವೇರಿಪೇಟೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಈ ಮೆರವಣಿಗೆ ಇಡೀ ಪರಿಸರದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತ್ತು. ಸಂಜೆ ದೇವಸ್ಥಾನದ ಆವರಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಸ್ಯ ಕಲಾವಿದ ಮಹಾದೇವ ಸತ್ತಿಗೇರಿ ನಗೆ ಹಬ್ಬ ಜನಮನ ಆಕರ್ಷಿಸಿದ್ದು, ಉತ್ತರ ಕರ್ನಾಟಕ ಶೈಲಿಯ ಭಾಷೆ ಮತ್ತು ಮ್ಯಾನರಿಸಂ ಮೂಲಕ ಸತ್ತಿಗೇರಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ದೈನಂದಿನ ಜೀವನದ ಘಟನೆಗಳನ್ನು ಹಾಸ್ಯಮಯವಾಗಿ ವಿವರಿಸುತ್ತ ಸಾಮಾಜಿಕ ಸಂದೇಶಗಳನ್ನು ನೀಡಿದ ರೀತಿ ಜನರ ಮೆಚ್ಚುಗೆಗೆ ಪಾತ್ರವಾಯಿತು. ಜಾತ್ರೆಯ ಅಂಗವಾಗಿ ದೇವಿಯರಿಗೆ ವಿಶೇಷ ಅಲಂಕಾರ, ಅಭಿಷೇಕ ಹಾಗೂ ಮಹಾಪೂಜೆಗಳನ್ನು ನೆರವೇರಿಸಲಾಯಿತು. ಹಾವೇರಿಪೇಟೆ ಸೇರಿ ಧಾರವಾಡದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ದರ್ಶನ ಪಡೆದರು. ಜಾತ್ರಾ ಸಮಿತಿಯ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

> ದೇವಿಯರ ಕೃಪೆಯಿಂದ ಸುಖ-ಶಾಂತಿ ನೆಲೆಸಲಿ ಎಂಬ ಆಶಯದೊಂದಿಗೆ ಈ ಬಾರಿಯ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಮುತ್ತೈದೆಯರ ಕುಂಭೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜನರಲ್ಲಿ ಉತ್ಸಾಹ ತುಂಬಿವೆ.
> ■ ಕೆ.ಎಸ್.ಭೀಮಣ್ಣವರ, ಅಧ್ಯಕ್ಷ, ಜಾತ್ರಾ ಮಹೋತ್ಸವ ಸಮಿತಿ



## ರಾಜ್ಯದಲ್ಲೂ ಮರುಕಳಿಸಲಿದೆ ಐತಿಹಾಸಿಕ ಫಲಿತಾಂಶ: ವಿಜಯಲಕ್ಷ್ಮೀ ಮಾನ್ವಿ



**ಗದಗ:** ರಾಜ್ಯದಲ್ಲಿ ನಡೆಯಲಿರುವ 2028 ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲೂ ಈ ಐತಿಹಾಸಿಕ ಚುನಾವಣಾ ಫಲಿತಾಂಶ ಮರುಕಳಿಸಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಜನಪರ ಮತ್ತು ಪಾರದರ್ಶಕ ಆಡಳಿತವೇ ಇದಕ್ಕೆ ಸಾಕ್ಷಿ ಆಗಲಿದೆ. ರಾಜ್ಯದಲ್ಲಿ ಬಿ. ವೈ. ವಿಜಯೇಂದ್ರ ಅವರ ನಾಯಕತ್ವ ಹಾಗೂ ದೇಶದಲ್ಲಿ ಮೋದಿ ನಾಯಕತ್ವವನ್ನು ಜನತೆ ಬಯಸಿದ್ದಾರೆ ಅನ್ನೋದೇ ಈ ಫಲಿತಾಂಶದ ಉದ್ದೇಶವಾಗಲಿದೆ ಎಂದು ಬಿಜೆಪಿ ನಾಯಕಿ ವಿಜಯ ಲಕ್ಷ್ಮೀ ಮಾನ್ವಿ ವಿಶ್ವಾಸ ವ್ಯಕ್ತ ಪಡಿಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಗೆಲುವಿನ ನಗೆ ಬೀರುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನಾಯಕತ್ವ ಇಡೀ ದೇಶದ ಜನತೆ ಒಪ್ಪಿರುವುದಕ್ಕೆ ಈ ಫಲಿತಾಂಶವೇ ಸಾಕ್ಷಿ ಆಗಿದೆ. ಪಶ್ಚಿಮ ಬಂಗಾಳದಲ್ಲಿ ಐತಿಹಾಸಿಕ ಗೆಲುವು ಸಾಧಿಸುವ ಮೂಲಕ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ್ದಾರೆ. ಅಸ್ಸಾಂ ಮತ್ತು ಪುದುಚೇರಿಯಲ್ಲೂ ಕಮಲ ಅರಳಿದೆ. ಇನ್ಮುಂದೆ ದೇಶದಲ್ಲಿ ಕಮಲ ಅರಳುವ ಎಲ್ಲ ಲಕ್ಷಣಗಳು ಗೋಚರಿಸಿವೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಈ ಮೂರು ರಾಜ್ಯಗಳ ಗೆಲುವು ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ, ಉಲ್ಲಾಸ ಹೆಚ್ಚಿಸಿದೆ. ಈ ಮೂರು ರಾಜ್ಯಗಳ ಐತಿಹಾಸಿಕ ಗೆಲುವಿಗೆ ಕೇಂದ್ರ ಬಿಜೆಪಿ ನಾಯಕು ಹಾಗೂ ಬಿಜೆಪಿ ಪರವಾಗಿ ಮತ ಚಲಾಯಿಸಿ ಆಡಳಿತ ನಡೆಸುವ ಅವಕಾಶ ಕಲ್ಪಿಸಿದ ಜನರೇ ಕಾರಣ ಎಂದರು.

## ಧಾರ್ಮಿಕ ಪರಂಪರೆಯಿಂದ ನೆಮ್ಮದಿ: ದಾಡಿಬಾವಿ



**ನವಲಗುಂದ:** ಧಾರ್ಮಿಕ ಕಾರ್ಯಗಳು ಮತ್ತು ಆಚರಣೆಗಳು ಮನಸ್ಸಿಗೆ ನೆಮ್ಮದಿ ಮತ್ತು ಸಮಾಧಾನವನ್ನು ನೀಡುತ್ತವೆ ಎಂದು ಬಿಜೆಪಿ ಮುಖಂಡ ದೇವರಾಜ ದಾಡಿಬಾವಿ ಹೇಳಿದರು.

ಅವರು ತಾಲೂಕಿನ ಹಣಸಿ ಗ್ರಾಮದ ದ್ಯಾಮವ್ವ ದುರ್ಗಮ್ಮ ಜಾತ್ರಾ ಮಹೋತ್ಸವ ಹಾಗೂ ಮ.ನಿ.ಪ್ರ ಗುದ್ದಲೀಶ್ವರ ಸ್ವಾಮೀಜಿಯ 75ನೇ ಜನ್ಮ ವರ್ಧಂತಿ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಧಾರ್ಮಿಕ ಆಚರಣೆಗಳು ಸಮಾಜದ ಅಶಾಂತಿ ದೂರ ಮಾಡಬಹುದು. ಶರಣರು-ಸಂತರು, ಗುರು-ಹಿರಿಯರ ಆಶೀರ್ವಾದ, ದೇಶದಲ್ಲಿ ಧಾರ್ಮಿಕ ಪರಂಪರೆಯಿಂದ ಮನುಕುಲಕ್ಕೆ ನೆಮ್ಮದಿ ಎಂದರು.

ಹೊಸರಿತ್ತಿ ಗ್ರಾಮದ ಗುದ್ದಲೀಶ್ವರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವದಿಸಿದರು. ಸುಧಾ ಪಟ್ಟಣಶೆಟ್ಟಿ (ನಿಯೋಜಿತ ಸಿವಿಲ್ ನ್ಯಾಯಾಧೀಶ) ಹಾಗೂ ಆರಕ್ಷಕ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ, ಮಂಡಲ ಅಧ್ಯಕ್ಷ ಗಂಗಪ್ಪ ಮನಮಿ, ಜಿ.ಪಂ ಮಾಜಿ ಅಧ್ಯಕ್ಷ ಶಾಂತಮ್ಮ ಗುಜ್ಜಳ, ಪ್ರಗತಿಪರ ರೈತ ಮಂಜುನಾಥ ಕಾಲವಾಡ, ಸಿದ್ದಪ್ಪ ಕುರಿ, ದೇವಪ್ಪ ಮ. ಕುರಿ, ಅಜ್ಜನಗೌಡ ಪಾಟೀಲ, ಸಂಗನಗೌಡ ಹುಡೇದ, ರಾಮಪ್ಪ ನಾಯ್ಕರ, ಈರಪ್ಪ ಮಾಳವಾಡ, ಈರಪ್ಪ ಮುಗಳಿ, ಭೀಮಪ್ಪ ಜಕಾತಿ, ಶಿವನಪ್ಪ ಬಾಡಗಾರ ಸೇರಿದಂತೆ ಇತರರಿದ್ದರು.



ಧಾರವಾಡ: ವಕೀಲರ ಸಂಘದ ನೂತನ ಪದಾಧಿಕಾರಿಗಳನ್ನು ಕರ್ನಾಟಕ ಥಿಂಕರ್ಸ್ ಫೋರಮ್ ಧಾರವಾಡ ಜಿಲ್ಲಾಧ್ಯಕ್ಷ ಪಿ.ಎಚ್.ನೀರಲಕೇರಿ ಸನ್ಮಾನಿಸಿದರು.

## ರೋಗಿಗಳ ಕಾಳಜಿ ವಹಿಸುವುದು ಅವಶ್ಯ: ಮಹೇಶ ಟೆಂಗಿನಕಾಯಿ



**ಹುಬ್ಬಳ್ಳಿ:** ವಿದ್ಯಾನಗರದ ಕೆಎಂಸಿಆರ್‌ಎಲ್‌ನಲ್ಲಿ ಸುಮಾರು 2 ಕೋಟಿಗೂ ಹೆಚ್ಚು ಮೊತ್ತದ ವೈಟ್ ಟ್ಯಾಪಿಂಗ್ ರಸ್ತೆ ಕಾಮಗಾರಿಗಳಿಗೆ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕೆಎಂಸಿಆರ್‌ಐ ಘಟಕದಲ್ಲಿ ನಾವು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದು ಮತ್ತು ಇಲ್ಲಿನ ವೈದ್ಯರು ಒಳ್ಳೆಯ ಕೆಲಸವನ್ನು ಮಾಡಿ ರೋಗಿಗಳೊಂದಿಗೆ ಅನ್ಯೋನ್ಯಸಂಬಂಧಹೊಂದಿದ್ದಾರೆ. ವಿಶಾಲವಾದ ಕ್ಷೇತ್ರದಲ್ಲಿ ಸರಿಯಾದ ರಸ್ತೆ ನೀರು ಗಟಾರಗಳು ಸೇರಿದಂತೆ ಮೂಲಭೂತ ಸೌಕರ್ಯಗಳು ಒದಗಿಸಲು ನಾನು ಬದ್ದನಿದ್ದೇನೆ ಎಂದರು.

ಕೇಂದ್ರ ಸರ್ಕಾರದಿಂದ ಇಲ್ಲಿನ ಅಭಿವೃದ್ಧಿಗೆ ಸಾಕಷ್ಟು ನೆರವು ನೀಡಿದ್ದು ಈಗ ರಾಜ್ಯ ಸರ್ಕಾರವು ನೆರವನ್ನು ನೀಡುತ್ತಿದೆ ಎಂದರು. ಇಲ್ಲಿ ಸುಮಾರು ಏಳು ಜಿಲ್ಲೆಗಳಿಂದ ರೋಗಿಗಳು ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಈ ಸಂತೆಯು ಉತ್ತರ ಕರ್ನಾಟಕದ ದೊಡ್ಡ ಸಂಸ್ಥೆಯಾಗಿದ್ದು ಅದಕ್ಕನುಗುಣವಾಗಿ ಎಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ನಿಭಾಯಿಸುವುದು ಅತಿ ಮುಖ. ಸಂಸ್ಥೆಗೆ ಒಳ್ಳೆಯ ಹೆಸರನ್ನು ತರುವುದು ಅಷ್ಟೇ ಮುಖ್ಯ. ಬಡ ರೋಗಿಗಳ ಕಾಳಜಿಯನ್ನು ಮಾಡಬೇಕಾಗಿದೆ. ಇಲ್ಲಿನ ಸಿಬ್ಬಂದಿ ಒಳ್ಳೆಯ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಅಧೀಕ್ಷಕ ಹೊಸಮನಿ ಸೂಪರಿಡೆಂಟ್ ಹಸಬಿ, ಬಿಜೆಪಿ ಮುಖಂಡ ಲಿಂಗರಾಜ್ ಲಿಂಗರಾಜ್ ಪಾಟೀಲ್ ಸೇರಿದಂತೆ ಇತರರಿದ್ದರು.

## ಬೃಹತ್ ಪಾಲಿಕೆ ಬಗ್ಗೆ ಚರ್ಚಿಸದೆ ಪಲಾಯನ: ಇಮ್ರಾನ್ ಯಲಿಗಾರ



**ಧಾರವಾಡ:** ಹುಬ್ಬಳ್ಳಿ-ಧಾರವಾಡ ಬೃಹತ್ ಮಹಾನಗರ ಪಾಲಿಕೆ ನಿರ್ಣಯ ನಮ್ಮ ವಿರೋಧವಿದೆ. ಈ ಬಗ್ಗೆ ಚರ್ಚಿಸದ ಪ್ರತಿಪಕ್ಷದ ನಾಯಕರು ಸಭೆಯಿಂದ ಹೊರ ನಡೆದಿದ್ದಾರೆ ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಇಮ್ರಾನ್ ಯಲಿಗಾರ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತ್ಯೇಕ ಮಹಾನಗರ ಪಾಲಿಕೆಗೆ ನಮ್ಮ ಬೆಂಬಲವಿದೆ. ಆದರೆ ಸಭೆಯಲ್ಲಿ ಯಾವುದೇ ಚರ್ಚೆ ನಡೆಸದೆ, ಏಕಪಕ್ಷೀಯವಾಗಿ ಕೈಗೊಂಡ ಬೃಹತ್ ಪಾಲಿಕೆ ನಿರ್ಣಯ ಒಪ್ಪುವುದಿಲ್ಲ. ಮೊದಲು ಪ್ರತ್ಯೇಕ ಪಾಲಿಕೆಗೆ ಬೆಂಬಲಿಸಿದ ಆಡಳಿತರೂಢ ಬಿಜೆಪಿ ನಾಯಕರು, ಈ ನಿರ್ಣಯ ಸರ್ಕಾರವೂ ಒಪ್ಪಿ ರಾಜ್ಯಪಾಲರ ಅಂಕಿತ ಬಾಕಿ ಇರುವಾಗ ಈಗ ಬೃಹತ್ ಪಾಲಿಕೆ ಹೆಸರಲ್ಲಿ ರಾಗ ಬದಲಿಸಿದ್ದು, ಅವರ ಈ ದ್ವಂದ್ವ ನಿಲುವು ಸಲ್ಲ ಎಂದರು.

ಪ್ರತ್ಯೇಕ ಪಾಲಿಕೆ ರಚನೆ ಗಡಿ ಗುರುತಿಸಿಲ್ಲ, ಸಮನಾಗಿ ವಾರ್ಡ್ ಹಂಚಿಲ್ಲ, ಬಳಿಕತೆರಿಗೆಸಂಗ್ರಹಗೊಳ್ಳಲ್ಲ ಎನ್ನುವ ಸಭಾನಾಯಕ ಈರೇಶ ಅಂಚಟಗೇರಿ ಅವರು, ಬೃಹತ್ ಪಾಲಿಕೆಗೆ ಹುಬ್ಬಳ್ಳಿ-ಧಾರವಾಡ ಅರ್ಹತೆ ಹೊಂದಿದೆಯೇ ಎಂದು ಪ್ರಶ್ನೆ ಮಾಡಿದರು.

ಒಂದು ವೇಳೆ ಬಿಜೆಪಿ ನಾಯಕರು, ಬೃಹತ್ ಪಾಲಿಕೆ ನಿರ್ಧಾರ ಬದಲಿಸಿಕೊಳ್ಳದಿದ್ದರೆ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಆಗುವವರೆಗೂ ಹೋರಾಟ ನಿಲ್ಲುವುದಿಲ್ಲ. ಅಲ್ಲದೇ ಈ ಕುರಿತು ಕಾನೂನು ಹೋರಾಟಕ್ಕೂ ಸಹ ಸಿದ್ಧ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ದೀಪಾ ನೀರಲಕಟ್ಟಿ, ಕವಿತಾ ಕಬ್ಬೇರ, ರಾಜು ಕಮತಿ, ಶಂಭು ಸಾಲಮನಿ, ತುಳಜಪ್ಪ ಪೂಜಾರ, ಈಶ್ವರ ಶಿವಳ್ಳಿ, ಈರಣ್ಣ ಶಟ್ಟರ್ ಇದ್ದರು.

## ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ ಜನರಹಿತ ಕಾಪಾಡಲಿ



**ಹುಬ್ಬಳ್ಳಿ:** ಹಿಂದುಳಿದವರಿಗೆ ಸೂರು ಕಲ್ಪಿಸುವ ತನ್ನ ಮೂಲ ಉದ್ದೇಶ ಬಿಟ್ಟು ಬೇರೆಲ್ಲ ಕೆಲಸಗಳನ್ನು ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಮಾಡುತ್ತಿದೆ ಎಂದು ಆರೋಪಿಸಿ ನಿವೇಶನ ರಹಿತರ ಆಂದೋಲನ ಸಂಘಟನೆ ವತಿಯಿಂದ ನಿವಾಸಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ಇಲ್ಲಿಯ ನವನಗರದ ಹುಡಾ ಕಚೇರಿ ಎದುರು ಸಮಾವೇಶಗೊಂಡ ಸಂಘಟನೆಯ ನೂರಾರು ಸದಸ್ಯರು ಧರಣಿ ನಡೆಸಿ ಆಡಳಿತ ವ್ಯವಸ್ಥೆ ವಿರುದ್ಧ ಘೋಷಣೆ ಕೂಗಿದರು. ಕಳೆದ ನಾಲ್ಕು ದಶಕದಿಂದ ಅವಳಿನಗರದಲ್ಲಿ ಮನೆ, ಖಾಲಿ ಜಾಗ ಯಾವುದೂ ಇಲ್ಲದೇ ಬಾಡಿಕೆ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಎಂದು ನಿವೇಶನ ರಹಿತ ಅನೇಕ ಜನರು ಪ್ರತಿಭಟನೆ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಆಂದೋಲನ ಸಂಚಾಲಕ ನಾಗರಾಜ ಗುರಿಕಾರ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನಿವೇಶನ ಒದಗಿಸುವ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಇದೀಗ ಜನರ ಹಿತ ಮರೆತಿದೆ. ಸತತ ಹೋರಾಟ ನಡೆಸುತ್ತ ಬಂದಿದ್ದರೂ ಅವಳಿನಗರದ ಸರ್ಕಾರಿ ಜಾಗ ಗುರುತಿಸಿ ಬಡವರಿಗೆ ಜಾಗ ನೀಡುವ ಕೆಲಸ ಮಾಡುತ್ತಿಲ್ಲ ಎಂದು ದೂರಿದರು.

ಬಡವರು, ಆರ್ಥಿಕ ಹಿಂದುಳಿದವರಿಗೆ ಮನೆ, ನಿವೇಶನ ಕೊಡಲು ಆಗದಿದ್ದರೆ ಪ್ರಾಧಿಕಾರ ಯಾತಕ್ಕಾಗಿ ಇದೆ? ಸರ್ಕಾರಿ ಕಚೇರಿಯ ಉದ್ದೇಶವಾದರೂ ಏನು? ಎಂದು ಪ್ರಶ್ನಿಸಿದರು. ಪ್ರಾಧಿಕಾರವು ಇತ್ತೀಚೆಗೆ ಅವಳಿನಗರ ಸುತ್ತಲಿನ 46 ಹಳ್ಳಿಗಳನ್ನು ಹುಡಾ ವ್ಯಾಪ್ತಿಗೆ ಸೇರಿಸಿಕೊಂಡಿದೆ. ಈ ಹಳ್ಳಿಗಳಲ್ಲಿ ಸರ್ಕಾರಿ ಭೂಮಿ, ಪಡ ಜಾಗ ಇವೆ. ಅವುಗಳನ್ನು ಗುರುತಿಸಿ, ಆರ್ಥಿಕ ಹಿಂದುಳಿದವರಿಗಾಗಿ ಜಾಗ ಮೀಸಲಿಡಬೇಕು. ಅದರಲ್ಲಿ ಲೇಔಟ್ ನಿರ್ಮಿಸಿ ಹಂಚಿಕೆ ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹುಡಾ ಅಧ್ಯಕ್ಷ ಶಾಕೀರ್ ಸನದಿ ಅವರು ಬಡವರ ಬಗ್ಗೆ ಕಾಳಜಿ ಉಳ್ಳವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹಿಂದುಳಿದವರಿಗಾಗಿ ವಸತಿ ಯೋಜನೆ ಜಾರಿ ಮಾಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಈಗ ವಸತಿ ರಹಿತರು ಕೇಳುತ್ತಿದ್ದೇವೆ. ಕೂಡಲೇ ಯೋಜನೆ ಜಾರಿ ಮಾಡಬೇಕು ಎಂದರು. ಈ ಕುರಿತು ಮನವಿಯನ್ನು ಹುಡಾ ಅಧ್ಯಕ್ಷ ಶಾಕೀರ್ ಸನದಿ ಅವರಿಗೆ ಸಲ್ಲಿಸಲಾಯಿತು. ಬಸವರಾಜ ಕಿತ್ತೂರ, ರಾಜು ಹಿರೇವಡಿಯರ, ನಾಗರಾಜ ನಾಡಕರ್ಣಿ, ಕಿರಣಸಿಂಗ್ ರಜಪೂತ, ಮಹಾದೇವಿ ಉಮಚಗಿ, ಬಿಬಿಜಾನ್ ಮುಲ್ಲಾ ಇತರರಿದ್ದರು.

## ಸಂಪದ್ಭರಿತ ಭಾಷೆ ಕನ್ನಡ: ಮಹಾಂತೇಶ ಬೆಂತೂರ



**ಅಳ್ನಾವರ:** ನೂರಾರು ಭಾಷೆಗಳಲ್ಲಿ ಎತ್ತರದ ಸ್ಥಾನವನ್ನು ಅಲಂಕರಿಸಿರುವ ಕನ್ನಡ ಸಂಪದ್ಭರಿತ ಭಾಷೆಗಳಲ್ಲಿ ಒಂದಾಗಿದೆ ಜೊತೆಗೆ ನಮ್ಮ ಬದುಕನ್ನು ಹಸನುಗೊಳಿಸುವ ಭಾಷೇ ಕೂಡಾ ಆಗಿದೆ ಎಂದು ಪಟ್ಟಣ ಪಂಚಾಯತ್ ಸಮುದಾಯ ಸಂಘಟನಾಧಿಕಾರಿ ಮಹಾಂತೇಶ ಬೆಂತೂರ ಹೇಳಿದರು.

ಅಳ್ನಾವರದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಆಯೋಜಿಸಿದ್ದ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಉಪನ್ಯಾಸ ನೀಡಿ, ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿ ಮತ್ತು ಕರ್ನಾಟಕದ ಏಕೀಕರಣ ಬೆಳವಣಿಗೆಯಲ್ಲಿ ವಹಿಸಿದ್ದ ಪ್ರಮುಖ ಪಾತ್ರವನ್ನು ವಿವರಿಸಿ ಕನ್ನಡ ನಾಡು ನುಡಿ ಸಂಸ್ಕೃತಿ ಈಡಿ ಜಗತ್ತಿಗೆ ಮಾದರಿಯಾಗಿದೆ. ಅನ್ಯ ಭಾಷೇಯನ್ನು ಬಳಸುವುದು ತಪ್ಪಲ್ಲ, ಆದರೆ ಕನ್ನಡ ಭಾಷೇಯನ್ನು ಗೌರವಿಸುವ ಕೆಲಸವೂ ನಮ್ಮೆಲ್ಲರಿಂದ ಆಗಬೇಕು ಎಂದರು.

ಶತಮಾನಗಳಷ್ಟು ಹಿಂದೆಯೇ ರಚಿತವಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ರಾಜ್ಯ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ,ಆಧುನಿಕತೆ ಮತ್ತು ಪರಭಾಷಾ ಆಕರ್ಷಣೆಗೆ ಸಿಲುಕಿ ಕನ್ನಡವನ್ನು ಕೀಳಾಗಿ ಕಾಣುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಿರುವುದು ಖಂಡನೀಯವೆಂದು ಹೇಳಿದ ಮಹಾಂತೇಶ ಬೆಂತೂರ ಅವರು, ಬದುಕು ಕಲಿಸಿದ ಭಾಷೇಯನ್ನು ತಾಯಿಯ ಸ್ಥಾನದಲ್ಲಿಟ್ಟು ಗೌರವಿಸಬೇಕು ಎಂದರು

ಕ್ಷೇತ್ರ ಶಿಕ್ಷಣ ಸಂಪನ್ಮೂಲ ಅಧಿಕಾರಿ ಸುಭಾಸ ತಿಗಡೊಳ್ಳಿ ಮಾತನಾಡಿ, ಕನ್ನಡಿಗರಿಗೂ ಅನೇಕ ಉದ್ಯೋಗಗಳಿದ್ದು, ಕನ್ನಡದ ಬಗ್ಗೆ ಆಸಕ್ತಿ ಬೆಳೆಸುವಲ್ಲಿ ಸಾಹಿತ್ಯ ಪರಿಷತ್ತಿನ ಜೊತೆಗೆ ಪ್ರತಿಯೊಬ್ಬರು ಕೈಜೋಡಿಸುವದು ಅವಶ್ಯವಿದೆ ಎಂದರು.

ಸಮಾರಂಭವನ್ನು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಅಮೋಲ ಗುಂಜೀಕರ ಉದ್ಘಾಟಿಸಿದರು.

ತಾಲೂಕು ಕಸಾಪ ಅಧ್ಯಕ್ಷ ಗುರುರಾಜ ಸಬನೀಸ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ, ಅಳ್ನಾವರ ಹಾಗೂ ಬೆಣಚಿ ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಾದ ಸಂಜಯ ಮಾಳಿ ಮತ್ತು ಎಸ್.ಎಸ್.ಬೆನಕನಾಳ, ಸುಮಾ ಸೊಪ್ಪಿ, ಎಸ್.ಡಿ.ದೇಗಾಂವಿಮಠ, ಶಿವಾಜಿ ಡೊಳ್ಳಿನ, ಗಜಾನನ ಭಲವಾದಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಪ್ರವೀಣ ಪವಾರ, ಏಕನಾಥ ಶಿಂಪಿ, ವಸಂತ ಭಜಂತ್ರಿ, ಏಕನಾಥ ಹೊನಗೇಕರ, ಶಿವಪ್ಪ ಭಲವಾದಿ, ದೇವೆಂದ್ರ ಖಾನಾಪೂರ, ಆಕಾಶ ಜನಕಾಟಿ, ಶಶಿಕುಮಾರ ಪತಂಗೆ ಇತರರಿದ್ದರು.

**ಹಲವರಿಗೆ ಸನ್ಮಾನ**

ಅಳ್ನಾವರ ಮತ್ತು ಬೆಣಚಿ ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಮುಖ್ಯ ಶಿಕ್ಷಕ ಹುದ್ದೆಗೆ ಪದೋನ್ನತಿ ಹೊಂದಿರುವ ಶಿಕ್ಷಕರನ್ನು ಸಾಹಿತ್ಯ ಪರಿಷತ್ತಿನ ವತಿಯಿಂದ ಸನ್ಮಾನಿಸಲಾಯಿತು.

ಹುಬ್ಬಳ್ಳಿ
ಬುಧವಾರ, 6 ಮೇ 2026
ಸಂಪುಟ 16, ಸಂಚಿಕೆ 42, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಭಾರತದ ಕಟ್ಟುನಿಟ್ಟಿನ ನಿಯಮ | 02
ಮೇ 8ರಿಂದ ಮಾವು, ಹಲಸು ಮೇಳ | 03
ಪಶ್ಚಿಮ ಬಂಗಾಳ ವೀಕ್ಷಕರಾಗಿ ಶಾ ನೇಮಕ | 02

### ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮೂಲ

### ದಿನದ ಮಾತು

ಕಳಂಕವನ್ನು ಮನಸ್ಸಿನಿಂದ ತೊಡೆದು ಹಾಕಿ ಬಾಳುವುದೇ ಒಳ್ಳೆಯ ನಡತೆ.
▲ ನೀತಿಮಂಜರಿ

### ಬೇರೆಯವರಾಗಿದ್ದರೆ ಅದೆಷ್ಟು ಮೆರೆಯುತ್ತಿದ್ದರೊ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು

• ಪುಟ ೬

## ಕಿರುಸುದ್ದಿ

### ಸಿಎಂ ಇಂದು ಮೈಸೂರಿಗೆ

• **ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 6ರಂದು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಬುಧವಾರ ಬೆಳಗ್ಗೆ 10.55ಕ್ಕೆ ವಿಶೇಷ ವಿಮಾನದ ಮೂಲಕ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಲಿದ್ದಾರೆ. ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯುತ್ಸವ ಸಮಿತಿ ವತಿಯಿಂದ ನಗರದ ಕಲಾಮಂದಿರದಲ್ಲಿ ಆಯೋಜಿಸಿರುವ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ, 2025-26ನೇ ಸಾಲಿನ ಕಾಯಕಯೋಗಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ 7 ಗಂಟೆಗೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ಮೈಸೂರಿನಲ್ಲಿ ವಾಸ್ತವ್ಯ ಮಾಡುವರು. ಮೇ 7 ರ ಬೆಳಗ್ಗೆ 11.25ಕ್ಕೆ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

### ಕಬ್ಬು ಬೆಂಬಲ ಬೆಲೆ ಕ್ವಿಂಟಾಲ್‌ಗೆ ₹365

• **ಹೊಸದಿಲ್ಲಿ:** ಕೇಂದ್ರ ಸರ್ಕಾರವು 2026-27ರ ಸಕ್ಕರೆ ಹಂಗಾಮಿಗೆ(ಅಕ್ಟೋಬರ್‌ನಿಂದ ಆರಂಭ) ಕಬ್ಬಿನ ಕನಿಷ್ಠ ಖರೀದಿ ಬೆಲೆಯಾದ ನ್ಯಾಯಸಮ್ಮತ ಹಾಗೂ ಲಾಭದಾಯಕ ದರವನ್ನು(ಎಫ್‌ಆರ್‌ಪಿ) ಕ್ವಿಂಟಾಲ್‌ಗೆ 10 ರೂ. ಹೆಚ್ಚಿಸಿ 365ಕ್ಕೆ ನಿಗದಿಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ(ಸಿಸಿಇಎ) ಈ ನಿರ್ಧಾರ ಕೈಗೊಂಡಿದೆ.

• ಪುಟ ೭

### ಭಾರೀ ಗೆಲುವಿಗೆ ಮೋದಿ ಅಭಿನಂದಿಸಿದ ಟ್ರಂಪ್

• ಪುಟ ೪

### ಸೋಲಿಂದ ಹತಾಶರಾಗದಿರಿ: ಬಿ.ವೈ.ವಿಜಯೇಂದ್ರ

• ಪುಟ ೫

### ಕಾನೂನು ಹೋರಾಟಕ್ಕೆ ಸಿದ್ಧತೆ: ಡಿಸಿಎಂ ಡಿಕೆಶಿ

• ಪುಟ ೫

### ಕೋರ್ಟ್ ಆದೇಶ ಅವಮಾನಿಸುವುದು ಸಲ್ಲ

• ಪುಟ ೪

### ಯುಎಇ ಮೇಲಿನ ಇರಾನ್ ದಾಳಿಗೆ ಭಾರತ ಖಂಡನೆ

• ಪುಟ ೭

### ಮೇ 11ರಿಂದ ಯುಜಿಸಿಇಟಿ ದಾಖಲೆ ಪರಿಶೀಲನೆ

• ಪುಟ ೪

### ನಾನು ಸೋತಿಲ್ಲ, ರಾಜೀನಾಮೆ ನೀಡಲ್ಲ ಎಂದ ಮಮತಾ

# ಗಾದಿ ಬಿಡದ ದೀದಿ

• **ಹೊಸದಿಲ್ಲಿ:** ದೇಶದ ಹಿತಾಸಕ್ತಿಗೆ ಪೂರಕವಾದ ಕೇಂದ್ರದ ಎಲ್ಲಾ ನಡೆಗಳಿಗೂ ಬೆನ್ನು ಮಾಡಿದ ಕುಖ್ಯಾತಿಯ ಪಶ್ಚಿಮ ಬಂಗಾಳದ ನಿಕಟಪೂರ್ವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇದೀಗ ಹೊಸ ಅಪಸ್ವರವೆತ್ತಿದ್ದಾರೆ. ಪ.ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಜನಾದೇಶ ಪಡೆದಿದೆ. ಮಮತಾ ಬ್ಯಾನರ್ಜಿ ಸ್ವಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ. ಆದರೆ ಈ ವಾಸ್ತವ ಒಪ್ಪಲು ನಿರಾಕರಿಸಿರುವ ಮಮತಾ ಬ್ಯಾನರ್ಜಿ ತಾನು ಸೋತೇ ಇಲ್ಲ ಎನ್ನುವ ಮೂಲಕ ಜನಾದೇಶವನ್ನೇ ಶಂಕಿಸಿದ್ದಾರೆ ಮತ್ತು ಅಪಮಾನಿಸಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ ತಾನು ರಾಜೀನಾಮೆ ನೀಡಲ್ಲ, ತಾನು ಸೋತಿಲ್ಲ, ತಾನು ರಾಜಭವನಕ್ಕೆ ತೆರಳುವುದಿಲ್ಲ, ಇಂತಹ ಪ್ರಶ್ನೆಯೇ ಉದ್ಭವಿಸಿಲ್ಲ. ನಾವು ಚುನಾವಣೆಯಲ್ಲಿ ಸೋತಿಲ್ಲ, ಅವರು ನಮ್ಮನ್ನು ಪರಾಭವಗೊಳಿಸಲು ಯತ್ನಿಸಿದರು. ಅಧಿಕೃತವಾಗಿ ಚುನಾವಣಾ ಆಯೋಗ ಮುಖೇನ ಅವರು ನಮ್ಮನ್ನು ಸೋಲಿಸಬಲ್ಲರು. ಆದರೆ ನೈತಿಕವಾಗಿ ನಾವು ಚುನಾವಣೆ ಗೆದ್ದಿದ್ದೇವೆ ಎಂದು ಕೋಲ್ಕತ್ತಾದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಈ ಮೂಲಕ ದೇಶದ ಚುನಾವಣಾ ಆಯೋಗ, ಮತದಾನ ವ್ಯವಸ್ಥೆ, ಸಾಂವಿಧಾನಿಕ ಸಂಸ್ಥೆಗಳನ್ನು ಅಪಮಾನಿಸಿದ್ದಾರೆ. ➡ಪುಟ ೪



### ಸಂಪುಟಕ್ಕೆ ಭಾರೀ ಸೋಲು: 22 ಟಿಎಂಸಿ ಸಚಿವರ ಪತನ

• ಪುಟ ೭

### ಮುಖ್ಯಮಂತ್ರಿ ಕುರ್ಚಿಯಿಂದ ಮಮತಾ ಇಳಿಯಲೇಬೇಕು

ರೂಢಿಯಲ್ಲಿರುವ ನಿಯಮಾವಳಿ ಪ್ರಕಾರ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಯಬೇಕು ಅಥವಾ ರಾಜೀನಾಮೆ ನೀಡಬೇಕು ಮತ್ತು ಹೊಸ ಸರಕಾರ ಪ್ರಮಾಣವಚನ ಸ್ವೀಕರಿಸುವ ತನಕ ಹಂಗಾಮಿ ಸಿಎಂ ಆಗಿ ಮುಂದುವರಿಯಬೇಕು. ➡ಪುಟ ೪

### ಯಾರ ಜತೆ ಟಿವಿಕೆ ಮೈತ್ರಿ
### ಸ್ಟಾಲಿನ್, ವಿಜಯನ್ ರಾಜೀನಾಮೆ
### ಮೇ 9ಕ್ಕೆ ಬಂಗಾಳದಲ್ಲಿ ಪ್ರಮಾಣ?
### ಕೇರಳದಲ್ಲಿ ಯಾರು ಸಿಎಂ?

• ಪುಟ ೭

### 2 ವಿಭಿನ್ನ ಕ್ಷೇತ್ರಗಳಿಂದ ಸತತ 2 ಬಾರಿ ಹಾಲಿ ಸಿಎಂ ಮಣಿಸಿದ ಸುವೇಂದು!

ಟಿಎಂಸಿ ನಾಯಕಿ ಮಮತಾರನ್ನು ಸುವೇಂದು ಅಧಿಕಾರಿ ಎರಡನೇ ಬಾರಿ ಸೋಲಿಸಿದ್ದಾರೆ.



2021ರಲ್ಲಿ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮಮತಾರನ್ನು ಸೋಲಿಸಿದ್ದ ಅಧಿಕಾರಿ, 2026ರಲ್ಲಿ ಮಮತಾರ ಭದ್ರಕೋಟೆ ಮತ್ತು ಸ್ವಂತ ಕ್ಷೇತ್ರ ಭವಾನಿಪುರ ಕ್ಷೇತ್ರದಲ್ಲೇ 15,000 ಮತಗಳ ಅಂತರದಿಂದ ಜಯಿಸಿದ್ದಾರೆ. ಹಾಲಿ ಮುಖ್ಯಮಂತ್ರಿಯೊಬ್ಬರನ್ನು 2 ವಿಭಿನ್ನ ಕ್ಷೇತ್ರಗಳಲ್ಲಿ ಸತತ ಎರಡನೇ ಬಾರಿ ಸೋಲಿಸಿದ ಮೊದಲ ರಾಜಕಾರಣಿಯೆಂಬ ದಾಖಲೆಯನ್ನು ಸುವೇಂದು ಭಾರತದ ಇತಿಹಾಸದಲ್ಲಿ ಬರೆದಿದ್ದಾರೆ. ➡ಪುಟ ೪

### ಹಿಂಸಾಚಾರ: ನಾಲ್ವರ ಬಲಿ

ಬಂಗಾಳ ಚುನಾವಣೆಯಲ್ಲಿ 15 ವರ್ಷಗಳ ಟಿಎಂಸಿ ಆಡಳಿತ ಪತನಗೊಂಡ 24 ಗಂಟೆಗಳೊಳಗೆ ಭಾರೀ ಹಿಂಸಾಚಾರ ಭುಗಿಲೆದ್ದಿದೆ. ತಮ್ಮ ಗೂಂಡಾಗಿರಿ ಆಡಳಿತವು ಅಧಿಕಾರ ಕಳೆದುಕೊಂಡಿದ್ದನ್ನು ಜೀರ್ಣಿಸಲಾಗದೆ ಟಿಎಂಸಿ ಗೂಂಡಾ ಕಾರ್ಯಕರ್ತರು ಬಿಜೆಪಿ ಕಾರ್ಯಕರ್ತರ ಮೇಲೆ ಹಿಂಸಾಚಾರ ನಡೆಸಿದ ಪ್ರಕರಣ ದಾಖಲಾಗಿವೆ. ➡ಪುಟ ೪

### 21 ವರ್ಷ ಬಳಿಕ ತೆರೆದ ದುರ್ಗಾ ದೇವಸ್ಥಾನ!



• **ಆಸನ್ಸೋಲ್:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೇರುತ್ತಲೇ ಬಂಗಾಳಿ ಹಿಂದು ಸಂಸ್ಕೃತಿಯ ಪುನರುತ್ಥಾನ ಆರಂಭವಾಗಿದೆ. ಅಸನ್ಸೋಲ್‌ನಲ್ಲಿ 21 ವರ್ಷಗಳಿಂದ ಮುಚ್ಚಿರುತ್ತಿದ್ದ ದುರ್ಗಾಮಾತಾ ದೇವಸ್ಥಾನವನ್ನು ಪುನಃ ತೆರೆಯಲಾಗಿದೆ. ತಾವು ಶಾಸಕರಾದರೆ ದೇವಸ್ಥಾನ ಪುನಃ ತೆರೆಯುವುದಾಗಿ ಆಶ್ವಾಸನೆ ನೀಡಿದ್ದ ನೂತನ ಬಿಜೆಪಿ ಶಾಸಕ ಕೃಷ್ಣೇಂದು ಮುಖರ್ಜಿ ದೇವಸ್ಥಾನ ತೆರೆಸಿ ತಮ್ಮ ಮಾತು ಉಳಿಸಿಕೊಂಡಿದ್ದಾರೆ. ದುರ್ಗಾ ಮತ್ತು ಕಾಳಿ ಪೂಜೆಯಂತಹ ಪ್ರಮುಖ ಹಬ್ಬಗಳಂದು ತೆರೆಯಲಾಗುತ್ತಿದ್ದ ದೇವಸ್ಥಾನ ಈಗ ಎಲ್ಲಾ ದಿನಗಳಲ್ಲೂ ಭಕ್ತರಿಗೆ ತೆರೆದಿರಲಿದೆ. ➡ಪುಟ ೪

### ಚು.ಆಯೋಗಕ್ಕೆ ಸಿದ್ದರಾಮಯ್ಯ ಒತ್ತಾಯ

# ಫೊರೆನ್ಸಿಕ್ ಲ್ಯಾಬ್‌ಗೆ ಅಂಚೆಮತ ಕಳುಹಿಸಿ

• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಕ್ರಿಮಿನಲ್ ಸಂಚು ನಡೆದಿದ್ದು, ಅಂಚೆ ಮತಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಚುನಾವಣಾ ಆಯೋಗವನ್ನು ಒತ್ತಾಯಿಸಲಾಗುವುದು ಹಾಗೂ ಈ ವಿಚಾರದಲ್ಲಿ ಟಿ.ಡಿ.ರಾಜೇಗೌಡ ಅವರ ಬೆನ್ನಿಗೆ ಕಾಂಗ್ರೆಸ್ ನಿಲ್ಲಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.



ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿನ ಮರು ಮತ ಎಣಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಸೋಲುಂಟಾಗಿರುವ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ರಾಜೇಗೌಡ ಅವರು ಕಳೆದ ಚುನಾವಣೆಯಲ್ಲಿ 201 ಮತಗಳ ಅಂತರದಲ್ಲಿ ಗೆದ್ದಿದ್ದರು. ಅವರಿಗೆ 59,171 ಮತಗಳು ಬಂದಿದ್ದವು. ಅವರ ಎದುರಾಳಿ ಬಿಜೆಪಿಯ ಜೀವರಾಜ್ ಅವರಿಗೆ 58,970 ಮತಗಳು ಬಂದಿದ್ದವು. ಇವಿಎಂನಲ್ಲಿ ರಾಜೇಗೌಡರಿಗೆ 58,602 ಮತಗಳು ಬಂದಿದ್ದವು. ಅಂಚೆಯಲ್ಲಿ 569 ಮತಗಳು ಬಂದಿದ್ದವು. ಜೀವರಾಜ್ ಅವರಿಗೆ ಇವಿಎಂನಲ್ಲಿ 58,278 ಮತಗಳು ಬಂದಿದ್ದವು. ಅಂಚೆಯಲ್ಲಿ 692 ಮತಗಳು ಬಂದಿದ್ದವು. ಇವೆಲ್ಲವೂ ಅರ್ಹ ಮತಗಳೆಂದು ಚುನಾವಣಾಧಿಕಾರಿಗಳು, ಏಜೆಂಟ್‌ಗಳು ಸಹಿ ಮಾಡಿ ಫಲಿತಾಂಶ ಘೋಷಿಸಿದ್ದರು ಎಂದು ತಿಳಿಸಿದರು.

**ವೋಟ್ ದಕಾಯಿತಿ:** ಫಲಿತಾಂಶ ಘೋಷಣೆ ಆದ ಬಳಿಕ ಜೀವರಾಜ್ ಅವರು ಅಕ್ರಮ ಆಗಿದೆ ಎಂದು ಹೈಕೋರ್ಟ್‌ನಲ್ಲಿ ಮರು ಎಣಿಕೆಗೆ ದಾವೆ ಹೂಡಿದ್ದರು. ➡ಪುಟ ೪

> **ಎಣಿಕೆ ಮಾಡಿದ ಬಳಿಕ ಎಲ್ಲಾ ದಾಖಲಾತಿಗಳನ್ನು ಟ್ರಂಕ್‌ನಲ್ಲಿಡಲಾಗುತ್ತದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರವಿತ್ತು. ಕೇಂದ್ರದಲ್ಲೂ ಅವರ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ಮತಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

### ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ಹೈ ತಡೆ

• **ಬೆಂಗಳೂರು:** ಅಂಚೆ ಮತಗಳ ಮರು ಎಣಿಕೆಯಲ್ಲಿ ಚಿಕ್ಕಮಗಳೂರಿನ ಶೃಂಗೇರಿಯ ಬಿಜೆಪಿ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್. ಜೀವರಾಜ್ ವಿರುದ್ಧ ದುರುದ್ದೇಶಪೂರ್ವಕವಾಗಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು



ಮೌಖಿಕವಾಗಿ ಮಂಗಳವಾರ ಹೇಳಿರುವ ಹೈಕೋರ್ಟ್ ಪ್ರಕರಣಕ್ಕೆ ತಡೆ ನೀಡಿದೆ. ಮತ ತಿರುಚಿದ ಆರೋಪದ ಮೇಲೆ ಕಾಂಗ್ರೆಸ್ ಏಜೆಂಟ್ ಸುಧೀರ್ ಮುರೊಳ್ಳಿ ದೂರಿನ ಆಧಾರದಲ್ಲಿ ಚಿಕ್ಕಮಗಳೂರು ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಜೀವರಾಜ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾ. ವಿ.ಶ್ರೀಶಾನಂದ ಅವರ ರಜಾಕಾಲೀನ ಏಕಸದಸ್ಯ ಪೀಠ ನಡೆಸಿತು. ➡ಪುಟ ೪

### ಬೆಳಗಾವಿಯಲ್ಲಿ ಮಾಜಿ ಸಂಸದ ಪ್ರಭಾಕರ ಕೋರೆ ಮಾಹಿತಿ

# ಅಭಿಮಾನೋತ್ಸವಕ್ಕೆ 10 ಲಕ್ಷ ಜನ

• **ಬೆಳಗಾವಿ:** ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಜನಸೇವೆಗೆ ಪದಾರ್ಪಣೆ ಮಾಡಿ 50 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅಭಿಮಾನೋತ್ಸವ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ




10 ಲಕ್ಷ ಅಭಿಮಾನಿಗಳು ಸೇರುವ ನಿರೀಕ್ಷೆ ಇದೆ ಎಂದು ಕೆಎಲ್‌ಇ ಮಾಜಿ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

ಬೆಳಗಾವಿಯ ಕನ್ನಡ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ನಾಯಕ, ಹುಟ್ಟು ಹೋರಾಟಗಾರ ಬಿ.ಎಸ್.ಯಡಿಯೂರಪ್ಪ ಅವರಿಗೆ ಗೌರವ ಸಲ್ಲಿಸಲು ಮೇ 9ರಂದು ಚಿತ್ರದುರ್ಗದಲ್ಲಿ ದೊಡ್ಡ ಮಟ್ಟದಲ್ಲಿ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ➡ಪುಟ ೪



**ಪ್ರತಿಯೊಬ್ಬರಿಗೂ ಆಹ್ವಾನ**
ದಕ್ಷಿಣ ಭಾರತದಲ್ಲಿ ಬಿಜೆಪಿ ಭದ್ರಕೋಟೆ ಕಟ್ಟಿದ ಜನನಾಯಕನಿಗೆ ಸಲ್ಲಿಸುವ ಈ ಗೌರವ ಸಮರ್ಪಣೆಯಲ್ಲಿ ಪ್ರತಿಯೊಬ್ಬರೂ ಭಾಗಿಯಾಗುವಂತೆ ಅವರು ಆಹ್ವಾನ ನೀಡಿದರು.

### ರಾಜ್ಯಪಾಲರ ಭೇಟಿ ಬಳಿಕ ಸಿಎಂ ಸಿದ್ದರಾಮಯ್ಯಗೆ ಸಲಹೆ

# ಗೆದ್ದವರಿಗೆ ಗೌರವ ಕೊಡಿ: ಅಶೋಕ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುಚ್ಚು ಹೇಳಿಕೆ ಕೊಡುವುದು ಒಳ್ಳೆಯದಲ್ಲ; ಗೆದ್ದವರಿಗೆ ಸಂವಿಧಾನ ತಿಳಿಸಿದಂತೆ ಗೌರವ ಕೊಡುವುದು ಕರ್ತವ್ಯ. ಅದನ್ನು ಉಲ್ಲಂಘಿಸುವುದು ಅಕ್ಷಮ್ಯ ಅಪರಾಧ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಮಂಗಳವಾರ ರಾಜ್ಯಪಾಲರಿಗೆ ಶಾಸಕ ಅರಗ ಜ್ಞಾನೇಂದ್ರ ಮತ್ತು ಮರು ಮತಎಣಿಕೆ ಬಳಿಕ ಶೃಂಗೇರಿಯಿಂದ ಶಾಸಕರಾಗಿ ಆಯ್ಕೆಯಾಗಿರುವ ಡಿ.ಎನ್.ಜೀವರಾಜ್ ಅವರ ಜತೆ ಮನವಿ ಸಲ್ಲಿಸಿದ ಬಳಿಕ ಮಾಧ್ಯಮಗಳ ಜತೆ ಮಾತನಾಡಿದರು. ಮನವಿ ಸಂಬಂಧ ರಾಜ್ಯ ಸರಕಾರಕ್ಕೆ ಪತ್ರ ಬರೆಯುವುದಾಗಿ ರಾಜ್ಯಪಾಲರು ಹೇಳಿದ್ದಾರೆ ಎಂದರು. ಸಂವಿಧಾನದತ್ತವಾಗಿ ವಿಧಾನಸಭಾಧ್ಯಕ್ಷರು ಶಾಸಕತ್ವದ ಪ್ರಮಾಣವಚನ ಬೋಧಿಸಬೇಕು. ಇಲ್ಲವಾದರೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಬೇಕು. ಇಲ್ಲಿಯೇ ನಾವು ಪ್ರತಿಜ್ಞಾವಿಧಿ ಪಡೆಯುತ್ತೇವೆ. ಹಾಗಾದರೆ, ವಿಧಾನಸಭಾಧ್ಯಕ್ಷರಿಗೆ ಏನು ಗೌರವ ಉಳಿಯಲಿದೆ ಎಂದು ಕೇಳಿದರು. ➡ಪುಟ ೪



> **ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ದಿಢೀರ್ ಆಗಿ ಹೆಚ್ಚು ಸ್ಥಾನ ಪಡೆದರೂ ಅವರಿಗೆ ಬಹುಮತ ಸಿಕ್ಕಿಲ್ಲ. ಕಾಂಗ್ರೆಸ್ಸಿನವರು ಎಲ್ಲಿ ಊಟ ಚೆನ್ನಾಗಿ ಸಿಗುತ್ತದೋ ಅಲ್ಲಿಗೆ ಓಡಿ ಹೋಗುತ್ತಾರೆ. ಅವರಿಗೆ ನೀತಿ, ನಿಯತ್ತು, ನ್ಯಾಯ, ಧರ್ಮ ಏನೂ ಇಲ್ಲ.**
> ■ ಆರ್.ಅಶೋಕ, ವಿಧಾನಸಭೆ ಪ್ರತಿಪಕ್ಷ ನಾಯಕ

# ರಾಜ್ಯದಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ತನ್ನಿ: ಎಚ್‌ಡಿಕೆ

• **ತುಮಕೂರು:** ರಾಜ್ಯದ ಈಗಿನ ಸರ್ಕಾರದ ಆಡಳಿತಕ್ಕೆ ಜನ ಬೇಸತ್ತಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ಜನಪರವಾದ, ಜನರಿಗೆ ಗೌರವ ತರುವಂತಹ ಸರ್ಕಾರ ತರಲು ರಾಜ್ಯದ ಜನರು ಆಶೀರ್ವಾದ ಮಾಡಬೇಕು ಎಂದು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.



ತುಮಕೂರು ತಾಲೂಕು ಮುಳುಕುಂಟೆ ಗ್ರಾಮದಲ್ಲಿ ಮಂಗಳವಾರ ನಡೆದ ವಿಜಯಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ಅವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ➡ಪುಟ ೪

# ಪಂಚರಾಜ್ಯ ಫಲಿತಾಂಶದ ಕೌತುಕಗಳು

ಪಂಚರಾಜ್ಯಗಳ ಚುನಾವಣೆ ದೇಶದ ರಾಜಕಾರಣದಲ್ಲಿ ಮಹತ್ವದ ಬದಲಾವಣೆಯನ್ನೇ ತೋರಿದೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆಗೆ ಆಡಳಿತಾರೂಢ ಪಕ್ಷ ಧೂಳೀಪಟವಾಗಿದೆ. ಈ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಹೀನಾಯ ಸೋಲು ಅನುಭವಿಸಿದ್ದಾರೆ. ಘಟಾನುಘಟಿಗಳ ಸೋಲಿನ ನಡುವೆ ಅಪರೂಪದ ವ್ಯಕ್ತಿಗಳು ಗೆದ್ದು ವಿಧಾನಸಭೆ ಪ್ರವೇಶಿಸಲು ಸಿದ್ಧರಾಗಿದ್ದಾರೆ. ಹೀಗೆ ಪಂಚರಾಜ್ಯಗಳ ಫಲಿತಾಂಶ ವೇಳೆ ಕಂಡ ಕುತೂಹಲದ ವಿದ್ಯಮಾನಗಳ ಸಣ್ಣ ನೋಟ ಇಲ್ಲಿದೆ.

### ಬಿಸ್ವಾಸ್ ಒಬ್ಬರೇ ವಿಶ್ವಾಸ ಉಳಿಸಿಕೊಂಡ ಸಿಎಂ


ಕೇರಳದಲ್ಲಿ ಎಡರಂಗದ ಪಿಣರಾಯಿ ವಿಜಯನ್, ತಮಿಳುನಾಡಿನಲ್ಲಿ ಎಂ.ಕೆ.



ಸ್ಟಾಲಿನ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಮಮತಾ ಆಡಳಿತ ಪತನಗೊಂಡಿದ್ದು ಮೂವರು ತಮ್ಮ ಸಿಎಂ ಹುದ್ದೆಯನ್ನು ಖಾಲಿ ಮಾಡಿದ್ದಾರೆ. ಆದರೆ ಅಸ್ಸಾಂನಲ್ಲಿ ಮಾತ್ರ ಹಿಮಂತ ಬಿಸ್ವ ಶರ್ಮಾ ಸಿಎಂ ಸ್ಥಾನ ಉಳಿಸಿಕೊಳ್ಳುವ ಮೂಲಕ ಸಾಧನೆ ಮೆರೆದಿದ್ದಾರೆ. ವಿಜಯನ್, ಸ್ಟಾಲಿನ್ ಮತ್ತು ಮಮತಾರಷ್ಟು ರಾಜಕೀಯ ಅನುಭವ ಇಲ್ಲದ ಹಿಮಂತ ಸತತ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ.

### ಸ್ಟಾಲಿನ್‌ಗೆ ಮಾಜಿ ಆಪ್ತನಿಂದಲೇ ಸೋಲು!

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭದ್ರಕೋಟೆ ಯೆನಿಸಿದ್ದ ಕೊಳತ್ತೂರು ಕ್ಷೇತ್ರದಲ್ಲಿ ತಮಿಳಗ ವೆಟ್ರಿ



ಕಳಗಂ (ಟಿವಿಕೆ) ಅಭ್ಯರ್ಥಿ ವಿ.ಎಸ್. ಬಾಬು 8,795 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಈ ಮೂಲಕ ಸ್ಟಾಲಿನ್ ಗೆಲುವಿನ ಅಂದಾಜುಗಳನ್ನು ಬಾಬು ಸುಳ್ಳಾಗಿಸಿದ್ದಾರೆ. ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದಿಂದ ಸ್ಪರ್ಧಿಸಿದ್ದ ಬಾಬು, ಡಿಎಂಕೆ ನಾಯಕನ ಭದ್ರಕೋಟೆಯಲ್ಲೇ ಜಯಭೇರಿ ಬಾರಿಸಿದ್ದಾರೆ.

### ಒಂದೇ ಒಂದು ಮತದ ಗೆಲುವು

ತಮಿಳುನಾಡು ವಿಧಾನಸಭಾ ಚುನಾವಣೆಯ ಮತ ಎಣಿಕೆ ವೇಳೆ ತಿರುಪತ್ತೂರಿನಲ್ಲಿ ಅಕ್ಷರಶಃ ಉಸಿರು ಬಿಗಿಹಿಡಿಯುಂತಹ ವಾತಾವರಣ ನಿರ್ಮಾಣವಾಗಿತ್ತು. ಅದೃಷ್ಟದಾಟದಲ್ಲಿ ಕೊನೆಗೂ ಟಿವಿಕೆ ಅಭ್ಯರ್ಥಿ ಸೀನಿವಾಸ ಸೇತುಪತಿ ಆರ್ ವಿಜಯಿಯಾದರೆ, ಡಿಎಂಕೆ ಸರ್ಕಾರದ ಸಹಕಾರಿ ಸಚಿವ ಕೆ.ಆರ್ ಪೆರಿಯಕರುಪ್ಪನ್ ಪರಾಜಯ ಅನುಭವಿಸಿದರು. ಅಂತರ ಒಂದು ಮತ, ಹೌದು ಒಂದೇ ಒಂದು ಮತದಿಂದ ಗೆಲುವು ಸಾಧಿಸಿದ್ದಾರೆ.

### ಮನೆಗೆಲಸದಾಕೆಗೆ ಒಲಿದ ಅದೃಷ್ಟ

• **ಕೋಲ್ಕತ:** ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಮಟ್ಟದ



ಆರ್ಥಿಕ ಸ್ಥಿತಿಯಲ್ಲಿರುವ ಪ್ರಜೆಯ ಕೈಗೆ ಅಧಿಕಾರದ ಚುಕ್ಕಾಣಿ ಸಿಕ್ಕಾಗಲೇ ಆತ್ಮನಿರ್ಭರ ಭಾರತದ ಕನಸು ನನಸಾಗುತ್ತದೆ. ಪ.ಬಂಗಾಳ ಚುನಾವಣೆಯಲ್ಲಿ ಇಂತಹದ್ದೊಂದು ಉದಾಹರಣೆ ಲಭ್ಯವಾಗಿದೆ. ಮನೆಗೆಲಸದಾಕೆ ಔಸ್‌ಗ್ರಾಮ್ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿ ಜನಮನ್ನಣೆ ಪಡೆದಿದ್ದಾರೆ.ಇದಲ್ಲವೆ, ಪ್ರಜಾಪ್ರಭುತ್ವದ ಶಕ್ತಿ? • ವಿವರ ಪುಟ ೭



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,55,000 (2,65,000) ಅಪರಂಜಿ ಚಿನ್ನ: 1,49,180 (1,49,620) ಆಭರಣ ಚಿನ್ನ: 1,36,750 (1,37,150) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ., ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,017 (251↓) ಎನ್‌ಎಸ್‌ಇ 24,032 (86↓) $1 = ₹94.92


# ಮೇ 11ರಿಂದ ಮೂಲ ದಾಖಲೆ ಪರಿಶೀಲನೆ: ಎಚ್. ಪ್ರಸನ್ನ

**ಬೆಂಗಳೂರು:** ಪ್ರಸಕ್ತ ಸಾಲಿನ ಯುಜಿಸಿಇಟಿ ಅರ್ಜಿಯಲ್ಲಿ ಅರ್ಹತಾ ಕಂಡಿಕೆಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11ರಿಂದ 22ರವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಇಲ್ಲಿನ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯುವ ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳು ಬರುವ ಮುನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ ಸ್ಲಾಟ್‌ಬುಕ್ ಮಾಡಿಕೊಂಡು ಬರಬೇಕು. ಮೇ 7ರಿಂದ ಸ್ಲಾಟ್ ಬುಕ್ ಲಿಂಕ್ ತೆರೆದುಕೊಳ್ಳಲಿದೆ ಎಂದು ತಿಳಿಸಿದ್ದಾರೆ. ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳೇ ಬರಬೇಕು. ಅವರ ಪರವಾಗಿ ಬೇರೆಯವರು ಬರುವಂತಿಲ್ಲ. ಪರಿಶೀಲನೆ ವೇಳೆ ಸಲ್ಲಿಸಬೇಕಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸಿಇಟಿ-2026 ಪ್ರವೇಶ ಪತ್ರ ಮತ್ತು ಅರ್ಜಿ, ಗುರುತಿನ ಚೀಟಿ (ಆಧಾರ್ ಕಾರ್ಡ್) 10 ಮತ್ತು 12ನೇ ತರಗತಿಯ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ, ಪೋಷಕರ ಪ್ರಮಾಣ ಪತ್ರ, ಅರ್ಹತಾ ಖಂಡಿಕೆಗೆ ಅನುಗುಣವಾಗಿ ಅವಶ್ಯಕವಿರುವ ಇತರೆ ಎಲ್ಲ ಮೂಲ ದಾಖಲೆ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಬರಬೇಕು ಎಂದು ತಿಳಿಸಿದ್ದಾರೆ. ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಆಪ್ಷನ್ಸ್ ದಾಖಲಿಸಲು ಅವಕಾಶ ನೀಡಲಾಗುತ್ತದೆ. ವೈ ಅರ್ಹತಾ ಕಂಡಿಕೆಯ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಿಲ್ಲ ಎಂದು ತಿಳಿಸಿದ್ದಾರೆ.

## ರಾಮ ಬಾಣ




# ತೀವ್ರ ಕಾಯಿಲೆವುಳ್ಳವರಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ಸಹಕಾರಿ: ಸಚಿವ ದಿನೇಶ್

**ಬೆಂಗಳೂರು:** ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹತದಲ್ಲಿರುವ ರೋಗಿಗಳಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ಅನುಕೂಲವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಮಲ್ಲೇಶ್ವರ ಕೆಸಿ ಜನರಲ್ ಆಸ್ಪತ್ರೆಯಲ್ಲಿ ಪ್ಯಾಲಿಯೇಟಿವ್ ಕೇರ್ ಯುನಿಟ್ ಉದ್ಘಾಟನೆ ಮಾಡಿದ ಅವರು, ಕೆಸಿ ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಾಯಕವಾಗಿದೆ. ತೀವ್ರವಾದ ನೋವು, ಉಸಿರಾಟ ತೊಂದರೆ, ನರ ಸಂಬಂಧಿ ಕಾಯಿಲೆಯಿಂದ ಬಳಲುವವರು, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರಿಗೆ ಈ ಕೇಂದ್ರ ಅನುಕೂಲವಾಗಿದೆ ಎಂದರು.

# ಶಿಥಿಲ ಆಸ್ಪತ್ರೆ ಕಟ್ಟಡಗಳ ವರದಿ ಸಲ್ಲಿಕೆಗೆ ಸುತ್ತೋಲೆ

**ಬೆಂಗಳೂರು:** ರಾಜ್ಯದಲ್ಲಿ ಅಕಾಲಿಕ ಮಳೆ ಮತ್ತು ಬಿರುಗಾಳಿಯಿಂದ ಶಿಥಿಲಗೊಂಡಿರುವ ಆಸ್ಪತ್ರೆ ಕಟ್ಟಡಗಳಿಂದ ಅವಘಡ ಸಂಭವಿಸದಂತೆ ತಡೆಯಲು ಎಲ್ಲಾ ಜಿಲ್ಲೆಗಳ ಹಳೆಯ ಸರ್ಕಾರಿ ಆಸ್ಪತ್ರೆ ಕಟ್ಟಡಗಳನ್ನು ಕೂಡಲೇ ಪರಿಶೀಲಿಸಿ 15 ದಿನದೊಳಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದೆ. ಡಿಎಚ್‌ಒ, ಟಿಎಚ್‌ಒ ಮತ್ತು ತಾಲೂಕಾ ನೋಡಲ್ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸಬ್ ಸೆಂಟರ್, ಪಿಎಚ್‌ಸಿ, ಸಿಎಚ್‌ಸಿ, ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ಅಥವಾ ವಾರ್ಡ್‌ನಲ್ಲಿರುವ ರೋಗಿಗಳನ್ನು ತಕ್ಷಣ ಸುರಕ್ಷಿತ ಕಟ್ಟಡಕ್ಕೆ ಸ್ಥಳಾಂತರಿಸಬೇಕು.

## ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

- ಬಂಗಾಳದಲ್ಲಿ ಮಮತಾ ಗರ್ವಭಂಗ
  - ಪತ್ರಿಕೆಯಲ್ಲಿ ಚುನಾವಣಾ ವರದಿಯ ಶೀರ್ಷಿಕೆ
  - ಇತಿಹಾಸ ಮರುಕಳಿಸುತ್ತದೆ ಎಂಬ ಮಾತು ಎಂದಿಗೂ ಸುಳ್ಳಲ್ಲ. ಯಕ್ಷಗಾನ ಪ್ರದರ್ಶನದಲ್ಲಿ ನೋಡಿದ ತಾಟಕೀ ಸಂಹಾರ, ರಾವಣ ಗರ್ವಭಂಗ ಪ್ರಸಂಗ ನೆನಪಾಗುತ್ತೆ!

## ದಿನ ಭವಿಷ್ಯ

**ಮೇಷ** ಸಮಸ್ಯೆ ಪರಿಹಾರ. ಚಿಂತೆ ನಿವಾರಣೆ. ಧನಲಾಭ. ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಒಟ್ಟಿನಲ್ಲಿ ಈ ದಿನ ನಿಮಗೆ ಪ್ರಗತಿದಾಯಕ.

**ವೃಷಭ** ಕುಟುಂಬದ ಹಿತಾಸಕ್ತಿ ಆದ್ಯತೆ ಪಡೆಯಲಿದೆ. ಉದ್ಯೋಗ ಅರಸುವವರಿಗೆ ಶುಭ ಬೆಳವಣಿಗೆ. ಮಾನಸಿಕ ದುಗುಡ ನಿವಾರಣೆ.

**ಮಿಥುನ** ಫಲಪ್ರದ ದಿನ. ನಿರೀಕ್ಷೆಗಿಂತ ಹೆಚ್ಚು ಗಳಿಕೆ. ಆಪ್ತರ ಜತೆಗಿನ ಸಂಬಂಧ ಸುಧಾರಣೆ. ಆದರೂ ನಿಮ್ಮ ಮನದಲ್ಲಿ ಏನೋ ಕೊರಗು, ಗೊಂದಲ.

**ಕಟಕ** ನಿಮ್ಮ ಒಳ್ಳೆತನ ದುರುಪಯೋಗ ಮಾಡಲು ಇತರರಿಗೆ ಅವಕಾಶ ಕೊಡಬೇಡಿ. ಕೆಲ ವಿಷಯಗಳಲ್ಲಿ ಕಠಿಣ ಧೋರಣೆ ಬೇಕಾದೀತು.

**ಸಿಂಹ** ವೃತ್ತಿಯಲ್ಲಿ ಮೇಲಿನವರ ಬೆಂಬಲ. ಒತ್ತಡ ನಿವಾರಣೆ. ಮನೆಯಲ್ಲಿ ಹಿರಿಯರ ಆರೋಗ್ಯ ಕಳವಳಕ್ಕೆ ಕಾರಣವಾಗಬಹುದು.

**ಕನ್ಯಾ** ಏರಿಳಿತ ಎರಡನ್ನೂ ಇಂದು ಅನುಭವಿಸುವಿರಿ. ವೃತ್ತಿಯಲ್ಲಿ ಏಳಿಗೆ. ಖಾಸಗಿ ಬದುಕಲ್ಲಿ ಬೇಸರದ ಬೆಳವಣಿಗೆ. ಹೆತ್ತವರ ಕಾಳಜಿ ವಹಿಸಿರಿ.

**ತುಲಾ** ಅನಿರೀಕ್ಷಿತ ಧನಪ್ರಾಪ್ತಿ. ಆಪ್ತರ ಜತೆ ಪ್ರವಾಸದ ಸಾಧ್ಯತೆ. ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿ. ಬಂಧು ಜತೆ ಕಲಹವಾದೀತು.

**ವೃಶ್ಚಿಕ** ವೈಯಕ್ತಿಕ ಬದುಕಲ್ಲಿ ಬಯಸದ ಬದಲಾವಣೆ ಉಂಟಾದೀತು. ಬೇಸರ ಪಡದಿರಿ. ಹೊಂದಿಕೊಂಡು ಮುನ್ನಡೆಯಿರಿ. ಆರ್ಥಿಕ ಒತ್ತಡ ಹೆಚ್ಚಲಿದೆ.

**ಧನು** ಸಮಸ್ಯೆ ಪರಿಹಾರಕ್ಕೆ ಅನ್ಯರ ನೆರವು ಪಡೆಯಲು ಹಿಂಜರಿಕೆ ಬೇಡ. ವ್ಯವಹಾರದಲ್ಲಿ ಪ್ರಗತಿ. ಅಪಥ್ಯ ಆಹಾರ ಸೇವನೆ ಹೊಟ್ಟೆ ಕೆಡಿಸಬಹುದು.

**ಮಕರ** ವ್ಯವಹಾರದಲ್ಲಿ ಕೆಲವು ವಿಷಯ ಚಿಂತೆಗೆ ಕಾರಣವಾದೀತು. ಸಮಸ್ಯೆಗೆ ಪರಿಹಾರ ಕೂಡಾ ನಿಮ್ಮ ಬಳಿಯೇ ಇದೆ. ಆತಂಕ ಬೇಡ.

**ಕುಂಭ** ಎಲ್ಲ ವಿಧದಲ್ಲೂ ಇಂದು ನಿಮಗೆ ಯಶಸ್ವಿ ದಿನ. ವೃತ್ತಿಯಲ್ಲಿ, ಕೌಟುಂಬಿಕವಾಗಿ ನಿಮಗೆ ಪೂರಕ ಬೆಳವಣಿಗೆ. ಸಮಸ್ಯೆ ಪರಿಹಾರ.

**ಮೀನ** ದಿನದ ಆರಂಭ ಕಷ್ಟಕರವಾಗಲಿದೆ. ವೃತ್ತಿ ಮತ್ತು ಕುಟುಂಬದ ಮಧ್ಯೆ ಸಮತೋಲನ ಸಾಧಿಸಿ. ದಿನದಂತ್ಯಕ್ಕೆ ಮಾನಸಿಕ ನಿರಾಳತೆ ಸಿಗಲಿದೆ.

**ರಾಹುಕಾಲ: 12.00-1.30**
**ಗುಳಿಕಕಾಲ: 10.30-12.00**

ಅದೃಷ್ಟ ಸಂಖ್ಯೆ : 7,0,6,1

### ಮುಖ್ಯಮಂತ್ರಿಗಳ ಹೇಳಿಕೆಗೆ ಛಲವಾದಿ ನಾರಾಯಣಸ್ವಾಮಿ ಪ್ರತಿಕ್ರಿಯೆ

# ಕೋರ್ಟ್ ಆದೇಶವನ್ನು ಅವಮಾನಿಸುವುದು ಸಲ್ಲ

**ಬೆಂಗಳೂರು:** ನ್ಯಾಯಾಂಗದ ಆದೇಶವನ್ನೇ ಡಕಾಯಿತಿ ಎಂದು ಕರೆಯುವುದು ನೈತಿಕ ಪತನದ ಪರಮಾವಧಿಯಲ್ಲವೇ? ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ. ಕಲ್ಲುಸಕ್ಕರೆ ಬೊಮ್ಮಿಯಂತೆ ಇಪ್ಪುದೀ ಜಗತ್ತು... ಎಂಬ ದಾಸವರೇಣ್ಯರ ಮಾತಿನ ಅರ್ಥದಂತೆ, ಮೇಲ್ನೋಟಕ್ಕೆ ಸಂವಿಧಾನದ ರಕ್ಷಕರಂತೆ ನಟಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿಜಸ್ವರೂಪ ಮತ್ತೊಮ್ಮೆ ಬಯಲಾಗಿದೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಮತಗಳ ಮರುಎಣಿಕೆ ಕುರಿತು ಹೈಕೋರ್ಟ್ ನೀಡಿದ ಆದೇಶವನ್ನು ಡಕಾಯಿತಿ ಎಂದು ಕರೆಯುವ ಮೂಲಕ ಅವರು ಕೇವಲ ನ್ಯಾಯಾಂಗವನ್ನಷ್ಟೇ ಅಲ್ಲ, ಸಂವಿಧಾನದ ಆತ್ಮವನ್ನೇ ಅವಮಾನಿಸಿದ್ದಾರೆ ಎಂದಿದ್ದಾರೆ.

ಶೃಂಗೇರಿಯಲ್ಲಿ ಕಳೆದ ಮೂರು ವರ್ಷಗಳಿಂದ ಕಾಂಗ್ರೆಸ್ ಶಾಸಕರು ನಡೆಸುತ್ತಿರುವ ಆಡಳಿತ ಜನರ ನೈಜ ತೀರ್ಪಿನ ಪ್ರತಿಫಲವೋ, ಅಥವಾ ವೋಟ್ ಚೋರಿಯ ಫಲವೋ ಎಂಬ ಪ್ರಶ್ನೆಗೆ ಮರುಎಣಿಕೆಯ ಪ್ರಕ್ರಿಯೆಯೇ ಉತ್ತರ ನೀಡಿದೆ. ಅಕ್ರಮದ ಅಡಿಪಾಯದ ಮೇಲೆ ನಿರ್ಮಿತವಾದ ಅಧಿಕಾರಕ್ಕೆ, ನ್ಯಾಯಾಲಯದ ಪಾರದರ್ಶಕ ಕ್ರಮ ಈಗ ಡಕಾಯಿತಿಯಂತೆ ಕಾಣುತ್ತಿರುವುದು ನೈತಿಕ ದಿವಾಳಿತನದ ಸೂಚಕವಾಗಿದೆ ಎಂದರೆ ತಪ್ಪಾಗಲಾರದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಒಮ್ಮೆ ಇವಿಎಂ ಹ್ಯಾಕಿಂಗ್ ಎಂದು ಆರೋಪ, ಮತ್ತೊಮ್ಮೆ ವೋಟ್ ಚೋರಿ ಎಂಬ ಪ್ರಚಾರ; ಈಗ ನ್ಯಾಯಾಲಯದ ತೀರ್ಪನ್ನೇ ಹೀಯಾಳಿಸುವ ಪ್ರವೃತ್ತಿ ಬಣ್ಣ ಬದಲಾಯಿಸುವಂತೆ ಕಾಣುವ ಇಂತಹ ನಿಲುವುಗಳನ್ನು ಕರ್ನಾಟಕದ ಜನತೆ ಗಮನಿಸುತ್ತಿದ್ದಾರೆ. ಕಾನೂನು ಪದವೀಧರರಾಗಿ ಈ ರೀತಿಯ ಹೇಳಿಕೆ ನೀಡುವುದು ನ್ಯಾಯದ ದಾರಿಯನ್ನು ತಪ್ಪಿಸುವ ನಿಮ್ಮ ವಿಫಲ ಪ್ರಯತ್ನ ಮಾತ್ರ. ಹಳೆಯ ಸುಳ್ಳುಗಳನ್ನು ಮರುಕಳಿಸಿ ಜನರನ್ನು ತಪ್ಪುದಾರಿಗೆಳೆಯುವ ಯತ್ನ ಇನ್ನು ಮುಂದೆ ಫಲಿಸುವುದಿಲ್ಲ ಎಂಬುದಕ್ಕೆ ಇತ್ತೀಚಿನ ವಿವಿಧ ರಾಜ್ಯಗಳ ರಾಜಕೀಯ ಬೆಳವಣಿಗೆಗಳೇ ಇದಕ್ಕೆ ಸಾಕ್ಷಿಯಾಗಿವೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿಗಳೇ ನೆನಪಿರಲಿ, ಇದು ಡಕಾಯಿತಿ ಅಲ್ಲ, ಜನರ ತೀರ್ಪನ್ನು ಹತ್ತಿಕ್ಕಿದ ಅಕ್ರಮದ ವಿರುದ್ಧ ನ್ಯಾಯಾಲಯ ನೀಡಿದ ಎಚ್ಚರಿಕೆಯಾಗಿದೆ. ಶೃಂಗೇರಿಯ ಮತದಾರರ ತೀರ್ಪಿಗೆ ಕೊನೆಗೂ ನ್ಯಾಯ ದೊರಕಿದೆ. ನ್ಯಾಯಕ್ಕೆ ಜಯವಾಗಿದೆ, ಅನ್ಯಾಯಕ್ಕೆ ಸೋಲಾಗಿದೆ ಎಂದು ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

### ಕೈಯಲ್ಲಿ ಹಿಡಿವ ಸಂವಿಧಾನ ಗೌರವಿಸುವುದಿಲ್ಲವೇ?



ಹೈಕೋರ್ಟ್ ಆದೇಶದಂತೆ ನಡೆಯುವ ಕಾನೂನುಬದ್ಧ ಪ್ರಕ್ರಿಯೆಯನ್ನು ಡಕಾಯಿತಿ ಎಂದು ಕರೆಯಲು ನಿಮಗೆ ಹೇಗೆ ಧೈರ್ಯ ಬಂತು? ಇದು ನ್ಯಾಯಾಂಗದ ನಿಂದನೆಯಲ್ಲವೇ? ಮರುಎಣಿಕೆ ಎಂದಾಕ್ಷಣ ಕಾಂಗ್ರೆಸ್ ಪಾಳೆಯದಲ್ಲಿ ಕಾಣಿಸುತ್ತಿರುವ ಅಶಾಂತಿ ಏನನ್ನು ಸೂಚಿಸುತ್ತದೆ? ಪಾರದರ್ಶಕತೆಯಿಂದ ಭಯಪಡುವುದು ಅಕ್ರಮ ಬಯಲಾಗುವ ಆತಂಕದಿಂದಲ್ಲವೇ? ಕೈಯಲ್ಲಿ ಸಂವಿಧಾನದ ಪ್ರತಿಯನ್ನು ಹಿಡಿದು ನಡೆಯುವ ನಿಮ್ಮ ನಾಯಕರು, ವಿಶೇಷವಾಗಿ ರಾಹುಲ್ ಗಾಂಧಿ ಅದೇ ಸಂವಿಧಾನ ನೀಡಿದ ನ್ಯಾಯಾಂಗದ ಅಧಿಕಾರವನ್ನು ಗೌರವಿಸುತ್ತಾರೆಯೇ? ಎಂದು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

# ಗೆದ್ದವರಿಗೆ ಗೌರವ ಕೊಡಿ: ಅಶೋಕ

ಪುಟ 1 ➜ ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ದಿಢೀರ್ ಆಗಿ ಹೆಚ್ಚು ಸ್ಥಾನ ಪಡೆದರೂ ಅವರಿಗೆ ಬಹುಮತ ಸಿಕ್ಕಿಲ್ಲ. ಕಾಂಗ್ರೆಸ್ಸಿನವರು ಎಲ್ಲಿ ಊಟ ಚೆನ್ನಾಗಿ ಸಿಗುತ್ತದೋ ಅಲ್ಲಿಗೆ ಓಡಿ ಹೋಗುತ್ತಾರೆ. ಅವರಿಗೆ ನೀತಿ, ನಿಯತ್ತು, ನ್ಯಾಯ, ಧರ್ಮ ಏನೂ ಇಲ್ಲ. ಇಷ್ಟು ದಿನ ನಮ್ಮ ಡಿಎಂಕೆ ಎಂದು ಹಾಡಿ ಹೊಗಳಿದರು. ಈಗ ಕಾಂಗ್ರೆಸ್ಸಿನ ತ.ನಾಡು ಘಟಕವು ವಿಜಯ್‌ಗೆ ಬೆಂಬಲ ನೀಡಬೇಕೆಂದು ತೀರ್ಮಾನಿಸಿದೆ. ಇವರಿಗೆ ನಾಚಿಕೆ ಆಗಬೇಕು ಎಂದು ಟೀಕಿಸಿದರು.

ಇಂಡಿ ಒಕ್ಕೂಟವು ಕಳ್ಳರ ಒಕ್ಕೂಟ ದಂತೆ. ಕಾಂಗ್ರೆಸ್ಸಿನವರನ್ನು ನಂಬಬೇಡಿ ಎಂದು ಮೋದಿ ಅವರು ಬಹಳ ದಿನಗಳಿಂದ ಹೇಳುತ್ತಿದ್ದಾರೆ. ತಮಿಳುನಾಡಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷವು ಡಿಎಂಕೆಗೆ ಕೈಕೊಡುವುದು ಸ್ಪಷ್ಟವಾಗಿದೆ. ಕಾಂಗ್ರೆಸ್ಸಿನ ಚಿಹ್ನೆ ಕೈ ಎಂಬುದು ಕೈಕೊಡುವ ಗುರುತು. ಇವತ್ತು ಡಿಎಂಕೆಗೆ ಕೈಕೊಡುವ ಗುರುತನ್ನು ತೋರಿಸಲಿದ್ದಾರೆ. ಕಾಂಗ್ರೆಸ್ಸಿಗೆ ಸಿದ್ಧಾಂತ, ನ್ಯಾಯ ನೀತಿ ಇಲ್ಲ; ಗೆದ್ದೆತ್ತಿನ ಬಾಲ ಹಿಡಿಯುವುದೇ ಕಾಂಗ್ರೆಸ್ಸಿನ ಧರ್ಮ ಎಂದು ಆರೋಪಿಸಿದರು. ಚಿನ್ನ, ಗ್ಯಾಸ್, ಸೀರೆ, ಒಲೆ ಕೊಡುವುದಾಗಿ ಹೇಳಿದ್ದಾರೆ. ಒಂದು ವರ್ಷ ಬಿಡಿ. ಏನೆಲ್ಲ ಕೊಡುತ್ತಾರೆ ನೋಡೋಣ.

ವಿಜಯ್ ಅವರ ಸರ್ಕಾರಕ್ಕೆ ಎಲ್ಲಿಂದ ಬೆಂಬಲ ಸಿಗಲಿದೆ? ಕಾಂಗ್ರೆಸ್ಸಿನವರು ಅವರಿಗೆ ಯಾವ ರೀತಿ ಬೆಂಬಲ ನೀಡುತ್ತಾರೆಂದು ನೋಡೋಣ ಎಂದು ಪ್ರಶ್ನೆಗೆ ಉತ್ತರ ನೀಡಿದರು. ಹಿಂದುತ್ವ ತೊಲಗಲಿ ಎಂದು ಹೇಳಿದ ಡಿಎಂಕೆ ನಾಯಕರು ತೊಲಗಿದ್ದಾರೆ. ಹಿಂದುತ್ವದ ವಿಚಾರಕ್ಕೆ ಬಂದರೆ ಯಾವ ಗತಿ ಆಗುತ್ತದೆ ಎಂಬುದು ಸ್ಟಾಲಿನ್ ಮತ್ತವರ ಸುಪುತ್ರನಿಗೆ ತಮಿಳು ನಾಡಿನ ಜನರು ತೋರಿಸಿದ್ದಾರೆ ಎಂದು ಹೇಳಿದರು.

# ಅಭಿಮಾನೋತ್ಸವಕ್ಕೆ 10 ಲಕ್ಷ ಜನ

ಪುಟ 1 ➜ ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವಲ್ಲಿ ಯಡಿಯೂರಪ್ಪ ಅವರ ಶ್ರಮ ಅಪಾರ. ಈ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಈ ಬೃಹತ್ ಸಮಾವೇಶಕ್ಕೆ ರಾಜ್ಯಾದ್ಯಂತ ಸುಮಾರು 10 ಲಕ್ಷ ಜನ ಸೇರುವ ನಿರೀಕ್ಷೆಯಿದ್ದು, ಬೆಳಗಾವಿ ಜಿಲ್ಲೆಯಿಂದಲೇ 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಅನಿಲ ಬೆನಕೆ, ಮಾಜಿ ಸಂಸದೆ ಮಂಗಲಾ ಅಂಗಡಿ, ಮಾಜಿ ಶಾಸಕ ಸಂಜಯ ಪಾಟೀಲ್, ಮಾಜಿ ಎಂಎಲ್‌ಸಿ ಮಹಾಂತೇಶ ಕವಟಗಿಮಠ, ಬಿಜೆಪಿ ನಗರಾಧ್ಯಕ್ಷೆ ಗೀತಾ ಸುತಾರ್ ಮೊದಲಾದವರಿದ್ದರು.

# ಗಾದಿ ಬಿಡದ ದೀದಿ

ಪುಟ 1 ➜ **ರಾಜೀನಾಮೆ ಪ್ರಶ್ನೆಯೇ ಉದ್ಭವಿಸಲ್ಲ...:** ನಾವು ಬಿಜೆಪಿ ವಿರುದ್ಧ ಹೋರಾಡಿಲ್ಲ, ಬದಲಾಗಿ ಬಿಜೆಪಿಗಾಗಿ ದುಡಿದ ಚುನಾವಣಾ ಆಯೋಗ ವಿರುದ್ಧ ಹೋರಾಡಿದ್ದೇವೆ ಎಂದು ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ. ಇವರ ಆರೋಪಗಳನ್ನು ಸಮರ್ಥಿಸಿರುವ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ, ಕಳೆದ ಮೂರು ತಿಂಗಳಿಂದ ರಾಜ್ಯದಲ್ಲಿ ನೀತಿಸಂಹಿತೆ ಜಾರಿಯಲ್ಲಿದೆ. ಹಾಗಿರುವಾಗ ಸರಕಾರ ನಡೆಸಿದ್ದು ಯಾರು? ಸರಕಾರದ ಮುಖ್ಯ ಕಾರ್ಯದರ್ಶಿಗಳು. ಮೂರು ತಿಂಗಳಿಂದ ಆಕೆ ಮುಖ್ಯಮಂತ್ರಿಯಾಗಿ ದುಡಿದಿಲ್ಲ. ಹೀಗಿರುವಾಗ ಮಮತಾ ರಾಜೀನಾಮೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಚಾಣಾಕ್ಷ ಹೇಳಿಕೆ ನೀಡಿದ್ದಾರೆ.

**ಸತ್ಯಶೋಧನಾ ಸಮಿತಿ:** ರಾಜ್ಯಾದ್ಯಂತ ಚುನಾವಣಾ ನಂತರ ಹಿಂಸಾಚಾರ ನಡೆದಿರುವ ಪ್ರದೇಶಗಳಿಗೆ ಭೇಟಿ ಕೊಡಲು ನಾವು ಹತ್ತು ಸದಸ್ಯರ ಸತ್ಯಶೋಧನಾ ಸಮಿತಿ ರಚಿಸಲಿದ್ದೇವೆ ಎಂದು ಮಮತಾ ಇದೇ ಸಂದರ್ಭ ಘೋಷಿಸಿದರು. ರಾಜರ್‌ಹಟ್ ಕ್ಷೇತ್ರದ ಮರುಎಣಿಕೆಯಲ್ಲಿ ವಿಜಯ ಸಹಿತ 294 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ ಬರೋಬ್ಬರಿ 207 ಸ್ಥಾನಗಳನ್ನು ಅಭೂತಪೂರ್ವವಾಗಿ ಗೆದ್ದು, ಟಿಎಂಸಿಯ 15 ವರ್ಷಗಳ ಸುದೀರ್ಘ ಅರಾಜಕ ಯುಗಕ್ಕೆ ಅಂತ್ಯ ಹಾಡಿರುವ ಚಾರಿತ್ರಿಕ ವಿದ್ಯಮಾನದ ಮಧ್ಯೆ, ನಿಕಟಪೂರ್ವ ಸಿಎಂ ಮಮತಾ ಈ ರೀತಿ ಹೇಳಿಕೆ ನೀಡಿದ್ದಾರೆ. ಪ್ರಸಕ್ತ ವಿಧಾನಸಭೆಯ ಅವಧಿ ಮೇ ಆರರಂದು ಮುಕ್ತಾಯವಾಗಲಿದೆ. ಸಹಜವಾಗಿಯೇ ಜನರ ಗಮನವೀಗ ಸರಕಾರ ರಚನೆಯತ್ತ ಹೊರಳಿದೆ. ಬಿಜೆಪಿಯ ವಿಜೇತ ಅಭ್ಯರ್ಥಿಗಳ ಪ್ರಮಾಣವಚನ ಸ್ವೀಕಾರ ಸಮಾರಂಭ ಮೇ 9ರಂದು, ಶ್ರೇಷ್ಠ ಕವಿ ರವೀಂದ್ರನಾಥ ಠಾಗೋರ್ ಜನುಮ ದಿನದಂದೇ ನಡೆಯುವ ಸಾಧ್ಯತೆಗಳಿದ್ದು, ಈ ಬಗ್ಗೆ ಅಧಿಕೃತ ಘೋಷಣೆಯಷ್ಟೇ ಬಾಕಿಯಿದೆ.

## ಮುಖ್ಯಮಂತ್ರಿ ಕುರ್ಚಿಯಿಂದ ಮಮತಾ ಇಳಿಯಲೇಬೇಕು

ಪುಟ 1 ➜ ಬಹುಮತ ಹೊಂದಿರುವ ಬಿಜೆಪಿಯು ಸರಕಾರ ರಚನೆಗೆ ಹಕ್ಕು ಮಂಡಿಸಲಿದೆ. ರಾಜ್ಯಪಾಲರು ಪ್ರಮಾಣವಚನ ಸ್ವೀಕರಿಸುವಂತೆ ಪಕ್ಷ ನಾಯಕರನ್ನು ಆಹ್ವಾನಿಸುವರು. ತಾನು ರಾಜೀನಾಮೆ ನೀಡಲ್ಲ ಎಂದು ದೀದಿ ಘೋಷಿಸಿದರೂ, ಪ್ರಜಾಸತ್ತೆಗೆ ತೀರಾ ವಿರುದ್ಧವಾದ ಈ ನಿಲುವಿಗೆ ಮೊಂಡುತನದಿಂದ ಅಂಟಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ ಎಂದು ರಾಜಕೀಯ ಪಡಸಾಲೆಯಲ್ಲಿ ತೀವ್ರ ಚರ್ಚೆಗಳಾಗುತ್ತಿವೆ.

## ಎರಡು ವಿಭಿನ್ನ ಕ್ಷೇತ್ರಗಳಿಂದ ಸತತ ಎರಡು ಬಾರಿ ಹಾಲಿ ಮುಖ್ಯಮಂತ್ರಿ ಮಣಿಸಿದ ಸುವೇಂದು!

ಪುಟ 1 ➜ ಮಮತಾ ಬ್ಯಾನರ್ಜಿಗೆ ಈ ಸೋಲನ್ನು ಜೀರ್ಣಿಸಿಕೊಳ್ಳುವುದು ಕಷ್ಟವಾಗಿದೆ. ತಮ್ಮ ಈ ಗೆಲುವು ಮಮತಾರ ರಾಜಕೀಯ ನಿವೃತ್ತಿ ಎಂದು ಸುವೇಂದು ಹೇಳಿದ್ದಾರೆ. ಜೈಂಟ್ ಸ್ಲೇಯರ್ (ದೊಡ್ಡವರನ್ನು ಮಣಿಸುವ) ಹೆಸರಿನಿಂದ ಕರೆಯಲ್ಪಡುವ ಬಿಜೆಪಿ ನಾಯಕ 15 ವರ್ಷಗಳ ಟಿಎಂಸಿ ಪಾರುಪತ್ಯಕ್ಕೆ ಮಂಗಳ ಹಾಡಿದ್ದು, ಮೊದಲ ಬಾರಿಗೆ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದಾರೆ.

## ಹಿಂಸಾಚಾರ: ನಾಲ್ವರ ಬಲಿ

ಪುಟ 1 ➜ ನಾರ್ತ್ 24 ಪರ್ಗಾನಸ್ ಮತ್ತು ಉದಯನಾರಾಯಣಪುರ್‌ನಲ್ಲಿ ಇಬ್ಬರು ಬಿಜೆಪಿ ಕಾರ್ಯಕರ್ತರು ಮೃತಪಟ್ಟಿದ್ದಾರೆ. ಬೆಲೆಘಾಟಾ ಮತ್ತು ನಾನೂರ್‌ನಲ್ಲಿ ಇಬ್ಬರು ಟಿಎಂಸಿ ಕಾರ್ಯಕರ್ತರು ಬಲಿಯಾಗಿದ್ದಾರೆ.

## 21 ವರ್ಷ ಬಳಿಕ ತೆರೆದ ದುರ್ಗಾ ದೇವಸ್ಥಾನ!

ಪುಟ 1 ➜ ಹಲವು ವರ್ಷಗಳಿಂದ ದೇವಸ್ಥಾನ ಮುಚ್ಚಿರಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಿಂದು ವಿರೋಧಿ ಆಡಳಿತವೇ ಕಾರಣವೆಂದು ದೇಗುಲ ಆಡಳಿತ ಸಮಿತಿಯ ಸದಸ್ಯ ಮತ್ತು ಬಿಜೆಪಿ ನಾಯಕ ನೀಲು ಚಕ್ರವರ್ತಿ ಆರೋಪಿಸಿದ್ದಾರೆ.

## ಬಿಜೆಪಿ ಪ್ರಣಾಳಿಕೆಯಲ್ಲೇನಿತ್ತು?

ಬಿಜೆಪಿ ಸರಕಾರ ರಚಿಸಿದ ನಂತರ, ಸ್ಥಗಿತಗೊಂಡಿರುವ ಇವೆಲ್ಲಾ ಯೋಜನೆಗಳಿಗೆ ಜೀವಕಳೆ ಸಿಗಲಿದೆ. ಕೇಂದ್ರ-ರಾಜ್ಯಗಳಲ್ಲಿ ಬಿಜೆಪಿ ಸರಕಾರವಿರುವಾಗ, ಸಹಕಾರಕ್ಕೆ ಸಂಬಂಧಿತ ಹಗ್ಗಜಗ್ಗಾಟ ಸಹಜವಾಗಿಯೇ ಇರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆಗಳಿಗೆ ಆದ್ಯತೆ ನೀಡುವುದರಿಂದ ಗಡಿಯಲ್ಲಿ ತಂತಿಬೇಲಿ ನಿರ್ಮಾಣ ಸಮರೋಪಾದಿಯಲ್ಲಿ ಪೂರ್ತಿಯಾಗಲಿದೆ. ಬಿಜೆಪಿ ಸರಕಾರ ರಚನೆಯಾದ ಬೆನ್ನಲ್ಲೇ ಕೇವಲ 45 ದಿನಗಳೊಳಗೆ ಬಂಗಾಳದ ಅಂತಾರಾಷ್ಟ್ರೀಯ ಗಡಿಗೆ ತಂತಿಬೇಲಿ ಬಿಗಿಯಲಾಗುವುದು ಎಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದೆ. ಗಡಿಯಾಚೆಯಿಂದ ಅಕ್ರಮ ನುಸುಳುವಿಕೆಯನ್ನು ಶಾಶ್ವತ ತಡೆಹಾಕಿ ಶೂನ್ಯಕ್ಕಿಳಿಸುವುದು ಬಿಜೆಪಿಯ ಪ್ರಾಥಮಿಕ ಅಜೆಂಡಾ ಆಗಿದೆ. ಬಿಎಸ್‌ಎಫ್ ಮತ್ತು ರಾಜ್ಯ ಪೊಲೀಸರ ಜಂಟಿ ಕಾರ್ಯಾಚರಣೆಯಿಂದ , ಗಡಿ ಜಿಲ್ಲೆಗಳಲ್ಲಿ ಮಾಮೂಲಾಗಿರುವ ಜನಸಂಖ್ಯಾ ಸ್ವರೂಪ ಬದಲಾವಣೆಗೆ ಮೂಗುದಾರ ಬೀಳಲಿದೆ.

## ಬಿಜೆಪಿ ಗೆಲುವು ಐತಿಹಾಸಿಕ: ಮೋದಿಗೆ ಟ್ರಂಪ್ ಅಭಿನಂದನೆ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವು ದಾಖಲಿಸಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಭಿನಂದಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಮತ್ತು ನಿರ್ಣಾಯಕ ಗೆಲುವು ಸಾಧಿಸಿದೆ ಎಂದು ಟ್ರಂಪ್ ಮೆಚ್ಚುಗೆ ವ್ಯಕ್ತಪಡಿಸಿದ್ದಾಗಿ ಶ್ವೇತಭವನದ ವಕ್ತಾರ ಕುಶ್ ದೇಸಾಯಿ ತಿಳಿಸಿದ್ದಾರೆ.

# ರಾಜ್ಯದಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ತನ್ನಿ: ಎಚ್‌ಡಿಕೆ

ಪುಟ 1 ➜ ನಂತರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಈ ಬಾರಿಯ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದೆ. ಈ ಗೆಲುವು ದೇಶದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿಯಾಗಿದೆ. ಈ ಸಂಬಂಧ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ತುರ್ತಾಗಿ ದೆಹಲಿಗೆ ಹೋಗಬೇಕಾಗಿದೆ ಎಂದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಯಾದ ವಿ.ಸೋಮಣ್ಣ ಅವರನ್ನು ನೀವೆಲ್ಲಾ ದಾಖಲೆ ಮತಗಳ ಅಂತರದಿಂದ ಗೆಲ್ಲಿಸಿದ ಪರಿಣಾಮ ಅವರು ಹಾಗೂ ತಾವು ಕೇಂದ್ರ ಮಂತ್ರಿಯಾಗಲು ಅವಕಾಶವಾಯಿತು. ಮುಂಬರುವ ಚುನಾವಣೆಗಳಲ್ಲೂ ಇದೇ ರೀತಿಯಲ್ಲಿ ಆಶೀರ್ವಾದ ಮಾಡಬೇಕು ಎಂದು ಕುಮಾರಸ್ವಾಮಿ ಮನವಿ ಮಾಡಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಎಚ್.ನಿಂಗಪ್ಪ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು, ಶಾಸಕರಾದ ಬಿ.ಸುರೇಶ್‌ಗೌಡ, ಎಂ.ಟಿ.ಕೃಷ್ಣಪ್ಪ ಇದ್ದರು.

# ಫೊರೆನ್ಸಿಕ್ ಲ್ಯಾಬ್‌ಗೆ ಅಂಚೆಮತ ಕಳುಹಿಸಿ

ಪುಟ 1 ➜ ಅವರ ಅರ್ಜಿ ಪುರಸ್ಕರಿಸಿ ನ್ಯಾಯಾಲಯ, 6-03-2026ರಲ್ಲಿ ಮರು ಎಣಿಕೆಗೆ ನಿರ್ದೇಶನ ನೀಡಿತ್ತು. ಮರು ಎಣಿಕೆಯಲ್ಲಿ ರಾಜೇಗೌಡರಿಗೆ 314 ಮತಗಳು ಮಾತ್ರ ಅರ್ಹ ಎಂದು ಆಗುತ್ತದೆ. 255 ಮತಗಳು ಅನರ್ಹ ಎಂದು ಆಗುತ್ತದೆ. ಜೀವರಾಜ್ ಅವರಿಗೆ ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ವೋಟ್ ಚೋರಿ ಮಾಡಿರುವುದು ಬಹಳ ಸ್ಪಷ್ಟವಾಗುತ್ತದೆ. ರಾಜೇಗೌಡರಿಗೆ ಬಿದ್ದಿದ್ದ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಇದು ವೋಟ್ ಡಕಾಯಿತಿಯಾಗಿದೆ ಎಂದು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಣಿಕೆ ಮಾಡಿದ ಬಳಿಕ ಎಲ್ಲಾ ದಾಖಲಾತಿಗಳನ್ನು ಟ್ರಂಕ್‌ನಲ್ಲಿಡಲಾಗುತ್ತದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರವಿತ್ತು. ಕೇಂದ್ರದಲ್ಲೂ ಅವರ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ಮತಪತ್ರ ಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು ಎಂದು ಗಂಭೀರ ಆರೋಪ ಮಾಡಿದರು. ಮರು ಎಣಿಕೆ ಸಂದರ್ಭದಲ್ಲಿ ಚುನಾವಣಾ ವೀಕ್ಷಕರು ಸಹ ಬಂದಿದ್ದರು. ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವುದಾಗಿ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದಿರುವುದು ತಿಳಿದುಬಂದಿದೆ. ಅಂಚೆ ಮತಪತ್ರಗಳನ್ನು ಫೊರೆನ್ಸಿಕ್ ಪರಿಶೀಲನೆಗೆ ಸಲ್ಲಿಸಬೇಕಿತ್ತು. ಚುನಾವಣಾ ಫಲಿತಾಂಶ ಘೋಷಣೆಯನ್ನು ನ್ಯಾಯಾಲಯಕ್ಕೆ ಬಿಡಬೇಕಾಗಿತ್ತು. ಅದನ್ನು ಬಿಟ್ಟು ಚುನಾವಣಾಧಿಕಾರಿಗಳೇ ಫಲಿತಾಂಶ ಘೋಷಣೆ ಮಾಡಿದ್ದಾರೆ. ಫಿ

ಚುನಾವಣಾ ವೀಕ್ಷಕರು ಅನುಮತಿ ಪಡೆದ ಬಳಿಕವೇ ಫಲಿತಾಂಶ ಘೋಷಿಸಬೇಕು. ಆದರೆ ಚುನಾವಣಾಧಿಕಾರಿಗಳು ಚುನಾವಣಾ ವೀಕ್ಷಕರ ಅನುಮತಿಯಿಲ್ಲದೇ ಆತುರಾತುರವಾಗಿ ಫಲಿತಾಂಶ ಘೋಷಿಸಿದ್ದಾರೆ. ತಪ್ಪು ಮಾಡಿದ ಯಾರೇ ಆಗಿದ್ದರೂ, ಅಂತಹ ಅಧಿಕಾರಿಗೆ ಶಿಕ್ಷೆಯಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದರು.

**2028ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ** ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದಾರೆ. ಇದು ಮುಂದಿನ 2028ರ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳುತ್ತಿದ್ದರು.

ಅವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಎಸ್‌ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲನೆ ಮಾಡಲಿದ್ದೇವೆ ಎಂದರು.

## ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ಹೈ ತಡೆ

ಪುಟ 1 ➜ ಜೀವರಾಜ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು 13.5.2023ರಲ್ಲಿ ನಡೆದಿದೆ ಎನ್ನಲಾದ ಆರೋಪ ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಸೋತ ಹಿನ್ನೆಲೆಯಲ್ಲಿ ಈ ಪ್ರಕರಣ ದಾಖಲಿಸಲಾಗಿದ್ದು, ಇಲ್ಲಿ ರಾಜಕೀಯ ದುರುದ್ದೇಶವಿದೆ ಎಂದರು. ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ವಿಶೇಷ ಸರ್ಕಾರಿ ಅಭಿಯೋಜಕ ಬಿ.ಎ.ಬೆಳ್ಳಿಯಪ್ಪ ಅವರು ಮತಗಳ ಮೇಲೆ ಡಬಲ್ ಟಿಕ್ ಇದೆ. ಈ ವಿಚಾರವನ್ನು ಸುಧೀರ್ ಅವರು ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅವರ ಗಮನಕ್ಕೆ ಮರು ಎಣಿಕೆ ನಡೆಯುವುದಕ್ಕೆ ಮುನ್ನವೇ ತಂದಿದ್ದಾರೆ. ಇಲ್ಲಿ ಮತ ತಿರುಚುವ ಕೃತ್ಯ ನಡೆದಿದೆ ಎಂದರು. ಇದರಿಂದ ಕೆರಳಿದ ಪೀಠವು 13.5.2023ರಲ್ಲಿ ಮತ ತಿರುಚಿರುವುದು ನಡೆದಿದೆ ಎನ್ನುವುದಾದರೆ ಆ ವಿಚಾರವನ್ನು ಮರು ಎಣಿಕೆಗೆ ಆದೇಶಿಸಿದ ನ್ಯಾಯಾಲಯದ ಗಮನಕ್ಕೆ ತಂದು, ನಿರ್ದೇಶನ ಪಡೆದು ಮುಂದುವರಿಯಬೇಕಿತ್ತು. ಹಾಲಿ ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅದನ್ನು ಮಾಡಬೇಕಿತ್ತು. ದೂರಿನಲ್ಲಿ ಗೌರವ್ ಶೆಟ್ಟಿಯನ್ನು ಏಕೆ ಆರೋಪಿ ಮಾಡಲಾಗಿಲ್ಲ. ಹಿಂದಿನ ಚುನಾವಣಾಧಿಕಾರಿ ವೇದಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿಯನ್ನು ಏಕೆ ಆರೋಪಿಗಳನ್ನಾಗಿಸಲಾಗಿದೆ. ದೂರು ದಾಖಲಿಸುವುದಕ್ಕೂ ಮುನ್ನ ಅವರ ವಾದ ಆಲಿಸಬೇಕಿತ್ತಲ್ಲವೇ. ಇದು ಸಹಜ ನ್ಯಾಯತತ್ವವೇ ಎಂದು ಪೊಲೀಸರನ್ನು ಪ್ರಶ್ನಿಸಿತು. ಪ್ರಕರಣದ ತನಿಖಾಧಿಕಾರಿ ಎಲ್ಲಿ? ಎಂದ ಪೀಠವು ತನಿಖಾಧಿಕಾರಿ ಮುಂದೆ ಬರುತ್ತಿದ್ದಂತೆ ಗೌರವ್ ಶೆಟ್ಟಿಯನ್ನು ಏಕೆ ಆರೋಪಿ ಮಾಡಿಲ್ಲ. ಎಲ್ಲಿಂದ ಬಂದಿದ್ದೀರಿ. ನಿಮಗೆ ಕಣ್ಣು ಕಾಣುವುದಿಲ್ಲವೇ? ಯಾರೋ ಎಸಗಿದ ಪ್ರಮಾದಕ್ಕೆ ಇನ್ಯಾರ ವಿರುದ್ಧ ಏಕೆ ಪ್ರಕರಣ ದಾಖಲಿಸಿದ್ದೀರಿ? ನಿಮ್ಮನ್ನು ಅಮಾನತು ಮಾಡಲು ಆದೇಶ ಬರೆಯಲಾಗುವುದು ಎಂದಿತು. ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು. ಆದರೆ, ಈ ಪ್ರಕರಣದಲ್ಲಿ ಅದು ಕಾಣುತ್ತದೆ. ರಾಜಕೀಯ ಒತ್ತಡಕ್ಕೆ ಮಣಿದು ಎಫ್ ಐಆರ್ ದಾಖಲಿಸಲಾಗಿದೆ. ಒಂದೊಮ್ಮೆ ರಾಜೇಗೌಡರ ವಿರುದ್ಧ ಇಂಥದ್ದೇ ಪ್ರಕರಣ ದಾಖಲಿಸಿದ್ದರೂ ಅದಕ್ಕೆ ತಡೆ ನೀಡುತ್ತಿದ್ದೆ. ಹಿಂದಿನ ಚುನಾವಣಾಧಿಕಾರಿ ಮತ್ತು ಜಿಲ್ಲಾಧಿಕಾರಿಯನ್ನು ಆರೋಪಿಗಳನ್ನಾಗಿಸುವುದು ಸರಿಯೇ? ಪರಿಸ್ಥಿತಿ ಹೀಗಾದರೆ ಯಾವ ಅಧಿಕಾರಿಯೂ ಸರಿಯಾಗಿ ಕೆಲಸ ಮಾಡಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು. ಬಿ.ಎ.ಬೆಳ್ಳಿಯಪ್ಪ ಅವರು ಮೇ 7ರಂದು ಅಗತ್ಯ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುವುದು ಎಂದು ಹೇಳಿದ್ದಾರೆ. ಇದಕ್ಕೆ ಅವರಿಗೆ ಅನುಮತಿಸಲಾಗಿದೆ. ಅಂತೆಯೇ ಜೀವರಾಜ್ ವಿರುದ್ಧದ ಪ್ರಕರಣಕ್ಕೆ ತಡೆ ನೀಡಲಾಗಿದ್ದು, ಸರ್ಕಾರ ಮತ್ತು ದೂರುದಾರರಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಪೀಠ ಆದೇಶಿಸಿತು.

# ಎನ್‌ಎಬಿಎಲ್ ಜತೆ ಬಿಬಿಸಿ ಒಪ್ಪಂದ




**ಬೆಂಗಳೂರು:** ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಹಾಗೂ ಸ್ಟಾರ್ಟ್‌ಅಪ್‌ಗಳ ಸಂಶೋಧನೆಗಳಿಗೆ ಜಾಗತಿಕ ಮಾನ್ಯತೆ ಒದಗಿಸುವ ಉದ್ದೇಶದಿಂದ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ (ಬಿಬಿಸಿ) ಹಾಗೂ ರಾಷ್ಟ್ರೀಯ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ ಎನ್‌ಎಬಿಎಲ್(ಕ್ಯೂಸಿಐ) ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದಕ್ಕೆ ರಾಜ್ಯ ಸರ್ಕಾರದ ವಿದ್ಯುನ್ಮಾನ, ಮಾಹಿತ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಹಾಗೂ ಬಿಬಿಸಿ ಅಧ್ಯಕ್ಷೆ ಡಾ. ಎನ್. ಮಂಜುಳಾ ಅವರ ಸಮ್ಮುಖದಲ್ಲಿ ಎನ್‌ಎಬಿಎಲ್‌ಯ ವ್ಯವಸ್ಥಾಪಕ ನಿರ್ದೇಶಕ ಡಾ. ಮೊಹಮ್ಮದ್ ಆದಿಲ್ ಎ.ಎ. ಮತ್ತು (ಕ್ವಾಲಿಟಿ ಕಂಟ್ರೋಲ್ ಆಫ್ ಇಂಡಿಯಾ) ಸಿಇಒ ಡಾ. ರಮಾನಂದ್ ಶುಕ್ಲಾ ಅವರು ಸಹಿ ಹಾಕಿದರು.

ಈ ವೇಳೆ ಮಾತನಾಡಿದ ಸರ್ಕಾರದ ಕಾರ್ಯದರ್ಶಿ ಡಾ. ಎನ್.ಮಂಜುಳಾ, ಜೀವ ವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಹಬ್ ಆಗಿ ಗುರುತಿಸಿಕೊಳ್ಳುವುದಕ್ಕೆ ಈ ಒಪ್ಪಂದ ಬಹಳ ಸಹಕಾರಿಯಾಗಲಿದೆ. ನಾವು ಈಗಾಗಲೇ 512ಕ್ಕೂ ಹೆಚ್ಚಿನ ನಾವೀನ್ಯತಾ ಪ್ರಾಜೆಕ್ಟ್‌ಗಳಿಗೆ ಬೆಂಬಲ ನೀಡಿದ್ದೇವೆ. ಇದರಲ್ಲಿ 24 ಜಾಗತಿಕ ಸ್ಟಾರ್ಟ್‌ಅಪ್‌ಗಳು ಮತ್ತು 74 ಪೇಟೆಂಟ್‌ಗಳು ಸೇರಿವೆ. ಜೈವಿಕ ತಂತ್ರಜ್ಞಾನದಲ್ಲಿ ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್ ಅನ್ನು ಜಾಗತಿಕ ನಾವೀನ್ಯತಾ ಕೇಂದ್ರವಾಗಿ ಬಲಪಡಿಸಲು ಈ ಒಪ್ಪಂದ ಹೆಚ್ಚು ಅನುಕೂಲಕರವಾಗಿದೆ ಎಂದು ಹೇಳಿದರು. ಈ ಒಪ್ಪಂದದ ಅನ್ವಯ, ಬಿಬಿಸಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾರ್ಟ್‌ಅಪ್‌ಗಳು ಎನ್‌ಎಬಿಎಲ್‌ನ ಕಟ್ಟುನಿಟ್ಟಿನ ಮಾನ್ಯತಾ ಪ್ರಕ್ರಿಯೆಗಳನ್ನು ಅತ್ಯಂತ ಸರಳ, ತ್ವರಿತವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

# ಕಳಂಕರಹಿತ ಆಡಳಿತಕ್ಕೆ ಒಲಿದ ಗೆಲುವು: ಸಂಸದ ಕಾರಜೋಳ

**ಚಿತ್ರದುರ್ಗ:** ಪಂಚ ರಾಜ್ಯಗಳಲ್ಲಿ ಮೂರು ರಾಜ್ಯದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕಳಂಕರಹಿತ ಪ್ರಧಾನಿ ಮೋದಿಯವರ ಆಡಳಿತದಿಂದ ಗೆಲುವು ಸಿಕ್ಕಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ, ಸಂಸದರಾದ ಗೋವಿಂದ ಕಾರಜೋಳ ತಿಳಿಸಿದರು.

ಚಿತ್ರದುರ್ಗ ನಗರದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದ ಜನರಿಂದ ಸಮಗ್ರತೆ ಉಳಿಸುವ ಕೆಲಸವಾಗಿದೆ. ಬಾಂಗ್ಲಾ



ದೇಶ ಅರಾಜಕತೆ ಸೃಷ್ಟಿಸುವ ಹೆಬ್ಬಾಗಿಲಾಗಿತ್ತು. ಬಂಗಾಳದಿಂದ ಪಾಕ್, ಬಾಂಗ್ಲಾದ ನುಸುಳುಕೋರರು ಬರುತ್ತಿದ್ದರು. ಬಿಜೆಪಿ ಪಕ್ಷದಿಂದ ತಡೆಗಟ್ಟುವ ಕೆಲಸ ಮಾಡಲಾಗುತ್ತದೆ. ಹಿಂದುಗಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿತ್ತು. ಮೋದಿ ನೇತೃತ್ವದ ಸರ್ಕಾರ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದ ಅವರು, ಕರ್ನಾಟಕದಲ್ಲಿ ಎರಡು ಕಡೆಯಲ್ಲಿ ನಡೆದ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಸೋತಿದ್ದಾರೆ. ಉಪಚುನಾವಣೆ ಫಲಿತಾಂಶವನ್ನು ನಾವು ಗೌರವಿಸುತ್ತೇವೆ ಎಂದರು.

ಶೃಂಗೇರಿ ಮರು ಮತ ಎಣಿಕೆ ವೇಳೆ ವೋಟ್ ಚೋರಿ ಎಂದು ಸಿಎಂ ಆರೋಪ ವಿಚಾರಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ್ದೇ ಆಡಳಿತ ಇದೆ. ಚುನಾವಣಾ ಆಯೋಗ ಒಂದು ಸ್ವಾಯತ್ತ ಸಂಸ್ಥೆ ಆಗಿದೆ. ಅವರಮೇಲೆವಿಶ್ವಾಸವಿಲ್ಲಎಂದರೆಸಂವಿಧಾನದಮೇಲೆವಿಶ್ವಾಸವಿಲ್ಲಎಂದರ್ಥ. ಬ್ಯಾಲೆಟ್ ಬೇಕು. ಇವಿಎಂ ಬೇಡ ಎಂದು ಹೇಳುತ್ತಾರೆ. ನನ್ನನ್ನು 334 ಮತಗಳಿಂದ ಸೋಲಿಸಿದ್ದೇವೆಂದು ಘೋಷಿಸಿದರು ಎಂದರು. ಬಾಗಲಕೋಟೆ, ಬಾದಾಮಿ, ಹುನಗುಂದದಲ್ಲೂ ಅದೇ ರೀತಿ ಸೋಲಿಸಿದರು. ಮರು ಮತ ಎಣಿಕೆಗೆ ಸಹ ಅವಕಾಶ ಕಲ್ಪಿಸಲಿಲ್ಲ. ಆಗ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಬಹುಮತದಿಂದ ಅಧಿಕಾರಕ್ಕೆ ಬಂದಿತ್ತು. ಕಾಂಗ್ರೆಸ್‌ನವರು ಚೋರಿ ಮಾಡಲು ಬ್ಯಾಲೆಟ್ ಬೇಡುತ್ತಾರೆ ಎಂದು ತಿಳಿಸಿದರು.

ತಂಪೆರೆದ ಮಳೆರಾಯ



ಬೆಳಗಾವಿ ನಗರದಲ್ಲಿ ಮಂಗಳವಾರ ಸುರಿದ ಮಳೆ ತಂಪೆರೆದಿದ್ದು, ನೀರಿನಿಂದ ಆವೃತವಾದ ರಸ್ತೆಯೊಂದರಲ್ಲಿ ವಾಹನ ಸವಾರರು ಸಾಗಿದ್ದು ಹೀಗೆ...

# ಟಿವಿಕೆ ಜತೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳದಿರುವುದೇ ಒಳಿತು

**ಬೆಂಗಳೂರು:** ಕಾಂಗ್ರೆಸ್ ಪಕ್ಷವು ಟಿವಿಕೆ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದರೆ, ಟಿವಿಕೆ ಈಗಿರುವಂತೆ ಯಶಸ್ವಿಯಾಗುತ್ತಿರಲಿಲ್ಲ ಎಂದು ರಾಜ್ಯಸಭಾ ಸದಸ್ಯ ಲಹರ್‌ಸಿಂಗ್ ಸಿರೋಯಾ ಹೇಳಿದ್ದಾರೆ.



ಕೆಲವು ಕಾಂಗ್ರೆಸ್ ನಾಯಕರು ಡಿಎಂಕೆ ಜೊತೆಗಿನ ಮೈತ್ರಿಯನ್ನು ಮುರಿದು ಟಿವಿಕೆ ಜೊತೆ ಮೈತ್ರಿ ಮಾಡಿಕೊಂಡಿದ್ದರೆ, ಚೆನ್ನಾಗಿ ಕೆಲಸ ಮಾಡಿ ಅಧಿಕಾರ ಹಂಚಿಕೊಳ್ಳಬಹುದಿತ್ತು ಎನ್ನುತ್ತಿರುವುದಕ್ಕೆ ಲಹರ್‌ಸಿಂಗ್ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಇದಕ್ಕೆ ವಿರುದ್ಧವಾಗಿ ನಡೆಯುವ ಸಾಧ್ಯತೆಯೇ ಹೆಚ್ಚು. ಕಾಂಗ್ರೆಸ್ ಇತಿಹಾಸವನ್ನು ಗಮನಿಸಿದರೆ, ಕಾಂಗ್ರೆಸ್ ಪಕ್ಷವು ಟಿವಿಕೆ ಪಕ್ಷದೊಂದಿಗೆ ಜೊತೆ ಮೈತ್ರಿ ಮಾಡಿಕೊಂಡಿದ್ದರೆ, ಟಿವಿಕೆ ಈಗಿರುವಂತೆ ಯಶಸ್ವಿಯಾಗುತ್ತಿರಲಿಲ್ಲ. ದುರದೃಷ್ಟದ ನೆರಳು ಅವರ ಮೇಲೆ ಬೀಳುತ್ತಿತ್ತು. ಬಿಹಾರ ಮತ್ತು ಉತ್ತರ ಪ್ರದೇಶದಂತಹ ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಮೈತ್ರಿ ಪಾಲುದಾರರನ್ನು ಹಾನಿಗೊಳಿಸಿದಂತೆ ಟಿವಿಕೆ ಸ್ಥಾನ ಕಡಿಮೆಯಾಗುತ್ತಿತ್ತು ಎಂದು ವಿಶ್ಲೇಷಿಸಿದ್ದಾರೆ.

ಅಧಿಕಾರದಲ್ಲಿ ಪಾಲು ಮತ್ತು ಗೌರವ ಬೇಕು ಎಂದು ಹೇಳುವ ಮೂಲಕ ತಮಿಳುನಾಡಿನಲ್ಲಿ ಡಿಎಂಕೆ ವಿರುದ್ಧ ನಿರಂತರವಾಗಿ ನಿರೂಪಣೆಯನ್ನು ನಿರ್ಮಿಸಿದ್ದು ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದ ಕೆಲವು ಜನರು ಎಂಬುದು ಸ್ಪಷ್ಟವಾಗಿದೆ. ಅವರು ಸೃಷ್ಟಿಸಿದ ಅಪಶ್ರುತಿ ಕ್ರಮೇಣ ದೊಡ್ಡದಾಯಿತು ಮತ್ತು ಡಿಎಂಕೆಯನ್ನು ಮುಳುಗಿಸಿತು ಎಂದು ಅಭಿಪ್ರಾಯಿಸಿದ್ದಾರೆ.

ಪಿ.ಚಿದಂಬರಂ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಂತಹ ಜನರು ಈ ಮೈತ್ರಿ ನಡೆಯಲು ಬಿಡಲಿಲ್ಲ ಎಂದು ಸಾಮಾಜಿಕ ಮಾಧ್ಯಮದಲ್ಲಿ ದೂಷಿಸಲಾಗುತ್ತಿದೆ ಎಂದು ಲಹರ್ ಸಿಂಗ್ ಸಿರೋಯಾ ಹೇಳಿದ್ದಾರೆ.

## ಕಿರುಸುದ್ದಿ

### ಜಿಲ್ಲಾಡಳಿತದಿಂದ ಬೇಜವಾಬ್ದಾರಿ ಪ್ರದರ್ಶನ: ಈಶ್ವರಪ್ಪ ಆಕ್ರೋಶ

**ಶಿವಮೊಗ್ಗ:** ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಅನುಮತಿ ನೀಡುವ ಮೂಲಕ ಜಿಲ್ಲಾಡಳಿತ ತನ್ನ ಬೇಜವಾಬ್ದಾರಿ ಪ್ರದರ್ಶಿಸಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು. ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಾಗರ ತಾಲೂಕಿನ ಬೇಸೂರು ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ



ಅಣು ವಿದ್ಯುತ್ ಸ್ಥಾವರವನ್ನು ಪರಿಸರಕ್ಕಾಗಿ ನಾವು ಮತ್ತು ರಾಷ್ಟ್ರಭಕ್ತರ ಬಳಗ ತೀವ್ರವಾಗಿ ವಿರೋಧಿಸುತ್ತದೆ. ಪಶ್ಚಿಮಘಟ್ಟದ ಸೂಕ್ಷ್ಮ ಪ್ರದೇಶವಾದ ಈ ಭಾಗದಲ್ಲಿ ಬೃಹತ್ ಯೋಜನೆಗಳನ್ನು ಹೊರುವ ಧಾರಣ ಸಾಮರ್ಥ್ಯವಿಲ್ಲ, ಪಂಪ್ಡ್ ಸ್ಟೋರೇಜ್, ಚಕ್ರಾ, ವರಾಹಿ, ಲಿಂಗನಮಕ್ಕಿ, ಹಿರೇಭಾಸ್ಕರ, ಮೇಲೇನೂರು, ಸಾವೇಹಕ್ಲು, ಮಾಣಿ ಜಲಾಶಯದಂತಹ ಪರಿಸರ ಮಾರಕ ಯೋಜನೆಗಳು ಜಾರಿಗೊಂಡಿವೆ. ಈಗ ಸಾಗರ ಸಮೀಪದ ಬೇಸೂರಿನಲ್ಲಿ ಎನ್‌ಟಿಪಿಎಲ್ ಮಾರಕ ಅಣು ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲಿದೆ ಎಂಬ ಅಧಿಕೃತ ಮಾಹಿತಿ ದೊರೆತಿದೆ ಎಂದರು.

### ಟಿಎಂಸಿ ನಾಶದಿಂದ ದೇಶಕ್ಕೆ ಒಳಿತು: ಮುನಿರತ್ನ

**ಚಿತ್ರದುರ್ಗ:** ಅಪ್ಪ ಮಂತ್ರಿ, ಅಮ್ಮ ಲೋಕಸಭಾ ಸದಸ್ಯರು ಇಷ್ಟಾದರೂ ಸಹ ಇನ್ನೊಬ್ಬ ಮಂತ್ರಿಯ ಬಳಿ ಹೋಗಿ ತನ್ನ ಮಗನ ಗೆಲುವಿಗಾಗಿ ಅಂಗಲಾಚಬೇಕಾದ ಪರಿಸ್ಥಿತಿ ದಾವಣಗೆರೆ ದಕ್ಷಿಣದಲ್ಲಿ ಉಂಟಾಗಿತ್ತು ಎಂದು ಬೆಂಗಳೂರಿನ ರಾಜ ರಾಜೇಶ್ವರಿ ನಗರದ ಶಾಸಕ ಮುನಿರತ್ನ ಟೀಕಿಸಿದರು. ಚಿತ್ರದುರ್ಗ ನಗರದಲ್ಲಿ ಮೇ ೯ರಂದು ನಡೆಯಲಿರುವ ಯಡಿಯೂರಪ್ಪರವರ ಅಭಿಮಾನೋತ್ಸವ ಸಮಾರಂಭದ ಪೂರ್ವಭಾವಿ ಸಿದ್ಧತೆಯನ್ನು ಪರಿಶೀಲಿಸಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಪಂಚ ರಾಜ್ಯ ಚುನಾವಣೆಯಲ್ಲಿ ಪ್ರಮುಖವಾಗಿ ಪಶ್ಚಿಮ ಬಂಗಾಳ ಅದು ಒಂದು ರಾಜ್ಯ ಎನ್ನುವುದಕ್ಕಿಂತ ದೇಶಕ್ಕೆ ಹಿಡಿದಂತಹ ಕೆಟ್ಟ ವ್ಯಕ್ತಿ ಕೆಟ್ಟ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಹೊರಟಿದಂತಹ ತೃಣ ಮೂಲ ಕಾಂಗ್ರೆಸ್‌ನ್ನು ಕಿತ್ತಾಕಿರುವುದು ದೇಶಕ್ಕೆ ಒಳ್ಳೆಯದಾಗಿದೆ ಎಂದರು.

### ಅತ್ತೆಗೆ ಚಾಕುವಿನಿಂದ ಇರಿದ ಅಳಿಯ

**ಬೆಳಗಾವಿ:** ಜಿಲ್ಲೆಯ ಸವದತ್ತಿ ತಾಲೂಕಿನ ಆಲದಕಟ್ಟಿ ಗ್ರಾಮದಲ್ಲಿ ವ್ಯಕ್ತಿಯೊಬ್ಬ ವಿಡಿಯೋ ಕಾಲ್‌ನಲ್ಲಿ ಮಗುವನ್ನು ತೋರಿಸಿಲ್ಲ ಎನ್ನುವ ಕಾರಣಕ್ಕೆ ಅತ್ತೆಗೆ ಚಾಕುವಿನಿಂದ ಇರಿದು ವಾಟ್ಸ್ಆ್ಯಪ್ ಸ್ಟೇಟಸ್ ಇಟ್ಟುಕೊಂಡಿರುವ ಘಟನೆಯೊಂದು ನಡೆದಿದೆ. ಅರವಿಂದ ಗವಳಿ ಅತ್ತೆಗೆ ಚಾಕು ಇರಿದ ಅಳಿಯ. ಮಹಾದೇವಿ (45) ಚಾಕು ಇರಿತಕ್ಕೊಳಗಾದ ಮಹಿಳೆ. ಸದ್ಯ ಮಹಾದೇವಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ಅರವಿಂದ ಗವಳಿ



ಯನ್ನು ಪೊಲೀಸರು ಬಂಧಿಸಿದ್ದಾರೆ. ಅರವಿಂದ ಗವಳಿಯ ಪತ್ನಿಗೆ ಎರಡು ತಿಂಗಳ ಹಿಂದೆಯಷ್ಟೇ ಹೆರಿಗೆಯಾಗಿದ್ದು, ಆಕೆ ತವರು ಮನೆಯಲ್ಲಿದ್ದಳು. ಅಲ್ಲಿಯೂ ಪತ್ನಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದ ಅರವಿಂದ, ಪದೇ ಪದೆ ವಿಡಿಯೋ ಕಾಲ್ ಮಾಡಿ ಮಗುವನ್ನು ತೋರಿಸುವಂತೆ ಪಟ್ಟು ಹಿಡಿಯುತ್ತಿದ್ದ. ಇದಕ್ಕೆ ಪ್ರತಿಕ್ರಿಯಿಸಿದ್ದ ಅತ್ತೆ ಮಹಾ ದೇವಿ, ಕೆಲಸ ಬಿಟ್ಟು ಸದಾ ಮೊಬೈಲ್ ಹಿಡಿದು ಕೂರಲು ಸಾಧ್ಯವಿಲ್ಲ, ದಿನಕ್ಕೆ ಒಂದು ಬಾರಿ ಮಾತ್ರ ಕಾಲ್ ಮಾಡು ಎಂದು ಬುದ್ಧಿ ಹೇಳಿದ್ದರು. ಸಿಟ್ಟಾದ ಅರವಿಂದ ಅತ್ತೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದಲ್ಲದೆ, ಅತ್ತೆಯು ನಮ್ಮ ಮನೆಯ ಬಾಗಿಲಿಗೆ ಬಂದರೆ ನಿನ್ನನ್ನು ಸುಮ್ಮನೆ ಬಿಡಲ್ಲ ಎಂದು ಎಚ್ಚರಿಸಿದ್ದರು.

## ಕಾರ್ಯಕರ್ತರಿಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಿವಿಮಾತು

# ಸೋಲಿಂದ ಹತಾಶರಾಗದಿರಿ

**ದಾವಣಗೆರೆ:** ಚುನಾವಣೆಯಲ್ಲಿ ತಂತ್ರಗಾರಿಕೆಯೂ ಇರುತ್ತದೆ, ಕುತಂತ್ರಗಾರಿಕೆಯೂ ಇರುತ್ತದೆ. ಅದರಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ನಮ್ಮ ಕಾರ್ಯಕರ್ತರು ಉಪಚುನಾವಣೆ ಸೋಲಿನಿಂದ ಹತಾಶರಾಗಬೇಕಿಲ್ಲ. ಮುಂಬರುವ ದಿನಗಳಲ್ಲಿ ಬಿಜೆಪಿ ಗತವೈಭವ ರಾಜ್ಯದಲ್ಲಿ ಮರುಕಳಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಭೇಟಿ ನೀಡಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಸಾಮಾನ್ಯವಾಗಿ ಉಪಚುನಾವಣೆಗಳಲ್ಲಿ ಜನರ ಒಲವು ಆಡಳಿತ ಪಕ್ಷದ ಪರವಾಗಿ ಇರುತ್ತದೆ. ಆದರೂ ನಾವು ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಫಲಿತಾಂಶದ ಬಗ್ಗೆ ಸಾಕಷ್ಟು ನಿರೀಕ್ಷೆ ಹೊಂದಿದ್ದೆವು. ಅನುಕಂಪ, ಆಡಳಿತ ಯಂತ್ರದ ದುರುಪಯೋಗ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾಗಿವೆ. ಕಾರ್ಯಕರ್ತರು ಚುನಾವಣೆಯಲ್ಲಿನ ಹಿನ್ನಡೆ ಬಗ್ಗೆ ಚಿಂತಿಸದೆ, ಇನ್ನಷ್ಟು ಪಕ್ಷ ಸಂಘಟನೆಯಲ್ಲಿ ತೊಡಗಬೇಕು ಎಂದು ಸಲಹೆ ನೀಡಿದರು.

ಎರಡೂ ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಅಭ್ಯರ್ಥಿ ಗೆಲ್ಲಲು ಒಳ್ಳೆಯ ವಾತಾವರಣ ನಿರ್ಮಾಣವಾಗಿತ್ತು. ಪಕ್ಷದ ಕಾರ್ಯಕರ್ತರು, ಸ್ಥಳೀಯ ಮುಖಂಡರು ಹಗಲಿರುಳು ಶ್ರಮ ಹಾಕಿದ್ದಾರೆ. ಎಂ.ಪಿ.ರೇಣುಕಾಚಾರ್ಯ, ಜಿ.ಎಂ.ಸಿದ್ದೇಶ್ವರ್ ಸೇರಿದಂತೆ ಎಲ್ಲ ಮುಖಂಡರು ಭಿನ್ನಾಭಿಪ್ರಾಯ ಬದಿಗಿಟ್ಟು ತನು-ಮನ-ಧನದೊಂದಿಗೆ ಸಹಕರಿಸಿದ್ದಾರೆ. ದಾವಣಗೆರೆ ದಕ್ಷಿಣದ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಕೂಡ ಜನಾನುರಾಗಿಯಾಗಿ ಚುನಾವಣೆ ಗೆಲ್ಲಲೇಬೇಕೆಂಬ ಹಠದಿಂದ ಶಕ್ತಿಮೀರಿ ಹೋರಾಡಿದ್ದಾರೆ. ಆದರೂ ನಿರೀಕ್ಷಿತ ಮಟ್ಟದಲ್ಲಿ ಮತ ಬಂದಿಲ್ಲ. ಅದೃಷ್ಟ ನಮ್ಮ ಕೈಹಿಡಿಯಲಿಲ್ಲ ಎನ್ನಬಹುದಷ್ಟೇ ಎಂದರು.

ಶ್ರೀನಿವಾಸ ದಾಸಕರಿಯಪ್ಪ, ಬಿ.ಜಿ.ಅಜಯ ಕುಮಾರ್‌ಗೆ ಒಳ್ಳೆಯ ರಾಜಕೀಯ ಭವಿಷ್ಯವಿದೆ. ಕಾರ್ಯಕರ್ತರು ಸೋಲಿನಿಂದ ಎದೆಗುಂದಬೇಕಿಲ್ಲ. ಬಿ.ಎಸ್.ಯಡಿಯೂರಪ್ಪನವರು ಇಂತಹ ಅನೇಕ ಸವಾಲು ಎದುರಿಸಿದ್ದಾರೆ. ಅನೇಕ ರೀತಿಯಲ್ಲಿ ಹೋರಾಟ ಮಾಡಿ ಪಕ್ಷವನ್ನು ಈ ಮಟ್ಟಕ್ಕೆ ಬೆಳೆಸಿದ್ದಾರೆ. 10 ವರ್ಷದ ಹಿಂದೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಶಾಸಕ ಆಯ್ಕೆಯಾಗುವುದನ್ನು ಊಹೆ ಮಾಡಿಕೊಳ್ಳುವಂತಿರಲಿಲ್ಲ. ಮಮತಾ ಬ್ಯಾನರ್ಜಿಯವರು ಅಧಿಕಾರ ಮದದಿಂದ ಹಿಂದೂಗಳಿಗೆ ಅಪಮಾನ ಮಾಡುತ್ತಿದ್ದರು. ನಮ್ಮ ಕಾರ್ಯಕರ್ತರ ಶ್ರಮ, ಪ್ರಧಾನಿ ಮೋದಿಯವರ ಜನಪ್ರಿಯತೆ, ಗೃಹಸಚಿವ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ನೇತೃತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿದೆ. ಮುಂದೆ ರಾಜ್ಯದಲ್ಲೂ ನಿಶ್ಚಿತವಾಗಿ ಅಧಿಕಾರಕ್ಕೆ ಬರುತ್ತೇವೆ ಎಂದರು. ಪಕ್ಷದ ಜಿಲ್ಲಾಧ್ಯಕ್ಷ ಎನ್.ರಾಜಶೇಖರ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಮೇಯರ್ ಬಿ.ಜಿ.ಅಜಯ ಕುಮಾರ, ಧೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ, ಮುಖಂಡರಾದ ಪಿ.ಸಿ.ಶ್ರೀನಿವಾಸ ಭಟ್, ದೊಗ್ಗಳ್ಳಿ ವೀರೇಶ ಹಾಜರಿದ್ದರು.



### ಶ್ರೀನಿವಾಸ್ ಕುಟುಂಬಕ್ಕೆ ಧೈರ್ಯ ತುಂಬಿದ ಬಿವೈವಿ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಲ್ಲಿ ಸೋಲನುಭವಿಸಿದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ.ದಾಸಕರಿಯಪ್ಪ ನಿವಾಸಕ್ಕೆ ಮಂಗಳವಾರ ಸಂಜೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಭೇಟಿ ನೀಡಿ, ಶ್ರೀನಿವಾಸ್ ಮತ್ತು ಕುಟುಂಬ ವರ್ಗಕ್ಕೆ ಧೈರ್ಯ ತುಂಬಿದರು. ಚುನಾವಣೆಯಲ್ಲಿ ಸೋಲು-ಗೆಲುವು ಸಾಮಾನ್ಯ. ನಮ್ಮ ನಿರೀಕ್ಷೆಯಂತೆ ಕನಿಷ್ಠ 70 ಸಾವಿರ ಮತ ಬರಬೇಕಿತ್ತು. ಈ ಸೋಲಿನಿಂದ ಎದೆಗುಂದಬೇಡಿ. ಪಕ್ಷ ಹಾಗೂ ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ನಿಮಗೆ ರಾಜಕೀಯದಲ್ಲಿ ಮುಂದೆ ಉಜ್ವಲ ಭವಿಷ್ಯವಿದೆ. ಎಲ್ಲವನ್ನೂ ಮರೆತು, ಮತ್ತೆ ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಿ ಎಂದು ಬಿ.ವೈ.ವಿಜಯೇಂದ್ರ, ಸ್ಫೂರ್ತಿ ಮಾತುಗಳನ್ನಾಡಿದರು.

## ಕಬ್ಬನ್‌ಪಾರ್ಕ್‌ನಲ್ಲಿ 10 ದಿನ ಮಾರಾಟ ಮೇಳ

# ಮೇ 8ರಿಂದ ಮಾವು, ಹಲಸು ಮಾರಾಟ

**ಬೆಂಗಳೂರು:** ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಹಾಗೂ ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಮೇ 8 ರಿಂದ 17ರವರೆಗೆ ಕಬ್ಬನ್ ಉದ್ಯಾನವನದಲ್ಲಿ ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಮಂಡಳಿ ಅಧ್ಯಕ್ಷ ಡಾ. ಬಿ.ಸಿ.ಮುದ್ದುಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಳದಲ್ಲಿ ಕಾರ್ಬೈಡ್ ಮುಕ್ತ, ಸಹಜವಾಗಿ ಮಾಗಿದ ಮಾವು ಹಾಗೂ ಹಲಸು ಹಣ್ಣುಗಳನ್ನು ರೈತರಿಂದಲೇ ನೇರವಾಗಿ ಖರೀದಿಸುವ ಅವಕಾಶ ಕಲ್ಪಿಸಲಾಗುತ್ತಿದೆ. ರೈತರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ತಾಜಾ ಹಣ್ಣುಗಳು ಸಮರ್ಪಕ ದರದಲ್ಲಿ ದೊರೆಯುವಂತೆ ಮಾಡುವುದೇ ಈ ಮೇಳದ ಉದ್ದೇಶವಾಗಿದೆ ಎಂದು ಹೇಳಿದರು.

**70ಕ್ಕೂ ಹೆಚ್ಚು ಮಳಿಗೆಗಳು:** ಮೇಳದಲ್ಲಿ ಬಾದಾಮಿ, ಮಲ್ಲಿಕಾ, ರಸಪೂರಿ, ಸೇಂದೂರಾ, ಚಾಲ್ತಿ, ಕೇಸರ್ ಹಾಗೂ ಜಿಐ ಮಾನ್ಯತೆ ಪಡೆದ ಕರಿ ಇಶಾಡ್ ಸೇರಿದಂತೆ ಹಲವು ಮಾವಿನ ತಳಿಗಳು, ಜತೆಗೆ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ, ತೂಬಗೆರೆ ಸೇರಿದಂತೆ ಹಲಸಿನ ವಿವಿಧ ತಳಿಗಳು ಲಭ್ಯವಿರಲಿವೆ. ರಾಮನಗರ, ಮಂಡ್ಯ, ತುಮಕೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ರೈತರು ಭಾಗವಹಿಸುತ್ತಿದ್ದು, 70ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ನೀಡಲಾಗಿದೆ.



### ಶೇ.70ಕ್ಕೂ ಹೆಚ್ಚು ನಷ್ಟ

ಈ ವರ್ಷ ಶೇ.60-70 ಬೆಳೆ ನಷ್ಟವಾಗಿದ್ದು, ಇತ್ತೀಚಿನ ಮಳೆಯಿಂದ ಮತ್ತಷ್ಟು ಹಾನಿಯಾಗಿದೆ. ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಶೇ.33ಕ್ಕಿಂತ ಹೆಚ್ಚು ನಷ್ಟವಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೆರವು ಒದಗಿಸಲಾಗುತ್ತಿದೆ. ಇದರೊಂದಿಗೆ ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್ ಮೂಲಕ 11 ಟನ್ ಮಾವು ಹಣ್ಣುಗಳನ್ನು ಅಮೆರಿಕಾ, ಜರ್ಮನಿ ಮತ್ತು ಯುಕೆಗೆ ರಫ್ತು ಮಾಡಲಾಗಿದ್ದು, ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ರೈತರಿಗೆ ತರಬೇತಿ ನೀಡಲಾಗುತ್ತಿದೆ.

# ಕಾನೂನು ಹೋರಾಟಕ್ಕೆ ಸಿದ್ಧತೆ: ಡಿಸಿಎಂ

**ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರುಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇಡೀ ದೇಶದಲ್ಲಿ ಇಂತಹ ಅಪರಾಧ ನಡೆದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

> ಕಾಂಗ್ರೆಸ್ ಅಭ್ಯರ್ಥಿ ಅಂಚೆ ಮತ ತಿದ್ದಿ ಅಸಿಂಧುಗೊಳಿಸಿದ್ದು ಸರಿಯಲ್ಲ: ಡಿಸಿಎಂ



ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಶೃಂಗೇರಿ ಕ್ಷೇತ್ರದ ಮರು ಮತಎಣಿಕೆ ಕುರಿತ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಇದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ ಎಂದರು.

ಚುನಾವಣೆ ಮತ ಎಣಿಕೆ ಸಮಯದಲ್ಲಿ ಪ್ರತಿ ಅಂಚೆ ಮತವನ್ನು ತೆರೆದು ಎರಡೂ ಪಕ್ಷಗಳ ಏಜೆಂಟರು ಹಾಗೂ ಅಧಿಕಾರಿಗಳಿಗೆ ತೋರಿಸಿ ಅದನ್ನು ಮಾನ್ಯ ಮಾಡಿ ಎಣಿಕೆ ಮಾಡಲಾಗಿರುತ್ತದೆ. ಈ ರೀತಿ ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ. ಹೀಗಾಗಿಯೇ ಅವರು ನಿರ್ದಿಷ್ಟ ಮತಗಳ ಬಂಡಲ್ ಅನ್ನೇ ಮರು ಎಣಿಕೆ ಮಾಡಿ ಎಂದು ಪಟ್ಟು ಹಿಡಿದಿದ್ದರು ಎಂದು ವಿವರಿಸಿದರು.

ಅಧಿಕಾರಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಗಂಭೀರ ವಾದ ತನಿಖೆ ನಡೆಯಬೇಕಿದೆ. ಚುನಾವಣಾ ಆಯೋಗವು ಈ ವಿಚಾರದಲ್ಲಿ ನ್ಯಾಯ ಒದಗಿಸಬೇಕಿದೆ. ಇದು ದೇಶದಲ್ಲೇ ಅತಿ ದೊಡ್ಡ ಷಡ್ಯಂತ್ರವಾಗಿದೆ ಎಂದು ಹೇಳಿದರು.

# ಬಾಲ್ಯವಿವಾಹಕ್ಕೆ ನಕಲಿ ಶಾಲಾ ದೃಢೀಕರಣ ಪತ್ರ

**ಕೊಪ್ಪಳ:** ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ತಾಳಕೇರಿ ಗ್ರಾಮದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಗೆ ಬಾಲ್ಯವಿವಾಹವನ್ನು ಮಾಡಲು ನಕಲಿ ಶಾಲಾ ದೃಢೀಕರಣ ಪತ್ರವನ್ನು ನೀಡಿದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಡಿಸಿ ಡಾ.ಸುರೇಶ ಬಿ. ಇಟ್ನಾಳ ತಿಳಿಸಿದ್ದಾರೆ.

ಯಲಬುರ್ಗಾ ತಾಲೂಕಿನ ತಾಳಕೇರಿ ಗ್ರಾಮದ ಈಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯೊಬ್ಬಳ ವಿವಾಹಕ್ಕಾಗಿ ನಕಲಿ ಶಾಲಾ ದೃಢೀಕರಣ ಪತ್ರ ನೀಡಿದ್ದ ಬಗ್ಗೆ ವರದಿಯಾಗಿರುತ್ತದೆ. ಈ ಬಗ್ಗೆ ಪರಿಶೀಲಿಸಿದ್ದು, ನಕಲಿ ಸಮಿತಿಯ ವಿರುದ್ಧ ಶಾಲಾ ದೃಢೀಕರಣ ಪತ್ರವನ್ನು ನೀಡಿದ ಬಾಲಕಿಯ ಪಾಲಕರು ಹಾಗೂ ಈಶ್ವರ ದೇವಸ್ಥಾನ ಸಮಿತಿಯ ಭಾರತೀಯ ನ್ಯಾಯ ಸಂಹಿತೆ, ಬಾಲ್ಯವಿವಾಹ ನಿಷೇಧ ಕಾಯ್ದೆಯಡಿಯಲ್ಲಿ ಬೇವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ಪ್ರಾಣಾಪಾಯದಿಂದ ಪಾರಾದ 21 ಪ್ರಯಾಣಿಕರು

# ಕೆಎಸ್‌ಆರ್‌ಟಿಸಿ ಬಸ್‌ಗೆ ಬೆಂಕಿ

**ರಾಣೇಬೆನ್ನೂರು:** ಬ್ರೇಕ್ ಲೈನರ್ ಜಾಮ್ ಆಗಿ ಹತ್ತಿಕೊಂಡ ಬೆಂಕಿಯಿಂದಾಗಿ ಕೆಎಸ್‌ಆರ್‌ಟಿಸಿ ಬಸ್ ಕ್ಷಣಾರ್ಧದಲ್ಲೇ ಸಂಪೂರ್ಣ ಸುಟ್ಟು ಕರಕಲಾದ ಘಟನೆ ತಾಲೂಕಿನ ದೇವರಗುಡ್ಡ ಬಳಿ ಮಂಗಳವಾರ ಬೆಳಗಿನ ಜಾವ ನಡೆದಿದೆ.

ಚಾಲಕನ ಸಮಯ ಪ್ರಜ್ಞೆಯಿಂದ ಅದೃಷ್ಟವಶಾತ್ ಬಸ್‌ನಲ್ಲಿದ್ದ 21 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕೆಎಸ್‌ಆರ್‌ಟಿಸಿಯ ಬೆಂಗಳೂರಿನ ಕೇಂದ್ರೀಯ ಬಸ್ ಟಕದ ಬೆಂಗಳೂರು ಟು ಗದಗ ಪಲ್ಲಕ್ಕಿ ಬಸ್ ನಾನ್‌ಎಸಿ ಸ್ಲೀಪರ್ ಬಸ್ ಬೆಂಕಿಗಾಹುತಿಯಾಗಿದೆ. ಇದು ಬೆಂಗಳೂರಿನಿಂದ ಗದಗಿಗೆ ಹೊರಟಿತ್ತು. ರಾಣೇಬೆನ್ನೂರ ಬಸ್ ನಿಲ್ದಾಣಕ್ಕೆ ಬೆಳಗ್ಗೆ 6 ಗಂಟೆಗೆ ಬಂದು ಪ್ರಯಾಣಿಕರನ್ನು ಇಳಿಸಿ, ಇಲ್ಲಿಂದ ಗುತ್ತಲ ಮಾರ್ಗವಾಗಿ ಗದಗಿಗೆ ಹೊರಟಿದ್ದ ಸಮಯದಲ್ಲಿ ದೇವರಗುಡ್ಡದ ಬಳಿ ಬ್ರೇಕ್ ಲೈನರ್ ಚಕ್ರಕ್ಕೆ ತಿಕ್ಕಿ ಜಾಮ್ ಆಗಿದೆ. ಇದರಿಂದ ಬೆಂಕಿ ಹತ್ತಿಕೊಂಡಿದೆ. ಬಸ್ ಚಾಲಕ ಕೂಡಲೇ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಮೊದಲು ಕೆಳಗೆ ಇಳಿಸಿದ್ದಾನೆ. ಅಷ್ಟರಲ್ಲಿ ಟೈರ್‌ಗೆ ಬೆಂಕಿ ಆವರಿಸಿ ಬ್ಲಾಸ್ಟ್ ಆಗಿದೆ. ಆಗ ಕ್ಷಣಾರ್ಧದಲ್ಲಿಯೆ ಬಸ್ ತುಂಬಾ ಬೆಂಕಿ ಆವರಿಸಿಕೊಂಡು ಧಗಧಗನೇ ಉರಿದು ಹೋಗಿದೆ.

ಚಾಲಕ ಅಗ್ನಿಶಾಮಕ ದಳದವರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಬಂದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲಿ ಬಸ್ ಸಂಪೂರ್ಣ ಸುಟ್ಟು ಹೋಗಿದೆ. ಘಟನಾ ಸ್ಥಳಕ್ಕೆ ಸಾರಿಗೆ ಸಂಸ್ಥೆ ಜಿಲ್ಲಾ ನಿಯಂತ್ರಣಾಧಿಕಾರಿ ವಿಜಯಕುಮಾರ ಜೆ., ಮುಖ್ಯ ತಾಂತ್ರಿಕ ಅಧಿಕಾರಿ ಸಿದ್ದೇಶ್ವರ ಹೆಬ್ಬಾಳ, ಡಿಪೋ ಮ್ಯಾನೇಜರ್ ಪಾಟೀಲ್, ಡಿವೈಎಸ್ಪಿ ಲೋಕೇಶ ಜೆ., ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ನಾಗಯ್ಯ ಕಾಡದೇವರಮಠ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




> ಬೆಂಕಿಗಾಹುತಿಯಾಗಿರುವ ಬಸ್ ಅದು ಹೊಸ ಬಸ್ ಆಗಿದ್ದು, ಕೇವಲ ಎರಡೇ ಸಾರಿ ಅದು ಓಡಿರುವುದು. ರಾಜ್ಯದಲ್ಲಿಯೇ ಇದೇ ಪ್ರಥಮಬಾರಿಗೆ ಸಾರಿಗೆಯ ಪಲ್ಲಕ್ಕಿ ಬಸ್ ಈ ರೀತಿ ಬೆಂಕಿಗಾಹುತಿಯಾಗಿದೆ. ಈ ಬಗ್ಗೆ ಪರಿಶೀಲನೆ ಮಾಡಲಾಗುವುದು. ಚಾಲಕ ಫಕ್ಕೀರಪ್ಪ ಗಾಡದ ಹಾಗೂ ನಿರ್ವಾಹಕ ಸಣ್ಣವೀರಪ್ಪ ಅಂಗಡಿ ಅವರ ಚಾಣಾಕ್ಷತನದಿಂದ ಎಲ್ಲ ಪ್ರಯಾಣಿಕರನ್ನು ಕೆಳಗಿಳಿಸಿ ಯಾವುದೇ ಪ್ರಾಣಹಾನಿಯಾಗದಂತೆ ನೋಡಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ.
>
> ■ **ಜಯಕುಮಾರ ಜೆ.**, ಸಾರಿಗೆ ಸಂಸ್ಥೆಯ ಜಿಲ್ಲಾ ನಿಯಂತ್ರಣಾಧಿಕಾರಿ, ಹಾವೇರಿ

## ಬರದನಾಡು ವಿಜಯಪುರದಲ್ಲಿ ಮೊದಲ ಹಂತದಲ್ಲಿ 100 ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದು ಯಶಸ್ವಿಯಾದ ಕೃಷಿಕರು


# ಕ್ಯಾಲಿಫೋರ್ನಿಯಾ ದ್ರಾಕ್ಷಿ ಬೆಳೆದು ಮಾದರಿಯಾದ ರೈತರು

ದೇವಿತಾ.ಸಿ.ಎಸ್.

**ಬೆಂಗಳೂರು:** ಬರದನಾಡು ಎಂದು ಗುರುತಿಸಿಕೊಂಡಿದ್ದ ವಿಜಯಪುರದ ನೆಲದಲ್ಲಿ ಒಂದು ಕಾಲದಲ್ಲಿ ನೀರಿನ ಹನಿ ಕೂಡ ದೊಡ್ಡ ಕನಸಾಗಿತ್ತು. ಒಣಗಿದ ಮಣ್ಣು, ಬಿರುಬಿಸಿಲು ಮತ್ತು ಕಡಿಮೆ ಬೆಳೆಗಳ ನಡುವೆ ರೈತನ ಬದುಕು ಸದಾ ಹೋರಾಟದಂತೆಯೇ ಸಾಗುತ್ತಿತ್ತು. ಆದರೆ ಸಮಯದ ಜತೆಗೆ ಸಿದ್ದೇಶ್ವರ ಶ್ರೀಗಳ ಆಶಯದಂತೆ ನೀರಾವರಿ ಯೋಜನೆಗಳು ಬಂದಂತೆ ರೈತರು ತಮ್ಮ ಶ್ರಮ ಮತ್ತು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ರೂಪಿಸಿದ್ದಾರೆ.

ದಿಗಂತ ವಿಶೇಷ

ಅಂತಹಬರಪೀಡಿತಪ್ರದೇಶವೆಂದುಹೆಸರಾಗಿದ್ದ ವಿಜಯಪುರ ಜಿಲ್ಲೆಯ ತಿಕೋಟಾ ಭಾಗದಲ್ಲಿ ಇಂದು ಕ್ಯಾಲಿಫೋರ್ನಿಯಾ ಮಟ್ಟದ ದ್ರಾಕ್ಷಿ ಬೆಳೆಗಾಗಿ ಗುರುತಿಸಿ ಕೊಳ್ಳುತ್ತಿರುವುದು ನಿಜಕ್ಕೂ ಪ್ರೇರಣಾದಾಯಕ. ಈ ಪರಿವರ್ತನೆಯ ಪ್ರಮುಖ ಹಂತವಾಗಿ ತಿಕೋಟಾದಲ್ಲಿ ಆರಾ-36 (ARD¬-36) ದ್ರಾಕ್ಷಿ ತಳಿ ಪರಿಚಯವಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಈ ಉನ್ನತ ಗುಣಮಟ್ಟದ ತಳಿಯನ್ನು ಕೃಷ್ಣವೇಣಿ ಎಫ್‌ಪಿಒ ಮುಖಾಂತರ, ರೈತರಾದ ಈರಪ್ಪ ಬಗಲಿ, ಪಿಂಟುಕೊಣ್ಣೂರ, ಅಶೋಕ ಬಾಬರ ಅವರು ಮೊದಲ ಹಂತದಲ್ಲಿ ಸುಮಾರು 100 ಎಕರೆ ಪ್ರದೇಶದಲ್ಲಿ ಯಶಸ್ವಿಯಾಗಿ ಬೆಳೆದಿದ್ದಾರೆ. ಮಹಾರಾಷ್ಟ್ರದ ನಾಸಿಕ್ನ ಸಹ್ಯಾದ್ರಿ ಫಾರ್ಮ್ಸ್ ಜತೆಗಿನ ಸಹಯೋಗವು ಈ ಯೋಜನೆಗೆ ಮತ್ತಷ್ಟು ಬಲ ನೀಡಿದ್ದು, ರೈತರಿಗೆ ತರಬೇತಿ, ಶೇಖರಣಾ ವ್ಯವಸ್ಥೆ, ಸಂಸ್ಕರಣಾ ಘಟಕಗಳು ಮತ್ತು ರಫ್ತು ಮಾರ್ಗಗಳನ್ನು ಒದಗಿಸುವ ಮೂಲಕ, ಈ ಬೆಳೆಯನ್ನು ಜಾಗತಿಕ ಮಾರುಕಟ್ಟೆಗೆ ತಲುಪಿಸುವ ದಾರಿಯನ್ನು ಸುಗಮಗೊಳಿಸಿದೆ.



### 1000 ಎಕರೆಗಳಿಗೆ ವಿಸ್ತರಿಸುವ ಗುರಿ

ಮುಂದಿನ ಹಂತದಲ್ಲಿ ಈ ಬೆಳೆ ಪ್ರದೇಶವನ್ನು 1000 ಎಕರೆಗಳಿಗೆ ವಿಸ್ತರಿಸುವ ಯೋಜನೆ ರೂಪಿಸಲಾಗಿದ್ದು, ಇದು ವಿಜಯಪುರ ಜಿಲ್ಲೆಯನ್ನು ದ್ರಾಕ್ಷಿ ಉತ್ಪಾದನೆಯ ಪ್ರಮುಖ ಕೇಂದ್ರವನ್ನಾಗಿ ಮಾಡಲಿದೆ. ಇದರೊಂದಿಗೆ ಶೀತಗೃಹ (ಕೋಲ್ಡ್ ಸ್ಟೋರೇಜ್) ಪ್ಯಾಕಿಂಗ್ ಘಟಕಗಳು ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸುವ ಚಿಂತನೆಯನ್ನು ಮಾಡಲಾಗಿದೆ.

### ಆರಾ -36 ದ್ರಾಕ್ಷಿ ತಳಿ ಮಾಹಿತಿ

ಆರಾ-36 (ARD-36) ದ್ರಾಕ್ಷಿ ತಳಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾದ ಉನ್ನತ ಗುಣಮಟ್ಟದ ಟೇಬಲ್ ಗ್ರೇಪ್ ತಳಿ ಆಗಿದ್ದು, ಕ್ಯಾಲಿಫೋರ್ನಿಯಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಪ್ರಯೋಗಾತ್ಮಕವಾಗಿ ಮತ್ತು ವಾಣಿಜ್ಯವಾಗಿ ಬೆಳೆಯಲಾಗುತ್ತಿದೆ. ಇದು ರಫ್ತು ಮಾರುಕಟ್ಟೆಗೆ ಸೂಕ್ತವಾದ ಪ್ರೀಮಿಯಂ ಕೆಂಪು ಬೀಜರಹಿತ ದ್ರಾಕ್ಷಿ ತಳಿಯಾಗಿದ್ದು, ಈ ದ್ರಾಕ್ಷಿ ತಳಿ ಉತ್ತಮ ಗುಣಮಟ್ಟ, ರುಚಿ ಹಾಗೂ ದೀರ್ಘಾವಧಿ ಸಂಗ್ರಹ ಸಾಮರ್ಥ್ಯ ಹೊಂದಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯನ್ನು ಪಡೆದಿದ್ದು, ಸಾಮಾನ್ಯ ದ್ರಾಕ್ಷಿಗಿಂತ ಮೂರು ಪಟ್ಟು ಹೆಚ್ಚಿನ ಬೆಲೆ ದೊರೆಯುತ್ತಿರುವುದು ರೈತರ ಆರ್ಥಿಕ ಸ್ಥಿತಿಗೆ ಮಹತ್ತರ ಬದಲಾವಣೆಯನ್ನು ತಂದಿದೆ.



> ತಿಕೋಟಾದ ಈ ಯಶೋಗಾಥೆ ಕೇವಲ ವಿಜಯಪುರಕ್ಕಷ್ಟೇ ಸೀಮಿತವಾಗದೆ, ರಾಜ್ಯದ ಇತರೆ ಭಾಗಗಳಿಗೂ ಮಾದರಿಯಾಗಿದೆ. ಒಮ್ಮೆ ಪೂಜ್ಯ ಸಿದ್ದೇಶ್ವರ ಶ್ರೀಗಳ ಈ ಭೂಮಿಗೆ ಒಂದು ಬೊಗಸೆ ನೀರು ಕೊಡಿ, ಇದು ಕ್ಯಾಲಿಫೋರ್ನಿಯಾವನ್ನು ಮೀರಿಸುತ್ತದೆ ಎಂದಿದ್ದರು. ಇಂದು ಸ್ವಾಮೀಜಿ ಅವರ ಕನಸನ್ನು ನನಸಾಗಿದೆ. ಈ ಸಾಧನೆಯನ್ನು ಸ್ವಾಮಿಜಿ ಅವರಿಗೆ ಅರ್ಪಣೆ ಮಾಡಲಾಗುತ್ತದೆ.
>
> ■ **ಎಂ.ಬಿ ಪಾಟೀಲ್**, ಕೈಗಾರಿಕಾ ಸಚಿವ

# ಇವಿಎಂ ಬಳಕೆ ಕುರಿತು ಕಾಂಗ್ರೆಸ್ ವರ್ತನೆ ಸರಿಯಿಲ್ಲ: ಸೋಮಣ್ಣ

**ಬೆಂಗಳೂರು:** ಕಾಂಗ್ರೆಸ್ ಅವರು ಇವಿಎಂ ಸರಿಯಿಲ್ಲ ಎಂದು ಹೇಳುತ್ತಿದ್ದರು, ಈಗ ಕೇರಳದಲ್ಲಿ ಕಾಂಗ್ರೆಸ್ ಗೆದ್ದಿದೆ ಯಾಕೆ ಮಾತನಾಡಲಿಲ್ಲ, ಹಾಗಾದರೆ ಗೆದ್ದಾಗ ಸರಿಯಿದೆ, ಸೋತಾಗ ಇವಿಎಂ ಸರಿಯಿಲ್ಲವೇ ಎಂದು ಕೇಂದ್ರ ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಸಹಾಯವಾಣಿ, ಮಹಿಳಾ ಪರ ಯೋಜನೆ, ಜಲಜೀವನ್



ಮಿಷನ್, ಪಿ.ಎಂ.ಕಿಸಾನ್ ಯೋಜನೆ, ಪಿ.ಎಂ. ಆವಾಜ್ ಯೋಜನೆ, ಗ್ರಾಮ ಸಡಾಕ್ ಮತ್ತು ಶಿಕ್ಷಣ ಮೂಲಸೌಕರ್ಯ ಯೋಜನೆ ಮುಂತಾದ ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಯೋಜನೆಯನ್ನು ಮಮತಾ ಬ್ಯಾನರ್ಜಿ ಅವರು ತಿರಸ್ಕಾರ ಮಾಡಿದರು. ಹಾಗೇ ತನ್ನದೇ ಸಾಮ್ರಾಜ್ಯ ಕಟ್ಟಿಕೊಂಡು ರಾಜ್ಯವನ್ನು ಹಾಳು ಮಾಡಿದರು. ಅದಕ್ಕೆ ಪಶ್ಚಿಮ ಬಂಗಾಳದ ಜನರು ತಕ್ಕ ಶಾಸ್ತಿ ಮಾಡಿದ್ದಾರೆ ಎಂದರು.

ಕೇರಳದಲ್ಲಿ ಬಿಜೆಪಿಗೆ ಮೂರು ಸೀಟು ಬಂದಿರುವ ಮೂಲಕ ಕೇರಳದಲ್ಲಿ ಬಿಜೆಪಿಯ ಖಾತೆ ತೆರೆಯಲಾಗಿದೆ. ಮುಂದಿನ ದಿನಗಳಲ್ಲಿ ಸಂಪೂರ್ಣ ಕೇರಳದಲ್ಲಿ ಬಿಜೆಪಿ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ಉಪ ಚುನಾವಣೆ ಬಗ್ಗೆ ಅತಿಯಾದ ಆತ್ಮವಿಶ್ವಾಸ ಹೊಂದಿದ್ದೇವು, ಎಲ್ಲಾ ನಾಯಕರು ಜೊತೆಗೂಡಿ ಕೆಲಸ ಮಾಡಬೇಕಿತ್ತು. ಮುಂದಿನ ದಿನಗಳಲ್ಲಿ ತಪ್ಪುಗಳನ್ನು ಸರಿಪಡಿಸುತ್ತೇವೆ ಎಂದು ಹೇಳಿದರು.

## ಸಂಪಾದಕೀಯ


### ಆರೋಪ ಹತಾಶೆಯದ್ದು, ಆದರೆ ಶ್ರದ್ಧೆ?

ಎಲ್ಲಾ ಪಕ್ಷಗಳೂ ಚುನಾವಣೆಯನ್ನು ಪರಿಶ್ರಮ ಮತ್ತು ನಿಷ್ಠೆಯಿಂದ ಎದುರಿಸುತ್ತವೆ. ಗೆಲ್ಲಲು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತವೆ. ಆದರೆ ಫಲಿತಾಂಶದ ನಂತರ ಕೆಲವು ಪಕ್ಷಗಳ ಹೇಳಿಕೆಗಳು ಹುಬ್ಬೇರುವಂತಿರುತ್ತವೆ. ಮೊನ್ನೆಯ ಪಂಚರಾಜ್ಯ ಚುನಾವಣಾ ಫಲಿತಾಂಶಗಳಲ್ಲೂ ಇಂಥ ಹೇಳಿಕೆಗಳು ಕೇಳಿಬಂದಿವೆ. ಸಾಮಾನ್ಯವಾಗಿ ಇವಿಎಂಗಳ ಮೇಲೆ ಆರೋಪ ಮಾಡುತ್ತಿದ್ದವರಿಗೆ ಈ ಚುನಾವಣೆಯು ಹೊಸ ಕಾರಣವೊಂದನ್ನು ಕೊಟ್ಟಿದೆ. ಅದಕ್ಕೆಲ್ಲ ಕಾರಣವಾಗಿದ್ದು ಬಿಜೆಪಿ ಅಸ್ಸಾಂ ಮತ್ತು ಪ. ಬಂಗಾಳದಲ್ಲಿ ದಾಖಲಿಸಿದ ಅಭೂತಪೂರ್ವ ವಿಜಯ. ಚುನಾವಣಾ ಸಮೀಕ್ಷೆಗಳನ್ನು ತಲೆಕೆಳಗಾಗಿಸಿ, ಪಶ್ಚಿಮ ಬಂಗಾಳದಲ್ಲಿ ವಿಜಯ ಸಹಜವಾಗಿ ಕೆಲ ಪಕ್ಷಗಳಿಗೆ ಆಘಾತ ತಂದಿರುತ್ತದೆ. ಹಿಂದೆ ಕಾಂಗ್ರೆಸ್ ಅಥವಾ ಉಳಿದ ಯಾವುದೇ ಪಕ್ಷಗಳ ಕೈಯಲ್ಲಿದ್ದ ಅಧಿಕಾರ ಬಿಜೆಪಿ ಕೈಗೆ ಬರುತ್ತಿದ್ದಾಗ ಆರೋಪ ಇವಿಎಂ ಮೇಲಾಗುತ್ತಿತ್ತು. ಇದೀಗ ಇಂಥ ಹಾಸ್ಯಾಸ್ಪದವಾದ ಆರೋಪಗಳು ನೇರವಾಗಿ ಚುನಾವಣಾ ಆಯೋಗದ ಮೇಲೆ ನಡೆಯುತ್ತಿವೆ.

ಕೇಂದ್ರ ಸರ್ಕಾರ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿರುವುದೇ ಬಿಜೆಪಿ ಗೆಲ್ಲಲು ಕಾರಣ ಎಂದು ಆರೋಪಿಸಲಾಗುತ್ತಿದೆ. ಕಾಲಕಾಲಕ್ಕೆ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ನಡೆಸುವುದು ಮತದಾನ ಪದ್ಧತಿಯನ್ನು ಅನುಸರಿಸುವ ಎಲ್ಲಾ ದೇಶಗಳಲ್ಲಿರುವ ಸಾಮಾನ್ಯ ಪ್ರಕ್ರಿಯೆ. ಮತದಾರರ ಪಟ್ಟಿಯ ಆಧಾರದ ಮೇಲೆ ಸಾಕ್ಷಾತ್ ಭಗವಂತನಿಗೂ ಆತನ ಮತದಾನದ ಮನಸ್ಸನ್ನು ತಿಳಿಯಲು ಸಾಧ್ಯವಿಲ್ಲ. ಆದರೆ ವಿರೋಧಪಕ್ಷಗಳಿಗೆ ಅದು ಸಾಧ್ಯವಾಗಿದೆ! ಪಶ್ಚಿಮ ಬಂಗಾಳದಲ್ಲಿ ಸೋತ ಮಮತಾ ಬ್ಯಾನರ್ಜಿಯವರಂತೂ ಮತದಾರ ಪಟ್ಟಿಯ ಪರಿಷ್ಕರಣೆಯಿಂದ ನೂರು ಸೀಟುಗಳನ್ನು ಕಳೆದುಕೊಳ್ಳುವಂತಾಯಿತು ಎಂದು ಆರೋಪಿಸಿದ್ದಾರೆ. ಪಟ್ಟಿಯ ಪರಿಷ್ಕರಣೆ ತಮಿಳುನಾಡಿನಲ್ಲೂ ನಡೆದಿದೆ. ಟಿವಿಕೆ ಪಕ್ಷಕ್ಕೆ ಯಾರಿಂದಲೂ ಊಹಿಸಲು ಸಾಧ್ಯವಾಗದ ಪ್ರಮಾಣದಲ್ಲಿ ಸೀಟುಗಳು ಸಿಕ್ಕಿವೆ. ಕೇರಳದಲ್ಲೂ ಪರಿಷ್ಕರಣೆ ನಡೆದಿದೆ. ಅಲ್ಲಿ ಕಾಂಗ್ರೆಸ್ ಗೆದ್ದಿದೆ. ಈ ಆರೋಪಗಳ ಆಧಾರದಲ್ಲಿ ತಮಿಳುನಾಡು ಮತ್ತು ಕೇರಳದಲ್ಲೂ ಬಿಜೆಪಿ ಜಯಗಳಿಸಬೇಕಿತ್ತು. ಚುನಾವಣಾ ಪ್ರಕ್ರಿಯೆಗಳು ಆರಂಭವಾಗುವುದರಿಂದಲೇ ಆರೋಪಗಳನ್ನು ಮಾಡುತ್ತಾ ಬಂದ ಮಮತಾರಿಗೆ ಸೋಲಿನ ಭೀತಿ ಮೊದಲಿನಿಂದಲೂ ಇತ್ತು. ಅದರ ಜೊತೆಗೆ ಚುನಾವಣೆಯಲ್ಲಿ ಕೇಂದ್ರ ನೌಕರರನ್ನು ಬಳಸಬಾರದು ಎಂಬ ಹಂತಕ್ಕೂ ಹೋದರು. ಬಹುಶಃ ಟಿಎಂಸಿ ಗೂಂಡಾಗಳು ಮಾತ್ರ ಭಾಗವಹಿಸಬೇಕಿತ್ತೆಂಬ ಇರಾದೆ ಅವರದ್ದಿರಬಹುದೇನೋ! ಆದರೆ ಆರೋಪಕ್ಕೆ ಬೆಂಬಲ ನೀಡದ ನ್ಯಾಯಾಲಯ ಚುನಾವಣೆಯನ್ನು ಆರೋಪಮುಕ್ತವಾಗಿ ನಡೆಸಿತು. ಎಲ್ಲಿ ನಿರ್ಭೀತ ಮತದಾನ ನಡೆಯುತ್ತದೋ ಅಲ್ಲಿ ಫಲಿತಾಂಶ ಕೂಡ ಗುಣಮಟ್ಟಕ್ಕೆ ತಕ್ಕಂತೆ ಬರುತ್ತದೆ. ಇವೆಲ್ಲವನ್ನೂ ನೋಡಿದರೆ ಹತಾಶೆಯಿಂದ ಅಥವಾ ಬುದ್ಧಿಭ್ರಮಣೆಯಿಂದ ಮಾಡಿರುವ ಆರೋಪಗಳೆಂದು ತಳ್ಳಿಹಾಕಬಹುದು. ಆದರೆ ಇವರಲ್ಲಿನ ಮಾನಸಿಕತೆ ಹೀಗೇಕೆ ಎನ್ನುವುದು ಬೇಸರದಾಯಕ ಸಂಗತಿ. ಸಂವಿಧಾನಬದ್ಧ ಸಂಸ್ಥೆ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡುವುದು ಸಂವಿಧಾನಕ್ಕೆ ಗೌರವ ನೀಡಿದಂತೆಯೇ? ನಂಬಿಕೆ ಮತ್ತು ಶ್ರದ್ಧೆ ಇಲ್ಲದಿದ್ದರೆ ಕೇವಲ ಪ್ರಚಾರಗಳಿಂದ ನಾಯಕರಾಗಲು ಸಾಧ್ಯವಿಲ್ಲ. ಅಂಥವರು ಮಾತ್ರ ನಾಯಕರಾಗಿರಬೇಕು ಎನ್ನುವ ಸಂದೇಶವನ್ನು ಈ ಪ್ರಕರಣದಿಂದ ಅರಿಯಬೇಕು.

# ಬೇರೆಯವರಾಗಿದ್ದರೆ ಅದೆಷ್ಟು ಮೆರೆಯುತ್ತಿದ್ದರೋ

ಖಾರಾ ಬಾತ್
ವಿನಾಯಕ ಭಟ್ಟ ಮೂರೂರು
vakradanta@gmail.com



ಎರಡೂವರೆ ದಶಕಗಳಿಂದ ಉನ್ನತಾಧಿಕಾರದಲ್ಲೇ ಇದ್ದಾರೆ. ಕಳೆದ ಒಂದು ದಶಕದಿಂದ ಇಡೀ ಭಾರತದ ನಾಯಕತ್ವ ವಹಿಸಿದ್ದಾರೆ. ವಿಶ್ವದ ದೊಡ್ಡ ಪಕ್ಷದ ಪ್ರಶ್ನಾತೀತ ನಾಯಕರು ಎಂದು ಹೇಳಿದರೆ ತಪ್ಪಿಲ್ಲ. ಹೋದಲ್ಲೆಲ್ಲ ಗೆಲುವು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ವಿಶ್ವಮಟ್ಟದಲ್ಲೂ ಇವರ ಖ್ಯಾತಿಗೇನೂ ಕಡಿಮೆ ಇಲ್ಲ.

ಹೀಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಇಂದಿಗೂ ಜನರ ವಿಶ್ವಾಸ ಗಳಿಸಿರುವುದು ಮತ್ತು ಉಳಿಸಿಕೊಂಡಿರುವುದು ಅವರ ಸರಳ ನಡತೆಯಿಂದ ನಿರಂಹಕಾರದ ನಡೆಯಿಂದ. ಪ್ರತಿ ಚುನಾವಣೆಯ ಫಲಿತಾಂಶದ ನಂತರವೂ ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ಕಚೇರಿಗೆ ಬಂದು, ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ. ಮೇ 4ರಂದು ಕೂಡ ದೆಹಲಿಯಲ್ಲಿರುವ ಬಿಜೆಪಿ ಕೇಂದ್ರ ಕಚೇರಿಗೆ ಪ್ರಧಾನಿ ಆಗಮಿಸಿದಾಗ, ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರು ಹಾರ ಹಾಕಲು ಬಂದಾಗ, ಅದೇ ಹಾರವನ್ನು ನಿತಿನ್ ಅವರಿಗೆ ಹಾಕಿ, ಇದು ನಿಮ್ಮ ಗೆಲುವು ಎಂದು ಬೆನ್ನುತಟ್ಟಿದರು.

ಇಷ್ಟೆಲ್ಲ ಅಧಿಕಾರ, ಗೆಲುವಿನ ನಂತರವೂ ನರೇಂದ್ರ ಮೋದಿಯವರಾಗಲಿ, ಅಮಿತ್ ಶಾ ಆಗಲಿ ಅಹಂಕಾರದ ಮಾತುಗಳನ್ನಾಡಿದ, ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ರೀತಿಯಲ್ಲಿ ಬಂಗಾಳಕ್ಕೆ ಕಾಲಿಟ್ಟು ನೋಡಿ ಎಂಬ ರೀತಿಯ ಧಮಕಿ ಹಾಕಿದ ಉದಾಹರಣೆಗಳಿಲ್ಲ. ಹಾಗೆ ಹೇಳುವುದಾದರೆ ಅವರು ಗುಜರಾತ್‌ನಲ್ಲಿ ಯಾವಾಗಲೋ ಈ ರೀತಿಯ ಧಮಕಿ ಹಾಕಬಹುದಿತ್ತು. ಆದರೆ ಅವರು ಹಾಗೆ ಮಾಡಿದ ಒಂದು ಉದಾಹರಣೆಯೂ ಇಲ್ಲ. ಒಮ್ಮೆ ಕೂಡ ಅವರಿಬ್ಬರೂ ತೂಕ ತಪ್ಪಿದ, ಅಹಂಕಾರದ ಮಾತುಗಳನ್ನು ಆಡುವವರಲ್ಲ. ಇಷ್ಟೆಲ್ಲ ಪ್ರಭಾವಶಾಲಿಗಳಾಗಿದ್ದರೂ, ಇಬ್ಬರ ವರ್ತನೆಯಲ್ಲೂ ಕ್ಷಣಕ್ಕೂ ಅಹಂಕಾರ ಇಣುಕಿದ್ದನ್ನು ನೀವು ಕಾಣಲು ಸಾಧ್ಯವಿಲ್ಲ.

ಮೋದಿ ಮತ್ತು ಅಮಿತ್ ಶಾರನ್ನು ಹೋಲಿಸುವುದಾದರೆ ನನಗೆ ಅಮಿತ್ ಶಾ ಹೆಚ್ಚು ಕುತೂಹಲ ಹುಟ್ಟಿಸುತ್ತಾರೆ. ನರೇಂದ್ರ ಮೋದಿಯವರು ಒಂದು ರೀತಿಯಲ್ಲಿ ರಾಜಕೀಯ ಸಂತನಂತೆ ಇದ್ದಾರೆ. ಅವರಿಗೆ ಅಧಿಕಾರ, ಹಣದ ದಾಹ ಯಾವುದೂ ಇದ್ದಂತಿಲ್ಲ. ಸಂಸಾರವೂ ಇಲ್ಲ. ಹಾಗಾಗಿ ಅವರ ಜೀವನ ಶೈಲಿ ಬೇರೆ ರೀತಿಯಲ್ಲಿದೆ. ಆದರೆ ಅಮಿತ್ ಶಾ ಹಾಗಲ್ಲ. ಅವರು ನಮ್ಮ ನಿಮ್ಮ ಹಾಗೆ ಸಂಸಾರಿ. ಸಾಕಷ್ಟು ಹಣವಿದೆ. ಸರ್ವ ಸಂಗ ಪರಿತ್ಯಾಗಿಗಳೂ ಅಲ್ಲ. ಹಾಗಂತ ಅವರು ಯಾವತ್ತೂ ಬಿಂಬಿಸಿಕೊಂಡವರೂ ಅಲ್ಲ.

ಆದರೂ ಒಬ್ಬ ವ್ಯಕ್ತಿ ಹೇಗೆ ಹಾಗಿರಲು ಸಾಧ್ಯ?

ಅಮಿತ್ ಶಾ ಇಷ್ಟವಾಗುವುದು ಅವರ ಬದ್ಧತೆಯ ಕಾರಣಕ್ಕೆ. ಆರೆಸ್ಸೆಸ್‌ನಲ್ಲಿ ಯಾವಾಗಲೂ ವ್ಯಕ್ತಿನಿರ್ಮಾಣದ ಬಗ್ಗೆ ಹೇಳಲಾಗುತ್ತದೆ. ಬಹುಶಃ ಅದಕ್ಕೆ ಉತ್ತಮ ಉದಾಹರಣೆ ಎಂದರೆ ನರೇಂದ್ರ ಮೋದಿ ಮತ್ತು ಅಮಿತ್ ಶಾ. ಕೆಲವರಿಗೆ ಅಮಿತ್ ಶಾರನ್ನು ಈ ಪಟ್ಟಿಗೆ ಸೇರಿಸಿದ್ದರ ಬಗ್ಗೆ ತಕರಾರು ಇರಬಹುದು. ಆದರೆ ಅದಕ್ಕೊಂದು ಕಾರಣವಿದೆ. ಇಷ್ಟು ವರ್ಷದಿಂದ ಅಮಿತ್ ಶಾ ಅವರು ನರೇಂದ್ರ ಮೋದಿಯವರ ಜತೆಗಿದ್ದಾರೆ. ನರೇಂದ್ರ ಮೋದಿಯವರ ರಾಜಕೀಯ ಪಯಣದಲ್ಲಿ, ಅವರ ಯಶಸ್ಸಿನಲ್ಲಿ ಅಮಿತ್ ಶಾ ಅವರ ಕೊಡುಗೆ ದೊಡ್ಡದಿದೆ ಎಂಬುದು ನಿರ್ವಿವಾದ ಸಂಗತಿ. ಎಲ್ಲ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬ ಮಾತನ್ನು ನರೇಂದ್ರ ಮೋದಿ ಮತ್ತು ಅಮಿತ್ ಶಾ ಸುಳ್ಳು ಮಾಡಿದ್ದಾರೆ.

ಬಹುಶಃ ಯಾರಿಗೇ ಆಗಿದ್ದರೂ ಇಷ್ಟು ವರ್ಷದಲ್ಲಿ ಒಮ್ಮೆಯಾದರೂ ಸ್ವಲ್ಪ ಅಹಂಕಾರ ತಲೆಗೆ ಏರಿಯೇ ಏರುತ್ತಿತ್ತು. ಇವರ ಯಶಸ್ಸಿಗಾಗಿ ಇಷ್ಟೆಲ್ಲ ಮಾಡಿದ್ದೇನೆ, ಜೈಲಿಗೂ ಹೋಗುವಂಥ ಪರಿಸ್ಥಿತಿ ಎದುರಿಸಿದ್ದೇನೆ. ಆದರೂ ಅವರಷ್ಟು ನಾನು ಪ್ರಸಿದ್ಧಿ ಪಡೆಯಲಿಲ್ಲ ಎಂದು ಅನ್ನಿಸದೆ ಇರಲಾರದು. ಯಾವುದೋ ಒಂದು ಕಾರಣಕ್ಕೆ ಮನಸ್ತಾಪ ಬರಬೇಕಿತ್ತು. ಅಂತಹ ಒಂದು ಸಣ್ಣ ಕೊಂಕಿಗೂ ಅವಕಾಶವಿಲ್ಲದಂತೆ ಅವರು ನರೇಂದ್ರ ಮೋದಿಯ ಜತೆ ಇದ್ದಾರಲ್ಲ, ಒಬ್ಬರ ವ್ಯಕ್ತಿತ್ವದಲ್ಲಿ ಇದಕ್ಕಿಂತ ದೊಡ್ಡ ಗುಣ ಇನ್ನೇನು ಬೇಕು?

ಭಾರತದ ರಾಜಕೀಯದ 'ಆಧುನಿಕ ಚಾಣಕ್ಯ' ಎಂದೇ ಅಮಿತ್ ಶಾ ಹೆಸರು ಮಾಡಿದ್ದಾರೆ. ಸಂಘಟನಾ ಚತುರತೆ ಮತ್ತು ಚುನಾವಣಾ ತಂತ್ರಗಾರಿಕೆಯಲ್ಲಿ ಅವರಿಗೆ ಯಾರೂ ಸಾಟಿಯಿಲ್ಲ. ಈ ವಿಷಯದಲ್ಲಿ ಯಾರೂ ನರೇಂದ್ರ ಮೋದಿ ಹೆಸರನ್ನು ಹೇಳುವುದೂ ಇಲ್ಲ. ದೇಶದ ರಾಜಕೀಯದಲ್ಲಿ ಬಿಜೆಪಿಯನ್ನು ದೈತ್ಯ ಆಜೇಯ ಶಕ್ತಿಯಾಗಿ ಬೆಳೆಸುವಲ್ಲಿ ಅಮಿತ್ ಶಾ ಅವರ ಪಾತ್ರ ಅತ್ಯಂತ ಪ್ರಮುಖವಾದದ್ದು. ಅಮಿತ್ ಶಾ ಅವರ ಚುನಾವಣಾ ಗೆಲುವಿನ ಹಿಂದೆ ಕೇವಲ ಅದೃಷ್ಟವಿದೆ ಎಂದು ಅವರ ವಿರೋಧಿಗಳೂ ಕೂಡ ಒಪ್ಪುವುದಿಲ್ಲ. ಚುನಾವಣೆ ಗೆಲ್ಲುವುದು ಬೂತ್ ಮಟ್ಟದಲ್ಲಿ ಎಂಬುದು ಶಾ ಅವರ ಮಂತ್ರ. ಅವರು ಜಾರಿಗೆ ತಂದ 'ಪನ್ನಾ ಪ್ರಮುಖ ಅಥವಾ ಬೂತ್ ಪ್ರಮುಖ ವ್ಯವಸ್ಥೆಯು ಮತದಾರರ ಪಟ್ಟಿಯ ಪ್ರತಿ ಪುಟಕ್ಕೂ ಒಬ್ಬ ಜವಾಬ್ದಾರಿಯ ವ್ಯಕ್ತಿಯನ್ನು ನೇಮಿಸಿ, ಮತದಾನದ ಮೇಲೆ ಹಿಡಿತ ಸಾಧಿಸುವಂತೆ ಮಾಡಿತು. ಅಂಕಿಅಂಶಗಳ ಆಧಾರದ ಮೇಲೆ ಅವರು ಕ್ಷೇತ್ರಗಳನ್ನು ವಿಭಜಿಸುತ್ತಾರೆ. ಯಾವ ವಿಷಯಗಳು ಮತದಾರರನ್ನು ಸೆಳೆಯುತ್ತವೆ, ಯಾವ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಅವಕಾಶವಿದೆ, ಯಾವುದರಲ್ಲಿ ಪ್ರಯತ್ನ ಮಾಡಿದರೆ ಗೆಲ್ಲಬಹುದು ಎಂಬುದನ್ನು ಅವರು ಮೊದಲೇ ಗ್ರಹಿಸುತ್ತಾರೆ.

ನರೇಂದ್ರ ಮೋದಿ ರಜೆ ತೆಗೆದುಕೊಂಡಿದ್ದನ್ನು ನಾವು ನೋಡಿಲ್ಲ. ಹಾಗೇ 20 ವರ್ಷಗಳಲ್ಲಿ ಅಮಿತ್ ಶಾ ವಿದೇಶ ಪ್ರವಾಸ ಹೋಗಿದ್ದನ್ನು ನಾವ್ಯಾರೂ ನೋಡಿಲ್ಲ. ಆ ಪ್ರಮಾಣದಲ್ಲಿ ಅವರು ಭಾರತದೊಳಗೆ ಮುಳುಗಿ ಹೋಗಿದ್ದಾರೆ. ಶಾಸಕರು, ಸಂಸದರು, ಕೊನೆಗೆ ಕಾರ್ಪೊರೇಟರ್‌ಗಳು ಕೂಡ ಚುನಾವಣೆ ಪ್ರಚಾರದ ನಂತರ ಫಲಿತಾಂಶಕ್ಕೆ ಸ್ವಲ್ಪ ದಿನಗಳಿದ್ದರೂ ರಿಲ್ಯಾಕ್ಸ್ ಆಗಲೆಂದು ವಿದೇಶಕ್ಕೆ ಓಡುತ್ತಾರೆ. ಆದರೆ ಅಮಿತ್ ಶಾ ಹಾಗಲ್ಲ. ಅವರು ಒಂದು ರಾಜ್ಯದ ಚುನಾವಣೆ ಮುಗಿಯುತ್ತಿದ್ದಂತೆ ಮುಂದೆ ಇನ್ಯಾವ ರಾಜ್ಯದಲ್ಲಿ ಚುನಾವಣೆ ಇದೆ ಎಂದು ಯೋಚಿಸುತ್ತಾರೆ. ಅದಿಲ್ಲವಾದರೆ ಗೃಹ ಸಚಿವರಾಗಿ ಅವರ ಕೆಲಸಗಳತ್ತ ಗಮನ ಹರಿಸುತ್ತಾರೆ. ಇದೆಲ್ಲ ಚುನಾವಣೆ ರಾಜಕೀಯ ತಂತ್ರಗಾರಿಕೆಯ ನಡುವೆಯೂ ಅವರು ದೇಶವನ್ನು ನಕ್ಸಲ್ ಮುಕ್ತ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಕಾಶ್ಮೀರದಲ್ಲಿ ಕಾನೂನು-ಸುವ್ಯವಸ್ಥೆ ಸರಿಪಡಿಸಿ, ಶಾಂತಿ ನೆಲೆಸುವಂತೆ ಮಾಡಲು ಶ್ರಮಿಸುತ್ತಿದ್ದಾರೆ. ಅಲ್ಲಿ ಭಯೋತ್ಪಾದನೆ ಚಟುವಟಿಕೆ ಗಣನೀಯವಾಗಿ ಹತ್ತಿಕ್ಕಲಾಗಿದೆ. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ತೆಗೆದಿದ್ದಾರೆ.

ಇದೆಲ್ಲ ವಿಷಯಗಳಲ್ಲೂ ಅವರ ಬದ್ಧತೆ ಇನ್ನೊಬ್ಬರಿಗೆ ಮಾದರಿ.

ಒಂದು ಗುರಿ ನಿಗದಿಪಡಿಸಿದರೆ ಅದನ್ನು ತಲುಪುವವರೆಗೂ ಅವರು ವಿಶ್ರಾಂತಿ ಪಡೆಯುವುದಿಲ್ಲ. ಹೋರಾಡದೆ ಯಾವುದನ್ನೂ ಬಿಟ್ಟುಕೊಡಬಾರದು ಎಂಬ ಮನೋಭಾವ ಅವರದ್ದು. ಸಾಮಾನ್ಯವಾಗಿ ಯಾರೇ ಆಗಿದ್ದರೂ ಪಶ್ಚಿಮ ಬಂಗಾಳದ ಕಡೆ ತಲೆಹಾಕಲು ಹೋಗುತ್ತಿರಲಿಲ್ಲವೇನೊ. ಅಲ್ಲಿನ ಸ್ಥಿತಿಯೇ ಹಾಗಿತ್ತು. ಆದರೆ ಅಮಿತ್ ಶಾ ಹಾಗಲ್ಲ. ಅಸಾಧ್ಯವಾದುದನ್ನು ಸಾಧಿಸುವುದರಲ್ಲೆ ಅವರಿಗೆ ಖುಷಿ ಇದ್ದಂತಿದೆ. ಹಾಗಾಗಿಯೇ ಅವರು ಎಲ್ಲೆಲ್ಲ ಬಿಜೆಪಿ ಅಸ್ತಿತ್ವ ಇರಲಿಲ್ಲವೊ ಅಲ್ಲೆಲ್ಲ ಅದನ್ನು ಸ್ಥಾಪಿಸುವ ಕೆಲಸಕ್ಕೆ ಕೈ ಹಾಕಿದರು. ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ಗೆಲ್ಲಬಹುದು, ಅಲ್ಲೂ ಬಿಜೆಪಿ ಸರ್ಕಾರ ನಡೆಸಬಹುದು ಎಂದು ಕೆಲವು ವರ್ಷಗಳ ಹಿಂದೆ ಯಾರೂ ಊಹಿಸಲೂ ಸಾಧ್ಯವಿರಲಿಲ್ಲ. ಇಂದು ಸಂಪೂರ್ಣ ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ಆವರಿಸಿಕೊಂಡಿದೆ. ಪಶ್ಚಿಮ ಬಂಗಾಳದಲ್ಲೂ ಬಿಜೆಪಿ ಈ ಬಾರಿ ಗೆದ್ದು ಅಧಿಕಾರಕ್ಕೆ ಬರುತ್ತದೆ ಎಂಬುದನ್ನೇ ಹೆಚ್ಚಿನವರು ನಂಬಲು ಸಿದ್ಧರಿರಲಿಲ್ಲ. ಅದರಲ್ಲೂ ಈ ಪರಿಯ ಬಹುಮತದಿಂದ ಗೆಲ್ಲಬಹುದು ಎಂದು ಯಾರೂ ಊಹಿಸಿರಲಿಲ್ಲ. ಆದರೆ ಇದನ್ನು ಸಾಧಿಸಿಯೇ ಸಾಧಿಸುತ್ತೇನೆ ಎಂದು ಪಶ್ಚಿಮ ಬಂಗಾಳಕ್ಕೇ ಹೋಗಿ ಕುಳಿತಿದ್ದರು ಅಮಿತ್ ಶಾ. ಈಗ ಗೆದ್ದ ನಂತರ ಅಲ್ಲಿ ಮುಖ್ಯಮಂತ್ರಿಯನ್ನು ಮಾಡಿ, ಸಂಪುಟ ರಚನೆಯ ಜವಾಬ್ದಾರಿಯನ್ನೂ ಸರಿಯಾಗಿ ಮುಗಿಸುವ ಕೆಲಸವೂ ಅಮಿತ್ ಶಾ ಅವರ ಹೆಗಲೇರಿದೆ.

ಇದನ್ನೇ ಅಲ್ಲವೆ ಬದ್ಧತೆ ಅನ್ನುವುದು. ಅವರಿಗೆ ವರು ನಂಬಿದ ಸಿದ್ಧಾಂತದ ಬಗ್ಗೆ, ಅವರ ಪಕ್ಷದ ಬಗ್ಗೆ, ಅವರ ದೇಶದ ಬಗ್ಗೆ, ನರೇಂದ್ರ ಮೋದಿಯ ಬಗ್ಗೆ ಬದ್ಧತೆಯಿದೆ. ಅವರಿಂದ ಏನಾದರೂ ಕಲಿಯಬೇಕು ಅನ್ನಿಸಿದರೆ ಬದ್ಧತೆಯನ್ನು ಕಲಿಯೋಣ. ಜತೆಗೆ ಅಹಂಕಾರಿಯಾಗದಿರುವುದನ್ನೂ ಕಲಿಯೋಣ. ಮೋದಿ-ಶಾ ಜೋಡಿಯಿಂದ ಪರಸ್ಪರ ಕೂಡಿ, ಪೂರಕವಾಗಿ ಶ್ರೇಯಸ್ಸಿನತ್ತ ಸಾಗುವುದನ್ನು ಕಲಿಯೋಣ. ಶ್ರೇಯಸ್ಸು ಸಾಧಿಸಿಯೂ ಅದರಲ್ಲಿ ಪಾಲಿಗಾಗಿ ಬಡಿದಾಡದಿರುವುದನ್ನು ಕಲಿಯೋಣ.

# ಭಾರತೀಯ ರಾಜಕಾರಣದ ಮಹತ್ತರ ತಿರುವು

ಉತ್ಪಲ್ ಕುಮಾರ್

ಈ ಬಾರಿಯ ವಿಧಾನಸಭಾ ಚುನಾವಣೆಯ ಫಲಿತಾಂಶವು ಹಲವಾರು ವಿಧಗಳಲ್ಲಿ ಐತಿಹಾಸಿಕವಾಗಿದೆ. ಇದು ಒಂದು ರೀತಿಯಲ್ಲಿ ರಾಜಕೀಯ ಭೂಕಂಪವನ್ನೇ ಸೃಷ್ಟಿಸಿದೆ. ಪೂರ್ವಕಲ್ಪನೆಗಳನ್ನೆಲ್ಲಾ ಬುಡಮೇಲು ಮಾಡಿದೆ. ಕೆಲವು ಹಳೆಯ ಸಂಕಥನಗಳನ್ನು ಹುಸಿಗೊಳಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ವಿರೋಧ ಪಕ್ಷಗಳಿಗೆ ಕಠಿಣವಾದ ಸಂದೇಶವೊಂದನ್ನು ರವಾನಿಸಿದೆ. ಅದೆಂದರೆ ಬಿಜೆಪಿಯೀಗ ಕೇವಲ ಬಲಿಷ್ಠ ಪಕ್ಷವಷ್ಟೇ ಅಲ್ಲ, ಭಾರತವನ್ನು ನಿಜವಾಗಿಯೂ ಆಳಲು ಇರುವ ಪಕ್ಷವಾಗಿ ಬಿಟ್ಟಿದೆ.

ಹಲವು ವರ್ಷಗಳಿಂದ ಬುದ್ಧಿಜೀವಿಗಳು ಮತ್ತು ಎಡಪಂಥೀಯರು ಬಿಜೆಪಿಯು 'ಹಿಂದಿ ಬೆಲ್ಟ್'ಗೆ ಸೀಮಿತವಾದ 'ಉತ್ತರ ಭಾರತೀಯ' ಪಕ್ಷ ಎಂದು ಹೀಗಳೆಯುತ್ತಿದ್ದರು. ಈವಾದವು ಈಗ ನುಚ್ಚುನೂರಾಗಿದೆ. ಪಶ್ಚಿಮಬಂಗಾಳವನ್ನೂ ಗೆಲ್ಲುವ ಮೂಲಕ ಬಿಜೆಪಿ ಈಗ ಉ.ಪ್ರದೇಶ, ಬಿಹಾರ, ಒಡಿಸ್ಸಾ ಮತ್ತು ಅಸ್ಸಾಂ ಸೇರಿದಂತೆ ಪೂರ್ವ ಭಾರತವನ್ನಿಡೀ ವ್ಯಾಪಿಸಿದೆ.

ಪ.ಬಂಗಾಳದ ಗೆಲುವು ಮತ್ತೂ ಒಂದು ವಿಧದಲ್ಲಿ ಮಹತ್ವದ್ದಾಗಿದೆ. ಪ.ಬಂಗಾಳವು ಬಿಜೆಪಿಗೆ ಒಲಿಯದ ಸೈದ್ಧಾಂತಿಕ ಕೋಟೆ ಎಂದು ಭಾವಿಸಲಾಗಿತ್ತು. ಅದು ಎಡಪಂಥೀಯ ವಾದದ, ಜಾತ್ಯತೀತವಾದದ, ಒಟ್ಟಿಕೆ ರಾಜಕಾರಣದ ಆಡುಂಬೊಲವಾಗಿತ್ತು. ಈ ರಾಜ್ಯವು ಬಿಜೆಪಿಗೆ ಸೇರಿದ್ದಲ್ಲ ಎಂಬುದಾಗಿ ಪದೇಪದೇ ನುಡಿಯಲಾಗುತ್ತಿತ್ತು. ಈಗ ನೋಡಿ, ಇದೇ ರಾಜ್ಯದಲ್ಲಿ ಕೇಸರಿ ಧ್ವಜ ಹಾರಾಡುತ್ತಿದೆ.

ಐತಿಹಾಸಿಕವಾಗಿ ಈ ಫಲಿತಾಂಶ ಇನ್ನೂ ಮಹತ್ವದ್ದು. 1970ರ ಬಳಿಕ ಯಾವುದೇ ಏಕೈಕ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದುಕೊಂಡು ಪೂರ್ವದ ಪ್ರಮುಖ ರಾಜ್ಯಗಳನ್ನೂ (ಉ.ಪ್ರದೇಶ, ಬಿಹಾರ, ಬಂಗಾಳ ಮತ್ತು ಒಡಿಸ್ಸಾ) ಆಳಿದ್ದಿಲ್ಲ. ಹಿಂದೆ ಕಾಂಗ್ರೆಸ್ ಕಾಲದಲ್ಲಿ ಇಂತಹ ಪರಿಸ್ಥಿತಿ ಇತ್ತಾದರೂ, ಅಲ್ಲಿಂದ ಬಳಿಕ ಈ ಪ್ರದೇಶವು ವಿವಿಧ ಪ್ರಾದೇಶಿಕ ಪಕ್ಷಗಳ ಆಳ್ವಿಕೆಗೆ ಒಳಪಟ್ಟಿತ್ತು.

ಬಿಜೆಪಿ ಪಾಲಿಗೆ ಪ.ಬಂಗಾಳವು ಅತ್ಯಂತ ಅಭೇದ್ಯ ಕೋಟೆಯಾಗಿ ಪರಿಣಮಿಸಿತ್ತು. ರಾಷ್ಟ್ರೀಯ ಪಕ್ಷವೊಂದು ಈ ರಾಜ್ಯವನ್ನು ಕೊನೆಯದಾಗಿ ಆಳಿದ್ದೆಂದರೆ 1970ರಲ್ಲಿ, ಕಾಂಗ್ರೆಸ್ ಸರಕಾರವಿದ್ದಾಗ. 1977ರಲ್ಲಿ ಸಿಪಿಎಂ ಅಧಿಕಾರಕ್ಕೆ ಬಂತು. ಅಲ್ಲಿಂದ ಬಳಿಕ 34 ವರ್ಷ ಎಡಪಕ್ಷ ಹಾಗೂ ನಂತರ 15 ವರ್ಷ ತೃಣಮೂಲ ಕಾಂಗ್ರೆಸ್ ರಾಜ್ಯಭಾರ ನಡೆಯಿತು. ರಾಷ್ಟ್ರೀಯ ಪಕ್ಷವೊಂದಕ್ಕೆ ಮರಳಿ ಪ.ಬಂಗಾಳದಲ್ಲಿ ಅಧಿಕಾರ ವಹಿಸಿಕೊಳ್ಳಲು 49 ವರ್ಷ ಬೇಕಾಯಿತು. ಹಾಗಾಗಿ ಈಗಿನ ಫಲಿತಾಂಶವು ಅತ್ಯಂತ ಮಹತ್ವದ್ದಾಗಿದೆ.

### ಹೊಸ ರಾಜಕೀಯ ವ್ಯವಸ್ಥೆಯ ಉದಯ

1990ರ ದಶಕದಲ್ಲಿ ಬಿಹಾರವು ಲಾಲೂ ಪ್ರಸಾದ್ ಯಾದವ್‌ರ ಜಾತಿ ಆಧಾರಿತ ಮತ್ತು ಸಮಾಜವಾದಿ ರಾಜಕೀಯಕ್ಕೆ ಒಳಪಟ್ಟಿತ್ತು. 1980ರ ದಶಕದಲ್ಲಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಆಳ್ವಿಕೆ ಕೊನೆಗೊಂಡು 'ಮಂಡಲ' ರಾಜಕೀಯಕ್ಕೆ ಸಾಕ್ಷಿಯಾಯಿತು. ಒಡಿಸ್ಸಾ ಕೂಡಾ ಕಾಂಗ್ರೆಸ್ ಪ್ರಭಾವದಿಂದ ಹೊರಬಂದು ನವೀನ್ ಪಟ್ನಾಯಕ್ ಅವರ ಪ್ರಭಾವಕ್ಕೆ ಸಿಲುಕಿತು. ಹಾಗಾಗಿ 2026ರ ಚುನಾವಣೆಗಳು ಕೇವಲ ಒಂದು ಗೆಲುವಲ್ಲ, ಇದು ಹೊಸ ರಾಜಕೀಯ ವ್ಯವಸ್ಥೆಯೊಂದು ಉದಯವಾಗುತ್ತಿರುವುದರ ಸಂಕೇತ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರಕಾರಗಳು ಆಡಳಿತ ಹೊಂದಾಣಿಕೆ ನಡೆಸುವ ಮೂಲಕ ಪೂರ್ವ ಭಾರತದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಕಾರಣವಾಗಬಲ್ಲವು. ಕಳೆದ ಕೆಲವು ದಶಕಗಳಿಂದ ಪ್ರಗತಿಯನ್ನೇ ಕಾಣದ ಈ ಪ್ರದೇಶಕ್ಕೆ ಹೊಸ ದಿಕ್ಕು ತೋರಬಲ್ಲವು.

ಅಂಗ, ಬಂಗ ಮತ್ತು ಕಳಿಂಗ (ಬಿಹಾರ, ಪ.ಬಂಗಾಳ ಮತ್ತು ಒಡಿಸ್ಸಾ) ನಿಜವಾಗಿ ದೇಶದ ಕೈಗಾರಿಕಾ ಸ್ನೇಹಿ ಹಾಗೂ ಸಂಪನ್ಮೂಲ ಪ್ರದೇಶಗಳಾಗಿದ್ದವು. ಆದರೆ ಸ್ವಾತಂತ್ರ್ಯೋತ್ತರದ ಸಮಾಜವಾದಿ ಚಿಂತನೆಗಳು ಕೈಗಾರಿಕಾ ಸ್ಫೂರ್ತಿಯನ್ನು ಹೊಸಕಿಹಾಕಿದವು. ಪ.ಬಂಗಾಳವು ಎಷ್ಟು ಬಡತನಕ್ಕೆ ಇಳಿಯಿತೆಂದರೆ ಅಲ್ಲಿನ ಜನರು ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗಲಾರಂಭಿಸಿದರು. ಒಂದು ಕಾಲದಲ್ಲಿ ನೆರೆಯ ರಾಜ್ಯಗಳಿಂದ ಉದ್ಯೋಗಾಕಾಂಕ್ಷಿಗಳು ಪ.ಬಂಗಾಳಕ್ಕೆ ಬರುತ್ತಿದ್ದುದಿತ್ತು. ಆದರೀಗ ಇಲ್ಲಿಂದಲೇ ಬೇರೆ ರಾಜ್ಯಗಳಿಗೆ ಜನರು ಹೋಗುವುದನ್ನು ಕಾಣಬೇಕಾಯಿತು. ಇನ್ನೀಗ ಕೈಗಾರಿಕಾ ಸ್ನೇಹಿ ನೀತಿಗಳನ್ನು ಹೊಸ ಸರಕಾರವು ಅಳವಡಿಸಿದರೆ ಬಂಗಾಳವು ಪ್ರಗತಿ ಸಾಧಿಸಬಲ್ಲದು ಹಾಗೂ ಅಲ್ಲಿನ ಯುವಕರು ತಮ್ಮ ರಾಜ್ಯದಲ್ಲೇ ಉದ್ಯೋಗ ಕಂಡುಕೊಂಡಾರು.

ಈ ಚುನಾವಣಾ ಫಲಿತಾಂಶವು ರಾಷ್ಟ್ರೀಯ ಭದ್ರತಾ ವಿಚಾರದಲ್ಲೂ ಮಹತ್ವದ್ದಾಗಿದೆ. ಗಡಿ ರಾಜ್ಯಗಳಾದ ಪ.ಬಂಗಾಳ, ಅಸ್ಸಾಂ ಮತ್ತು ತ್ರಿಪುರಾ ಭಾರತದ ಪಾಲಿಗೆ ಮಹತ್ವದ ರಾಜ್ಯಗಳು. ಬಾಂಗ್ಲಾದಿಂದ ಈ ರಾಜ್ಯಗಳಲ್ಲಿ ಅತಿಕ್ರಮಣ ನಡೆಯುವುದು ಹೆಚ್ಚು. ಇನ್ನೀಗ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಸಮನ್ವಯದಿಂದ ಕಾರ್ಯಾಚರಿಸಿ ಅಕ್ರಮ ವಲಸೆಯನ್ನು ತಡೆಯಬಹುದು. ಆ ಮೂಲಕ ಗಡಿ ಪ್ರದೇಶದಲ್ಲಿ ಜನಸಂಖ್ಯಾ ಅಸಮತೋಲನ ಉಂಟಾಗುವುದನ್ನು ನಿಯಂತ್ರಿಸಬಹುದು. ಅಸ್ಸಾಂ ಮತ್ತು ಪ.ಬಂಗಾಳದ ಮತದಾರರು ಬಿಜೆಪಿಗೆ ಮತ ಹಾಕಲು ಈ ರಾಜ್ಯಗಳಲ್ಲಿ ಅಕ್ರಮ ಬಾಂಗ್ಲಾದೇಶಿಯರು ಹೆಚ್ಚುತ್ತಿರುವುದೂ ಕಾರಣವಾಗಿದೆ.

### ಮಮತಾ ದುರಾಡಳಿತದ ವಿರುದ್ಧ ರೋಷ

ಪ.ಬಂಗಾಳದ ಜನರು ಬಿಜೆಪಿಗೆ ಮತ ಹಾಕಲು ಹಲವಾರು ಕಾರಣಗಳಿವೆ. ಮಮತಾ ಬ್ಯಾನರ್ಜಿಯವರ 15 ವರ್ಷಗಳ ದುರಾಡಳಿತದ ವಿರುದ್ಧ ಜನರು ರೊಚ್ಚಿಗೆದ್ದುದು ಸ್ಪಷ್ಟವಾಗಿದೆ. ರಾಜ್ಯದ ಹದಗೆಟ್ಟ ಕಾನೂನು ವ್ಯವಸ್ಥೆ, ಅಲ್ಪಸಂಖ್ಯಾತರ ತುಷ್ಟೀಕರಣ ಮೊದಲಾದವುಗಳ ಬಗ್ಗೆ ಜನರು ಆತಂಕಗೊಂಡಿದ್ದರು. ಬಾಂಗ್ಲಾ ದೇಶದಲ್ಲಿ ಆಂತರಿಕ ಸಮರ ಉಂಟಾದ ಬಳಿಕ ಪ.ಬಂಗಾಳಕ್ಕೆ ಬಾಂಗ್ಲಾ ದೇಶೀಯರ ನುಸುಳುವಿಕೆ ಹೆಚ್ಚಾಗಿತ್ತು. ನೆರೆಯ ಬಾಂಗ್ಲಾದಲ್ಲಿ ಹಿಂದು ವಿರೋಧಿ ಭಾವನೆ ಹೆಚ್ಚುತ್ತಾ ಅಲ್ಲಿನ ಹಿಂದುಗಳ ಮೇಲೆ ದಾಳಿಗಳು ನಡೆಯಲಾರಂಭಿಸಿದಂತೆ ಇತ್ತ ಪ.ಬಂಗಾಳದ ಹಿಂದುಗಳಿಗೂ ಆತಂಕ ಹೆಚ್ಚಲಾರಂಭಿಸಿತ್ತು. ಈ ಕಾರಣದಿಂದಲೇ ಪ.ಬಂಗಾಳದ ಹಿಂದು ಮತಗಳೆಲ್ಲಾ ಧ್ರುವೀಕರಣಗೊಂಡವು. ಕೆಲವು ವಿಶ್ಲೇಷಕರು ಬಿಜೆಪಿಯ ಗೆಲುವಿಗೆ ಮತದಾರ ಪಟ್ಟಿ ಪರಿಷ್ಕರಣೆ ಕಾರಣವೆಂದು ಹೇಳುವುದಿದೆ. ಆದರೆ ಅವರು ಇನ್ನೂ ಕೆಲವು ವಾಸ್ತವಾಂಶಗಳನ್ನು ಮರೆಯುತ್ತಾರೆ. ಪ.ಬಂಗಾಳದ ರಾಜಕೀಯವು ಸದಾ ಮೂರು 'ಎಂ'ಗಳ ಸುತ್ತ ಸುತ್ತುತ್ತಿರುತ್ತದೆ. ಮುಸ್ಲಿಂ, ಮಹಿಳಾ ಮತ್ತು ಮತುವಾ. ಈ ಬಾರಿ ಮಹಿಳೆಯರು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಮಹಿಳೆಯರು ಸಂಪೂರ್ಣವಾಗಿ ಮಮತಾ ವಿರುದ್ಧ ಮತ ಚಲಾಯಿಸಿದರು. ಮತುವಾಗಳು ಕೆಲ ವರ್ಷಗಳ ಹಿಂದಿನಿಂದಲೇ ಬಿಜೆಪಿ ಪರ ವಾಲಲಾರಂಭಿಸಿದ್ದರು. ಟಿಎಂಸಿ ಪರವಾಗಿದ್ದ ಎರಡು 'ಎಂ'ಗಳು ಅದನ್ನು ತೊರೆದ ಬಳಿಕ ತೃಣಮೂಲದ ಪತನ ನಿಶ್ಚಿತವಾಗಿತ್ತು.



ಇತ್ತೀಚಿನ ವಿಧಾನಸಭಾ ಚುನಾವಣೆಯ ಫಲಿತಾಂಶಗಳು ದೇಶದ ರಾಜಕಾರಣದಲ್ಲಿ ಹೊಸದೊಂದು ಮುನ್ನುಡಿ ಬರೆದಿವೆ. ಈ ಫಲಿತಾಂಶ ಹಲವು ವಿಧಗಳಲ್ಲಿ ಮಹತ್ವದ್ದಾಗಿದೆ.

### ಹಿಂದು ವಿರೋಧಕ್ಕೆ ಸೋಲು

2026ರ ವಿಧಾನಸಭಾ ಚುನಾವಣೆಗಳ ಫಲಿತಾಂಶವು ಸಾರುತ್ತಿರುವ ಮತ್ತೊಂದು ಸಂದೇಶವೆಂದರೆ ಹಿಂದು ವಿರೋಧಿ ಭಾವನೆಯನ್ನು ಹೊಂದಿರುವ ರಾಜಕೀಯ ಪಕ್ಷಗಳೆಲ್ಲಾ ಜನರಿಂದ ತಿರಸ್ಕರಿಸಲ್ಪಡುತ್ತಿರುವುದು. ಅಲ್ಪಸಂಖ್ಯಾತರ ಪರವಾಗಿರುವುದು ಬೇರೆ ವಿಷಯ. ಆದರೆ ಕೆಲವು ಪಕ್ಷಗಳು ಹಿಂದು ವಿರೋಧವನ್ನೇ ಅತಿರೇಕವಾಗಿ ಪ್ರತಿಪಾದಿಸುತ್ತವೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಇದನ್ನು ಇನ್ನೂ ಅರಿತುಕೊಂಡಿಲ್ಲ. ಹಿಂದು ವಿರೋಧದ ತಮ್ಮ ದಾರ್ಷ್ಟ್ಯತನಕ್ಕೆ ಅವು ಈಗ ಮತಪೆಟ್ಟಿಗೆಯಲ್ಲಿ ಬೆಲೆ ತೆರುತ್ತಿವೆ.

ಪ.ಬಂಗಾಳದ ಬಿಜೆಪಿ ಗೆಲುವು ಮತ್ತೊಂದು ಕಾರಣಕ್ಕಾಗಿ ಇಮ್ಮಡಿ ಸಂತೋಷ ತರುತ್ತದೆ. ಹಿಂದುತ್ವವನ್ನು ಪ್ರತಿಪಾದಿಸುವ ಪಕ್ಷವು ಹಿಂದುತ್ವಕ್ಕೆ ಜನ್ಮ ನೀಡಿದ ರಾಜ್ಯದಲ್ಲೇ ಗೆಲುವು ಸಾಧಿಸಿದ್ದು ಗಮನಾರ್ಹ. ಬಿಜೆಪಿ ಪಾಲಿಗೆ ಬಂಗಾಳದ ಅಸ್ಮಿತೆ ಮತ್ತು ಬಂಗಾಳದ ಹಿಂದುತ್ವದ ಅಸ್ಮಿತೆ ಪ್ರತ್ಯೇಕವಲ್ಲ. ಅವೆರಡೂ ಒಂದೇ. ಹಿಂದುತ್ವದ ಪ್ರತಿಪಾದಕರಾದ ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮುಂತಾದವರ ಜನ್ಮ ಸ್ಥಾನವಿದು. ಜನಸಂಘ ಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿಯವರ ಜನ್ಮ ನೆಲವೂ ಹೌದು. ಪ.ಬಂಗಾಳದಲ್ಲಿ ಜಯ ಸಾಧಿಸುವುದು ಬಿಜೆಪಿಯ ಬಹುಕಾಲದ ಗುರಿಯಾಗಿತ್ತು. ಅದನ್ನೀಗ ಸಾಧಿಸಲಾಗಿದೆ.

ಇದೇ ಬಗೆಯ ಹಿಂದು ಧ್ರುವೀಕರಣವು ಅಸ್ಸಾಂನಲ್ಲೂ ಕಂಡುಬರುತ್ತಿದೆ. ಅಲ್ಲಿ ಹಿಮಂತ ಬಿಸ್ವಾ ಶರ್ಮ ಅವರ ನೇತೃತ್ವದಲ್ಲಿ ಬಿಜೆಪಿ ಹ್ಯಾಟ್ರಿಕ್ ಸಾಧಿಸಿದೆ. ಒಂದು ಕಾಲದಲ್ಲಿ ಅಸ್ಸಾಂ ತನ್ನ ಜನಸಂಖ್ಯಾ ಸ್ವರೂಪ ಮತ್ತು ಪ್ರಾದೇಶಿಕ ರಾಜಕೀಯ ಪರಂಪರೆಯಿಂದಾಗಿ ಬಿಜೆಪಿಗೆ ಅಸ್ಪೃಶ್ಯವೆಂಬಂತಿತ್ತು. ಹಿಮಂತ ಬಿಸ್ವಾ ಈಗ ಅಸ್ಸಾಂನ್ನು ಬಿಜೆಪಿಯ ಭದ್ರಕೋಟೆಯನ್ನಾಗಿ ಬದಲಿಸಿದ್ದಾರೆ. ಹಿಂದು ವೋಟ್ ಬ್ಯಾಂಕ್ ರಾಜಕೀಯವು ಬಲಿಷ್ಠವಾಗಿ ಬೆಳೆಯುವುದನ್ನು ಸಂಕೇತಿಸಿದ್ದಾರೆ.

ದಕ್ಷಿಣ ರಾಜ್ಯಗಳ ಚುನಾವಣೆ ಚಿತ್ರಣ ಮಿಶ್ರ ರೂಪದ್ದಾಗಿದೆ. ಕೇರಳದ ಜಯದಿಂದ ಕಾಂಗ್ರೆಸ್ ಸಮಾಧಾನಪಟ್ಟುಕೊಳ್ಳಬಹುದು. ಅಲ್ಲಿ ಆಡಳಿತವಿರೋಧಿ ಭಾವನೆಯಿಂದಾಗಿ ಎಡಪಕ್ಷಗಳ ವಿರುದ್ಧ ಜನಾಭಿಪ್ರಾಯ ರೂಪುಗೊಂಡುದರಿಂದ ಕಾಂಗ್ರೆಸ್ ಗೆದ್ದಿದೆ. ತಮಿಳ್ನಾಡಿನಲ್ಲಿ ಇಂಡಿ ಒಕ್ಕೂಟವು ಸೋಲು ಕಂಡಿದೆ. ಚಿತ್ರನಟ ವಿಜಯ್ ಅವರ ರಾಜಕೀಯ ಪ್ರಗತಿಯು ಐತಿಹಾಸಿಕವಾದುದು. ಆ ಮೂಲಕ ತಮಿಳ್ನಾಡು ರಾಜಕೀಯವು ವ್ಯಕ್ತಿಯಾಧಾರಿತ ರಾಜಕೀಯಕ್ಕೆ ತಿರುಗಿದೆ. ತಮಿಳ್ನಾಡಿನಲ್ಲೇ ಹಿಂದೆಯೂ ಕೆಲವು ಸಿನೆಮಾ ತಾರೆಯರು ರಾಜಕೀಯ ಪ್ರವೇಶಿಸಿ ಗೆಲುವು ಸಾಧಿಸಿದ್ದಾರೆ. ಆದರೆ ಜಯಲಲಿತಾ ಸಾವಿನ ಬಳಿಕ ಈ ಟ್ರೆಂಡ್ ಕೊನೆಗೊಂಡಿದೆ ಎಂದು ಭಾವಿಸಲಾಗಿತ್ತು. ಕಮಲ್‌ಹಾಸನ್ ಇಂತಹುದೇ ಪ್ರಯತ್ನ ನಡೆಸಿದ್ದರಾದರೂ ಅದು ಸೋಲು ಕಂಡಿತ್ತು. ಈಗ ಮತ್ತೆ ತಮಿಳ್ನಾಡು ರಾಜಕೀಯದಲ್ಲಿ ಚಿತ್ರನಟರ ಪ್ರವೇಶವಾಗಿದೆ.

ಒಟ್ಟಿನಲ್ಲಿ ವಿಧಾನಸಭಾ ಚುನಾವಣೆಯ ಫಲಿತಾಂಶವು ತೋರಿಸಿಕೊಡುತ್ತಿರುವುದೆಂದರೆ- ದೇಶದಲ್ಲಿ ಈಗ ಬಿಜೆಪಿಯೇ ಮುಖ್ಯ ಪಕ್ಷವಾಗಿದೆ. ಇಂಡಿಕೂಟವು ಇನ್ನಷ್ಟು ಶಿಥಿಲಗೊಂಡಿದೆ. ಕಾಂಗ್ರೆಸ್ ಬದುಕುಳಿದಿದೆಯಾದರೂ ಕುಟುಕು ಜೀವ ಉಳಿಸಿಕೊಂಡಿದೆ. ಉಸಿರಾಡಲು ಬೇಕಾದಷ್ಟು ಆಮ್ಲಜನಕವನ್ನು ಮಾತ್ರ ಕೇರಳದ ಗೆಲುವು ದೊರಕಿಸಿಕೊಟ್ಟಿದೆ.

ಆದರೆ ಕಾಂಗ್ರೆಸ್ ರಾಷ್ಟ್ರೀಯ ಪ್ರಸ್ತುತತೆಯನ್ನು ಕಳೆದು ಕೊಂಡಿದೆ. ಭಾರತದ ರಾಜಕೀಯವು ಹೊಸದೊಂದು ಶಕೆಯನ್ನು ಪ್ರವೇಶಿಸಿದೆ. ಬಿಜೆಪಿ ಈಗ ದೇಶದ ರಾಜಕೀಯದ ಕೇಂದ್ರ ಬಿಂದುವಾಗಿದೆ.

# ಬಂಗಾಳದ ಪರಿವರ್ತನೆಯ ಹೊತ್ತಲ್ಲಿ ತ್ರಿಪುರಾದ ನೆನಪು

ಪದಸಂಚಲನ
ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಹದಿನೈದು ವರ್ಷಗಳ ಅನಂತರ ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷದ ಪರಿವರ್ತನೆಯಾಗಿದೆ. ಮೊದಲ 35 ವರ್ಷಗಳ ಕಾಲ ಅಧಿಕಾರದಲ್ಲಿದ್ದ ವಾಮಪಂಥವು ಪಶ್ಚಿಮ ಬಂಗಾಳವನ್ನು ಅಭಿವೃದ್ಧಿಯ ದೃಷ್ಟಿಯಿಂದ ಕತ್ತಲೆಗೆ ನೂಕಿತ್ತು. ಹೊಸ ಉದ್ದಿಮೆಗಳ ವಿರೋಧಿನೀತಿಯಿಂದ ಪಶ್ಚಿಮಬಂಗಾಳದ ಜನತೆ ಉದ್ಯೋಗವಿಲ್ಲದೆಯೇ ದಿನನಿತ್ಯವೂ ಹೋರಾಟ, ಪ್ರತಿಭಟನೆ ಮೊದಲಾದವುಗಳ ಮೂಲಕ ಹೊಟ್ಟೆ ಹೊರೆದುಕೊಳ್ಳುವ ಸ್ಥಿತಿಗೆ ತಲುಪಿದ್ದರು. ಇಂಥ ವ್ಯವಸ್ಥೆಯಿಂದ ಬೇಸತ್ತ ಜನತೆ ಪರಿವರ್ತನೆಗಾಗಿ ಕಾದಿತ್ತು. ಆ ಸಮಯದಲ್ಲಿ ಮಮತಾ ಬ್ಯಾನರ್ಜಿ ಹೊಸ ಆಶಾಕಿರಣವಾಗಿ ಬಂಗಾಲದ ಜನತೆಯ ಎದುರು ನಿಂತಿದ್ದರು. ಈ ಹಿಂದೆ ಕೇಂದ್ರಸರ್ಕಾರದಲ್ಲಿ ರೈಲ್ವೆ ಸಚಿವಸ್ಥಾನವೇ ಮೊದಲಾದ ಜವಾಬ್ದಾರಿಗಳನ್ನು ನಿರ್ವಹಿಸಿ ಅನುಭವವಿದ್ದ ದೀದಿಯನ್ನು ಸ್ವಯಂ ವಿರೋಧಪಕ್ಷಗಳು ಕೂಡ 'ದುರ್ಗಾ' ಎಂದೇ ಕರೆಯುವಷ್ಟು ಮಮತಾ ಬ್ಯಾನರ್ಜಿಯ ಪ್ರಸಿದ್ಧಿ ಹರಡಿತ್ತು. ಆ ಕಾರಣಕ್ಕಾಗಿ 35 ವರ್ಷಗಳಿಂದ ನೆಲೆಯೂರಿದ್ದ ಎಡಪಂಥದ ಬೇರನ್ನು ಬುಡಸಮೇತ ಕಿತ್ತು ಸರ್ಕಾರವನ್ನು ಸ್ಥಾಪಿಸಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಕಳೆದ 15 ವರ್ಷಗಳ ಕಾಲ ನಿರಂತರವಾಗಿ ಆಡಳಿತವನ್ನು ಅಲ್ಲಿ ನಡೆಸಿದೆ.

2014ರಲ್ಲಿ ಕೇಂದ್ರದಲ್ಲಿ ಆದ ಬದಲಾವಣೆಯ ಅನಂತರ ಮಮತಾ ಬ್ಯಾನರ್ಜಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತುಷ್ಟೀಕರಣದ ರಾಜನೀತಿಯನ್ನು ಬಹುವಾಗಿ ನೆಚ್ಚಿಕೊಂಡರು. ಅವರ ಆಡಳಿತದ ಅವಧಿಯಲ್ಲಿ ಬಾಂಗ್ಲಾದೇಶದಿಂದ ನಿರಂತರವಾಗಿ ನುಸುಳುಕೋರರು ಭಾರತವನ್ನು ಪ್ರವೇಶಿಸಿದರು. ಅಷ್ಟೇ ಅಲ್ಲ, ಆಧಾರ್ ಕಾರ್ಡ್, ಮತದಾರಚೀಟಿ ಸೇರಿದಂತೆ ಎಲ್ಲ ಸರ್ಕಾರೀ ದಾಖಲೆಗಳನ್ನೂ ಪಡೆದುಕೊಂಡು, ತಲೆಮಾರಿನಿಂದ ಜೀವಿಸಿಕೊಂಡು ಬಂದಿದ್ದ ಬೆಂಗಾಲಿ ಜನರಿಗಿಂತಲೂ ಸುಲಭವಾಗಿ ಮತ್ತು ಅವರಿಗಿಂತಲೂ ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳತೊಡಗಿದರು. ಇದಕ್ಕೆಲ್ಲ ಕಾರಣವೇನೆಂದರೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಆಗಿನ ಮುಖ್ಯಮಂತ್ರಿ ಮಾಡಿದ ತುಷ್ಟೀಕರಣ. ಮಿತಿಮೀರಿದ ಹಿಂದೂ ವಿರೋಧಿ ನೀತಿಯಿಂದ ಈಗಷ್ಟೇ ಬಂಗಾಳ ಎಚ್ಚೆತ್ತುಕೊಂಡಿದೆ. ಏಕಕಂಠದಿಂದ ಪರಿವರ್ತನೆಯ ರಾಗ ಹಾಡಿದೆ.

ಹಾಗೆ ನೋಡಿದರೆ, ಬೆಂಗಾಲಿ ಹಿಂದೂಗಳು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಬಹಳ ವರ್ಷಗಳಾದವು. ಅವರಿಗೆ ತಾವು ಹಿಂದೂಗಳು ಹಾಗೂ ತಾವು ತಮ್ಮ ಸಂಸ್ಕೃತಿಯನ್ನು, ತಮ್ಮ ಭೂಮಿಯನ್ನು ಉಳಿಸಿಕೊಳ್ಳಬೇಕೆಂಬ ಎಚ್ಚರ ಬರುವುದಕ್ಕೆ ಬಹಳ ವಿಳಂಬವಾಯಿತು. ಬಹಳ ಮೊದಲೇ ಈ ಪ್ರಜ್ಞೆ ಸಮಷ್ಟಿ ಸ್ತರದಲ್ಲಿ ಬರಬೇಕಿತ್ತು. ಬೆಂಗಾಲಿಗಳೇ ಹಾಗೆ. ಅವರಿಗೆ ಕುತ್ತಿಗೆಗೆ ಬರುವವರೆಗೂ ಪಾತ್ರೆಯೊಳಗೆ ಕಾಯಿಸಲು ಇಟ್ಟ ನೀರಿನಲ್ಲಿ ಬಿದ್ದ ಕಪ್ಪೆಯಂತೆ, ಬಿಸಿ ಏರುತ್ತಾ ಇದ್ದರೂ ಅದಕ್ಕೆ ಹೊಂದಿಕೊಳ್ಳುತ್ತಲೇ ಇರುವಷ್ಟು ಉದಾಸೀನರು. ನೋಡೋಣ, ಸರಿ ಹೋಗಬಹುದು ಎಂಬ ಅಮಿತ ಆಶಾವಾದಿಗಳು. ಯಾವ ನೆಲದಿಂದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಬದಲಾವಣೆಯ ಗಾಳಿ ಬೀಸಿತ್ತೋ ಅಂಥ ನೆಲದಲ್ಲಿನ ಬೆಂಗಾಲಿಗಳಿಗೆ ಹೀಗೆ ತಮ್ಮತನವು ಮರೆತುಹೋಗಲು ಮುಖ್ಯ ಕಾರಣ ಮೂವತ್ತೈದು ವರ್ಷಗಳ ವಾಮಪಂಥದವರ ಆಡಳಿತ. ಬೆಂಗಾಲಿಗಳು ಯಾಕೆ ಹೀಗೆ ಎಂಬುದನ್ನು ತ್ರಿಪುರಾದ ಉದಾಹರಣೆಯ ಮೂಲಕ ನೋಡಿದರೆ ಹೆಚ್ಚು ಅರ್ಥವಾಗುತ್ತದೆ.

ತ್ರಿಪುರಾ ರಾಜ್ಯವು 1949 ರಲ್ಲಿ ಭಾರತಕ್ಕೆ ಸೇರ್ಪಡೆಗೊಂಡಿತು. ಅಲ್ಲಿಂದ 1972ರವರೆಗೆ ಕೇಂದ್ರಾಡಳಿತ ರಾಜ್ಯವಾಗಿತ್ತು. 1972ರಲ್ಲಿ ತ್ರಿಪುರಾಕ್ಕೆ ಸ್ವತಂತ್ರ ರಾಜ್ಯದ ಸ್ಥಾನಮಾನ ದೊರಕಿತು. ಅದಾದ ಮೇಲೆ ಮೊದಲ ಐದು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿದರೆ, 1977ರಿಂದ 1988ರವರೆಗೆ ನೇತೃತ್ವದ ಕಮ್ಯುನಿಸ್ಟ್ ಪಕ್ಷದ ತೆಕ್ಕೆಯಲ್ಲಿತ್ತು. ಅನಂತರ 1988-93ರವರೆಗೆ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂತು. ಅಲ್ಲಿಂದ ಮತ್ತೆ 1993ರಲ್ಲಿ ಇಡೀ ತ್ರಿಪುರಾ ಕಮ್ಯುನಿಷ್ಟರ ಆಡಳಿತಕ್ಕೆ ಒಳಪಟ್ಟಿತು. ಸುಮಾರು 25 ವರ್ಷಗಳ ಕಾಲ ನಿರಂತರವಾಗಿ ವಾಮಪಂಥದ ಅಧೀನದಲ್ಲಿ ಇಡೀ ರಾಜ್ಯ ಸಿಕ್ಕಿಕೊಂಡಿತ್ತು. ಮಾಣಿಕ್ ಸರ್ಕಾರ್ ನಾಲ್ಕು ಅವಧಿಗೆ ಮುಖ್ಯಮಂತ್ರಿಯಾಗಿದ್ದು ಇಡೀ ತ್ರಿಪುರಾವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ವಾಮಪಂಥದವರ ಸಿದ್ಧಾಂತವನ್ನು ಬೆಂಗಾಲಿಗಳ ಕಣಕಣದಲ್ಲೂ ಪ್ರವಹಿಸುವಂತೆ ಮಾಡಿದ ಮಾಣಿಕ್ ಸರ್ಕಾರ್, ಬೆಂಗಾಲಿಗಳ ನಿಜಸ್ವರೂಪವನ್ನು ಒಳಗಿನಿಂದಲೇ ಅಳಿಸಿಬಿಟ್ಟರು.

ಯಾವುದೇ ರಾಜ್ಯದಲ್ಲಿ ವಾಮಪಂಥದವರ ಆಡಳಿತ ಆರಂಭವಾದರೆ ಅಲ್ಲಿ ಅಭಿವೃದ್ಧಿ ಆಗುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವಂಥದ್ದೇ. ಯಾಕೆಂದರೆ, ವಾಮಪಂಥದವರು ಕಾಲಿಟ್ಟಲ್ಲಿ ಉದ್ಯಮಗಳು ನಾಶವಾಗುತ್ತವೆ. ಹೊಸ ಉದ್ದಿಮೆದಾರರನ್ನು ಕಾರ್ಮಿಕ ವಿರೋಧಿ ನೀತಿಯ ಹೆಸರಿನಲ್ಲಿ ಶೋಷಿಸಿ, ಓಡಿಸಲಾಗುತ್ತದೆ. ನಿತ್ಯನಿರಂತರವಾಗಿ ಪ್ರತಿಭಟನೆಗಳನ್ನು, ಮುಷ್ಕರಗಳನ್ನು ಮಾಡಿಸಿ ಇಡೀ ರಾಜ್ಯದಲ್ಲೆಲ್ಲೂ ಹೊಸ ಉದ್ಯಮಗಳಾಗಲೀ, ಕಾರ್ಖಾನೆಗಳಾಗಲೀ, ಸಂಸ್ಥೆಗಳಾಗಲೀ ಆರಂಭವಾಗದಂತೆ ನೋಡಿಕೊಳ್ಳಲಾಗುತ್ತದೆ. ಆ ಮೂಲಕ ಜನತೆಯನ್ನು ಬಡವರನ್ನಾಗಿಯೇ ಇಟ್ಟು, ಎಲ್ಲದಕ್ಕೂ ಸರ್ಕಾರವನ್ನೇ ಅವಲಂಬಿಸುವಂತೆ ಮಾಡಿ ಪರಾಧೀನ ಸ್ಥಿತಿಯನ್ನು ಕಾಪಿಟ್ಟುಕೊಳ್ಳಲಾಗುತ್ತದೆ. ತ್ರಿಪುರಾದಲ್ಲಿ ಒಟ್ಟೂ 35 ವರ್ಷಗಳ ಕಾಲ ಆಡಳಿತ ನಡೆಸಿದ ವಾಮಪಂಥದ ಸರ್ಕಾರಗಳು ಮಾಡಿದ್ದು ಇದನ್ನೇ.

ನಿಧಾನವಾಗಿ ಜನರಲ್ಲಿ ಸ್ವಾಭಿಮಾನ ಮರೆತುಹೋಗುವಂತೆ ಮಾಡಲಾಗುತ್ತದೆ. ಅತ್ಯಂತ ಕಡಿಮೆ ಸಂಬಳದಲ್ಲಿ ಜನರು ಬದುಕುವ ಸ್ಥಿತಿಯನ್ನು ಸೃಷ್ಟಿಸಲಾಗುತ್ತದೆ. ನೀವು ನಂಬುತ್ತೀರೋ ಇಲ್ಲವೋ, ತ್ರಿಪುರಾದಲ್ಲಿ 2018ರವರೆಗೂ ಒಬ್ಬ ಕೆಳಹಂತದ ಸರ್ಕಾರೀ ದಿನಗೂಲಿ ನೌಕರ ತಿಂಗಳಿಗೆ ನಾಲ್ಕು ಸಾವಿರಕ್ಕಿಂತಲೂ ಕಡಿಮೆ ಸಂಬಳವನ್ನು ಪಡೆಯುತ್ತಿದ್ದ. ತ್ರಿಪುರಾದಲ್ಲಿ ಬಿಜೆಪಿ ಸರ್ಕಾರ ಬಂದು ಏಳನೆಯ ವೇತನ ಆಯೋಗವನ್ನು ಜಾರಿಗೆ ತರುವ ಮೊದಲು ಅಲ್ಲಿ ರಾಜ್ಯ ಸರ್ಕಾರದ ನಾಲ್ಕನೇ ವೇತನ ಆಯೋಗವೇ ಚಾಲ್ತಿಯಲ್ಲಿತ್ತು. ಇಡೀ ದೇಶ ಏಳನೆಯ ವೇತನ ಆಯೋಗವನ್ನು ಅನುಭವಿಸುತ್ತಿದ್ದರೆ ತ್ರಿಪುರಾ ಮಾತ್ರ ಇನ್ನೂ ಮೂರು ವೇತನ ಆಯೋಗದಷ್ಟು ಹಿಂದಿತ್ತು. ಅಷ್ಟೇ ಅಲ್ಲ, ಅಲ್ಲಿನ ಜನರಿಗೆ ವೇತನ ವೃದ್ಧಿಗೆ ಹೋರಾಟವನ್ನು ಮಾಡುವ ಇಚ್ಛಾಶಕ್ತಿಯೂ ಮೂಡದಷ್ಟು ವಾಮಪಂಥದವರು ಜನರ ಕೈಕಟ್ಟಿಹಾಕಿದ್ದರು. ಸ್ವತಃ ಮಾಣಿಕ್ ಸರ್ಕಾರ್, ವೇತನ ಹೆಚ್ಚಿದಷ್ಟೂ ಜನರು ದುರ್ವ್ಯಸನಗಳಿಗೆ ಖರ್ಚು ಮಾಡುತ್ತಾರೆ. ಹಾಗಾಗಿ ಕಡಿಮೆ ವೇತನದಲ್ಲಿ ಜೀವನ ನಿರ್ವಹಣೆ ಮಾಡುವುದನ್ನು ಕಲಿಯಬೇಕು ಎಂದು ಹೇಳುತ್ತಿದ್ದರು.

ಕೇಂದ್ರದಲ್ಲಿ ಮೋದಿ ಸರ್ಕಾರ ಬಂದು, ಈಶಾನ್ಯ ರಾಜ್ಯಗಳಿಗೆ ಒತ್ತುಕೊಡುವವರೆಗೂ ತ್ರಿಪುರಾದಲ್ಲಿ ಬ್ರಾಡ್ ಗೇಜ್ ವ್ಯವಸ್ಥೆಯಿರಲಿಲ್ಲ. ಮೊಟ್ಟಮೊದಲಿಗೆ ಬ್ರಾಡ್ ಗೇಜ್ ಬಂದಿದ್ದು ಮೋದಿ ಸರ್ಕಾರ ಬಂದ ಮೇಲೆ. ಅಲ್ಲಿಯವರೆಗೂ ಅಸ್ಸಾಂ ಮೂಲಕ ಭಾರತವನ್ನು ಸಂಪರ್ಕಿಸುತ್ತಿದ್ದ ರಾಷ್ಟ್ರೀಯ ಹೆದ್ದಾರಿ ಒಂದೇ ಒಂದು. ಅದು ಮಳೆಗಾದಲ್ಲಿ ವಿಪರೀತ ಪ್ರವಾಹ ಮತ್ತು ಭೂಕುಸಿತಕ್ಕೆ ಒಳಗಾಗಿ ಮುಚ್ಚಿದರೆ ಇಡೀ ರಾಜ್ಯ ಭಾರತದಿಂದಲೇ ಸಂಪರ್ಕವನ್ನು ಕಳೆದುಕೊಳ್ಳಬೇಕಿತ್ತು. ವಾಮಪಂಥದವರು ಇಡೀ ತ್ರಿಪುರಾ ಜನತೆಯನ್ನು ಹೇಗೆ ಇರಿಸಿದ್ದರೆಂದರೆ, ನಿಧಾನವಾಗಿ ತಮ್ಮ ಸಂಸ್ಕೃತಿ ಹಾಗೂ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿರುವುದು ಅವರಿಗೇ ತಿಳಿಯುತ್ತಿರಲಿಲ್ಲ. ಸ್ವತಃ ಮಾಣಿಕ್ ಸರ್ಕಾರ್, ನಾಸ್ತಿಕವಾದದ ಪರವಾಗಿ ಮಾತನಾಡುತ್ತಿದ್ದರು.

ನಿತ್ಯವೂ ಕೇಂದ್ರ ಸರ್ಕಾರದ ವಿರುದ್ಧ ಯಾವುದಾದರೊಂದು ರ್‍ಯಾಲಿಯನ್ನು ಸ್ವಯಂ ಆಡಳಿತಪಕ್ಷವೇ ಹಮ್ಮಿಕೊಳ್ಳುತ್ತಾ ಜನರಲ್ಲಿ ತಮ್ಮ ಸರ್ಕಾರಕ್ಕಿಂತ ಉತ್ತಮವಾದುದು ಯಾವುದೂ ಇಲ್ಲ ಎಂಬ ಭ್ರಮೆಯನ್ನು ಹರಡುತ್ತಿತ್ತು. ಎಲ್ಲ ಅನಿಷ್ಟಗಳಿಗೂ ಕೇಂದ್ರಸರ್ಕಾರವನ್ನು ಮಾತ್ರ ದೂರಲಾಗುತ್ತಿತ್ತು. ಅಲ್ಲಿನ ಹಿಂದೂಗಳನ್ನು ಸ್ಥಳೀಯ ಬುಡಕಟ್ಟು ಜನಾಂಗದ ವಿರುದ್ಧ ನಿರಂತರವಾಗಿ ಎತ್ತಿಕಟ್ಟುತ್ತಾ, ಅವರ ನಡುವೆ ಯಾವತ್ತೂ ದ್ವೇಷದ ಭಾವನೆ ಬರುವಂತೆ ಮಾಡಲಾಗುತ್ತಿತ್ತು. ಅದೇ ಅವರ ಸರ್ಕಾರ ಮತ್ತೆ ಮತ್ತೆ ಅಧಿಕಾರಕ್ಕೆ ಬರಲು ಕಾರಣವೂ ಆಗುತ್ತಿತ್ತು. ನಾನೇ ಎಷ್ಟೋ ಇಂಥ ಜನಾಂಗೀಯ ಗಲಭೆಗಳನ್ನು ನೋಡಿದ್ದೇನೆ. ಕಾರಣವೇ ಇಲ್ಲದೇ ಅಲ್ಲಿ ಹಿಂಸಾಚಾರಗಳು ನಡೆಯುತ್ತಿದ್ದವು. ಅದೆಷ್ಟೋ ಜನರ ಹತ್ಯೆ, ಅತ್ಯಾಚಾರಗಳಾದರೂ ಅವು ಪತ್ರಿಕೆಗಳಲ್ಲಿ ಕೂಡ ಬರದಷ್ಟು ವ್ಯವಸ್ಥಿತವಾಗಿ ಮುಚ್ಚಿಹಾಕಲಾಗುತ್ತಿತ್ತು. 2018ರ ಸಮಯದಲ್ಲಿ ಅಲ್ಲಿನ ಜನತೆ ಯಾವಾಗ ವಾಮಪಂಥದವರ ಇಂಥ ಒಡೆದು ಆಳುವ ನೀತಿಯನ್ನು ಮತ್ತು ಕ್ರೌರ್ಯವನ್ನು ಸಹಿಸಿಕೊಳ್ಳಲಾಗದೇ ಪರಿವರ್ತನೆಗೆ ಮನಸ್ಸು ಮಾಡತೊಡಗಿದರೋ, ಆಗ ಹಿಂಸಾಚಾರ ಇನ್ನಷ್ಟು ತೀವ್ರವಾಯಿತು. ಯಾವ ಮಾಣಿಕ್ ಸರ್ಕಾರ್ ಎಂದರೆ ದೇವರು ಎಂಬಂತೆ ಕಾಣಲಾಗುತ್ತಿತ್ತೋ ಅದೇ ಮಾಣಿಕ್ ಸರ್ಕಾರ್ ಇನ್ನಿಲ್ಲದ ಹಿಂಸಾಚಾರಕ್ಕೆ ಆಸ್ಪದವನ್ನು ಕೊಟ್ಟರು. ಆದರೆ ಅದಾಗಲೇ ಅಸ್ಸಾಂನಲ್ಲಿ ಬೀಸಿದ ಪರಿವರ್ತನೆಯ ಬಿರುಗಾಳಿ ತ್ರಿಪುರಾದ ಮೇಲೂ ಪ್ರಭಾವವನ್ನು ಬೀರಿದ್ದರಿಂದ, ಅಲ್ಲಿ ವಾಮಪಂಥದ ಸರ್ಕಾರ ಕೊನೆಗೊಂಡಿತು. ಉಸಿರುಗಟ್ಟಿಸುವ ವಾತಾವರಣದಿಂದ ತ್ರಿಪುರಾ ಈಗ ಸುಧಾರಿಸಿಕೊಂಡು ಭಾರತದ ಉಳಿದ ಭಾಗಗಳಂತೆಯೇ ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ಪ್ರಗತಿಯತ್ತ ಹೆಜ್ಜೆ ಹಾಕುತ್ತಿದೆ.

ವಾಮಪಂಥದವರ ಸಿದ್ಧಾಂತವನ್ನು ಕಣಕಣದಲ್ಲೂ ಇಳಿಸಿಕೊಂಡಿರುವ ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯದ ಜನತೆಗೆ ಇಂದಿಗೂ ವಾಸ್ತವವನ್ನು ತೆರೆದ ಕಣ್ಣಿನಲ್ಲಿ ನೋಡಿ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಅಷ್ಟರ ಮಟ್ಟಿಗೆ ಅವರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಬೌದ್ಧಿಕವಾಗಿ ಹಿಂದುಳಿಯುವಂತೆ ಮಾಡಿ ಬ್ರೈನ್ ವಾಶ್ ಮಾಡಲಾಗಿದೆ. ಅದೇ ಕಾರಣಕ್ಕೆ ಪಶ್ಚಿಮ ಬಂಗಾಳದಲ್ಲಿನ ಹಿಂದೂಗಳಿಗೂ ಕೂಡ ತಮ್ಮ ಮೇಲೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸುವುದಕ್ಕೂ ಧ್ವನಿ ಬರುತ್ತಿರಲಿಲ್ಲ. ಕೊನೆಗೂ ಎಚ್ಚೆತ್ತುಕೊಂಡಿರುವ ಅಲ್ಲಿನ ಜನತೆ ಪರಿವರ್ತನೆಯನ್ನು ಆವಾಹಿಸಿಕೊಂಡಿದೆ. ಗೂಂಡಾರಾಜ್ಯದ ಕರಾಳ ಇತಿಹಾಸ ಬದಲಾಗುವುದಕ್ಕೆ ಸಮಯ ಬೇಕಾಗುತ್ತದೆ. ಅದಕ್ಕಿಂತಲೂ ಹೆಚ್ಚಿನ ಸಮಯ ಬೆಂಗಾಲಿಗಳು ತಮ್ಮ ಸ್ವಂತಿಕೆಯನ್ನು ಮತ್ತೆ ಕಂಡುಕೊಳ್ಳುವುದಕ್ಕೆ ಬೇಕಾಗುತ್ತದೆ. ತಮ್ಮ ಪ್ರಾಚೀನ ಬೌದ್ಧಿಕ, ಭೌತಿಕ, ಸಾಂಸ್ಕೃತಿಕ ವೈಭವವನ್ನೇ ಮರೆತಿರುವ ಬೆಂಗಾಲಿಗಳು, ಇನ್ನು ಮುಂದಾದರೂ ಹೊಸ ದಾರಿಯಲ್ಲಿ ನಡೆದು ಮತ್ತೆ ತಮ್ಮ ವೈಭವವನ್ನು ಪುನಃ ಸ್ಥಾಪಿಸಿಕೊಳ್ಳುವಂತಾಗಲಿ.

### ಸೋಲಿನ ಹತಾಶೆಯಿಂದ ಮಮತಾ ಆರೋಪ?

# ಧ್ವೇಷ ಸಾಧನೆಯಲ್ಲ, ದೇಶದ ಹಿತದೃಷ್ಟಿಯಿಂದ ಎಸ್ಐಆರ್

ಪಶ್ಚಿಮಬಂಗಾಳವಿಧಾನಸಭೆಚುನಾವಣೆಗೂಮುನ್ನ 90 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಮತದಾರ ಪಟ್ಟಿಯಿಂದ ತೆಗೆದುಹಾಕಿರುವುದು ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಆದರೆ ದೂರದೃಷ್ಟಿ ಹಾಗೂ ದೇಶದ ಹಿತದೃಷ್ಟಿಯಿಂದ ಚುನಾವಣಾ ಆಯೋಗವು ಈ ಪ್ರಮುಖ ನಿರ್ಧಾರ ತಳೆದಿತ್ತು. ಚುನಾವಣೆಗಳಲ್ಲಿ ಅರ್ಹ ನಾಗರಿಕರು ಮಾತ್ರ ಮತದಾನ ಪಾಲ್ಗೊಳ್ಳಬೇಕು ಮತ್ತು ಮತದಾನ ಮಾಡಬೇಕೆಂಬ ಉದ್ದೇಶದಿಂದ ಹಲವು ಮತದಾರರ ಹೆಸರುಗಳನ್ನು ತೆಗೆಯಲಾಗಿದೆ.

ಇದರಿಂದ ನಕಲಿ ಮತದಾನ ಅಥವಾ ಬೋಗಸ್ ಮತಗಳ ಅವಕಾಶವೂ ಕಡಿಮೆಯಾಗಿವೆ. ಈ ಕ್ರಮದಿಂದದೇಶದಚುನಾವಣಾವ್ಯವಸ್ಥೆಯಮೇಲೆ ಜನರ ವಿಶ್ವಾಸ ಹೆಚ್ಚಾಗಿದೆ. ಇದಲ್ಲದೆ, ಚುನಾವಣಾ ಫಲಿತಾಂಶಗಳು ನಿಷ್ಪಕ್ಷಪಾತಿ, ವಿಶ್ವಾಸಾರ್ಹ ಮತ್ತು ಹೆಚ್ಚು ಪಾರದರ್ಶಕವಾಗಿ ಗೋಚರಿಸಿದೆ. 90 ಲಕ್ಷಕ್ಕೂ ಹೆಚ್ಚು ನಕಲಿ ಮತದಾರರ ಹೆಸರನ್ನು ಮತದಾರ ಪಟ್ಟಿಯಿಂದ ತೆಗೆದುಹಾಕಿದ್ದೇ ಟಿಎಂಸಿ ಸೋಲಿಗೆ ಕಾರಣ ಎಂದಾದರೆ ಅದೇ ಕಾರಣಕ್ಕೆ ಕಳೆದ 15 ವರ್ಷಗಳಿಂದ ಟಿಎಂಸಿ ಅಧಿಕಾರದಲ್ಲೇ ಉಳಿದಿತ್ತಾ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಆದರೆ ಉದ್ದೇಶಪೂರ್ವಕ ಗುರಿಯಾಗಿಸಿ ಟಿಎಂಸಿ ಸಂಭಾವ್ಯ ಮತದಾರರ ಹೆಸರನ್ನೇ ಚುನಾವಣಾ ಆಯೋಗ ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ. ಇದಲ್ಲದೆ, ನಕಲಿ ಮತದಾರರ ಹೆಸರುಗಳ ಜತೆ ಇತರ ಸಾಮಾನ್ಯ ಮತದಾರರ ಹೆಸರುಗಳೂ ಕಿತ್ತುಹಾಕಿರುವ ಸಾಧ್ಯತೆಯಿದೆ ಎಂಬ ಆರೋಪವನ್ನೂ ಟಿಎಂಸಿ ಮಾಡಿತ್ತು. ಇದೇ ಸಂದರ್ಭ ಬಿಜೆಪಿ ಭಾರೀ ಅಂತರದಲ್ಲಿ ಪ್ರಾಬಲ್ಯ ಮೆರೆದಿದ್ದು, ಟಿಎಂಸಿ ಆರೋಪಕ್ಕೆ ಸ್ವಲ್ಪ ಪ್ರಾಧಾನ್ಯತೆ ಸಿಗುವಂತಾಯಿತು. ಆದರೆ ಸ್ಪಷ್ಟವಾಗಿ ಮಮತಾ ಬ್ಯಾನರ್ಜಿ ಆಡಳಿತ ವಿರೋಧಿ ಅಲೆಯಿಂದಾಗಿ ಅಲ್ಲಿ ಬಿಜೆಪಿ ಭಾರೀ ಅಂತರದಿಂದ ಜಯ ಸಾಧಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಶ್ಚಿಮ ಬಂಗಾಳದಂತಹ ಸೂಕ್ಷ್ಮ ರಾಜ್ಯಗಳಲ್ಲಿ ಇಂತಹ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಮೊದಲು ಚುನಾವಣಾ ಆಯೋಗ ಹಲವು ಪರಿಶೀಲನೆಗಳನ್ನು ನಡೆಸಿರುತ್ತದೆ.



### ಯಾರ ಹೆಸರು ಅಳಿಸಿ ಹಾಕಲಾಗಿದೆ?

- ನಕಲಿ ಮತದಾರರು
- ಮೃತಪಟ್ಟವರು
- ತಪ್ಪು ಅಥವಾ ಸುಳ್ಳು ಮಾಹಿತಿ
- ಅನಾವಶ್ಯಕ ಹಳೆಯ ದಾಖಲೆಗಳು

### ಎಸ್ಐಆರ್ ನಡೆಸಲು ಕಾರಣವೇನು?

ಪಶ್ಚಿಮ ಬಂಗಾಳ ರಾಜ್ಯವು ಬಾಂಗ್ಲಾದೇಶದೊಂದಿಗೆ 2,200 ಕಿ.ಮೀ.ಗಿಂತಲೂ ಹೆಚ್ಚು ಗಡಿ ಹಂಚಿಕೊಂಡಿರುವ ಕಾರಣಕ್ಕಾಗಿ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್ಐಆರ್) ನಡೆಸಲು ಚುನಾವಣಾ ಆಯೋಗ(ಇಸಿ) ನಿರ್ಧರಿಸಿದೆ. ಎಸ್ಐಆರ್ ನಡೆಸಿದ್ದರಿಂದ 91 ಲಕ್ಷಕ್ಕೂ ಅಧಿಕ ಮತದಾರರ ಈ ದೇಶದಲ್ಲೇ ಮತ ಚಲಾಯಿಸುವ ಅರ್ಹತೆಯನ್ನೇ ಹೊಂದಿಲ್ಲ ಎಂಬ ಆತಂಕಕಾರಿ ಮಾಹಿತಿ ಹೊರಬಿದ್ದಿದೆ.

### ಎಸ್ಐಆರ್ ಅಳಿಸುವಿಕೆ ಮತ್ತು ಫಲಿತಾಂಶಗಳು

**25,000ಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಅಳಿಸಿಹಾಕಲ್ಪಟ್ಟ 147 ಕ್ಷೇತ್ರಗಳಲ್ಲಿ 95 ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿದೆ. ಇಲ್ಲಿ ಟಿಎಂಸಿ ಗೆದ್ದಿರುವುದು 51 ಸ್ಥಾನಗಳು ಮತ್ತು ಕಾಂಗ್ರೆಸ್ ಕೇವಲ 1 ಸ್ಥಾನ ಗೆದ್ದಿದೆ. 15,000ದಿಂದ 25,000 ಹೆಸರುಗಳನ್ನು ಕಿತ್ತುಹಾಕಿದ 67 ಕ್ಷೇತ್ರಗಳಲ್ಲಿ ಬಿಜೆಪಿಯೇ ಮೇಲುಗೈ ಸಾಧಿಸಿದ್ದು, 47 ಸ್ಥಾನಗಳನ್ನು ಬಾಚಿಕೊಂಡಿದೆ. ಟಿಎಂಸಿ 19 ಮತ್ತು ಕಾಂಗ್ರೆಸ್ 1 ಕ್ಷೇತ್ರದಲ್ಲಿ ಗೆದ್ದಿವೆ. 5,000ದಿಂದ 15,000 ಮತದಾರರ ಹೆಸರು ತೆಗೆದುಹಾಕಲ್ಪಟ್ಟ 62 ಕ್ಷೇತ್ರಗಳಲ್ಲಿ ಬಿಜೆಪಿ 50ರಲ್ಲಿ ತನ್ನ ಪತಾಕೆ ಹಾರಿಸಿದ್ದು, ಉಳಿದ 12 ಸ್ಥಾನಗಳು ಟಿಎಂಸಿ ಪಾಲಾಗಿವೆ. ಒಟ್ಟಾರೆ ಎಲ್ಲಾ ಕಡೆ ಬಿಜೆಪಿ ಮೇಲುಗೈ ಸಾಧಿಸಿದೆ.**

### ಮುರ್ಷಿದಾಬಾದ್‌ನಲ್ಲಿ ಏನಾಯ್ತು?



ಮುರ್ಷಿದಾಬಾದ್ ಜಿಲ್ಲೆಯೊಂದರಲ್ಲೇ 4.55 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಇಸಿ ತೆಗೆದುಹಾಕಿದೆ. ನಾರ್ತ್ 24 ಪರ್ಗಾನಾಸ್‌ನಲ್ಲಿ 3,25,666 ಮತ್ತು ಮಾಲ್ಡಾದಲ್ಲಿ 2,39,375 ಮತದಾರರ ಹೆಸರನ್ನು ಅಳಿಸಲಾಗಿದೆ. 2021ರಲ್ಲಿ ಮುರ್ಷಿದಾಬಾದ್‌ನ 22 ಕ್ಷೇತ್ರಗಳಲ್ಲಿ 20ರಲ್ಲಿ ಟಿಎಂಸಿ ಗೆದ್ದಿತ್ತು. ಆದರೆ ಈ ಬಾರಿ ಟಿಎಂಸಿ 8 ಸ್ಥಾನಕ್ಕೆ ಸೀಮಿತವಾಗಿದೆ. ಮಾಲ್ಡಾದ 12 ಸ್ಥಾನಗಳಲ್ಲಿ ಹಿಂದೆ 8 ಸ್ಥಾನ ಗೆದ್ದಿದ್ದ ತೃಣಮೂಲ ಈ ಬಾರಿ 6 ಸ್ಥಾನವಷ್ಟೇ ಗೆದ್ದಿದೆ. ಉಳಿದೆಲ್ಲವೂ ಬಿಜೆಪಿಯೇ ಗೆದ್ದುಕೊಂಡಿದೆ.

**ಪಂಚರಾಜ್ಯಗಳ ಚುನಾವಣೆಯ ಫಲಿತಾಂಶ ಸೋಮವಾರ ಘೋಷಣೆಯಾಗಿದ್ದು, ಹಲವು ರಾಜಕೀಯ ಬದಲಾವಣೆಗೆ ದೇಶ ಈ ಬಾರಿ ಸಾಕ್ಷಿಯಾಗಿದೆ. ಒಂದೆಡೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿ 15 ವರ್ಷಗಳಿಂದ ಆಳುತ್ತಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಸೋಲುಣಿಸಿದೆ. ಅಸ್ಸಾಂನಲ್ಲಿ ಹ್ಯಾಟ್ರಿಕ್ ಗೆಲುವಿನ ಮೂಲಕ ಮತ್ತೆ ಎನ್‌ಡಿಎ ಸರ್ಕಾರ ನಡೆಸಲು ಸಿದ್ಧತೆ ನಡೆಸುತ್ತಿದೆ. ತಮಿಳುನಾಡಿನಲ್ಲಿ ನಟ ವಿಜಯ್ ಪಕ್ಷ ಟಿವಿಕೆ ಏಕೈಕ ದೊಡ್ಡ ಪಕ್ಷವಾಗಿ ಅಚ್ಚರಿ ತಂದಿದೆ. ಕೇರಳದಲ್ಲಿ 10 ವರ್ಷಗಳ ಬಳಿಕ ಮತ್ತೆ ಯುಡಿಎಫ್ ಭರ್ಜರಿ ಗೆಲುವು ಸಾಧಿಸಿ ಅಧಿಕಾರಕ್ಕೇರುವ ಸಿದ್ಧತೆ ನಡೆಸುತ್ತಿದೆ.**

# ಬಿಸ್ವಾಸ್ ಒಬ್ಬರೇ ವಿಶ್ವಾಸ ಗಳಿಸಿದ್ದು







ಕೇರಳದಲ್ಲಿ ಎಡರಂಗದ ಪಿಣರಾಯಿ ವಿಜಯನ್, ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಹಾಗೂ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ಆಡಳಿತ ಪತನಗೊಂಡಿದ್ದು, ಮೂವರು ಪ್ರಮುಖರು ತಮ್ಮ ಮುಖ್ಯಮಂತ್ರಿ ಆಸನಗಳನ್ನು ಖಾಲಿ ಮಾಡಿದ್ದಾರೆ. ಆದರೆ ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ಆಸನ ಉಳಿಸಿಕೊಂಡಿದ್ದಾರೆ. ವಿಜಯನ್, ಸ್ಟಾಲಿನ್ ಮತ್ತು ಮಮತಾರಷ್ಟು ರಾಜಕೀಯ ಅನುಭವ ಇಲ್ಲದ ಹಿಮಂತ ಸತತ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ. ಹಾಗಿದ್ದರೆ ಈ ಮೂವರಿಗೆ ಸಾಧ್ಯವಾಗದ್ದನ್ನು ಹಿಮಂತ ಹೇಗೆ ಸಾಧಿಸಿದರು?



ಮೊದಲನೇಯದು, ಅಸ್ಸಾಂನಲ್ಲಿ ಹಿಮಂತರ ವಿರುದ್ಧ ಆಡಳಿತ ವಿರೋಧಿ ಅಲೆ ಇರಲಿಲ್ಲ. ಯಾಕೆಂದರೆ ಶರ್ಮಾ ತಮ್ಮ ಮೊದಲ ಅವಧಿಯಲ್ಲಿ ಪಾರದರ್ಶಕ, ಜನಪರ ಆಡಳಿತವನ್ನು ನೀಡಿದ್ದರು. ಆದರೆ ಹಲವು ಹಿಮಂತ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ಹಲವು ಕಾರಣಗಳಿವೆ.

**ಈಶಾನ್ಯದ ಪ್ರಬಲ ಬಿಜೆಪಿ ನಾಯಕ:** ಹಿಮಂತ, ಈಶಾನ್ಯ ಭಾರತದಲ್ಲೇ ಬಿಜೆಪಿಯ ಪ್ರಮುಖ ನಾಯಕ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಕೊಂಡಿದ್ದ ಹಿಮಂತ, ಈಶಾನ್ಯ ಭಾರತದಲ್ಲಿ ಬಿಜೆಪಿಯ ಪತಾಕೆ ಬಲವಾಗಿ ನೆಟ್ಟಿದ್ದಾರೆ.

## ಬಿರುಕುಬಿಟ್ಟ ದುರ್ಬಲ ವಿರೋಧ ಪಕ್ಷ

ಕಾಂಗ್ರೆಸ್ ನೇತೃತ್ವದ ಹಲವು ಪ್ರಾದೇಶಿಕ ಪಕ್ಷಗಳನ್ನು ಒಳಗೊಂಡ ದುರ್ಬಲ ವಿರೋಧ ಪಕ್ಷವೂ ಹಿಮಂತ ಪ್ರಾಬಲ್ಯ ಸಾಧಿಸಲು ನೆರವಾಗಿದೆ. ವಿರೋಧ ಪಕ್ಷಗಳ ನಡುವೆಯೂ ಒಗ್ಗಟ್ಟಿಲ್ಲ, ನಾಯಕತ್ವದ ಸ್ಪಷ್ಟತೆಯಿಲ್ಲ ಇತ್ಯಾದಿಗಳಿಂದ ಬಿಸ್ವಗೆ ಧನಾತ್ಮಕ ಪರಿಣಾಮ ಬೀರಿದೆ. ಇದಲ್ಲದೆ, ಹಿಮಂತರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರದ ಅಭಯಹಸ್ತವೂ ಜತೆಗಿದೆ.

### ಕುರ್ಚಿ ಉಳಿಸಿಸಲಾಗದೆ ಮೂವರು ಸಿಎಂಗಳ ನಿರ್ಗಮನ

#### ಜನಪರ ಯೋಜನೆಗಳು

- ಮಹಿಳೆಯರಿಗೆ ಹಣಕಾಸಿನ ನೆರವು
- ಕೃಷಿಕರು ಮತ್ತು ಸಣ್ಣ ವ್ಯವಹಾರಗಳಿಗೆ ಬೆಂಬಲ
- ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಉಚಿತ ಮತ್ತು ಸಬ್ಸಿಡಿ ಸೇವೆಗಳು

#### ಕಾನೂನು ಸುವ್ಯವಸ್ಥೆ, ಗುರುತಿನ ರಾಜಕೀಯ

- ರಾಜ್ಯದಲ್ಲಿ ಎಲ್ಲಾ ಅಪರಾಧಗಳ ವಿರುದ್ಧವೂ ಕಠಿಣ ಕ್ರಮಗಳು
- ಒಳನುಸುಳುಕೋರರ ನಿರ್ಮೂಲನೆಯೇ ಅಸ್ಸಾಂ ಸರ್ಕಾರದ ಗುರಿ
- ಅಸ್ಸಾಂ ಮೂಲನಿವಾಸಿಗಳ ಮತ್ತು ಸಂಸ್ಕೃತಿಯ ಸಂರಕ್ಷಣೆ

#### ಮೂಲಸೌಕರ್ಯ, ಅಭಿವೃದ್ಧಿ

- ರಸ್ತೆ, ಹೆದ್ದಾರಿ, ಸೇತುವೆ ಸೇರಿ ಮೂಲಸೌಕರ್ಯ ಯೋಜನೆಗಳು
- ಗುವಾಹಟಿ ಸೇರಿ ಹಲವು ನಗರಾಭಿವೃದ್ಧಿ ಯೋಜನೆಗಳು
- ಹೂಡಿಕೆಗಳಿಗೆ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ

# ಪ.ಬಂಗಾಳ, ಅಸ್ಸಾಂಗೆ ಬಿಜೆಪಿ ಕೇಂದ್ರ ವೀಕ್ಷಕರ ನೇಮಕ

**ಹೊಸದಿಲ್ಲಿ:** ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ಶಾಸಕಾಂಗ ಪಕ್ಷದ ನಾಯಕರ ಆಯ್ಕೆ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ಜೆ.ಪಿ. ನಡ್ಡಾ ಅವರನ್ನು ಬಿಜೆಪಿ ಮಂಗಳವಾರ ಕೇಂದ್ರ ವೀಕ್ಷಕರನ್ನಾಗಿ ನೇಮಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಪಶ್ಚಿಮ ಬಂಗಾಳದ ಕೇಂದ್ರ ವೀಕ್ಷಕರಾಗಿ ಕಾರ್ಯನಿರ್ವಹಿಸಲಿದ್ದು, ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಸಹ-ವೀಕ್ಷಕರಾಗಿ ಇವರಿಗೆ ಸಾಥ್ ನೀಡಲಿದ್ದಾರೆ. ಅಸ್ಸಾಂಗೆ ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರನ್ನು ವೀಕ್ಷಕರನ್ನಾಗಿ ಮತ್ತು ಹರ್ಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಸಹ-ವೀಕ್ಷಕರನ್ನಾಗಿ ಪಕ್ಷದ ಅಧಿಸೂಚನೆಯಲ್ಲಿ ಹೆಸರಿಸಲಾಗಿದೆ.

**ನಾಯಕನ ಆಯ್ಕೆ ಸವಾಲು:** ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಹಲವು ಹೆಸರುಗಳು ಕೇಳಿಬರುತ್ತಿವೆ. ಮಮತಾ ಬ್ಯಾನರ್ಜಿಯವರನ್ನು ಸೋಲಿಸಿದ ಸುವೇಂದು ಅಧಿಕಾರಿ ಪ್ರಬಲ ಅಭ್ಯರ್ಥಿಯಾಗಿದ್ದಾರೆ. ಇವರೊಂದಿಗೆ ಕೇಂದ್ರ ಸಚಿವ ಸುಕಾಂತ ಮಜುಂದಾರ್ ಹಿರಿಯ ನಾಯಕ ದಿಲೀಪ್ ಘೋಷ್ ಮತ್ತು ಮಹಿಳಾ ಪ್ರತಿನಿಧಿಯಾಗಿ ಅಗ್ನಿಮಿತ್ರ ಪಾಲ್ ಅವರ ಹೆಸರುಗಳು ಮುಂಚೂಣಿಯಲ್ಲಿವೆ. ಅಂತಿಮವಾಗಿ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆಯಾಗಲಿದೆ. ಸೋಮವಾರ ಪ್ರಕಟವಾದ ವಿಧಾನಸಭಾ ಚುನಾವಣಾ ಫಲಿತಾಂಶಗಳ ಬೆನ್ನಲ್ಲೇ ಈ ನೇಮಕಾತಿ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಅನ್ನು ಅಧಿಕಾರದಿಂದ ಕೆಳಗಿಳಿಸಿರುವ ಬಿಜೆಪಿ, ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಅಧಿಕಾರ ಉಳಿಸಿಕೊಂಡಿದೆ.

## ತಾವರೆ ಅರಳಿಸಿದ ಮನೆಕೆಲಸದಾಕೆ!

ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಮಟ್ಟದ ಆರ್ಥಿಕ ಸ್ಥಿತಿಯಲ್ಲಿರುವ ಪ್ರಜೆಯ ಕೈಗೆ ಅಧಿಕಾರದ ಚುಕ್ಕಾಣಿ ಸಿಕ್ಕಾಗಲೇ ಆತ್ಮನಿರ್ಭರ ಭಾರತದ ಕನಸು ನನಸಾಗುತ್ತದೆ. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಇಂತಹದ್ದೊಂದು ಉದಾಹರಣೆ ಲಭ್ಯವಾಗಿದೆ. ಮನೆಗೆಲಸದಾಕೆ ಔಸ್‌ಗ್ರಾಮ್ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿ ಜನಮನ್ನಣೆ ಪಡೆದಿದ್ದಾರೆ. ಇದಲ್ಲವೆ, ಪ್ರಜಾಪ್ರಭುತ್ವದ ಶಕ್ತಿ?



ತಿಂಗಳಿಗೆ 2,500 ರೂ. ವೇತನದ ಮನೆಗೆಲಸದಾಕೆ ಕಲಿತಾ ಮಾಝಿ ಔಸ್‌ಗ್ರಾಮ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಭಾರತೀಯ ಜನತಾ ಪಕ್ಷದ (ಬಿಜೆಪಿ) ಟಿಕೆಟ್ ಪಡೆದಿದ್ದ ಕಲಿತಾ 1,07,692 ಮತಗಳನ್ನು ಪಡೆದಿದ್ದಾರೆ. ಸಮೀಪದ ಎದುರಾಳಿ ಶ್ಯಾಮ ಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ.

**ರಾಜಕೀಯಕಲಿತಕಲಿತಾ ಹಿನ್ನೆಲೆ:** ಗುಸ್ಕರ ನಗರಪಾಲಿಕೆ ನಿವಾಸಿ ಕಲಿತಾ ಮಾಝಿ, ಸಕ್ರಿಯ ರಾಜಕಾರಣಕ್ಕೆ ಇಳಿಯುವ ಮುನ್ನ ದಿನನಿತ್ಯ ನಾಲ್ಕು ಮನೆಗಳಲ್ಲಿ ಮನೆಗೆಲಸ ಮಾಡುತ್ತಿದ್ದರು. ತಮ್ಮ ಸಜ್ಜನಿಕೆಯ ವ್ಯಕ್ತಿತ್ವ, ಸರಳವಾದ ಜೀವನ ಮತ್ತು ಬಲವಾದ ಸ್ಥಳೀಯ ಜನಸಂಪರ್ಕದಿಂದ ಕಲಿತಾ ಔಸ್‌ಗ್ರಾಮ ಕ್ಷೇತ್ರದಲ್ಲಿ ಕಮಲ ಅರಳಿಸಿದ್ದಾರೆ. ಕಲಿತಾ ಸ್ಪರ್ಧಿಸಿದ್ದು ಇದೇ ಮೊದಲಲ್ಲ. 2021ರ ವಿಧಾನಸಭಾ ಚುನಾವಣೆಯಲ್ಲೂ ಸ್ಪರ್ಧಿಸಿದ್ದ ಕಲಿತಾ, ಟಿಎಂಸಿ ಅಭ್ಯರ್ಥಿ ಎದುರು 11,000ಕ್ಕೂ ಹೆಚ್ಚು ಅಂತರದಿಂದ ಸೋತಿದ್ದರು. ಆದರೆ ಕಲಿತಾ ಮೇಲಿನ ವಿಶ್ವಾಸ ಕಳೆದುಕೊಳ್ಳದ ಬಿಜೆಪಿ ಮತ್ತೆ ಅವರನ್ನೇ ಅಭ್ಯರ್ಥಿಯನ್ನಾಗಿ ಘೋಷಿಸಿದ್ದು, ಇತಿಹಾಸ ಬರೆದಿದ್ದಾರೆ.

# ಸ್ಟಾಲಿನ್‌ಗೆ ಮಾಜಿ ಆಪ್ತನಿಂದಲೇ ಸೋಲು

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭದ್ರಕೋಟೆಯೆನಿಸಿದ್ದ ಕೊಳತ್ತೂರು ಕ್ಷೇತ್ರದಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಭ್ಯರ್ಥಿ ವಿ.ಎಸ್. ಬಾಬು 8,795 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಈ ಮೂಲಕ ಸ್ಟಾಲಿನ್ ಗೆಲುವಿನ ಅಂದಾಜುಗಳನ್ನು ಬಾಬು ಸುಳ್ಳಾಗಿಸಿದ್ದಾರೆ. ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದಿಂದ ಸ್ಪರ್ಧಿಸಿದ್ದ ಬಾಬು, ಡಿಎಂಕೆ ನಾಯಕನ ಭದ್ರಕೋಟೆಯಲ್ಲೇ ಜಯಭೇರಿ ಬಾರಿಸಿದ್ದಾರೆ. ಗೆಲುವಿನ ನಂತರ ಮಾತನಾಡಿದ ಬಾಬು, ಈ ಯಶಸ್ಸಿನ ಸಂಪೂರ್ಣ ಶ್ರೇಯಸ್ಸು ತಮ್ಮ ಪಕ್ಷದ ನಾಯಕ ವಿಜಯ್ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದ್ದಾರೆ. ಅಲ್ಲದೆ ಸ್ಟಾಲಿನ್ ಅವರ ಸಹಿ ಮಾಡುವ ವಿಶಿಷ್ಟ ಶೈಲಿಯನ್ನು ಅಣಕಿಸುವ ಮೂಲಕ ಗಮನ ಸೆಳೆದಿದ್ದಾರೆ.

**ರಾಜಕೀಯ ಹಿನ್ನೆಲೆ:** ವಿ.ಎಸ್. ಬಾಬು ಈ ಹಿಂದೆ ಡಿಎಂಕೆ ಸದಸ್ಯರಾಗಿದ್ದು, ಉತ್ತರ ಚೆನ್ನೈ ಜಿಲ್ಲಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 2006ರಲ್ಲಿ ಪುರಸವಾಲ್ಕಂನಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 2011ರ ಚುನಾವಣೆಯಲ್ಲಿ ಸ್ಟಾಲಿನ್, ಕೊಳತ್ತೂರಿನಲ್ಲಿ 2,734 ಮತಗಳ ಅಂತರದ ಜಯ ಸಾಧಿಸಿದಾಗ ಬಾಬು ಅವರೇ ಈ ಕ್ಷೇತ್ರದ ಉಸ್ತುವಾರಿ ವಹಿಸಿದ್ದರು. ಆದರೆ, 2011ರ ಫಲಿತಾಂಶದ ನಂತರ ಡಿಎಂಕೆ ಇವರನ್ನು ಸ್ಥಾನದಿಂದ ವಜಾಗೊಳಿಸಿ ಪಿ.ಕೆ. ಶೇಖರ್ ಬಾಬು ಅವರಿಗೆ ಜವಾಬ್ದಾರಿ ನೀಡಿತ್ತು. ಇದರಿಂದ ಅಸಮಾಧಾನಗೊಂಡ ಬಾಬು ಎಐಎಡಿಎಂಕೆಗೆ ಸೇರ್ಪಡೆಯಾಗಿದ್ದರು. ಅಂತಿಮವಾಗಿ ವಿಜಯ್ ಅವರ ಟಿವಿಕೆ ಪಕ್ಷ ಸೇರಿ ಸ್ಟಾಲಿನ್ ವಿರುದ್ಧವೇ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ.



## ರಾಜೀನಾಮೆ ಸಲ್ಲಿಸಿದ ಸ್ಟಾಲಿನ್, ಪಿಣರಾಯಿ

ದಕ್ಷಿಣ ಭಾರತದ ಕಾಮ್ರೆಡ್(ಎಡಪಂಥೀಯ) ಸಹೋದರರೆಂದು ಪರಸ್ಪರ ಹೇಳಿಕೊಳ್ಳುತ್ತಿದ್ದ ಸಿಪಿಐ(ಎಂ) ನಾಯಕ ಪಿಣರಾಯಿ ವಿಜಯನ್ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಮಂಗಳವಾರ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳದ ರಾಜ್ಯಪಾಲ ಮತ್ತು ತಮಿಳುನಾಡಿನ ಹೆಚ್ಚುವರಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಗೆ ಇಬ್ಬರು ನಾಯಕರು ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

## 22 ಹಾಲಿ ಸಚಿವರ ಪತನ

2026ರ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ತೃಣಮೂಲ ಕಾಂಗ್ರೆಸ್‌ನ 35 ಸಚಿವರ ಪೈಕಿ 22 ಮಂದಿ ಪರಾಭವಗೊಂಡಿದ್ದಾರೆ. ಇದರೊಂದಿಗೆ ರಾಜ್ಯ ಸಚಿವ ಸಂಪುಟದ ಶೇ.63ರಷ್ಟು ಸದಸ್ಯರು ಸೋಲನ್ನಪ್ಪಿದಂತಾಗಿದೆ. ಮಮತಾ ಬ್ಯಾನರ್ಜಿ ಭವಾನಿಪುರ ಕ್ಷೇತ್ರದಲ್ಲಿ ಸೋಲು ಕಂಡಿದ್ದು, ಇದು ರಾಜ್ಯ ನಾಯಕತ್ವಕ್ಕೆ ನೇರ ಹೊಡೆತ ನೀಡಿದೆ. ಮತದಾರರು ಪ್ರಮುಖ ಇಲಾಖೆಗಳ ಮಂತ್ರಿಗಳನ್ನೇ ತಿರಸ್ಕರಿಸಿದ್ದಾರೆ. ಸೋತವರಲ್ಲಿ ಶಶಿ ಪಂಜ (ಕೈಗಾರಿಕೆ), ಬ್ರಾತ್ಯ ಬಸು (ಶಿಕ್ಷಣ), ಚಂದ್ರಿಮಾ ಭಟ್ಟಾಚಾರ್ಯ (ಹಣಕಾಸು), ಅರೂಪ್ ಬಿಸ್ವಾಸ್ (ವಿದ್ಯುತ್) ಮತ್ತು ಸ್ನೇಹಶಿಸ್ ಚಕ್ರವರ್ತಿ (ಸಾರಿಗೆ) ಸೇರಿದ್ದಾರೆ. ಗ್ರಾಮೀಣಾಭಿವೃದ್ಧಿ, ಅಲ್ಪಸಂಖ್ಯಾತ ಕಲ್ಯಾಣ ಮತ್ತು ಉತ್ತರ ಬಂಗಾಳ ಅಭಿವೃದ್ಧಿ ಇಲಾಖೆಗಳ ಸಚಿವರೂ ಸೋಲು ಅನುಭವಿಸಿದ್ದಾರೆ.

### ಕೇರಳ ಸಿಎಂ ಯಾರು?

ಕೇರಳದಲ್ಲಿ 10ವರ್ಷಗಳ ಬಳಿಕ ಎಲ್‌ಡಿಎಫ್ ಸರಕಾರ ಆಡಳಿತ ವಿರೋಧಿ ಅಲೆಯಲ್ಲಿ ಪತನಗೊಂಡು ಯುಡಿಎಫ್ ಗೆಲುವಿನ ಅಲೆಯಲ್ಲಿ ತೇಲಿ ಬಂದು ಸರಕಾರ ರಚನೆಗೆ ಸಿದ್ಧಗೊಳ್ಳುತ್ತಿದೆ. ಆದರೆ ಈಗ ಯುಡಿಎಫ್ ಸರಕಾರದಲ್ಲಿ ಮುಖ್ಯಮಂತ್ರಿ ಪಟ್ಟ ಯಾರಿಗೆ ಒಲಿಯಲಿದೆ ಎಂಬ ಪ್ರಶ್ನೆ ಈಗ ತೀವ್ರ ಚರ್ಚೆಗೀಡಾಗಿದೆ. ವಿಪಕ್ಷ ನಾಯಕನ ಪಾತ್ರದಲ್ಲಿ ಮಿಂಚಿದ ವಿ.ಡಿ.ಸತೀಶನ್ , ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಮತ್ತು ಹೈಕಮಾಂಡ್ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಹೆಸರುಗಳು ಕೇಳಿಬರುತ್ತಿದ್ದು, ಅಂತಿಮವಾಗಿ ಹೈಕಮಾಂಡ್ ಕೃಪೆ ಯಾರಿಗೆ ಎಂಬ ಚರ್ಚೆ ಜೋರಾಗಿದೆ.

## ಒಂದೇ ಒಂದು ಮತ: ಟಿವಿಕೆಗೆ ನಗು, ಡಿಎಂಕೆಗೆ ಆಘಾತ

**ತಿರುಪತ್ತೂರು:** ತಮಿಳುನಾಡು ವಿಧಾನಸಭಾ ಚುನಾವಣೆಯ ಮತ ಎಣಿಕೆ ವೇಳೆ ತಿರುಪತ್ತೂರಿನಲ್ಲಿ ಅಕ್ಷರಶಃ ಉಸಿರುಬಿಗಿಹಿಡಿಯುಂತಹವಾತಾವರಣನಿರ್ಮಾಣವಾಗಿತ್ತು. ಅದೃಷ್ಟದಾಟದಲ್ಲಿ ಕೊನೆಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಭ್ಯರ್ಥಿ ಸೀನಿವಾಸ ಸೇತುಪತಿ ಆರ್ ವಿಜಯಿಯಾದರೆ, ಡಿಎಂಕೆ ಸರ್ಕಾರದ ಸಹಕಾರಿ ಸಚಿವ ಕೆ.ಆರ್ ಪೆರಿಯಕರುಪ್ಪನ್ ಪರಾಜಯ ಅನುಭವಿಸಿದರು. ಅಂತರ ಒಂದು ಮತ, ಹೌದು ಒಂದೇ ಒಂದು ಮತ! ಅಧಿಕೃತ ಅಂಕಿಅಂಶಗಳ ಪ್ರಕಾರ, ಸೇತುಪತಿ ಆರ್ 83,375 ಮತಗಳನ್ನು ಪಡೆದರೆ, ಪೆರಿಯಕರುಪ್ಪನ್ 83,374 ಮತಗಳನ್ನು ಗಳಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಕೆ.ಸಿ ತಿರುಮಾರನ್ 29,054 ಮತಗಳನ್ನು ಪಡೆಯುವ ಮೂಲಕ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಇದು ರಾಜ್ಯದ ಇತಿಹಾಸದಲ್ಲೇ ಅತ್ಯಂತ ಕಡಿಮೆ ಅಂತರದ ಗೆಲುವು ಅಥವಾ ಸೋಲು ಅನಿಸಿಕೊಂಡಿದೆ. ಟಿವಿಕೆ ಈ ಬಾರಿ 108 ಸ್ಥಾನಗಳನ್ನು ಗೆಲ್ಲುವ ಮೂಲಕ ರಾಜ್ಯದ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಅಂತೂ ವಿಜಯ್ ನೇತೃತ್ವದ ಪಕ್ಷಕ್ಕೆ ಜನಬೆಂಬಲದೊಂದಿಗೆ ಅದೃಷ್ಟದ ಬೆಂಬಲವೂ ಇತ್ತೆನಿಸುತ್ತದೆ. ಅಂತೂ ಡಿಎಂಕೆ ಮತ್ತು ಸೋಲುಂಡ ಸಚಿವರು ಆ ಒಂದು ಮತ ನೆನೆದು ಕೈ ಕೈ ಹಿಸುಕಿಕೊಳ್ಳುವುದಲ್ಲದೆ ಬೇರೆ ದಾರಿಯಿಲ್ಲ.

### ಮೇ 9ಕ್ಕೆ ಪ್ರಮಾಣ ವಚನ?

ಮೇ9 ಕ್ಕೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಪ್ರಮಾಣ ವಚನ ನಡೆಯಲಿದೆ ಎಂಬ ಊಹಾಪೋಹಾಗಳು ಸದ್ಯ ಎಲ್ಲೆಡೆ ಹರಿದಾಡುತ್ತಿದೆ. ಐತಿಹಾಸಿಕ ಗೆಲುವು ಸಾಧಿಸಿರುವ ಬಿಜೆಪಿ, ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಕುತೂಹಲವೂ ಮೂಡಿದೆ.

ಟಿಎಂಸಿ ಮಾಜಿ ನಾಯಕ ಹಾಗೂ ಮಮತಾ ಬ್ಯಾನರ್ಜಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಸುವೇಂದು ಅಧಿಕಾರಿ ಬಿಜೆಪಿ ಸೇರಿ ರಾಜ್ಯಾಧ್ಯಕ್ಷರಾಗಿದ್ದರು. 2021ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ, ಅವರು ಟಿಎಂಸಿಯಿಂದ ಹೊರಬಂದು ಬಿಜೆಪಿ ಸೇರಿದ್ದು, ಸದ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಅವರ ಹೆಸರು ಕೇಳಿಬರುತ್ತಿದೆ. ಪ್ರಸ್ತುತ ಪ್ರತಿಪಕ್ಷ ನಾಯಕರಾಗಿರುವ ಅಧಿಕಾರಿ, ಸಿಎಂ ಸ್ಥಾನದ ಪ್ರಬಲ ಸ್ಪರ್ಧಿ ಎಂದು ಪರಿಗಣಿಸಲಾಗಿದೆ.

ಇನ್ನೊಂದೆಡೆ ಹೊಸದಾಗಿ ನೇಮಕಗೊಂಡ ಬಿಜೆಪಿ ಮುಖ್ಯಸ್ಥರಾದ ಸಮಿಕ್ ಭಟ್ಟಾಚಾರ್ಯ ತೆರೆಮರೆಯಲ್ಲಿ ಕೆಲಸ ಮಾಡಲು ಹೆಸರುವಾಸಿಯಾಗಿದ್ದಾರೆ. ಅವರ ಹೆಸರೂ ಅಲ್ಲಲ್ಲಿ ಕೇಳಿಬರುತ್ತಿದೆ. ಫ್ಯಾಷನ್ ಡಿಸೈನರ್ ಆಗಿರುವ ಅಗ್ನಿಮಿತ್ರ ಪೌಲ್, ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಪ್ರಮುಖ ಮಹಿಳಾ ನಾಯಕಿಯರಲ್ಲಿ ಒಬ್ಬರು. ಬಿಜೆಪಿ ಮಹಿಳಾ ಮೋರ್ಚಾದ ಬಂಗಾಳ ಘಟಕದ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸಿದ್ದ ಇವರು ರಾಜ್ಯ ಬಿಜೆಪಿ ಉಪಾಧ್ಯಕ್ಷೆಯಾಗುವ ಮೂಲಕ ಪ್ರಮುಖ ಹುದ್ದೆಯನ್ನು ಏರಿದ್ದಾರೆ. ಹೆಸರು ಸಿಎಂ ಸಂಭಾವ್ಯ ಪಟ್ಟಿಯಲ್ಲಿ ಪೌಲ್ ಹೆಸರು ಕೇಳಿಬರುತ್ತಿದೆ.




### ಯಾರ ಜತೆ ಟಿವಿಕೆ ಮೈತ್ರಿ?

ಸದ್ಯ ಎಲ್ಲರ ಕಣ್ಣುಗಳು ತಮಿಳುನಾಡಿನಲ್ಲಿ ಹೊಸ ಸರ್ಕಾರ ರಚನೆಯ ಮೇಲೆ ಇವೆ. 234 ಸದಸ್ಯ ಬಲದ ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳೊಂದಿಗೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಹೊಸ ಸರ್ಕಾರವನ್ನು ರಚಿಸಲು 118 ಸ್ಥಾನಗಳ ಬಹುಮತಕ್ಕೆ 10 ಸ್ಥಾನಗಳು ಕಡಿಮೆಯಾಗಿವೆ. ಆದರೆ ಬಹುಮತದ ಸಂಖ್ಯೆಗಳ ಜತೆಗೆ, ಪ್ರಸ್ತುತ ತಮಿಳುನಾಡು ವಿಧಾನಸಭೆಯ ಅಧಿಕಾರಾವಧಿಯು ಮೇ10ಕ್ಕೆ ಕೊನೆಗೊಳ್ಳುತ್ತಿರುವುದರಿಂದ ವಿಜಯ್‌ಗೆ ಗಡುವು ಕಡಿಮೆ ಇದೆ. ಕಾಂಗ್ರೆಸ್, ಡಿಎಂಕೆ, ಎಐಎಡಿಎಂಕೆ, ಬಿಜೆಪಿ ಅಥವಾ ಇತರ ಸಣ್ಣ ಪಕ್ಷಗಳಿಂದ ಯಾರನ್ನು ಬೆಂಬಲಿಸಬೇಕು ಎಂಬುದನ್ನು ನಿರ್ಧರಿಸಲು ವಿಜಯ್‌ಗೆ ಐದು ದಿನಗಳ ಕಾಲಾವಕಾಶವಿದೆ.

**ಟಿವಿಕೆ ಮುಂದಿರುವ ಅವಕಾಶ:** ಡಿಎಂಕೆ-ಮೈತ್ರಿಕೂಟದ ಸಣ್ಣ ಪಕ್ಷಗಳಾದ ಟಿವಿಕೆಯು ಕಾಂಗ್ರೆಸ್ (5 ಸ್ಥಾನಗಳು), ಸಿಪಿಐ, ಸಿಪಿಐ (ಎಂ) ಮತ್ತು ವಿಸಿಕೆ (ತಲಾ 2 ಸ್ಥಾನಗಳು) ಯಿಂದ ಬೆಂಬಲವನ್ನು ಪಡೆಯಬಹುದು. ಈ ಜೋಡಿಯು ಡಿಎಂಕೆ ಅಥವಾ ಎಐಎಡಿಎಂಕೆ ಜತೆಗಿನ ಔಪಚಾರಿಕ ಮೈತ್ರಿಯಿಲ್ಲದೆ ಟಿವಿಕೆಅನ್ನು ಆರಾಮವಾಗಿ 118ರ ಗಡಿ ದಾಟಿಸಬಹುದು. ರಾಹುಲ್ ಗಾಂಧಿ ಸಂಪರ್ಕದಲ್ಲಿದ್ದಾರೆ ಎಂದು ವರದಿಯಾಗಿದೆ. ಕಾಂಗ್ರೆಸ್ ಜತೆಗಿನ ಮಾತುಕತೆಗಳು ಸಕ್ರಿಯವಾಗಿವೆ.

ತಮಿಳುನಾಡಿನ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪಕ್ಷವು 108 ಸ್ಥಾನಗಳನ್ನು ಗೆದ್ದ ಬೆನ್ನಲ್ಲೇ ಟಿವಿಕೆ ಮುಖ್ಯಸ್ಥ ವಿಜಯ್ ಅವರು ಮಂಗಳವಾರ ಹೊಸದಾಗಿ ಆಯ್ಕೆಯಾದ ಶಾಸಕರ ಸಭೆ ನಡೆಸಿದ್ದರು. ಈ ಪಕ್ಷದ ಸಭೆಗೆ ಮುನ್ನ ಅವರು ಪಕ್ಷದ ಸೈದ್ಧಾಂತಿಕ ನಾಯಕರಿಗೆ ಗೌರವ ಸಲ್ಲಿಸಿದ್ದಾರೆ. ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮತ್ತು ವಿಧಾನಸಭೆಯಲ್ಲಿ ಅವರ ನಡವಳಿಕೆಯ ಬಗ್ಗೆ ಚರ್ಚಿಸಲು ಅವರು ಪಕ್ಷದ ಶಾಸಕರ ಸಭೆ ಕರೆದಿದ್ದರು ಎಂದು ಮೂಲಗಳು ತಿಳಿಸಿವೆ.

### ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಿಸಿಇಎ ಸಭೆಯಲ್ಲಿ ನಿರ್ಧಾರ

# ಕಬ್ಬು ಬೆಂಬಲ ಬೆಲೆ ಕ್ವಿಂಟಾಲ್‌ಗೆ ₹365

**ಹೊಸದಿಲ್ಲಿ:** ಕೇಂದ್ರ ಸರ್ಕಾರವು 2026-27ರ ಸಕ್ಕರೆ ಹಂಗಾಮಿಗೆ(ಅಕ್ಟೋಬರ್‌ನಿಂದ ಆರಂಭ) ಕಬ್ಬಿನ ಕನಿಷ್ಠ ಖರೀದಿ ಬೆಲೆಯಾದ ನ್ಯಾಯಸಮ್ಮತ ಹಾಗೂ ಲಾಭದಾಯಕ ದರವನ್ನು(ಎಫ್‌ಆರ್‌ಪಿ) ಕ್ವಿಂಟಾಲ್‌ಗೆ 10 ರೂ. ಹೆಚ್ಚಿಸಿ 365ಕ್ಕೆ ನಿಗದಿಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ(ಸಿಸಿಇಎ) ಈ ನಿರ್ಧಾರ ಕೈಗೊಂಡಿದೆ.

ಮೂಲ ಮರುಪಡೆಯುವಿಕೆ ದರ(ರಿಕವರಿ) ಶೇ.10.25 ಇದ್ದಲ್ಲಿ ಈ ಎಫ್‌ಆರ್‌ಪಿ ಅನ್ವಯವಾಗುತ್ತದೆ. 2025-26ರ 355 ರೂ. ದರಕ್ಕೆ ಹೋಲಿಸಿದರೆ ಇದು ಶೇ.2.81 ಹೆಚ್ಚಳವಾಗಿದೆ. ರಿಕವರಿ ದರವು ಶೇ.10.25 ಮೀರಿದ ಪ್ರತಿ ಶೇ.0.1 ಹೆಚ್ಚಳಕ್ಕೆ ಕ್ವಿಂಟಾಲ್‌ಗೆ 3.56 ರೂ. ಹೆಚ್ಚುವರಿ ನೀಡಲಾಗುತ್ತದೆ.

ಶೇ.9.5 ಕ್ಕಿಂತ ಕಡಿಮೆ ರಿಕವರಿ ಇರುವ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ಕಡಿತ ವಿಧಿಸಲಾಗುವುದಿಲ್ಲ; ಅವರಿಗೆ ಪ್ರತಿ ಕ್ವಿಂಟಾಲ್‌ಗೆ 338.3 ರೂ. ನೀಡಲಾಗುತ್ತದೆ. ಉತ್ಪಾದನಾ ವೆಚ್ಚ 182 ರೂ. ಆಗಿದ್ದು, ನಿಗದಿಪಡಿಸಿದ ಎಫ್‌ಆರ್‌ಪಿ ಅದಕ್ಕಿಂತ 100.5% ಹೆಚ್ಚು.ಈ ನಿರ್ಧಾರದಿಂದ ಸುಮಾರು ಒಂದು ಕೋಟಿ ರೈತರಿಗೆ ಪ್ರಯೋಜನವಾಗಲಿದೆ. ಒಟ್ಟಾರೆ 1 ಲಕ್ಷ ಕೋಟಿ ರೂ.ಗಿಂತ ಹೆಚ್ಚು ಆದಾಯ ರೈತರಿಗೆ ದೊರೆಯುವ ನಿರೀಕ್ಷೆಯಿದೆ. ಸಕ್ಕರೆ ಕ್ಷೇತ್ರವು ಸುಮಾರು ಐದು ಕೋಟಿ ಜನರ ಜೀವನೋಪಾಯಕ್ಕೆ ಸಂಬಂಧಿಸಿದೆ.

ಹಿಂದಿನ ಹಂಗಾಮಿನಲ್ಲಿ ಬಾಕಿ ಹಣದ 99.5% ಪಾವತಿಯಾಗಿದ್ದು, ಪ್ರಸ್ತುತ ಹಂಗಾಮಿನಲ್ಲಿ 88.6% ಪಾವತಿಸಲಾಗಿದೆ. ಈ ಕ್ರಮ ಎಥನಾಲ್ ಉತ್ಪಾದನೆಗೂ ಉತ್ತೇಜನ ನೀಡಲಿದೆ.

**ಹತ್ತಿ ಉತ್ಪಾದನೆ ಹೆಚ್ಚಿಸಲು ಯೋಜನೆ:** ಹತ್ತಿ ಬೆಳೆ ಉತ್ಪಾದನೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಐದು ವರ್ಷಗಳ(2026-27 ರಿಂದ 2030-31) ಅವಧಿಗೆ 5,659.22 ಕೋಟಿ ರೂ. ವೆಚ್ಚದ ಮಿಷನ್ ಫಾರ್ ಕಾಟನ್ ಪ್ರೊಡಕ್ಟಿವಿಟಿಗೆ ಅನುಮೋದನೆ ನೀಡಿದೆ.

**ಸುಪ್ರೀಂ ಜಡ್ಜ್‌ಗಳ ಸಂಖ್ಯೆ ಹೆಚ್ಚಳಕ್ಕೆ ಅಸ್ತು:** ಕೇಂದ್ರ ಸಚಿವ ಸಂಪುಟವು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು ಇಂದಿನ 34ರಿಂದ 38ಕ್ಕೆ ಹೆಚ್ಚಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಪ್ರಸ್ತುತ ಸಿಜೆಐ ಸೇರಿ 34 ನ್ಯಾಯಮೂರ್ತಿಗಳಿದ್ದು, ಇನ್ನೂ ನಾಲ್ವರನ್ನು ಹೆಚ್ಚಿಸಲು ಮುಂದಿನ ಸಂಸತ್ ಅಧಿವೇಶನದಲ್ಲಿ ಮಸೂದೆ ತರಲಾಗುತ್ತದೆ. ಅನುಮೋದನೆ ಬಳಿಕ ಒಟ್ಟು ಸಂಖ್ಯೆ 38 ಆಗಲಿದೆ.

**ಎಂಎಸ್‌ಎಂಇ, ವಿಮಾನಯಾನಕ್ಕೆ ತುರ್ತು ಸಾಲ ಭದ್ರತಾ ಯೋಜನೆ:** ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಎಂಎಸ್‌ಎಂಇ ಹಾಗೂ ವಿಮಾನಯಾನ ಕ್ಷೇತ್ರಗಳಿಗೆ ನೆರವಾಗಲು 18,100 ಕೋಟಿ ರೂ. ವೆಚ್ಚದ ತುರ್ತು ಸಾಲ ಭದ್ರತಾ ಯೋಜನೆ(ಇಸಿಎಲ್‌ಜಿಎಸ್) ಘೋಷಿಸಲಾಗಿದೆ. ಇದರ ಮೂಲಕ 2.55 ಲಕ್ಷ ಕೋಟಿ ರೂ. ಹೆಚ್ಚುವರಿ ಸಾಲ ಹರಿವು ಸಾಧ್ಯವಾಗಲಿದೆ.

**ರೈಲ್ವೆ ಸಚಿವಾಲಯದ 23,437 ಕೋಟಿ ರೂ. ಯೋಜನೆಗಳಿಗೆ ಅನುಮೋದನೆ:** ರೈಲ್ವೆ ಸಚಿವಾಲಯದ ಮೂರು ಪ್ರಮುಖ ಯೋಜನೆಗಳಿಗೆ 23,437 ಕೋಟಿ ರೂ. ವೆಚ್ಚಕ್ಕೆ ಅನುಮೋದನೆ ನೀಡಿದೆ. ನಾಗ್ದಾ-ಮಥುರಾ, ಗುಂಟಕಲ್-ವಾಡಿ ಮತ್ತು ಬುರಹ್ವಾಲ್-ಸೀತಾಪುರ ಮಾರ್ಗಗಳಲ್ಲಿ ಮೂರನೇ ಮತ್ತು ನಾಲ್ಕನೇ ಹಳಿಗಳ ನಿರ್ಮಾಣ ಈ ಯೋಜನೆಗಳಲ್ಲಿ ಸೇರಿವೆ.

## ಗಡಿ ಹಂಚಿಕೊಳ್ಳುವ ರಾಷ್ಟ್ರಗಳ ಹೂಡಿಕೆಗೆ ಕಟ್ಟುನಿಟ್ಟಿನ ನಿಯಮ

**ಹೊಸದಿಲ್ಲಿ:** ಚೀನಾ ಮತ್ತು ಪಾಕಿಸ್ತಾನ ಸೇರಿದಂತೆ ಭಾರತದೊಂದಿಗೆ ಭೂಗಡಿ ಹಂಚಿಕೊಳ್ಳುವ ರಾಷ್ಟ್ರಗಳಿಂದ ಬರುವ ಎಲ್ಲಾ ವಿದೇಶಿ ನೇರ ಹೂಡಿಕೆಗಳಿಗೆ (ಎಫ್‌ಡಿಐ) ಕೇಂದ್ರ ಸರ್ಕಾರ ಹೊಸ ನಿರ್ಬಂಧಗಳನ್ನು ವಿಧಿಸಿದ್ದು, ಸರ್ಕಾರದ ಪೂರ್ವಾನುಮತಿಯನ್ನು ಕಡ್ಡಾಯಗೊಳಿಸಿದೆ.

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಇಲಾಖೆಯ (ಡಿಪಿಐಐಟಿ) ಪರಿಷ್ಕೃತ ನೀತಿಯ ಪ್ರಕಾರ, ನೆರೆಯ ರಾಷ್ಟ್ರದ ನಾಗರಿಕರು ಅಥವಾ ಅಲ್ಲಿ ನೆಲೆಸಿರುವ ಮಾಲೀಕತ್ವದ ಸಂಸ್ಥೆಗಳು ಭಾರತದಲ್ಲಿ ಹೂಡಿಕೆ ಮಾಡುವ ಮುನ್ನ ಸರ್ಕಾರದ ಅನುಮತಿ ಪಡೆಯಬೇಕು. ಪಾಕಿಸ್ತಾನ ಮೂಲದ ಸಂಸ್ಥೆಗಳು ರಕ್ಷಣೆ, ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಸೂಕ್ಷ್ಮ ವಲಯಗಳಲ್ಲಿ ಹೂಡಿಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

**ಸುರಕ್ಷತಾ ಕ್ರಮಗಳು:** ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವುದು ಮತ್ತು ದೇಶೀಯ ಕಂಪನಿಗಳ ಮೇಲೆ ವಿದೇಶಿ ಸಂಸ್ಥೆಗಳ ಅನಗತ್ಯ ನಿಯಂತ್ರಣ ತಡೆಯುವುದು ಈ ಕ್ರಮದ ಉದ್ದೇಶ. ಭಾರತೀಯ ಕಂಪನಿಗಳಲ್ಲಿನ ಹಳೆಯ ಹೂಡಿಕೆಗಳ ಮಾಲೀಕತ್ವವನ್ನು ಈ ನಿರ್ದಿಷ್ಟ ದೇಶಗಳ ವ್ಯಕ್ತಿಗಳಿಗೆ ಅಥವಾ ಉದ್ದಿಮೆಗಳಿಗೆ ವರ್ಗಾಯಿಸುವ ಸಂದರ್ಭದಲ್ಲೂ ಈ ನಿಯಮ ಅನ್ವಯಿಸುತ್ತದೆ. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ತಾತ್ಕಾಲಿಕವಾಗಿ ಜಾರಿಗೆ ತಂದಿದ್ದ ಈ ಕ್ರಮಗಳನ್ನು ಈಗ ಖಾಯಂ ಆಗಿ ಪರಿವರ್ತಿಸಲಾಗಿದೆ.

# ದಾಳಿ: ಭಾರತೀಯರಿಗೆ ಗಾಯ

**ಯುಎಇ:** ಇರಾನ್ ಬಹುಸಂಖ್ಯೆಯಲ್ಲಿ ಡ್ರೋನ್, ಕ್ಷಿಪಣಿ ದಾಳಿ ನಡೆಸಿದ ಪರಿಣಾಮ, ಪೂರ್ವ ಎಮಿರೇಟ್ ಆಫ್ ಫುಜೈರಾಹ್‌ನಲ್ಲಿ ತೈಲ ಸಂಸ್ಕರಣಾಗಾರ ಹೊತ್ತುರಿದು ಮೂವರು ಭಾರತೀಯ ಪ್ರಜೆಗಳು ಗಾಯಗೊಂಡಿದ್ದಾರೆಂದು ಯುಎಇ ಆರೋಪಿಸಿದೆ. ಇರಾನ್ ಮತ್ತು ಅಮೆರಿಕಗಳು ಏ.8ರಂದು ಕದನ ವಿರಾಮಕ್ಕೆ ಸಮ್ಮತಿಸಿದ ನಂತರದಲ್ಲಿ ಯುಎಇ ಮೇಲೆ ಇರಾನ್ ನಡೆಸಿದ ಪ್ರಥಮ ದಾಳಿ ಇದಾಗಿದೆ. ಸೋಮವಾರ ದಾಳಿ ನಡೆದಿದೆ. ಇರಾನ್ ಸೋಮವಾರ ಬರೋಬ್ಬರಿ 12ಖಂಡಾಂತರ ಕ್ಷಿಪಣಿಗಳು, ಮೂರು ಕ್ರೂಸ್ ಕ್ಷಿಪಣಿಗಳು ಹಾಗೂ ನಾಲ್ಕು ಡ್ರೋನ್‌ಗಳ ಮುಖೇನ ಯುಎಇ ಮೇಲೆ ದಾಳಿ ನಡೆಸಿರುವುದನ್ನು ಯುಎಇಯ ವಾಯುಪಡೆ ಖಚಿತಪಡಿಸಿದೆ ಎಂದು ಯುಎಇಯ ರಕ್ಷಣಾ ಖಾತೆ ಹೇಳಿದೆ. ಯುಎಇಯ ನಾಗರಿಕ ವಸತಿ ಪ್ರದೇಶಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಟಾರ್ಗೆಟ್ ಮಾಡಿ ಇರಾನ್ ನಡೆಸಿರುವ ಅಪ್ರಚೋದಿತ, ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಯುಎಇ ವಿದೇಶಾಂಗ ಖಾತೆ, ಯುಎಇಯ ಭದ್ರತೆ ಮತ್ತು ಸಾರ್ವಭೌಮತೆಗೆ ಯಾವುದೇ ಬೆದರಿಕೆಯನ್ನು ನಾವು ಸಹಿಸುವುದಿಲ್ಲ. ದಾಳಿಗಳಿಗೆ ಪ್ರತ್ಯುತ್ತರಿಸುವ ಸಂಪೂರ್ಣ ಮತ್ತು ಕಾನೂನುಬದ್ಧ ಹಕ್ಕನ್ನು ನಾವು ಕಾಯ್ದುಕೊಂಡಿದ್ದೇವೆ ಎಂದು ಎಚ್ಚರಿಕೆ ನೀಡಿದೆ. ಈ ಬಗ್ಗೆ ಇರಾನ್‌ನಿಂದ ಯಾವುದೇ ಅಧಿಕೃತ ಕಮೆಂಟ್ ಬಂದಿಲ್ಲ.

**ಭಾರತದ ತೀವ್ರ ಖಂಡನೆ:** ಯುಎಇಯ ಫುಜೈರಾಹ್ ಪೆಟ್ರೋಲಿಯಂ ಉದ್ದಿಮೆ ವಲಯಗಳ ಮೇಲೆ ಇರಾನ್ ನಡೆಸಿದ ಡ್ರೋನ್-ಕ್ಷಿಪಣಿ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದು, ದಾಳಿಯನ್ನು ಭಾರತ ಅತ್ಯುಗ್ರವಾಗಿ ಖಂಡಿಸಿದೆ. ನಾಗರಿಕರು ಮತ್ತು ಮೂಲ ಸೌಕರ್ಯಗಳನ್ನು ಟಾರ್ಗೆಟ್ ಮಾಡೋ ದಾಳಿ ತೀರಾ ಅಸ್ವೀಕಾರಾರ್ಹವೆಂದು ಪ್ರಧಾನಿ ಮೋದಿ ದಾಳಿಯನ್ನು ಕಟುವಾಗಿ ಖಂಡಿಸಿದ್ದಾರೆ. ಯುಎಇ ಜತೆ ಭಾರತ ದೃಢ ಐಕಮತ್ಯದೊಂದಿಗೆ ನಿಲ್ಲುವುದು ಮತ್ತು ಮಾತುಕತೆ ಹಾಗೂ ರಾಜತಾಂತ್ರಿಕತೆ ಮುಖೇನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಬೆಂಬಲವೀಯುವುದೆಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

## ಕಿರುಸುದ್ದಿ

### ಆ.21ರಿಂದ ಲೋಕ ಅದಾಲತ್

◆ **ಬಾದಾಮಿ:** ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸಮಾಧಾನ ಸಮಾರೋಹ ಎಂಬ ಹೆಸರಿನಡಿ ವಿಶೇಷ ಲೋಕ ಅದಾಲತ್‌ನ್ನು ಆ.21, 22 ಮತ್ತು 23ರಂದು ಆಯೋಜಿಸಲಾಗುತ್ತಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಹಾಗೂ ತ್ವರಿತವಾಗಿ ಇತ್ಯರ್ಥಪಡಿಸುವ ಈ ಕಾರ್ಯಕ್ರಮದಲ್ಲಿ ಬಾದಾಮಿ ತಾಲೂಕಿನ ಸಂಬಂದಿಸಿದ ಪ್ರಕರಣಗಳನ್ನು ಸಮಾಧಾನ ಸಮಾರೋಹ ಕಾರ್ಯಕ್ರಮದಲ್ಲಿ ಮಧ್ಯಸ್ತಿಕೆದಾರರ ಮಾರ್ಗದರ್ಶನದಲ್ಲಿ ಉಭಯ ಪಕ್ಷಗಾರರು ಒಮ್ಮತದ ನಿರ್ಧಾರಕ್ಕೆ ಬರಲು ವೇದಿಕೆಯನ್ನು ಕಲ್ಪಿಸುತ್ತದೆ. ಅರ್ಜಿದಾರರು ಈ ಅವಕಾಶ ಬಳಸಿಕೊಂಡು ತಮ್ಮ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕನ್ನಡವೆಂದರೆ ಸಂಸ್ಕೃತಿಯ ಹಿರಿಮೆ



◆ **ಸಿಂದಗಿ:** ಕನ್ನಡವೆಂದರೆ ಕೇವಲ ಅದೊಂದು ಭಾಷೆಯಲ್ಲ, ಅದೊಂದು ಸಂಸ್ಕೃತಿಯ ಹಿರಿಮೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎಂದು ನಿವೃತ್ತ ಪ್ರಾಚಾರ್ಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಂ.ಎಸ್.ಹೈಯ್ಯಾಳಕರ ಹೇಳಿದರು. ನಗರದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 112ನೆಯ ಸಂಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಮುಚ್ಚುತ್ತಿರುವ ಕನ್ನಡ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡಪರ ಸಂಘಟನೆಗಳು ಕಾರ್ಯಪ್ರವೃತ್ತರಾಗಬೇಕು. ಕನ್ನಡ ಭಾಷೆಯ ಅಸ್ಮಿತೆಗಾಗಿ ನಾವೆಲ್ಲರೂ ಹೋರಾಡಬೇಕು. ಭಾಷಾವಾರು ಹಾಗೂ ವಿಭಾಗವಾರು ತುಲನೆ ಮಾಡಿದಾಗ ಉತ್ತರ ಕರ್ನಾಟಕಕ್ಕೆ ಸದಾ ಅನ್ಯಾಯವಾಗುತ್ತಲೇ ಬಂದಿದೆ. ಇಂತಹ ಅನ್ಯಾಯವನ್ನು ಸರಿದೂಗಿಸುವ ನಿಟ್ಟಿನಲ್ಲಿ ನಮ್ಮ ಜನಪ್ರತಿನಿಧಿಗಳು ಮುತುವರ್ಜಿ ವಹಿಸಬೇಕು. ಎಲ್ಲ ಸರಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿ ಪತ್ರ ವ್ಯವಹಾರ ಕಡ್ಡಾಯಗೊಳಿಸಬೇಕು ಎಂದರು. ಉಪನ್ಯಾಸ ನೀಡಿದ ಎಚ್.ಜಿ. ಪಪೂ ಕಾಲೇಜಿನ ಪ್ರಾಚಾರ್ಯ ಎ.ಆರ್.ಹೆಗ್ಗನದೊಡ್ಡಿ ಮಾತನಾಡಿ, 112 ಸಂವಸ್ತ್ರಗಳನ್ನು ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ಕೇವಲ 4 ಸದಸ್ಯರೊಂದಿಗೆ ಪ್ರಾರಂಭವಾಗಿ ಇಂದು ಹೆಮ್ಮರವಾಗಿ ರಾಜ್ಯಾದ್ಯಂತ ತನ್ನದೇ ಆದ ಗಟ್ಟಿ ಛಾಪು ಮೂಡಿಸಿ ನಾಡು-ನುಡಿ, ನೆಲ-ಜಲ ರಕ್ಷಣೆಗೆ ಕಟಿಬದ್ಧವಾಗಿದೆ ಎಂದರು. ಕಸಾಪ ತಾಲೂಕಾಧ್ಯಕ್ಷ ವೈ.ಸಿ.ಮಯೂರ ಪ್ರಾಸ್ತಾವಿಕ ಮಾತನಾಡಿದರು. ತಾಲೂಕು ಗೌರವ ಕಾರ್ಯದರ್ಶಿ ಆನಂದ ಶಾಬಾದಿ ಸ್ವಾಗತಿಸಿ ನಿರೂಪಿಸಿದರು. ರವಿ ಹೊಳಿ ವಂದಿಸಿದರು. ಸಿದ್ದಣ್ಣ ಕೂಚಬಾಳ, ಬಿಸಿಯೂಟದ ಅಧಿಕಾರಿ ಅರವಿಂದ ಡೋಣೂರ, ಶಾಂತಲಾ ಮೋಸಲಗಿ ಇದ್ದರು. ಕಾರ್ಯಕ್ರಮದಲ್ಲಿ ರಾಜಶೇಖರ್ ನರಗೋದಿ, ಶಾಂತು ರಾಣಾಗೋಳ, ಜೈಭೀಮ್ ತಳಕೇರಿ, ವಿಠ್ಠಲ್ ಬಾಗೇವಾಡಿ ಸೇರಿದಂತೆ ಕನ್ನಡಾಭಿಮಾನಿಗಳು ಇದ್ದರು.

# ಬಿಸಿಲಿನ ತಾಪಕ್ಕೆ ಕಲ್ಲಂಗಡಿ ಮೊರೆಹೋದ ಜನತೆ

▸ **ಶಿವಮೂರ್ತಿ ಇಟಗಿ**

ದಿಗಂತ ವಿಶೇಷ

◆ **ಯಲಬುರ್ಗಾ:** ದಿನ ದಿನಕ್ಕೆ ಏರುತ್ತಿರುವ ಬಿಸಿಲಿನ ಪ್ರಖರತೆಗೆ ಜನ ತ್ತರಿಸುತ್ತಿದ್ದಾರೆ. ಕುಡಿಯುವ ನೀರಿಗೆ ಪರದಾಟ, ವಿದ್ಯುತ್ ಪೂರೈಕೆಯಿಲ್ಲದೆ ಗೋಳಾಟ, ಇವುಗಳ ಮದ್ಯೆ ಬೇಸಿಗೆ ಕಳೆಯುವುದೇ ಕಷ್ಟಕರವಾಗಿದೆ.

ತಾಲೂಕಿನಾದ್ಯಂತ ಬೇಸಿಗೆ ಬಗ್ಗೆ ಜನಸಾಮಾನ್ಯರಿಂದ ಕೇಳಿಬರುತ್ತಿರುವ ನಿಟ್ಟುಸಿರಿನ ನುಡಿಗಳಿವು ಉಷ್ಣಾಂಶ 43 ಡಿಗ್ರಿ ಸೆಲ್ಸಿಯಸ್ ದಾಟಿದೆ.ಇನ್ನೂ ಇದಕ್ಕೂ ಹೆಚ್ಚಾಗುವ ಸಾಧ್ಯತೆಯಿದೆ. ಏರುತ್ತಿರುವ ಈ ತಾಪಮಾನದಿಂದಾಗಿ ಜನ ಹಾಗೂ ಜಾನವಾರು ತತ್ತರಿಸುವಂತಾಗಿದೆ.

ಬಿಸಿಲಿಗೆ ಜನ ತತ್ತರ: ಬೆಳಿಗ್ಗೆಯಿಂದಲೇ ಇರುವ ಉರಿಬಿಸಿಲು ಹೊತ್ತೇರಿದಂತೆ ಬಿಸಿಲಿನ ತಾಪವೂ ಹೆಚ್ಚುತ್ತಾ ಹೋಗುತ್ತಿದೆ.ಬೇಸಿಗೆ ಪ್ರಾರಂಭದಲ್ಲೇ ಹೀಗಾದರೆ ಇನ್ನು ಒಂದೆರೆಡು ತಿಂಗಳು ಕಳೆಯುವುದು ಹೇಗೆಂಬ ಚಿಂತೆ ಮೂಡಿದೆ.ಮದ್ಯಾಹ್ನವಾದರೆ ಸಾಕು ಉಸ್ಸಪ್ಪ ಎಂಬ ನಿಸ್ಸತ್ವದ ಉಸಿರು ಹೊರಡುತ್ತದೆ.ಸಂಜೆ ಹೇಗಾದಿಪ್ಪಾ ಎನ್ನುತ್ತಾ ಗಿಡದ ಕೆಳಗೋ, ಗುಡಿಯ ಪ್ರಾಗಂಣದಲೋ ಕಾಲ ಕಳೆಯುವ ಹಳ್ಳಿಗರು ಬಿರುಬಿಸಿಲು ಹಾಗೂ ಸರ್ಕಾರವನ್ನು ಶಪಿಸುತ್ತಿರುತ್ತಾರೆ.

**ನೆಮ್ಮದಿ ಇಲ್ಲ:** ಬಿಸಿಲು ಮಳೆಗೆ ಅಂಜದ ರೈತರೂ ಸಹ ಬಿಸಿಲಿನ ತಾಪದ ಪರಿ ಕಂಡು ದಂಗಾಗಿದ್ದಾರೆ. ಬೆಳಿಗ್ಗೆ 11ರೊಳಗೆ ಕೃಷಿ ಕಾರ್ಯ ಪೂರೈಸಿ ಮನೆಗೆ ಮರುಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಸುಡು ಬಿಸಿಲಿನ ತಾಪಕ್ಕೆ ಊಟವೂ ಸೇರದು ನಿದ್ದೆಬರದಾಗಿ ನೆಮ್ಮದಿ ಇಲ್ಲದಂತಾಗಿದೆ. ವಿಪರೀತ ಸೆಕೆಯಿಂದ ಬಳಲುತ್ತಿರುವಾಗ ವಿದ್ಯುತ್ ಕಡಿತಗೊಳಿಸುತ್ತಿರುವುದು ಫ್ಯಾನ್ ಸಹಿತ ಬಳಸಲಾಗುತ್ತಿಲ್ಲ. ಹೀಗಾಗಿ ಸೆಖೆಯ ಜತೆ ಸೊಳ್ಳೆ ಕಾಟವೂ ಹೆಚ್ಚುತ್ತಿದೆ. ಪಟ್ಟಣದಲ್ಲಿ ಪ್ರತಿ ನಿತ್ಯ ಕನಿಷ್ಟ 20 ತಾಸು ವಿದ್ಯುತ್ ನೀಡಿದರೆ. ಹಳ್ಳಿಗಳಿಗೆ ಕೇವಲ 10-12 ಗಂಟೆ ಪೂರೈಸಲಾಗುತ್ತಿದೆ. ಇದರಿಂದ ಈ ಭಾಗದ ಜನರು ಪಟ್ಟಣಕ್ಕೆ ನೀಡಿದಷ್ಟೇ ವಿದ್ಯುತ್‌ನ್ನು ತಮಗೂ ನೀಡಬೇಕೆಂದು ಆಗ್ರಹಿಸುತ್ತಾರೆ.



**ಈ ಉರಿ ಬಿಸಿಲಿನಲ್ಲಿ ಯಾವುದೇ ಹೊಲ-ಮನೆಗೆಲಸಗಳನ್ನು ಕೂಡ ಮಾಡಲು ಆಗುತ್ತಿಲ್ಲ ಅಷ್ಟೊಂದು ವಿಪರೀತ ಮನುಜ ಸೇರಿದಂತೆ ಪಶು-ಪಕ್ಷಿಗಳು ನೀರಿಗಾಗಿ ಹಾಹಾಕಾರ ಪಡುವಂತಾಗಿದೆ. ಯಾಕರ ಬೇಗ್ ಮಳೆರಾಯ ಭೂಮಿಗೆ ಬರುವಲ್ಲ ಅನ್ನುಸುತೈತಿ ಈ ಜೀವ.**

■ **ಶಂಕ್ರಪ್ಪ ಗಾಂಜಿ, ಶರಣಪ್ಪ ಅರಕೇರಿ ಪ್ರಗತಿಪರ ರೈತ**

**ಈ ಪ್ರಸ್ತುತ ವರ್ಷ ಉಷ್ಣಾಂಶ 43 ಡಿಗ್ರಿ ಸೆಲ್ಸಿಯಸ್ ದಾಟಿರುವುದರಿಂದ ಬಿಸಿಲಿನ ಪ್ರಕರತೆ ಹೆಚ್ಚಾಗಿದೆ. ಇದರಿಂದ ಜನತೆ ಬಿಸಿಲಿನ ತಾಪಮಾನ ತಾಳದೆ ಗಗನಕ್ಕೇರಿರುವ ಎಳೆನೀರು, ಕಲ್ಲಂಗಡಿ, ಮಾವು ಸೇರಿದಂತೆ ಇತರೆ ಹಣ್ಣುಗಳ ಖರೀದಿಸುವ ಮೂಲಕ ಸೇವನೆಗೆ ಮುಂದಾಗಿದ್ದಾರೆ.**

■ **ಹನುಮಂತ ಹಣ್ಣು ವ್ಯಾಪಾರಿ**

**ಬೆಲೆ ದುಬಾರಿ:** ನೆತ್ತಿ ಸುಡುವ ಬಿಸಿಲಿನಿಂದಾಗಿ ಹಣ್ಣು,ತಂಪು ಪಾನೀಯಗಳ ಬೆಲೆಯಲ್ಲ ಏರಿಕೆಯಾಗಿವೆ. ಒಂದು ಕಲ್ಲಂಗಡ ಹಣ್ಣಿಗೆ ಕನಿಷ್ಟ 50-70ರೂ,ಬೆಲೆ ಎಳೆನೀರು ಒಂದಕ್ಕೆ 50ರು. ಇದೆ. ಐಸ್ಕ್ರೀಂ, ಬಾದಾಮಿ, ಹಾಲು, ಜೀರಾ ಕೊಲ್ಡ್ರಿಂಕ್ಸ್ ,ಹೀಗೆ ಎಲ್ಲವುಗಳ ಬೆಲೆ ಹೆಚ್ಚಳವಾಗಿದೆ.

**ಅರವಟ್ಟಿಗೆ ಇಳಿಮುಖ:** ಮಧ್ಯಾಹ್ನ 12 ರಿಂದ ಸಂಜೆ 5ರ ವರೆಗೆ ರಸ್ತೆಗಳಲ್ಲಿ ಜನಸಂಚಾರ ವಿರಳವಾಗುತ್ತಿದೆ. ಬಿಸಿಲಿನಿಂದ ರಕ್ಷಿಸಿಕೊಳ್ಳಲು ಕೆಲವರು ಕೊಡೆಯ ಮೊರೆ ಹೋಗಿದ್ದಾರೆ. ಈ ಹಿಂದೆ ಜನರ ಬಾಯಾರಿಕೆ ನೀಗಿಸಲು ಅಲ್ಲಲ್ಲಿ ಅರವಟಿಕೆಗಳು ಸಾಕಷ್ಟು ಕಂಡು ಬರುತ್ತಿದ್ದವು. ಆದರೆ ಈ ಸಲ ಅರವಟಿಕೆಗಳ ಸಂಖ್ಯೆಯಲ್ಲೂ ಇಳಿಮುಖವಾಗಿರುವದು ಸಮಸ್ಯೆ ಮತ್ತಷ್ಟು ಬಿಗಾಡುಸುವಂತಾಗಿದೆ.

# ಅಗ್ನಿಶಾಮಕ ವಾಹನ ಕಾಯ್ದಿರಿಸಿ: ಜಿಲ್ಲಾಧಿಕಾರಿ

◆ **ಕೊಪ್ಪಳ:** ಶ್ರೀಕ್ಷೇತ್ರ ಹುಲಿಗಿಯ ಶ್ರೀಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸ್‌ಗಳ ವ್ಯವಸ್ಥೆ ಮಾಡಬೇಕು ಮತ್ತು ಜಾತ್ರಾ ಸಮಯದಲ್ಲಿ ಅಗ್ನಿಶಾಮಕ ವಾಹನವನ್ನು ಕ್ಷೇತ್ರದಲ್ಲಿ ಕಾಯ್ದಿರಿಸುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಹುಲಿಗಿ ಜಾತ್ರೆಯ ಪ್ರಯುಕ್ತ ಸಾಕಷ್ಟು ಸಂಖ್ಯೆಯಲ್ಲಿ ಭಕ್ತಾದಿಗಳು ರಾಜ್ಯದ ವಿವಿಧ ಭಾಗಗಳಿಂದ ಕ್ಷೇತ್ರಕ್ಕೆ ಬರುತ್ತಿದ್ದು, ಭಕ್ತರ ಅನುಕೂಲಕ್ಕಾಗಿ ಬಂದು ಹೋಗಲು ಹೆಚ್ಚುವರಿ ಬಸ್ಸುಗಳನ್ನು ಸಂಚಾರಕ್ಕೆ ಒದಗಿಸಲು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಕೊಪ್ಪಳ, ಹೊಸಪೇಟೆ, ಕುಷ್ಟಗಿ ಗಂಗಾವತಿ, ಡಿಪೋಗಳ ವ್ಯವಸ್ಥಾಪಕರು ಅಗತ್ಯ ಕ್ರಮ ಕೈಗೊಳ್ಳಬೇಕು. ಭಕ್ತರ ಪ್ರಮಾಣಕ್ಕೆ ಯಾವುದೇ ರೀತಿಯ ಅನಾನುಕೂಲತೆಆಗದಂತೆ ಹೆಚ್ಚಿನಸಂಖ್ಯೆಯ ಬಸ್ಸುಗಳನ್ನು ಬಿಡುವ ಬಗ್ಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಣಯಿಸಲಾಗಿದೆ. ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಬಸ್‌ಗಳ ನಿಲುಗಡೆ ಸ್ಥಳ ಗುರುತಿಸಲು ಸಹ ಕ್ರಮ ವಹಿಸುವಂತೆ ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೊಪ್ಪಳ ವಿಭಾಗದ ವಿಭಾಗೀಯ ನಿಯಂತ್ರಕರು ಮತ್ತು ಇತರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಾತ್ರಾ ಅವಧಿಯಲ್ಲಿ ಅಗ್ನಿಶಾಮಕವಾಹನಕಾಯ್ದಿರಿಸಿ: ಜಾತ್ರಾ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ವಾಹನಗಳು ಬರುವುದರಿಂದ ಹಾಗೂ ವಿವಿಧ ರೀತಿಯ ಅಂಗಡಿಗಳು ಜಾತ್ರಾ ಅವಧಿಯಲ್ಲಿ ಹಾಕುವುದರಿಂದ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮೇ 10 ರಿಂದ 14ರ ವರೆಗೆ ನದಿತೀರದಲ್ಲಿ ಬೋಟ್, ರೋಪ್ ಹಾಗೂ ಒಂದು ಅಗ್ನಿಶಾಮಕ ವಾಹನವನ್ನು ಜಾತ್ರಾ ಅವಧಿಯಲ್ಲಿ ಕಾಯ್ದಿರಿಸಲು ಅಗ್ನಿಶಾಮಕ ಅಧಿಕಾರಿಗಳಿಗೆ ಕ್ರಮ ವಹಿಸಬೇಕು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶ್ರೀಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದ್ದಾರೆ.

## ದ್ವಿತೀಯ ದರ್ಜೆ ಸಹಾಯಕರ ವಿರುದ್ಧ ಕ್ರಮ ಕೈಗೊಳ್ಳಿ



◆ **ಸಿಂದಗಿ:** ರಾಂಪೂರಕೆಬಿಜೆಎನ್‌ಎಲ್ ಐಬಿಸಿಸಿ ಮತ್ತು ಎಂ ವಿಭಾಗ ಕಾರ್ಯಾಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ರಾಘವೇಂದ್ರ ಹಾದಿಮನಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಪಿರೂ ಕೆರೂರ ಅವರು ಮುಖ್ಯ ಎಂಜನಿಯರ್ ಅವರಿಗೆ ಮನವಿ ಸಲ್ಲಿಸಿದರು.

ಇಲಾಖೆಯ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ರಾಘವೇಂದ್ರ ಆರ್. ಹಾದಿಮನಿ ಅವರು ಕಛೇರಿಗೆ ಬಂದ ರೈತರೊಡನೆ ಅನುಚಿತವಾಗಿ ವರ್ತನೆ ಮಾಡುತ್ತಾರೆ. ಜೊತೆಗೆ ಕರ್ತವ್ಯದ ಸಮಯದಲ್ಲಿ ಕಛೇರಿ ಬಿಟ್ಟು ಹೆಚ್ಚಿಗೆ ಹೊರಗೆ ಇರುತ್ತಾರೆ. ಸರ್ಕಾರದ ಸುತ್ತೋಲೆ ಪ್ರಕಾರ 5 ವರ್ಗಳಿಗಿಂತ ಹೆಚ್ಚಿಗೆ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವ ಆದೇಶವಿದೆ. ಈ ರೀತಿ ಸರ್ಕಾರದ ಆದೇಶವಿದ್ದರೂ ಸಹ ಇವರು ಅನೇಕ ವರ್ಷಗಳಿಂದ ಇಲ್ಲಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ವರ್ಗಾವಣೆ ಇಲ್ಲಿಯವರೆಗೂ ಆಗಿರುವುದಿಲ್ಲ, ಇನ್ನೂ ಕರ್ತವ್ಯದ ಸಮಯದಲ್ಲಿ ಗುರುತಿನ ಚೀಟಿ ಧರಿಸದೇ ಬೇಜವಾಬ್ದಾರಿತನದಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ದೂರಿದರು.

ತಾಲೂಕಾಧ್ಯಕ್ಷ ಸಿದ್ದು ಬೀರಗೊಂಡ, ಉಪಾಧ್ಯಕ್ಷ ಭೀಮು ಇಂಗಳಗಿ ಸುನೀಲ ಜಾಬಾನವರ, ಯೂನಿಸ್ ತಾಂಬೋಳ್ಳಿ, ಮಶಾಕಸಾಬ್ ವಾಲೀಕಾರ, ಮಲಕು ಹಿರೇಕುರುಬರ ಇದ್ದರು.



**ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡರು.**

# ಬಿಸ್ಲಕೊಪ್ಪದಲ್ಲಿ ರಸ್ತೆ ತಡೆದು ಪ್ರತಿಭಟನೆ

◆ **ಶಿರಸಿ:** ತಾಲೂಕಿನ ಶಿರಸಿ-ಹಾವೇರಿ ರಾಷ್ಟ್ರೀಯ ಹೆದ್ದಾರಿ (766ಇ) ಕಾಮಗಾರಿಯ ಅರೆಬರೆ ಸ್ಥಿತಿಯಿಂದ ಆಕ್ರೋಶಗೊಂಡ ನೂರಾರು ಸಾರ್ವಜನಿಕರು ಹಾಗೂ ರೈತರು, ಬಿಸ್ಲಕೊಪ್ಪದಲ್ಲಿ ಬೃಹತ್ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.



ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ಮಂಗಳವಾರ ನಡೆದ ಈ ಪ್ರತಿಭಟನೆಯಲ್ಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಗುತ್ತಿಗೆದಾರರ ವಿಳಂಬ ಧೋರಣೆಯ ವಿರುದ್ಧ ತೀವ್ರ ಧಿಕ್ಕಾರ ಕೂಗಲಾಯಿತು.

ವಿಶೇಷವಾಗಿ ಚಿಪಗಿ ನಾಕಾದಿಂದ ಮಳಲಗಾಂವ ವರೆಗಿನ ಸುಮಾರು 8 ಕಿ.ಮೀ. ವ್ಯಾಪ್ತಿಯಲ್ಲಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ಏಳುತ್ತಿರುವ ಧೂಳು ಹಾಗೂ ಮಳೆಯಾದಾಗ ನಿರ್ಮಾಣವಾಗುವ ಕೆಸರಿನಿಂದಾಗಿ ವಾಹನ ಸವಾರರು ನಿರಂತರ ಅಪಘಾತಕ್ಕೀಡಾಗಿ ಪ್ರಾಣಹಾನಿ ಸಂಭವಿಸುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು. ಈ ವೇಳೆ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಸುನೀಲ ನಾಯ್ಕ ಮಳಲಗಾಂವ ಅವರು, ಪರಿಸರ ಇಲಾಖೆಯ ಪೂರ್ವಾನುಮತಿ ಪಡೆಯದೆ ಕಾಮಗಾರಿ ಆರಂಭಿಸಲಾಗಿದೆ. ಅವೈಜ್ಞಾನಿಕವಾಗಿ ಕಲ್ವರ್ಟ್‌ಗಳನ್ನು ನಿರ್ಮಿಸಿರುವುದು ಸಂಚಾರಕ್ಕೆಕಂಟಕವಾಗಿದೆ. ಮಳೆಗಾಲ ಆರಂಭಕ್ಕೂ ಮುನ್ನ ಡಾಂಬರೀಕರಣ ಪೂರ್ಣಗೊಳಿಸದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸ್ಥಳಕ್ಕೆ ಅಧಿಕಾರಿಗಳು ಬಾರದಿರುವುದಕ್ಕೆ ಆಕ್ರೋಶಗೊಂಡ ಪ್ರತಿಭಟನಾಕಾರರು, ಹೆದ್ದಾರಿ ಪ್ರಾಧಿಕಾರದ ಬ್ಯಾನರ್‌ಗೆ ಹಾರ ಹಾಕಿ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ವಿಭಿನ್ನವಾಗಿ ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ವಿಡಿಯೋ ಕಾಲ್ ಮೂಲಕ ಸಂಪರ್ಕಕ್ಕೆ ಬಂದ ಪ್ರಾಧಿಕಾರದ ಯೋಜನಾ ನಿರ್ದೇಶಕ ಶಿವಕುಮಾರ್, ಗುತ್ತಿಗೆದಾರರಿಗೆ ಕಾಮಗಾರಿ ಚುರುಕುಗೊಳಿಸಲು 15 ದಿನಗಳ ಗಡುವು ನೀಡಲಾಗಿದೆ ಎಂದು ತಿಳಿಸಿದರು. ಅಲ್ಲದೆ, ಮೇ 7ರಂದು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರ ಅಹವಾಲು ಸ್ವೀಕರಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಸ್ಥಳೀಯ ನಿವಾಸಿಗಳು, ವಾಹನ ಚಾಲಕರು ಹಾಗೂ ರೈತ ಮುಖಂಡರು ಈ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಕಾಮಗಾರಿ ಪ್ರಾರಂಭಿಸಲು ಆಗ್ರಹಿಸಿ ಮನವಿ

◆ **ಆಲಮಟ್ಟಿ:** ಕಾಲುವೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಜಮೀನುಗಳ ರೈತರಿಗೆ ಮೊದಲು (11)1 ನೋಟಿಸ್ ನೀಡಿ ಕಾಮಗಾರಿ ಪ್ರಾರಂಭಿಸಬೇಕೆಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಎಂ.ಬಿ.ನಾಗಠಾಣ ಇವರಿಗೆ ಮನವಿ ಸಲ್ಲಿಸಲಾಯಿತು.



ಜಿಲ್ಲಾಧ್ಯಕ್ಷ ಉಮೇಶ ವಾಲೀಕಾರ ಮಾತನಾಡಿ, ಮುಳವಾಡ ಏತ ನೀರಾವರಿಗೆ ಸಂಬಂಧಿಸಿದ ಬಸವನ ಬಾಗೇವಾಡಿ ಬಳಿ ಹಾಯ್ದು ಹೋಗಿರುವ ಸಂಕನಾಳ ಶಾಖಾ ಕಾಲುವೆಯು ನರಸಲಗಿ, ಅಗಸಬಾಳ, ಸಂಕನಾಳ, ಕಣಕಾಲ, ಸೋಲವಾಡಗಿ, ಕನ್ನಾಳ, ವಡವಡಗಿ, ಜಾಯವಾಡಗಿ ಈ ಗ್ರಾಮಗಳ ವ್ಯಾಪ್ತಿಯಲ್ಲಿ ಹಾಯ್ದು ಹೋಗಿದ್ದು ಈ ಮೊದಲು ಸಂಕನಾಳದ ವರೆಗೆ ಕಾಲುವೆ ಕಾಮಗಾರಿ ಮುಗಿದಿರುತ್ತದೆ ಆದರೆ ಕಾನ್ನಾಳ ಗ್ರಾಮದ ವರೆಗೆ ಇನ್ನು ವಿತರಣಾ ಕಾಲುವೆ ಕಾಮಗಾರಿ ಬಾಕಿ ಉಳಿದಿರುತ್ತದೆ. ಈ ಹಿಂದೆ ಭಾಕಿ ಉಳಿದ ವಿತರಣಾ ಕಾಲುವೆ ಕಾಮಗಾರಿ ಮುಕ್ತಾಯಗೊಳಿಸಲು ಹೋರಾಟ ಮಾಡಲಾಗಿತ್ತು ಹೋರಾಟದಫಲವಾಗಿ ಭಾಕಿ ಇಲಾಖೆ ಎಚ್ಚೆತ್ತುಕೊಂಡು ಉಳಿದ ವಿತರಣಾ ಕಾಲುವೆಯ ಕಾಮಗಾರಿ ಚಾಲನೆ ದೊರೆತಿತ್ತು ಎಂದರು.

ಆದರೆ ಕಾಲುವೆಯ ನಿರ್ಮಾಣಕ್ಕೆ ಭೂಮಿ ಕಳೆದುಕೊಳ್ಳುವ ರೈತರಿಗೆ ನೋಟಿಸ್ ನೀಡದೆ ಕಾಮಗಾರಿಗೆ ಮುಂದಾಗಿದ್ದರು. ಆದರೆ ರೈತರು ನೋಟಿಸ್ ನೀಡದೆ ಕಾಮಗಾರಿ ಮಾಡಬಾರದೆಂದು ತಡೆ ಒಡ್ಡಿದ್ದಾರೆ. ಇದರಿಂದ ಕಾಮಗಾರಿ ಸ್ಥಗಿತಗೊಂಡಿದ್ದು, ಬೇಸಿಗೆ ಬಿಸಿಲಿನ ಪ್ರಖರತೆ ಹೆಚ್ಚಿರುವದರಿಂದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜನ ಹಾಗೂ ಜಾನುವಾರಗಳಿಗೆ ಕುಡಿಯುವ ನೀರಿನ ಸಮಸ್ಯೆ ಗಂಭೀರತೆ ಪಡದಿದೆ 4-5 ಕಿ.ಮಿ ವರೆಗೆ ಹೋಗಿ ನೀರು ತರುವ ಪರಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ರೈತರ ಬೇಡಿಕೆಯಂತೆ ಅವರಿಗೆ ನೋಟಿಸ್ ಕೊಟ್ಟು ಬಾಕಿ ಉಳಿದ ಕಾಮಗಾರಿಯನ್ನು ಕೂಡಲೆ ಪ್ರಾರಂಭಿಸಬೇಕು ಎಂದರು

ಶೀಘ್ರದಲ್ಲಿ ನೋಟಿಸ್ ನೀಡಿ ಕಾಮಗಾರಿಗೆ ಚಾಲನೆ ನೀಡದಿದ್ದರೆ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ಪ್ರಾರಂಭಿಸಬೇಕಾಗುತ್ತದೆಂದು. ಉಮೇಶ ವಲೀಕಾರ ಎಚ್ಚರಿಕೆ ನೀಡಿದರು. ಅರವಿಂದ ಕುಲಕರ್ಣಿ, ಪ್ರಲ್ಹಾದ ನಾಗರಾಳ, ಸಾಯಬಣ್ಣ ಅಂಗಡಿ, ಇಬ್ರಾಹೀಂ ವಾಲೀಕಾರ, ಮಲ್ಲಪ್ಪ ಹಳೆನಿಡಗುಂದಿ, ಬಸಪ್ಪ ತೋಳಮಟ್ಟಿ, ಶ್ರೀಶೈಲ ಕಲಾದಗಿ, ಗುರಪ್ಪ ಪೂಜಾರಿ, ಸಂದೀಪ ನಾಗರಡ್ಡಿ, ಸೋಮೇಶ ನಾಗರಡ್ಡಿ, ಮುದಕಪ್ಪ ಮೇಟಿ,ಮಂಜು ಬಿರಾದಾರ ಸೇರಿದಂತೆ ಮತ್ತಿತರರಿದ್ದರು.

# ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ

◆ **ಬೈಲಹೊಂಗಲ:** ಶತಮಾನ ಕಂಡ ನಾಡಿನ ಹೆಮ್ಮೆಯ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್‌ಗೆ ಕನ್ನಡಿಗರೆಲ್ಲರೂ ಆಜೀವ ಸದಸ್ಯರಾಗಿರಿ ಎಂದು ಬಳ್ಳಾರಿಯ ಶೆಟ್ರ ಗುರುಶಾಂತಪ್ಪ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ತರ್ಕಶಾಸ್ತ್ರ ಉಪನ್ಯಾಸಕ ಡಾ. ಸಂತೋಷ ಶಂಕರಪ್ಪ ಯಕ್ಕುಂಡಿ ಹೇಳಿದರು.



ಕನ್ನಡ ಸಾಹಿತ್ಯ ಪರಿಷತ್ ಬೈಲಹೊಂಗಲ ತಾಲೂಕು ಘಟಕದಿಂದ ನಗರದ ಕಿತ್ತೂರು ರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆ ಎಚ್.ವಿ.ಕೌಜಲಗಿ ಕಾನೂನು ಮಹಾವಿದ್ಯಾಲಯದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುತ್ತ ಅವರು ಮಾತನಾಡಿದರು. ಎಚ್. ವ್ಹಿ. ಕೌಜಲಗಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಪಿ.ಎನ್. ಪಾಟೀಲ , ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ಎನ್.ಆರ್. ಠಕ್ಕಾಯಿ ಮಾತನಾಡಿದರು.

2025-26ನೆಯ ಸಾಲಿನ ಎಸ್.ಎಸ್.ಎಲ್.ಸಿಯಲ್ಲಿ ತಾಲೂಕಿನಲ್ಲಿ ಅತ್ಯುತ್ತಮ ಅಂಕ ಗಳಿಸಿದ ತಾಜೀನ್ ಮಕ್ತುಮಹುಸೇನ ಸಂಗೊಳ್ಳಿ, ಸಾಕ್ಷಿ ಶಿವಶಂಕರ ನೇಸರಗಿ, ನಿಸರ್ಗ ಮಹೇಶ ಹುದ್ದಾರ ಹಾಗೂ ಕನ್ನಡ ಮಾಧ್ಯಮದಲ್ಲಿ ಅತ್ಯುತ್ತಮ ಅಂಕ ಗಳಿಸಿದ ರವಿ ಫಕೀರಪ್ಪ ಗೋಡಿ, ಶ್ರೇಯಾ ಉಮೇಶ ಹೂಲಿಮಠ, ದೀಪಾ ಸಿದ್ದಪ್ಪ ಲಕ್ಕುಂಡಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ, ತಾಲೂಕು ಕಸಾಪ ಗೌರವ ಕಾರ್ಯದರ್ಶಿ ಮಂಜುಳಾ ಶೆಟ್ಟರ, ಪದಾಧಿಕಾರಿಗಳಾದ ಪ್ರೇಮಕ್ಕ ಅಂಗಡಿ, ಶ್ರೀಕಾಂತ ಉಳ್ಳೇಗಡ್ಡಿ, ಲಕ್ಷ್ಮೀ ಮುಗಡ್ಲಿಮಠ, ಕಾಲೇಜಿನ ಸಿಬ್ಬಂದಿಗಳಾದ ಎಂ.ಎಸ್.ಪಟ್ಟಣಶೆಟ್ಟಿ, ಡಿ.ಬಿ.ನರಗುಂದ, ಆಮ್ರೋಜ್ ಜೋಸೆಫ್, ಪದ್ಮಶ್ರೀ ಪಾಟೀಲ, ಸುನಿಲ ಬಾಳಿ ಹಾಗೂ ವಿದ್ಯಾರ್ಥಿಗಳು, ಪಾಲಕರು, ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ಸಂದೀಪ ಹೆದ್ದೂರಿ ಪ್ರಾರ್ಥಿಸಿದರು. ಸೈದುಸಾಬ ದಬಾಡಿ ಸ್ವಾಗತಿಸಿದರು. ಪವಿತ್ರಾ ಪಚ್ಚೇದಾರ ವಂದಿಸಿದರು. ಕಸಾಪ ಪದಾಧಿಕಾರಿಗಳಾದ ಸಂತೋಷ ಹಡಪದ ನಿರೂಪಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ರಾಜು ಹಕ್ಕಿ ನಿರ್ವಹಿಸಿದರು.

## ಮಹಾಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವ

◆ **ಬೆಳಗಾವಿ:** ಕಂಗ್ರಾಳಿ ಬಿ.ಕೆ ಗ್ರಾಮದಲ್ಲಿ ನಡೆದ ಮಹಾಲಕ್ಷ್ಮಿ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾದ ಮಹಾ ಮಂಗಳಾರತಿ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಂಗಳವಾರ ಸಂಜೆ ಭಕ್ತಿಭಾವದಿಂದ ಭಾಗವಹಿಸಿದರು.

ಗ್ರಾಮದ ಅಧಿದೇವತೆಯಾದ ಮಹಾಲಕ್ಷ್ಮಿ ದೇವಿಯ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ಸಚಿವೆ, ದೇವಿಯ ದರ್ಶನ ಪಡೆದು ನಾಡಿನ ಸಮಸ್ತ ಜನತೆಗೆ ಸುಖ, ಶಾಂತಿ ಮತ್ತು ಸಮೃದ್ಧಿ ಲಭಿಸಲಿ ಎಂದು ಪ್ರಾರ್ಥಿಸಿದರು. ಮಂಗಳಾರತಿ ವೇಳೆ ದೇವಾಲಯದ ಸುತ್ತಮುತ್ತ ಭಕ್ತರ ದಂಡೇ ಹರಿದು ಬಂದಿದ್ದು, ಆಧ್ಯಾತ್ಮಿಕ ವಾತಾವರಣಕ್ಕೆ ಮತ್ತಷ್ಟು ಮೆರುಗು ನೀಡಿತು. ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದಲ್ಲಿ ಸಂಭ್ರಮ ಮನೆಮಾಡಿದ್ದು, ವಿವಿಧ ಧಾರ್ಮಿಕ ವಿಧಿ-ವಿಧಾನಗಳು ಭಕ್ತಿಭಾವದಿಂದ ನೆರವೇರಿದವು. ಹಲವು ವರ್ಷಗಳ ಬಳಿಕ ನಡೆಯುತ್ತಿರುವ ಈ ಮಹೋತ್ಸವಕ್ಕೆ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಪ್ರದೇಶದ ಭಕ್ತರು ಭಾರೀ ಸಂಖ್ಯೆಯಲ್ಲಿ ಆಗಮಿಸಿ, ದೇವಿಯ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಗ್ರಾಮದ ಹಿರಿಯರು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಅಪಾರ ಸಂಖ್ಯೆಯ ಭಕ್ತಾಧಿಗಳು ಉಪಸ್ಥಿತರಿದ್ದರು.



## ಮಕ್ಕಳಿಂದ ಯಕ್ಷಗಾನ ಪ್ರದರ್ಶನಕ್ಕೆ ಚಾಲನೆ

◆ **ಸಿದ್ದಾಪುರ:** ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವಲ್ಲಿ ಯಕ್ಷಗಾನದಂತಹ ಕಲೆಗಳ ಪಾತ್ರ ಅನನ್ಯವಾದುದು ಎಂದು ಶಾಸಕ ಭೀಮಣ್ಣ ಟಿ. ನಾಯ್ಕ ಅಭಿಪ್ರಾಯಪಟ್ಟರು.



ತಾಲೂಕಿನ ಕೊಂಡ್ಲಿಯಲ್ಲಿ ಶ್ರೀ ಆಂಜನೇಯ ಯಕ್ಷಗಾನ ಕಲಾಕೇಂದ್ರ ಕೊಂಡ್ಲಿ ವತಿಯಿಂದ ತರಬೇತಿ ಪಡೆದ ಮಕ್ಕಳ ಯಕ್ಷಗಾನ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಆಧುನಿಕ ಯುಗದಲ್ಲಿ ಮಕ್ಕಳು ಮೊಬೈಲ್ ಮತ್ತು ಟಿವಿಗಳಿಗೆ ದಾಸರಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹಳ್ಳಿಗಳಲ್ಲಿ ಮಕ್ಕಳಿಗೆ ಯಕ್ಷಗಾನದಂತಹ ಗಂಡುಕಲೆಯ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ಯಕ್ಷಗಾನವು ಕೇವಲ ಮನರಂಜನೆಯಲ್ಲ, ಅದು ನಮಗೆ ಪುರಾಣಗಳ ಜ್ಞಾನ ಮತ್ತು ಸಂಸ್ಕಾರವನ್ನು ಕಲಿಸುತ್ತದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ, ವೇಷಭೂಷಣ ವ್ಯವಸ್ಥಾಪಕ ಎಂ.ಆರ್.ನಾಯ್ಕ ಕರ್ಸೆಬೈಲು, ಬಾಲಕೃಷ್ಣ ನಾಯ್ಕ ಕೆ.ಟಿ.ಹೊನ್ನೆಗುಂಡಿ, ಉದ್ಯಮಿ ದಿವಾಕರ ನಾಯ್ಕ ಹೆಮ್ಮನಬೈಲ, ರಾಜೇಂದ್ರ ಮಡಿವಾಳ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದು ಮಕ್ಕಳ ಕಲಾ ಪ್ರತಿಭೆಯನ್ನು ಹೊರತರುವುದು ಸ್ತುತ್ಯ ಕಾರ್ಯ ಎಂದರು. ಅಧ್ಯಕ್ಷತೆಯನ್ನು ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಮೋಹನ ನಾಯ್ಕ ಕೊಂಡ್ಲಿ ವಹಿಸಿದ್ದರು. ಸಂಘಟನೆಯ ಅಧ್ಯಕ್ಷೆ ವಿಜಯಾ ನಾಯ್ಕ, ಕಾರ್ಯದರ್ಶಿ ವೀಣಾ ನಾಯ್ಕ ಇತರರು ಪಾಲ್ಗೊಂಡಿದ್ದರು.

ಶ್ರೀ ಆಂಜನೇಯ ಯಕ್ಷಗಾನ ಕಲಾಕೇಂದ್ರದಲ್ಲಿ ತರಬೇತಿ ಪಡೆದ ಪುಟ್ಟ ಮಕ್ಕಳು ಪ್ರದರ್ಶಿಸಿದ ''ಕನಕಾಂಗಿ ಕಲ್ಯಾಣ'' ಯಕ್ಷಗಾನ ಪ್ರಸಂಗವು ನೆರೆದಿದ್ದಪ್ರೇಕ್ಷಕರಮನಸೂರೆಗೊಂಡಿತು. ಮಕ್ಕಳ ಅಭಿನಯ, ಸಂಭಾಷಣೆ ಮತ್ತು ನೃತ್ಯ ವೈಖರಿಗೆ ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿ, ಕಲಾವಿದರನ್ನು ಮತ್ತು ಯಕ್ಷಗಾನ ಗುರು ಶಿವು ಶಿರಳಗಿ ಅವರನ್ನು ಗೌರವಿಸಿದರು.

## ಕರ್ತವ್ಯಲೋಪ: ವೈದ್ಯಾಧಿಕಾರಿ ಅಮಾನತು

◆ **ವಿಜಯಪುರ:** ಕರ್ತವ್ಯ ಲೋಪ ಆರೋಪದ ಹಿನ್ನೆಲೆ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ವಂದಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಡಾ.ರಾಜಶೇಖರ ಸಜ್ಜನ ಅವರನ್ನು ಸರ್ಕಾರಿ ಸೇವೆಯಿಂದ ಅಮಾನತು ಮಾಡಲಾಗಿದೆ.

ಡಾ.ಸಜ್ಜನ, ಆರೋಗ್ಯ ಕೇಂದ್ರಕ್ಕೆ ಪ್ರತಿ ದಿನ ಕೆಲಸಕ್ಕೆ ಹಾಜರಾಗದೇ, ಮದ್ಯ ಕುಡಿದು ಬಂದು ಆಸ್ಪತ್ರೆಯಲ್ಲೇ ಮಲಗಿ, ಅಲ್ಲಿಯೇ ಮೂತ್ರ ವಿಸರ್ಜನೆ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಅಲ್ಲದೇ, ಕ್ಷೇತ್ರದ ಶಾಸಕ, ಸಚಿವ ಶಿವಾನಂದ ಪಾಟೀಲ ಅವರು ಈಚೆಗೆ ಆಸ್ಪತ್ರೆಗೆ ಭೇಟಿ ನೀಡಿದ್ದ ವೇಳೆ ಆಸ್ಪತ್ರೆಗೆ ಬೀಗ ಹಾಕಲಾಗಿತ್ತು. ಬೇಜವಾಬ್ದಾರಿ ಮತ್ತು ಕರ್ತವ್ಯ ಲೋಪ ಎಸಗಿರುವ ವೈದ್ಯರನ್ನು ಅಮಾನತು ಮಾಡಬೇಕು ಎಂದು ಸಚಿವರು ಸೂಚಿಸಿದ್ದರು.

ದುರ್ನಡತೆ, ಕರ್ತವ್ಯ ಲೋಪ ಮತ್ತು ಬೇಜವಾಬ್ದಾರಿ ಆರೋಪದ ಹಿನ್ನೆಲೆಯಲ್ಲಿ ವೈದ್ಯ ಡಾ.ರಾಜಶೇಖರ ಅವರಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಕಾರಣ ಕೇಳಿ ನೀಡಿದ್ದ ನೋಟಿಸ್‌ಗೂ ಅವರು ಉತ್ತರಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಇಲಾಖೆ ವಿಚಾರಣೆ ಬಾಕಿಇರಿಸಿಸೇವೆಯಿಂದಸೇವೆಯಿಂದ ಅಮಾನತು ಮಾಡಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಜೀವನಾಂಶ ಭತ್ಯೆ ಪಡೆಯುವ ಸಲುವಾಗಿ ವೈದ್ಯ ಡಾ.ರಾಜಶೇಖರ ಸಜ್ಜನ ಅವರನ್ನು ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಬೂದಿಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಅಲ್ಲದೇ, ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡುವಂತಿಲ್ಲ ಎಂದು ಅಮಾನತು ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

## ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ: ದೇಸಾಯಿ

◆ **ಗಲಗಲಿ:** ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿದರೆ ಸುಸಂಕೃತ ಸಮಾಜವನ್ನು ನಾವು ನಿರೀಕ್ಷಿಸಲು ಸಾಧ್ಯ ಎಂದು ಖ್ಯಾತ ಪರಿಸರ ತಜ್ಞ ಎಂ.ಆರ್.ದೇಸಾಯಿ ಅಭಿಪ್ರಾಯಪಟ್ಟರು.

ಅವರು ಗಲಗಲಿಯ ಗಾಲವ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸೋಮವಾರದಂದು ಗಾಲವ ಮಹರ್ಷಿ ಚಿಂತನ ವೇದಿಕೆಯು ಆಯೋಜಿಸಿದ್ದ 200ನೇ ಸತ್ಸಂಗದ ವಿಶೇಷ ಸಾಪ್ತಾಹಿಕ ಚಿಂತನಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವು ಉತ್ತಮವಾದದನ್ನು ಪ್ರಶಂಶಿಸುವದರೊಂದಿಗೆ, ಕೆಟ್ಟದ್ದನ್ನು ಕಂಡಾಗ ಪ್ರತಿಭಟಿಸುವ ಮನೋಭಾವ ಬೆಳೆಸಿಕೊಳ್ಳಬೇಕಾಗಿದೆ ಎಂದರು.



ಉಪನ್ಯಾಸ ನೀಡಿದ ಖ್ಯಾತ ಜಾನಪದ ವಿದ್ವಾಂಸ ಬಿ.ಆರ್.ಪೊಲೀಸ ಪಾಟೀಲ ಮಾತನಾಡಿ, ಸಮಾಜದಲ್ಲಿ ನಡೆಯುತ್ತಿರುವ ಅನಾಚಾರಗಳನ್ನು ಮಟ್ಟಹಾಕಲು ನಾವು ಶ್ರಮಿಸಬೇಕಾಗಿದೆ ಎಂದರಲ್ಲದೇ ತಮ್ಮ ಸಂಗೀತಬಳಗದ ಜೊತೆಗೆ ಲಾವಣಿಪದಗಳನ್ನು ಪ್ರಸ್ತುತಪಡಿಸಿ ಸಭಿಕರಿಗೆ ರಸದೌತಣ ನೀಡಿದರು.

ಕಾಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ಸಹಕಾರಿ ಧುರೀಣ ಬಸವೇಶ್ವರ ಸೊಸೈಟಿ ಅಧ್ಯಕ್ಷ ನಿಂಗಣ್ಣ ಗೋಳಿಪಲ್ಲೆ ಕಲುಷಿತ ಸಮಾಜದಲ್ಲಿ ಉತ್ತಮ ವಿಚಾರಗಳನ್ನು ಮೆಲುಕು ಹಾಕಲು ಸಂತ್ಸಂಗ ಸೇರಿದಂತೆ ಇಂಥಹ ಚಿಂತನಾಗೋಷ್ಠಿಗಳು ಸಹಕಾರಿಯಾಗುತ್ತವೆ. ನಮ್ಮ ನಿತ್ಯದ ಕಾರ್ಯಗಳ ಒತ್ತಡದ ಹಾಗೂ ಜಂಜಾಟದ ಬದುಕಿನಲ್ಲಿ ವಾರಕ್ಕೊಂದು ದಿನ ಕೆಲಸಮಯವಾದರೂ ಸತ್ಸಂಗದ ಮೊರೆಹೊಗಬೇಕಾದ ಅವಶ್ಯಕ ಇದೆ ಎಂದರು.

ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ವೇದಿಕೆ ಮೇಲಿದ್ದರು. ಮೋಹನ ದೇಸಾಯಿ, ಅದೃಶಪ್ಪ ದೇಸಾಯಿ, ಸುನೀಲಗೌಡ ನ್ಯಾಮಗೌಡ, ಮುರಗಯ್ಯ ಕಾಶಿ, ವಿ ಜಿ ಬಾಳಶೆಟ್ಟಿ, ದೊಡ್ಡಣ್ಣ ದೇಸಾಯಿ, ಆಯ್ ಜಿ ಪುರಾಣಿಕ, ಶಶಿಕುಮಾರ ದೇಸಾಯಿ, ರಾಚಯ್ಯ ಪೂಜಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಧಾರವಾಡದ ಬಾಲ ವಿಕಾಸ ಅಕ್ಯಾಡೆಮಿ ಸದಸ್ಯ ಎಚ್.ವೈ. ಜರಾಳಿ ಸ್ವಾಗತಿಸಿದರು. ಸಂದೀಪ ಘೋಡೆ ಸಂಗಮೇಶ ಗಿರಿಸಾಗರ ನಿರೂಪಸಿದರು. ರವಿ ಗೋಕಾವಿ ವಂದಿಸಿದರು.

# ದೂರು, ಪ್ರತಿ ದೂರು ದಾಖಲು

**ರಾಯಚೂರು:** ಪತ್ನಿಯ ತವರು ಮನೆಯವರಿಂದ ತಂದೆ, ತಾಯಿ, ಸಹೋದರ ಹಾಗೂ ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ ಎಂದು ಹಲ್ಲೆಗೆ ಒಳಗಾಗಿರುವ ಶಿವರಾಜ್ ಎನ್ನುವವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಶಿವರಾಜ್ ಪತ್ನಿ ಶೋಭಾ ಕೂಡಾ ವರದಕ್ಷಿಣೆ ಕಿರುಕುಳ ದೂರನ್ನು ಮಹಿಳಾ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದಾರೆ.

ನಗರದ ರೆಹಮತ್ ಕಾಲೋನಿ ನಿವಾಸಿ, ಬ್ಯಾಂಕ್ ಉದ್ಯೋಗಿ ಶಿವರಾಜ್ ಅವರ ಕುಟುಂಬದ ಸದಸ್ಯರೊಂದಿಗೆ ಮನೆಯಲ್ಲಿದ್ದ ಸಂದರ್ಭದಲ್ಲಿ ಅವರ ಪತ್ನಿ ಶೋಭಾ ಅವರ ಕುಟುಂಬಸ್ಥರು ಏಕಾಏಕಿ ಮನೆಗೆ ನುಗ್ಗಿ ಮನೆಯಲ್ಲಿದ್ದವರ ಮೇಲೆ ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆ. ಈ ಘಟನೆಯಲ್ಲಿ ಲಕ್ಷ್ಮೀ, ಶಿವರಾಜ್, ವೆಂಕಟೇಶ್, ದೇವೇಂದ್ರಪ್ಪ ತೀವ್ರವಾಗಿ ಗಾಯಗೊಂಡಿದ್ದಾರೆ. ಇವರಲ್ಲಿ ದೇವೇಂದ್ರಪ್ಪಕೋಮಾಸ್ಥಿತಿಯಲ್ಲಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೃಷಿಇಲಾಖೆಅಧಿಕಾರಿಯಾಗಿರುವ ಶೋಭಾ ಮತ್ತು ಬ್ಯಾಂಕ್ ಉದ್ಯೋಗಿ ಶಿವರಾಜ್ ದಂಪತಿ ನಡುವಿನ ಕೌಟುಂಬಿಕ ಕಲಹ ಇತ್ತು. ಈಗಾಗಲೇ ಕೌಟುಂಬಿಕ ನ್ಯಾಯಾಲಯ ಮೆಟ್ಟಿಲು ಏರಿ ಒಂದಾಗಿದ್ದ ದಂಪತಿಗಳು ಮನೆಯಲ್ಲಿ ಸಣ್ಣಪುಟ್ಟ ವಿಚಾರಕ್ಕೆ ಜಗಳ ತೆಗೆದು ಗಲಾಟೆ ನಡೆಯುತ್ತಿತ್ತು. ಕುಟುಂಬಸ್ಥರನ್ನು ಕರೆಯಿಸಿ ಅತ್ತೆ, ಮಾವ, ಪತಿ ವಿರುದ್ಧ ಸೊಸೆ ಹಲ್ಲೆ ಮಾಡಿಸಿದ್ದಾಳೆ ಎಂದು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಈಡಿಗ ಸಮಾಜದ ಮುಖಂಡ ತಾಯನಗೌಡ, ರಂಜಿತ್ ಕುಮಾರ್, ಶೋಭಾ, ಅಕ್ಷಯ್ ಸೇರಿ ಐದು ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಗಳನ್ನ ಬಂಧಿಸುವಂತೆ ಹಲ್ಲೆಗೊಳಗಾದ ಕುಟುಂಬಸ್ಥರು ಒತ್ತಾಯಿಸಿದ್ದಾರೆ.

# ಇಡಗುಂಜಿಯಲ್ಲಿ ಅಂಗಾರಕ ಸಂಕಷ್ಠಿ

**ಹೊನ್ನಾವರ:** ತಾಲೂಕಿನ ಇಡಗುಂಜಿಯ ಶ್ರೀ ವಿನಾಯಕ ದೇವಸ್ಥಾನದಲ್ಲಿ ಅಂಗಾರಕ ಸಂಕಷ್ಠಿಯಪ್ರಯುಕ್ತಮಂಗಳವಾರ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ನಾಡಿನ ವಿವಿಧೆಡೆಯಿಂದ ಆಗಮಿಸಿದ ಭಕ್ತರು ದೇವರಿಗೆ ಅಭಿಷೇಕ, ಆರತಿ, ಪಂಚಕಜ್ಜಾಯ, ಹಣ್ಣುಕಾಯಿ ಮುಂತಾದ ಸೇವೆ ಸಲ್ಲಿಸಿದರು. ಶ್ರೀಕ್ಷೇತ್ರ ನೂರಾರು ಗಣಹವನ ಹಾಗೂ ಸತ್ಯನಾರಾಯಣ ಪೂಜೆ ನಡೆದವು. ಭಕ್ತರು ಸರತಿ ಸಾಲಿನಲ್ಲಿ ಬಂದು ದೇವರ ದರ್ಶನ ಪಡೆದರು.



## ಸಂರಕ್ಷಣೆಗೆ ಇಲಾಖೆ ಮುಂದಾಗಲಿ

# ಕಣ್ಮರೆಯಾಗುತ್ತಿರುವ ಮಹಾಸತಿ ಶಿಲ್ಪಗಳು

ಸಿದ್ದಯ್ಯ ಹೆಸರೂರು

**ಮಸ್ಕಿ:** ತಾಲೂಕಿನ ಕಾಟಗಲ್ ಗ್ರಾಮದಲ್ಲಿ ಗತ ಇತಿಹಾಸ ಸಾರುವ ಮಾಸ್ತಿ (ಮಹಾಸತಿ) ಕಲ್ಲುಗಳು ಗಾಳಿ ಮಳೆಗೆ ಸಿಲುಕಿ ವಿನಾಶದ ಅಂಚಿನೆಡೆಗೆ ಸಾಗುತ್ತಿವೆ.

ದೇಶ, ನಾಡು, ಊರು, ಕುಟುಂಬಕ್ಕಾಗಿ ಕೊನೆಗೆ ತನ್ನ ಪತಿಗಾಗಿ ಪ್ರಾಣ ನೀಡಿದ ಪವಿತ್ರ ಮಹಿಳೆಯರ ಸ್ಮಾರಕಗಳು ಹಾಳಾಗಿ ಹೋಗುತ್ತಿದ್ದು, ಯಾವುದೇ ಇಲಾಖೆಗಳಾಗಲಿ, ಜವಾಬ್ದಾರಿಯುತ ವ್ಯಕ್ತಿಗಳಾಗಲಿ ಗಮನಿಸದಿರುವುದು ದುರ್ದೈವ.

ವಿದೇಶದಲ್ಲಿ ಇಂತಹ ಸ್ಮಾರಕಗಳಿಗೆ ಅಪಾರ ಗೌರವವಿದ್ದು, ನಮ್ಮಲ್ಲಿ ಕಣ್ಣಿಗೆ ಕಾಣುತ್ತಿದ್ದರೂ ನೋಡದೆ ಅವುಗಳನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ಬಗ್ಗೆ ಸ್ಮಾರಕ ಪ್ರಿಯರು ನೋವು ವ್ಯಕ್ತಪಡಿಸುತ್ತಾರೆ.

ಮಹಾಸತಿಪತಿಯ ಯಾವುದೇರೀತಿಯಮರಣ ನಂತರ ಮಡದಿ ಪ್ರಮುಖವಾಗಿ ಅಗ್ನಿಪ್ರವೇಶದ ಮೂಲಕ ತನ್ನ ಪ್ರಾಣವನ್ನು ಬಲಿಕೊಡುತ್ತಿದ್ದಳು. ಹೀಗೆ ಪ್ರಾಣವನ್ನರ್ಪಿಸಿದವಳೇ ಮಹಾಸತಿ, ಮಾಸ್ತಿ ಎಂದು ಕರೆಯುತ್ತಾರೆ.

ಮಾಸ್ತಿ ಕಲ್ಲುಗಳಲ್ಲಿ ಸಾಮಾನ್ಯವಾಗಿ ಬಲಗೈಯನ್ನು ಮೇಲಕ್ಕೆತ್ತಿದ ಹೆಂಗಸಿನ ಪೂರ್ಣ ಚಿತ್ರವಿರುತ್ತದೆ. ಅನೇಕ ಕೈಗಳ ಚಿತ್ರವೂ ಬಹುಪತ್ನಿಯರ ಸಹ ಗಮನವನ್ನು ಸೂಚಿಸುತ್ತದೆ. ಕೆಲವೆಡೆ ಸ್ತ್ರೀಯ ತಲೆಯ ಹಿಂದೆ ಅಲಂಕೃತವಾದ ತಾಳೆ ಹೂವಿನ ಹೆಣಿಗೆಯಿರುತ್ತದೆ. ಕೆಲವು ಮಾಸ್ತಿ ಕಲ್ಲುಗಳಲ್ಲಿ ಗಂಡನ ಚಿತ್ರವು ಇರುತ್ತದೆ.

ಇದು ಮಾಸ್ತಿಕಲ್ಲಿನ ಕೆಳಹಂತವಾದರೆ, ಇನ್ನೂ ಕೆಲವೆಡೆ ಮೇಲಿನ ಹಂತದಲ್ಲಿ ದೇವರ ಸಾನ್ನಿಧ್ಯದಲ್ಲಿ ಕುಳಿತ ದಂಪತಿಗಳ ಚಿತ್ರವೂ ಇರುತ್ತದೆ. ಸಾಮಾನ್ಯವಾಗಿ ಸತಿಯ ಕೈಯಲ್ಲಿ ನಿಂಬೆ ಹಣ್ಣಿರುವ ಚಿತ್ರವಿರುತ್ತದೆ. ಇವಲ್ಲದೆ ಇನ್ನೂ ಕೆಲವೆಡೆ ಸತಿಯು ಪದ್ಮಾಸನ ಹಾಕಿಕೊಂಡು ಕುಳಿತಿರುತ್ತಾಳೆ. ಆಕೆಯ ಕೂದಲು ಜ್ವಾಲೆಗಳಂತೆ ಮೇಲಕ್ಕೆದ್ದಿರುತ್ತದೆ. ಹಲವು ಕಲ್ಲುಗಳಲ್ಲಿ ಸತಿ–ಪತಿಗಳಿಬ್ಬರೂ, ವೀರ–ಮಹಾಸತಿ,ವಿಮಾನದಲ್ಲಿ ಕುಳಿತಿರುವ ಹಾಗೂ ಚಾಮರಸೇವೆ ಮಾಡುತ್ತ ದೇವತೆಗಳು ಅವರನ್ನು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ಶಿಲ್ಪಗಳಿರುತ್ತವೆ.

ರಾಯಚೂರು ಜಿಲ್ಲೆಯಲ್ಲಿ ಮಾಸ್ತಿಕಲ್ಲು ಶಿಲ್ಪಗಳಿಗೆ ಸಂಬಂಧಿಸಿದಂತೆ ಹೆಚ್ಚಿಗೆ ಶಾಸನಗಳು ದೊರೆಯದಿದ್ದರೂ ಕೂಡ, ಕೆಲ ಗ್ರಾಮಗಳಲ್ಲಿ ದೊರೆತಿರುವ ಮಾಸ್ತಿ ಕಲ್ಲುಗಳಿವೆ.ಉದಾಹರಣೆಗೆ ತಾಲೂಕಿನ ಕಾಟಗಲ್ ಗ್ರಾಮದಲ್ಲಿಮಹಾಸತಿ ವಿಗ್ರಹ ಶಿಲ್ಪಿಗಳು, ಮಾಸ್ತಿಕಲ್ಲು ಶಿಲ್ಪಿಗಳು, ಅಗಸಿ ಮುಂದೆ ಇರುವ ಕ್ರಿ.ಶ.11–12ನೇ ಶತಮಾನಕ್ಕೆ ಹಂತಗಳನ್ನೊಳಗೊಂಡಿದೆ. ಕೆಳಭಾಗದಲ್ಲಿ ವೀರ,ವೀರನ ಹೆಂಡತಿಯರು ನಿಂತುಕೊಂಡಿದ್ದು, ವೀರನು ಬಲಭಾಗದಲ್ಲಿ ಅಲಂಕಾರ ಮಾಡಿಕೊಂಡು ನಿಂತಿದ್ದಾನೆ. ಇವನ ಬಳಿ ಮಾಸ್ತಿಯಾದ ಇವನ ಹೆಂಡತಿಗೂ ಕೂಡ ಅಲಂಕಾರ ಮಾಡಿದ್ದಾರೆ. ಇದರ ಮೇಲ್ಭಾಗದಲ್ಲಿ ವೀರ ಮತ್ತು ವೀರನ ಹೆಂಡತಿ ಇಬ್ಬರು ಕೈ ಮುಗಿದುಕೊಂಡು ಕುಳಿತಿದ್ದಾರೆ. ಇವರ ಪಕ್ಕದ ಪೀಠದ ಮೇಲೆ ಶಕ್ತಿ ಶಿಲ್ಪವಿದೆ.



ದಿಗಂತ ವಿಶೇಷ

> ತಾಲೂಕಿನ ಕಾಟಗಲ್ ಗ್ರಾಮ ಸೇರಿದಂತೆ ರಾಯಚೂರು ಜಿಲ್ಲೆಯಲ್ಲ ವಿವಿಧ ಗ್ರಾಮಗಳಲ್ಲಿ ಮಹಾಸತಿ ಶಿಲ್ಪಗಳು ಕಾಣಬರುತ್ತವೆ. ಇವುಗಳನ್ನು ಆಯಾ ಗ್ರಾಮಸ್ಥರು ಮತ್ತು ಪ್ರಾಚ್ಯವಸ್ತು ಇಲಾಖೆ ಸಂರಕ್ಷಿಸುವ ಕೆಲಸ ಮಾಡಬೇಕಾಗಿದೆ.
> ■ ಡಾ.ಚನ್ನಬಸಪ್ಪ ಮಲ್ಕಂದಿನ್ನಿ, ಇತಿಹಾಸ ಪ್ರಾಧ್ಯಾಪಕ

# ಹಂಪನಗೌಡ ಬಾದರ್ಲಿ ನೇತೃತ್ವದಲ್ಲಿ ಸಿಎಂ ಭೇಟಿ

**ಸಿಂಧನೂರು:** 16 ತಿಂಗಳಿಂದ ಸಂಕಷ್ಟದಲ್ಲಿರುವ ಸಿಂಧನೂರು ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಜಾಗದ ಅನುಕೂಲ ಮಾಡಿ ವ್ಯಾಪಾರಕ್ಕೆ ಅನುಕೂಲ ಕಲ್ಪಿಸುವ ಕುರಿತು ಶಾಸಕ ಹಂಪನಗೌಡ ಬಾದರ್ಲಿ ನೇತೇತ್ವದಲ್ಲಿ ಬೀದಿ ಬದಿಯ ವ್ಯಾಪಾರಸ್ಥರ ಹೋರಾಟ ಸಮಿತಿ ನಿಯೋಗ ಬೆಂಗಳೂರು ನಿಯೋಗ ಹೋಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ನೀಡಿ ಮನವಿ ಸಲ್ಲಿಸಿದರು.



ಬೀದಿ ಬದಿ ವ್ಯಾಪಾರಿಗಳು ಹೋರಾಟ ಸಮಿತಿ ಸಿಂಧನೂರು ಜಿಲ್ಲಾ ರಾಯಚೂರು ಆಡಳಿತ ಭೂ ಕಬಳಿಕೆ ನಿಷೇಧ ಕೋರ್ಟ್ ಆದೇಶದ ನೆಪದಲ್ಲಿ 2024 ಡಿ.24ರಂದು ಸಿಂಧನೂರು ನಗರದ ಬೀದಿ ವ್ಯಾಪಾರಿಗಳ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಲಾಯಿತು. 15 ತಿಂಗಳುಗಳು ಕಳೆದು ಹೋದರೂ ಸಹ ತಾಲೂಕು ಆಡಳಿತ ಮತ್ತು ಜಿಲ್ಲಾಡಳಿತ ಪರ್ಯಾಯ ವ್ಯವಸ್ಥೆಯನ್ನು ಬೀದಿ ಬದಿ ವ್ಯಾಪಾರಿಗಳಿಗೆ ಕಲ್ಪಿಸಿರುವುದಿಲ್ಲ.ಈ ಹಿನ್ನಲೆಯಲ್ಲಿ ಸಾವಿರಾರು ಬೀದಿ ವ್ಯಾಪಾರಿಗಳು ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿ ತಮ್ಮ ದೈನಂದಿನ ಬದುಕನ್ನು ಕಳೆದು ಕೊಂಡಿದ್ದು ಅಕ್ಷರಶಹ ಬೀದಿಗೆ ಬಿದ್ದು ತುಂಬಾ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ವ್ಯಾಪಾರದ ಉದ್ಯೋಗ ಕಳೆದುಕೊಂಡು ಸಂಕಷ್ಟದಲ್ಲಿರುವ ಕುಟುಂಬಗಳಿಗೆ ತಾತ್ಕಾಲಿಕ ಜಾಗದ ವ್ಯವಸ್ಥೆ ಕಲ್ಪಿಸಲು ಒತ್ತಾಯಿಸಿ ಏ.13ರಿಂದ ತೋಟಗಾರಿಕ ಇಲಾಖೆ ಮುಂದುಗಡೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆದಿದೆ. ಹಾಗೂ 22 ದಿನಗಳು ಕಳೆದರೂ ಜಿಲ್ಲಾಧಿಕಾರಿಗಳು ರಾಯಚೂರು ಮತ್ತು ತಹಶೀಲ್ದಾರರು ತಾಲೂಕು ಆಡಳಿತ ಸಿಂಧನೂರು ಇವರುಗಳು ಈ ಸಮಸ್ಯೆಯನ್ನು ಪರಿಹರಿಸಲು ಯಾವುದೇ ಕ್ರಮಕ್ಕೆ ಮುಂದಾಗಿರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಂದೆ ತಾಲೂಕು ಸಮಿತಿ ತಮ್ಮ ಅಳಲು ಹೇಳಿ ಕೊಂಡಿತು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಿಗಳನ್ನು ಕರೆಸಿಕೊಂಡು ಮಾಹಿತಿ ಪಡೆದುಕೊಂಡು ಪರಿಶೀಲನೆ ಮಾಡಿ, ಸಂಬಂಧಿಸಿದ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕಾಂಗ್ರೆಸ್ ಪಕ್ಷದ ಮುಖಂಡರು ಹಾರೂನ್ ಧಣಿ, ಡಿ.ಎಚ್ .ಪೂಜಾರ, ಡಿ.ಎಚ್.ಕಂಬಳಿ, ಜಿಲಾನಿ ಪಾಷಾ, ಹುಸೇನ್ ಸಾಬ್, ಚಂದ್ರಶೇಖರ ಗೋರೆಬಾಳ, ರಮೇಶ್ ಪಾಟೀಲ್ ಬೇರಿಗೆ, ಖಾಸೀಂ ಸಾಬ್ ಇತರರಿದ್ದರು.

# ಹೋಂ ಸ್ಟೇ ನೋಂದಣಿ ಕಡ್ಡಾಯ

**ವಿಜಯನಗರ:** ಜಿಲ್ಲೆಯ ವಿಶ್ವ ಪಾರಂಪರಿಕ ತಾಣವಾದ ಹಂಪಿ, ಕಮಲಾಪುರ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲೆಯ ಇತರೆ ಸ್ಥಳಗಳಲ್ಲಿ ನಿರ್ವಹಿಸಲಾಗುತ್ತಿರುವ ಹೋಂ ಸ್ಟೇಗಳನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳ್ಕೇರಿ ತಿಳಿಸಿದ್ದಾರೆ. ಪ್ರವಾಸಿಗರ ಅನುಕೂಲಕ್ಕಾಗಿ ಹೋಂ ಸ್ಟೇ ಪ್ರಾರಂಭಿಸಲು ಕೆ.ಟಿ.ಟಿ.ಎಫ್ –2015ರ ಕಾಯ್ದೆಯಂತೆ ಪ್ರವಾಸೋದ್ಯಮ ಇಲಾಖೆಯಡಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಆದರೆ, ಜಿಲ್ಲೆಯ ಹಲವೆಡೆ ಅನಧಿಕೃತವಾಗಿ ಹೋಂ ಸ್ಟೇ ಗಳು ಕಾರ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಹೋಂ ಸ್ಟೇ ಗಳನ್ನು ಕಾನೂನು ಬದ್ಧವಾಗಿ ಮುಂದುವರೆಸಲು ಆಸಕ್ತಿ ಇರುವ ಮಾಲೀಕರು ಅಗತ್ಯ ದಾಖಲೆಗಳೊಂದಿಗೆ ಕಮಲಾಪುರದಲ್ಲಿರುವ ಉಪ ನಿರ್ದೇಶಕರ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ಇಂದಿನ ಉತ್ಪನ್ನವಾರು ದರ (ಹುಬ್ಬಳ್ಳಿ)

| ಉತ್ಪನ್ನಗಳು | ₹ಕನಿಷ್ಠ (ಕ್ವಿಂ) | ₹ಗರಿಷ್ಠ (ಕ್ವಿಂ) |
|---|---|---|
| ಕಡಲೆಕಾಳು | 2330 | 5856 |
| ಉದ್ದಿನಕಾಳು | 1910 | 3389 |
| ಹೆಸರು ಕಾಳು | 1420 | 7010 |
| ಜೋಳ | 811 | 4056 |
| ಮೆಕ್ಕೆಜೋಳ | 1611 | 1901 |
| ಕುಶಭಿ | 5435 | 5435 |
| ಈರುಳ್ಳಿ | 500 | 1900 |
| ಆಲೂಗಡ್ಡೆ | 1100 | 1800 |
| ಸೋಯಾಬಿನ್ | 5690 | 6510 |
| ತೊಗರಿ | 3569 | 3829 |
| ಗೋಧಿ | 2306 | 4335 |
| ನೆಲಗಡಲೆ (ಶೇಂಗಾ) | 5861 | 7380 |

---

ಕ್ರಿಮಿ. ನಂ. 35/2026
**ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.**
ಅರ್ಜಿದಾರ : ಶೀಲತ ತಂದೆ ರಾಮಪ್ಪ ಅಮ್ಮಿನಭಾವಿ
**ವಿರುದ್ಧ**
ಎದುರುಗಾರರು :ಮಾನ್ಯ ಮುಖ್ಯ ನೋಂದಣಾಧಿಕಾರಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಲಯ ನಂ.8, ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹುಬ್ಬಳ್ಳಿ
**ನೋಟಿಸು.**
ಮೇಲ್ಕಂಡ ಪ್ರಕರಣದಲ್ಲಿ ವಾದಿಯು ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ
ಅರ್ಜಿದಾರಳು ತನ್ನ ಅಜ್ಜನಾದ ಶ್ರೀ ಯಲ್ಲಪ್ಪ ತಂದೆ ಮುಗತಪ್ಪ ಅಮ್ಮಿನಭಾವಿ ಇವರು ದಿನಾಂತ : 14–11–1989 ರಂದು ಕುದರಿ ಚಾಳ, ಮಂಟೂರ ರೋಡ, ಹುಬ್ಬಳ್ಳಿಯ ಸ್ವಗ್ರಹದಲ್ಲಿ ಪೋತಿಯಾಗಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿ ಸಿರುತ್ತದೆ. ಸದರ ಮರಣ ದಾಖಲಾತಿ ಕುರಿತು ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿನಾಂಕ: 03–06–2026 ರಂದು ಬೆಳಗ್ಗೆ 11 ಘಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 04–05–2026 ರಂದು ನೀಡಲಾಯಿತು.
ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ದಿ: 04–05–2026 ಸಹಿ/–ಶಿರಸ್ತೇದಾರರು
**ರಾಕೇಶ ಆರ್. ಚಾಧವ** ಮಾನ್ಯ 1ನೇ ಜೆ.ಎಮ್.ಎಫ್.ಸಿ.,
ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ ನ್ಯಾಯಾಲಯ, ಹುಬ್ಬಳ್ಳಿ

---

ಕ್ರಿಮಿನಲ್ ಮಿಸಲೆನಿಯಸ್ ನಂ : 304/2026
ಮಾನ್ಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ. ಸವಣೂರ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು : ದುರಗಪ್ಪ ತಂದೆ ರಾಮಣ್ಣ ವಡ್ಡರ ಸಾ: ಮಣ್ಣೂರ ತಾ: ಸವಣೂರ ಜಿ: ಹಾವೇರಿ
ವಿರುದ್ಧ
ಎದುರುಗಾರರು : ಜನನ ಮತ್ತು ಮರಣಗಳ ನೋಂದಣಿ ಅಧಿಕಾರಿಗಳು ಸವಣೂರ. ಇವರ ಪರವಾಗಿ ತಹಶೀಲ್ದಾರರು, ತಹಶೀಲ್ದಾರ ಕಾರ್ಯಾಲಯ ಸವಣೂರ.
ಸಾರ್ವಜನಿಕ ನೋಟೀಸು
ಅರ್ಜಿದಾರನ ತಾಯಿಯಾದ ಶ್ರೀಮತಿ ತಿಮ್ಮಕ್ಕ ಕೋಂ ರಾಮಣ್ಣ ವಡ್ಡರ ಇವರು ದಿನಾಂಕ: 20–01–1995 ರಂದು ಸವಣೂರ ತಾಲೂಕಾ ಪೈಕಿ ಮಣ್ಣೂರ ಗ್ರಾಮದ ತಮ್ಮ ಮನೆಯಲ್ಲಿ ಮರಣವಾಗಿದ್ದು ಇರುತ್ತದೆ. ಸದರ ಮರಣವಾದ ದಿನಾಂಕವನ್ನು ಎದುರುಗಾರರ ಕಾರ್ಯಾಲಯದ ಮರಣದ ನೋಂದಣಿ ರಜಿಸ್ಟರದಲ್ಲಿ ನೊಂದಾಯಿಸಿಕೊಂಡು ಮರಣ ದಾಖಲೆ ಕೊಡುವಂತೆ ಎದುರುಗಾರರ ವಿರುದ್ಧ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ವಗೈರೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ: 12–06–2026 ರಂದು ಮುಂಜಾನೆ 10=30 ಗಂಟೆಗೆ ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯದಲ್ಲಿ ತಾವಾಗಲಿ ಇಲ್ಲವೆ ತಮ್ಮ ಪರ ವಕೀಲರ ಮೂಲಕವಾಗಲಿ,ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು. ಇಲ್ಲದೆ ಇದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತದೆ. ಈ ದಿನ 04–05–2026 ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ.
ಸಹಿ/– ಶಿರಸ್ತೆದಾರರು
ದಿವಾಣಿ ನ್ಯಾಯಾಧೀಶರು ವ 1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯ.
ಸಹಿ/– ಶ್ರೀ ಎಫ್.ಎನ್ ನೆಲ್ಲೂರ
ಅರ್ಜಿದಾರನ ಪರ ವಕೀಲರು

---

ಕ್ರಿಮಿನಲ್ ಮಿಸಲೆನಿಯಸ ನಂ : 392/2026
ಮೆ: ಜೆ.ಎಮ್.ಎಫ್.ಸಿ. ಸವಣೂರ ಇವರ ನ್ಯಾಯಾಲಯದಲ್ಲಿ
ಅರ್ಜಿದಾರಳು : ಶ್ರೀಮತಿ ಬಿಬಿಜಾನ ಆಡೂರ ಇವರ ಪರವಾಗಿ ಇವರ ವಿಶೇಷ ಮುಖ್ತ್ಯಾರನಾಮೆಯಾದ ಶ್ರೀ ಬಸೀರಅಹ್ಮದ ಆಡೂರ
ವಿರುದ್ಧ
ಎದುರುಗಾರರು : ಜನನ ಮರಣಗಳ ನೋಂದಣಿ ಅಧಿಕಾರಿಗಳು ಸವಣೂರ ಇವರ ಪರವಾಗಿ ಮುಖ್ಯಾಧಿಕಾರಿಗಳು ಪುರಸಭೆ, ಸವಣೂರ
ಇಸ್ತಿಯಾರ ನಾಮೆ
ಇದರಲ್ಲಿ ಅರ್ಜಿದಾರಳ ಖಾಸಾ ಸಹೋದರನಾದ ಅಬ್ದುಲ್‌ಖಾದರ ತಂದೆ ಲಾಲಾಮಿಯ್ಯಾ ಫರಾಶ ಇವರು ಸವಣೂರ ತಾಲೂಕ ಪೈಕಿ ಸವಣೂರ ನಗರದ ಮಂಗಳವಾರಪೇಟೆಯಲ್ಲಿ ದಿನಾಂಕ: 08–07–2019 ರಂದು ಮರಣ ಹೊಂದಿರುತ್ತಾರೆಂದು ಎದುರುಗಾರರ ಕಚೇರಿಯ ಮರಣದ ನೋಂದಣಿ ಪುಸ್ತಕದಲ್ಲಿ ಮರಣದ ದಿನಾಂಕವನ್ನು ದಾಖಲಿಸಿಕೊಳ್ಳಲು ಮೇಲ್ಕಾಣಿಸಿದ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ವಗ್ಯೆರೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ: 12–06–2026 ರಂದು ಮುಂಜಾನೆ 10–30 ಘಂಟೆಗೆ ಮೇಲ್ಕಾಣಿಸಿದ ಮಾನ್ಯ ಕೋರ್ಟಿನ ಈ ಪ್ರಕರಣದಲ್ಲಿ ತಾವಾಗಲಿ ವ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತ ಈ ದಿನ ದಿನಾಂಕ: 02–05–2026 ರಂದು ಮೊಹರಿನೊಂದಿಗೆ ಕೊಡಲ್ಪಟ್ಟಿರುತ್ತದೆ.
ಸಹಿ/– ಶಿರಸ್ತೆದಾರರು
ಮೆ: ಜೆ.ಎಮ್.ಎಫ್.ಸಿ ನ್ಯಾಯಾಲಯ, ಸವಣೂರ
ಸಹಿ/– ವಿ.ಆರ್. ಅಯ್ಯಣ್ಣನವರ
ಅರ್ಜಿದಾರರ ಪರ ವಕೀಲರು, ಸವಣೂರ

---

**CHANGE OF NAME**
I, **RASHMI ERESEEMI** (Old Name) Resident of H No: 108 Akshay Colony 4th Phase Behind Chetana College Vidya Nagarhubli 580021 (address), have changed my name as **RASHMI PADMARAJ YERESHIMI** (New Name) henceforth I will be called and recognized by new name for all future purposes, dated: 05/05/2026.

---

ಕ್ರಿಮಿ. ನಂ. 35/2026
**ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲ.**
ಅರ್ಜಿದಾರ : ಶೀಲತ ತಂದೆ ರಾಮಪ್ಪ ಅಮ್ಮಿನಭಾವಿ
**ವಿರುದ್ಧ**
ಎದುರುಗಾರರು :ಮಾನ್ಯ ಮುಖ್ಯ ನೋಂದಣಾಧಿಕಾರಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಲಯ ನಂ.8, ಜನನ ಮತ್ತು ಮರಣ ನೋಂದಣಾಧಿಕಾರಿಗಳು ಹುಬ್ಬಳ್ಳಿ
**ನೋಟಿಸು.**
ಮೇಲ್ಕಂಡ ಪ್ರಕರಣದಲ್ಲಿ ವಾದಿಯು ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ
ಅರ್ಜಿದಾರಳು ತನ್ನ ಅಜ್ಜಿಯಾದ ಶ್ರೀಮತಿ ಯಲ್ಲಪ್ಪ ಕೋಂ. ಯಲ್ಲಪ್ಪ ಅಮ್ಮಿನಭಾವಿ ಇವರು ದಿನಾಂತ : 08–08–1994 ರಂದು ಕುದರಿ ಚಾಳ, ಮಂಟೂರ ರೋಡ, ಹುಬ್ಬಳ್ಳಿಯ ಸ್ವಗ್ರಹದಲ್ಲಿ ಪೋತಿಯಾಗಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿ ಸಿರುತ್ತದೆ. ಸದರ ಮರಣ ದಾಖಲಾತಿ ಕುರಿತು ಯಾರಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅವರ ಹಾಜರಾತಿಗಾಗಿ ದಿನಾಂಕ: 03–06–2026 ರಂದು ಬೆಳಗ್ಗೆ 11 ಘಂಟೆಗೆ ಮುದ್ದತ್ತು ನೇಮಿಸಿದ್ದು, ಸದರೀ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳುವುದು. ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 04–05–2026 ರಂದು ನೀಡಲಾಯಿತು.
ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ದಿ: 04–05–2026 ಸಹಿ/–ಶಿರಸ್ತೇದಾರರು
**ರಾಕೇಶ ಆರ್. ಚಾಧವ** ಮಾನ್ಯ 1ನೇ ಜೆ.ಎಮ್.ಎಫ್.ಸಿ.,
ಅರ್ಜಿದಾರ ಪರ ವಕೀಲರು, ಹುಬ್ಬಳ್ಳಿ, ನ್ಯಾಯಾಲಯ, ಹುಬ್ಬಳ್ಳಿ

---

ಕ್ರಿಮಿನಲ್ ಮೀಸಲೇನಿಯಸ್ ನಂ: 297/2025
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ನವಲಗುಂದ ಇವರಲ್ಲಿ
ಅರ್ಜಿದಾರರು : 1) ಶ್ರೀ ಮಹಬೂಬ ಸಾಹೇಬ ತಂದೆ ದಾವಲಸಾಬ ಬಡೇಖಾನವರ, ವಯಾ: 69 ವರ್ಷ, ಉದ್ಯೋಗ: ಒಕ್ಕಲುತನ ಸಾ॥ ತುಪ್ಪದಕುರಹಟ್ಟಿ ತಾ॥ ಅಣ್ಣಿಗೇರಿ ಜಿ॥ ಧಾರವಾಡ
ವಿರುದ್ಧ
ಎದುರುಗಾರರು : ಮಾನ್ಯ ತಹಶೀಲ್ದಾರ ಸಾಹೇಬರು, ಜನನ–ಮರಣ ನೋಂದಣಿ ಅಧಿಕಾರಿಗಳು, ನವಲಗುಂದ, ತಾಲ್ಲೂಕು॥ ನವಲಗುಂದ ಜಿ॥ ಧಾರವಾಡ
ಪತ್ರಿಕಾ ಪ್ರಕಟಣೆ
ಸದರ ಮೇಲ್ಕಾಣಿಸಿದ ಪ್ರಕರಣದಲ್ಲಿಯ ಅರ್ಜಿದಾರನ ತಂದೆಯಾದ ಶ್ರೀ ದಾವಲಸಾಬ ತಂದೆ ಇಮಾಮಸಾಬ ಬಡೇಖಾನವರ ರವರು ದಿನಾಂಕ: 21–10–1993 ರಂದು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ತುಪ್ಪದಕುರಹಟ್ಟಿ ಗ್ರಾಮದ ಅರ್ಜಿದಾರನ ಮನೆಯಲ್ಲಿ ಪೋತಿಯಾಗಿದ್ದರ ಬಗ್ಗೆ ಸದರಿಯವರ ಮರಣ ದಾಖಲೆಯನ್ನು ಕೇಳಿ ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರ ಕೇಸು ದಿನಾಂಕ: 28–07–2026 ರಂದು ಮುದ್ದತ್ತು ನಿಗಧಿಯಾಗಿದ್ದು ಇರುತ್ತದೆ. ಸದರ ಮೇಲಿನ ಕೇಸಿಗೆ ಯಾರದಾದರೂ ಏನಾದರೂ ತಕರಾರು ವಗೈರೆ ಇದ್ದಲ್ಲಿ ಮೇಲಿನ ದಿನಾಂಕದಂದು ತಾವಾಗಲಿ ಅಥವಾ ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ತಕರಾರರನ್ನು ಸಲ್ಲಿಸತಕ್ಕದ್ದು. ಇಲ್ಲದೇ ಹೋದಲ್ಲಿ ಮೆ ನ್ಯಾಯಾಲಯದವರು ಏಕತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.
ಸ್ಥಳ: ನವಲಗುಂದ
ದಿನಾಂಕ: 05–05–2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು,
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನವಲಗುಂದ.
ಅರ್ಜಿದಾರರ ಪರ ವಕೀಲರು
ಸಹಿ/– (ಶ್ರೀ ಎಸ್.ಎಮ್. ಬಡಿಗೇರ)
ವಕೀಲರು ಅಣ್ಣಿಗೇರಿ

---

ಕರ್ನಾಟಕ ಸರ್ಕಾರ
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ**
**ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.**

ನಂ: ಇಇ/ಎಂಐಡಿ/ಬೀದರ/ತಾ.ಶಾ–2/ಟೆಂಡರ್/2026–27/ 1136 ದಿನಾಂಕ: 04–05–2026

**ಕೆಪಿಪಿ–ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ**

1) ಕಾಮಗಾರಿಗಳ ವಿವರ. KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ –3 ಮಾತ್ರ : **07–05–2026 ರಂದು 17.00 ಗಂಟೆವರೆಗೆ,** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ –3 ಮಾತ್ರ : **12–05–2026 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ : **14–05–2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ **16–05–2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ.ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ.KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/26/ಕೆ.ಎಸ್.ಎಂ.ಸಿ.&ಎ/2026–27

---

**ಶಿವಾಲಿಕ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್.**
ನೋಂದಾಯಿತ ಕಚೇರಿ: 501, ಸಲ್ಕಾನ್ ಔರಂ, ಜಸೋಲಾ ಡಿಸ್ಟ್ರಿಕ್ಟ್ ಸೆಂಟರ್, ನವದೆಹಲಿ– 110025.
ಸಿಐಎನ್: ಯು65900ಡಿಎಲ್2020ಪಿಎಲ್‌ಸಿ366027

**ಹರಾಜು ನೋಟಿಸ್**

ಶಿವಾಲಿಕ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಈ ಕೆಳಗಿನ ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಬ್ಯಾಂಕಿನಿಂದ ಅವರು ಪಡೆದ ಚಿನ್ನದ ಸಾಲಗಳನ್ನು ಬ್ಯಾಂಕ್ ವೈಯಕ್ತಿಕ ನೋಟಿಸ್ ಸೇರಿದಂತೆ ಹಲವು ಬೇಡಿಕೆಗಳು ಮತ್ತು ನೋಟಿಸ್‌ಗಳನ್ನು ನೀಡಿದರೂ ಹೊಂದಾಣಿಕೆ ಮಾಡಿಲ್ಲ. ಎಲ್ಲ ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬ್ಯಾಂಕಿನಲ್ಲಿ ಭದ್ರತೆಯಾಗಿ ಇರಿಸಿರುವ ಚಿನ್ನದ ಆಭರಣಗಳನ್ನು ಹರಾಜು ಮಾಡಲು ನಿರ್ಧರಿಸಲಾಗಿದ್ದು, ಹಾಗೂ ಅದರಂತೆ ಸಾಲ ಪಡೆದ ಬ್ಯಾಂಕ್ ಶಾಖೆ ಆವರಣದಲ್ಲಿ **ಬೆಳಿಗ್ಗೆ 11.00** ಗಂಟೆಗೆ ಹರಾಜು ಮಾಡಲು ನಿರ್ಧರಿಸಲಾಗಿದೆ. ಎಲ್ಲ ಸಾಲಗಾರರು, ಖಾತೆ ಹೊಂದಿದವರು ಮತ್ತು ಸಾರ್ವಜನಿಕರು ಈ ಹರಾಜಿನಲ್ಲಿ ಈ ಕೆಳಗಿನ ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಭಾಗವಹಿಸಬಹುದಾಗಿದೆ.

**ಹರಾಜು ದಿನಾಂಕ 15-05-2026 ರಂದು ಬೆಳಿಗ್ಗೆ 11:00 ಗಂಟೆಗೆ.**

| ಕ್ರಮಸಂಖ್ಯೆ | ಶಾಖೆ | ಖಾತೆ ಸಂಖ್ಯೆ | ಖಾತೆದಾರರ ಹೆಸರು |
|---|---|---|---|
| 1 | ಪುಣೆ ತಿಲಕ್ ರಸ್ತೆ | 104242514882 | ಗುರುಪ್ರಸಾದ್ |

ಹರಾಜಿನಿಂದ ಯಾವುದೇ ಖಾತೆಯನ್ನು ಕಿತ್ತುಹಾಕುವ ಅಥವಾ ಹರಾಜನ್ನು ಯಾವುದೇ ನೋಟಿಸ್ ನೀಡದೇ ರದ್ದುಪಡಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.
ಅಧಿಕೃತ ಅಧಿಕಾರಿ, ಶಿವಾಲಿಕ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್.

---

## ಟೆಂಡರ್ ಪ್ರಕಟಣೆ

**PKPS** ಸೊಸೈಟಿ, ಅವರಾದಿ ಗ್ರಾಮ, ತಾ: ಕಿತ್ತೂರು, ಜಿ: ಬೆಳಗಾವಿ ಇವರಿಂದ ಕೆಳಗಿನ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು: **PKPS** ಸೊಸೈಟಿಗೆ ಗೋದಾಮು ಕಟ್ಟಡ ನಿರ್ಮಾಣ (**G.P.No:134/A**, ಅವರಾದಿ), ಅಂದಾಜು ವೆಚ್ಚ: 63,40,000/–, ಇಎಂಡಿ: ರೂ. 1,50,000/– ಟೆಂಡರ್ ಶುಲ್ಕ: 1,000/–, ಅವಧಿ: 12 ತಿಂಗಳು (ಮಳೆಗಾಲ ಸೇರಿದಂತೆ), ಅರ್ಹತೆ: **PWD Class** 1 ಗುತ್ತಿಗೆದಾರರು ಮಾತ್ರ, ಟೆಂಡರ್ ಸಲ್ಲಿಕೆ ಕೊನೆಯ ದಿನಾಂಕ: 10/05/2026 (ಮಧ್ಯಾಹ್ನ 3:00 ಗಂಟೆ ಒಳಗಾಗಿ), ಟೆಂಡರ್ ತೆರೆಯುವ ದಿನಾಂಕ: 13/05/2026 (ಸಂಜೆ 4:00 ಗಂಟೆಗೆ), ಟೆಂಡರ್ ಅನ್ನು ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕು: ಕಾರ್ಯದರ್ಶಿಗಳು, **PKPS** ಸೊಸೈಟಿ, ಅವರಾದಿ, ತಾ: ಕಿತ್ತೂರು ಜಿ: ಬೆಳಗಾವಿ

ಸಹಿ/– ಕಾರ್ಯದರ್ಶಿಗಳು **PKPS** ಸೊಸೈಟಿ, ಅವರಾದಿ
ಸಹಿ/– ಮುಖ್ಯ ಕಾರ್ಯನಿರ್ವಾಹಕರು **PKPS** ಸೊಸೈಟಿ, ಅವರಾದಿ

---

ಅಸಲದಾವಾ ನಂ. 202/2025
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ ಇವರ ನ್ಯಾಯಾಲಯದಲ್ಲಿ
1) ರಂಗಪ್ಪ ತಂ ಲಕ್ಷ್ಮಪ್ಪ ಕಂಬಾರ .....ವಾದಿ
–ವಿರುದ್ಧ–
1) ದೇವಕ್ಕ ಗಂ ಸುರೇಶ ಕಂಬಾರ ಹಾಗೂ ಇತರರು .....ಪ್ರತಿವಾದಿಯರು
ಡ್ರಾಫ್ಟ್ ನೋಟಿಸ ಕ್ರಮಾದೇಶ ನಿಯಮ 20(ಎ) ಸಿ.ಪಿ.ಸಿ ಅಡಿಯಲ್ಲಿ
1) ಸಂಗದೊಂಪ್ಪ ತಂ. ಕೆಂಚಪ್ಪ ಬೆಣ್ಣೂರ ಸಾ॥ ಕೇಸನೂರ ತಾ॥ ಜಿ॥ ಬಾಗಲಕೋಟ
2) ಹನಮಪ್ಪ ತಂ. ಕೆಂಚಪ್ಪ ಬೆಣ್ಣೂರ ಸಾ॥ ಕೇಸನೂರ ತಾ॥ ಜಿ॥ ಬಾಗಲಕೋಟ, 3) ಗುರವ್ವ ಗಂ. ಮಹದೇವ ಬೆಣ್ಣೂರ ಸಾ॥ ಕೇಸನೂರ ತಾ॥ ಜಿ॥ ಬಾಗಲಕೋಟ 4) ಗೀತಾ ತಂ. ಮಹದೇವ ಬೆಣ್ಣೂರ ಸಾ॥ ಕೇಸನೂರ ತಾ॥ ಜಿ॥ ಬಾಗಲಕೋಟ, 5) ಈರವ್ವ ತಂ. ಮಹದೇವ ಬೆಣ್ಣೂರ ಸಾ॥ ಕೇಸನೂರ ತಾ॥ ಜಿ॥ ಬಾಗಲಕೋಟ
ಈ ಪ್ರಕರಣದ ವಾದಿಯು ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಬಾಗಲಕೋಟ ಈ ನ್ಯಾಯಾಲಯದ ಅಸಲು ದಾವಾ ನಂ. 202/2025 ರಲ್ಲಿ ನಿಮ್ಮ ಮೇಲೆ ದಾವೆ ದಾಖಲಿಸಿದ್ದು ಇರುತದೆ.
ನೀವು ಈ ಅಸಲರ್ಜಿಯಲ್ಲಿ ಪ್ರತಿವಾದಿ ನಂ, 7 ಮತ್ತು 9 ರಿಂದ 12 ಇರುವಿರಿ. ನಿಮಗೆ ಈಗಾಗಲೇ ಸದರಿ ನ್ಯಾಯಾಲಯದಿಂದ ಹಲವಾರು ಸಾರಿ ಸಮನ್ಸ್ ಜಾರಿಗೊಳಿಸಲು ಪ್ರಯತ್ನಿಸಿದ್ದು, ನೀವು ಉದ್ದೇಶ ಪೂರ್ವಕವಾಗಿ ಸಮನ್ಸ ಸ್ವಿಕರಿಸಿರುವದಿಲ್ಲ, ಈ ಪತ್ರಿಕಾ ಜಾಹಿರಾತು ಮೂಲಕ ನಿಮಗೆ ತಿಳಿಸುವುದೇನೆಂದರೆ ಈ ದಾವೆಯಲ್ಲಿ ನಿಮ್ಮದು ಏನಾದರೂ ತಕರಾರು ಸಲ್ಲಿಸುವದು ಮತ್ತು ವಾದ ಮಂಡಿಸುವುದು ಇದ್ದರೆ ದಿನಾಂಕ: 20–06–2026 ರಂದು ಮುಂಜಾನೆ 11–00 ಗಂಟೆಗೆ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲ್ಲಿ ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಬಾಗಲಕೋಟ ಇವರಲ್ಲಿ ಹಾಜರಾಗಿ, ಮಾನ್ಯ ನ್ಯಾಯಾಲಯಕ್ಕೆ ತಕರಾರು ಸಲ್ಲಿಸಬಹುದು. ಒಂದು ವೇಳೆ ಇದಕ್ಕೆ ತಪ್ಪಿದಲ್ಲಿ ಮಾನ್ಯ ನ್ಯಾಯಾಲಯ ಏಕತರ್ಪ ಅಂತಾ ಪರಿಗಣಿಸಿ ಮುಂದಿನ ವಿಚಾರಣೆ ಕೈಗೊಳ್ಳುತ್ತಾರೆ ಅಂತಾ ಪ್ರಕಟಿಸಿದ ತಿಳವಳಿಕೆ ಸಮನ್ಸ್.
ಕೋರ್ಟ ಆದೇಶದ ಮೇರೆಗೆ ಇಂದು ದಿನಾಂಕ: 29/04/2016 ರಂದು ಮೆ॥ ನ್ಯಾಯಾಲಯ ಮೊಹರಿನೊಂದಿಗೆ ಸಹಿ ಮಾಡಲ್ಪಟ್ಟಿದೆ.
ಸಹಿ/– ಶಿರಸ್ತೆದಾರರು
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಜೆ.ಎಮ್. ಎಫ್.ಸಿ. ನ್ಯಾಯಾಲಯ, ಬಾಗಲಕೋಟ
ಸಹಿ/– (ಶ್ರೀ ಎ.ಪಿ. ಖಿಪಾಟೆ) ವಾದಿಯ ಪರ ವಕೀಲರ

---

**IN THE COURT OF THE HON'BLE CIVIL JUDGE AT LINGASUGUR.**
F.D.P. No. 13/2025
Sharabanna
V/s
Devamma and another
**Claim**: Final Decree Proceedings in O.S No.5/2019 of Civil Judge Court Lingasugur andRA.No.22/2024 of SeniorCivil Judge at Lingasugur.
To,
Respondent/defendant No.1: Devamma W/o Chandappa, Age: 56 years Occ: H/W R/o Binjodi Village Tq: Jamakandi Dist: Bagalkot.
WHEREAS, the above named petitioners/ plaintiffs have instituted a claim for Final Decree Proceedings in Final Decree Proceedings in O.S No. 5/2019 of Civil Judge Court Lingasugur and RA.No. 22/2024 of Senior Civil Judge at Lingasugur against the defendants before this Hon'ble Civil Judge court at Lingasugur. You are Respondent No. 1 here by summoned to appear in this court in person or by pleader dully instructed and able to answer all the material questions relating to the claim for suit for partition and Separate Possession. For who shall be accompanied by some person able to answer all such question on the day of 24 06 2026 at 10-30 AM to answer the claim and your directed to produce on that day all documents upon which you intend to really in support of defense take notice that in default of your absence on the date afore mentioned, The claim suit will be heard and determined in your absence given under my hand seal on the court on this 30th day of 2026.
Sd/- Chief Administrative Officer
Civil Judge Court, Lingasur
Sd/- Amaresh C Patil, Advocate Lingasugur

---

## ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ:ನಸಹೊ/ತಾಂತ್ರಿಕ/ಕಾಮಗಾ/ನಗರಸಭೆ ನಿಧಿ/ ಟೆಂಡರ್/2025–26. ದಿನಾಂಕ:30.04.2026

**ಟೆಂಡರ್ ಪ್ರಕಟಣೆ(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)**

2025–26ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು.
1.ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **07.05.2026 ಸಂಜೆ 5.00 ಗಂಟೆ ವರೆಗೆ.**
2.ಟೆಂಡರ್‌ಗಳನ್ನು ತೆರೆಯುವ ದಿನಾಂಕ:**08.05.2026 ಸಂಜೆ 5.10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ ಹೊಸಪೇಟೆ.**

| ಕ್ರ ಸಂ | ಕಾಮಗಾರಿ ವಿವರ | ಟೆಂಡರ್‌ಗಿಟ್ಟ ಅಂದಾಜು ಮೊತ್ತ ಲಕ್ಷಗಳಲ್ಲಿ |
|---|---|---|
| 01 | DMA/2025-26/EL/WORK_INDENT53610/CALL-2 | 8.52 |

ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ–ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026–27/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/63
ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ.

---

**CHANGE OF NAME**
I, **AKEEL AHAMED** (Old Name) Resident of H No 106/3 Muslim Galli, Sirsi 581401 (address), have changed my name as **AKEEL AHAMED NOORULAMEEN JAILOR** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **SANDEEP KANTILAL BOHRA** (Old Name) Resident at CTS No 3213/3220 Mishri Hemakunj Bhuspeth MV Galli Hubballi - 580028, in the Distrct of Dharwad in Karnataka state, have changed my name as **SANDEEP BOHARA** (New Name) for all purposes affidavit Dtd.: 05-05-2026 sworn before notary **M. B. Sunkad.**



**CHANGE OF NAME**
I, **SHAHINA BEGAUM PATEL** (Old Name) Resident of House No: 838 Bus Stand Road Haliyal, have changed my name as **SHAHINA BEGAM AHMEDSAB PATEL** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **MOHAMMAD JAFFAR SADIQ** (Old Name) Resident of Hafiza Manzil 1st Cross, Jannath Nagar. Sagar 577401 (address), have changed my name as **MOHAMMED JAFER SADIQ** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **DEEPA KURER** (Old Name) Resident of Plot No: 262, Behind SBI, Shivabasav Nagar, Belagavi - 590010, have changed my name as **DEEPA ASHOK KURER** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **PADMARAJ ERESEEMI** (Old Name) Resident of H No 108 4th Satge Akshay Colony Behind Chetana Collage Vidyanagar Hubli 580021 (address), have changed my name as **PADMARAJ YERESHIMI** (New Name) henceforth I will be called and recognized by new name for all future purposes, dated: 05/05/2026.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

**CHANGE OF NAME**
I, **SNEHA H C** have changed my minor daughter name form **ANANYA HARSHAKUMAR CHIKKANARAGUND** (Old Name) To **ANANYA HARSHAKUMAR** (New Name) Resident of H. No: 54, Tejaswinagar, Dharwad - 580004, henceforth I will be called and recognized by new name for all future purposes, dated: 05/05/2026.

**CHANGE OF NAME**
I, **MUBEENA** (Old Name) Resident of Mubeena Mansion, Near Noorani Masjid Road, S N Nagar, Sagar - 577401, have changed my name as **MUBEENA MOHAMED IRSHAD** (New Name) henceforth I will be called and recognized by new name for all future purposes, dated: 05/05/2026.


**CHANGE OF NAME**
I, **MEHATAB AHMED DANDOTI** (Old Name) Resident of 224, 1st Cross Islampur Old Hubli, Hubli - 580024, have changed my name as **MEHATAB AHMED KHADERSAHEB DANDOTI** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **MAHADEVAPPA BANAKAR** (Old Name) Resident of Basavanagudi Nagar Devaragudda Road Ranebennur, Dist: Haveri - 5811155, have changed my name as **MAHADEVAPPA FAKKIRAPPA BANAKAR** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **HAJARATHABI GULEDGUDDA** (Old Name) Resident of Khadriya Nagar Hulgur, Tq: Shiggaon Dist: Haveri - 581126, have changed my name as **HAJARATABI JAMEELSAB GULEDGUDDA** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **IJAJAHAMAD BEPARI ABDULKHADAR** (Old Name) Resident of Makan Galli Byadag, Dist: Haveri - 581106, have changed my name as **IJAJAHAMAD BEPARI** (New Name) henceforth I will be called and recognized by new name for all future purposes, dated: 05/05/2026.

**CHANGE OF NAME**
I, **ASPIYA BANAGAR** (Old Name) Resident of At Post Teggihalli, Tq Savanur, Dist: Haveri - 581118, have changed my name as **ASPIYA MOULALI BANAGAR** (New Name) henceforth I will be called and recognized by new name for all future purposes, dated: 05/05/2026.




## ಐಪಿಎಲ್-2026 ಅಂಕಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಅಂಕ | ರನ್‌ರೇಟ್ |
|---|---|---|---|---|---|---|
| ಪಂಜಾಬ್ | 9 | 6 | 2 | 1 | 13 | +0.855 |
| ಆರ್‌ಸಿಬಿ | 9 | 6 | 3 | 0 | 12 | +1.420 |
| ಹೈದರಾಬಾದ್ | 10 | 6 | 4 | 0 | 12 | +0.644 |
| ರಾಜಸ್ಥಾನ | 10 | 6 | 4 | 0 | 12 | +0.510 |
| ಗುಜರಾತ್ | 10 | 6 | 4 | 0 | 12 | -0.147 |
| ಚೆನ್ನೈ | 9 | 4 | 5 | 0 | 8 | +0.005 |
| ದಿಲ್ಲಿ | 9 | 4 | 5 | 0 | 8 | -0.895 |
| ಕೆಕೆಆರ್ | 9 | 3 | 5 | 1 | 7 | -0.539 |
| ಮುಂಬೈ | 10 | 3 | 7 | 0 | 6 | -0.649 |
| ಲಖನೌ | 9 | 2 | 7 | 0 | 4 | -1.076 |

ಕುಸಿದ ಕ್ಯಾಪಿಟಲ್ಸ್‌ಗೆ ರಿಜ್ವಿ, ಸ್ಟಬ್ಸ್ ಆಸರೆ | ಚೆನ್ನೈಗೆ 156 ರನ್ ಗುರಿ | ನೂರ್ ಅಹ್ಮದ್ ಕೈಚಳಕ

# ಸಮೀರ್ ಇಂಪ್ಯಾಕ್ಟ್ ಆಟ: ದಿಲ್ಲಿ 156/7

**• ಹೊಸದಿಲ್ಲಿ:** ಚೆನ್ನೈ ತಂಡದ ಸಂಘಟಿತ ಬೌಲಿಂಗ್ ದಾಳಿಗೆ ಕುಸಿದ ದಿಲ್ಲಿ ತಂಡಕ್ಕೆ ಇಂಪ್ಯಾಕ್ಟ್ ಆಟಗಾರ ಸಮೀರ್ ರಿಜ್ವಿ(40; 24ಎ, 4ಸಿ) ಮತ್ತು ಭರವಸೆಯ ಬ್ಯಾಟರ್ ಸ್ಟಬ್ಸ್ (38, 31ಎ, 1ಬೌ, 2ಸಿ) ಆಸರೆಯಾದ ನಂತರ ಕ್ಯಾಪಿಟಲ್ಸ್ ಸ್ಪರ್ಧಾತ್ಮಕ ಗುರಿ ನಿರ್ಮಿಸಿದೆ.

ಒಂದು ಹಂತದಲ್ಲಿ 69 ರನ್ ಮಾತ್ರಕ್ಕೆ 5 ವಿಕೆಟ್ ಬಿದ್ದರೂ ಚೇತರಿಸಿಕೊಂಡ ದಿಲ್ಲಿ ಫೈಟ್ ಕೊಡಬಹುದಾದ ಮೊತ್ತ ನಿರ್ಮಿಸಿದೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ದಿಲ್ಲಿ ತಂಡದ ಮೂಲಕ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಮಹತ್ವ ಮತ್ತೊಮ್ಮೆ ಗೋಚರಿಸಿದೆ. ಇಂಪ್ಯಾಕ್ಟ್ ಆಗಿ ಬಂದ ಸಮೀರ್ ಏಕಪಕ್ಷೀಯವಾಗಿದ್ದ ಪಂದ್ಯಕ್ಕೆ ಜೀವ ತುಂಬಿದ್ದಾರೆ.

**ಪವರ್‌ಪ್ಲೇ:** ಟಾಸ್ ಗೆದ್ದ ದಿಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಮೋಡ ಕವಿದ ವಾತಾವರಣದಲ್ಲೇ ಬ್ಯಾಟಿಂಗ್‌ಗಿಳಿದ ದಿಲ್ಲಿ ಹಿನ್ನಡೆ ಅನುಭವಿಸಿತು. ಮೊದಲಿನ ಓವರ್‌ನಲ್ಲಿ ಹೆಚ್ಚಿನ ರನ್ ಪಡೆಯಲಿಲ್ಲ. ಎರಡನೇ ಓವರ್‌ನಲ್ಲಿ ಪಾಥುಮ್ ನಿಸ್ಸಂಕಾ ಕ್ಯಾಚಿತ್ತರು. ನಾಲ್ಕನೇ ಓವರ್‌ವರೆಗೂ ದಿಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಅಕೀಲ್ ಹುಸೈನ್ ತಮ್ಮ ಎರಡನೇ ಓವರ್‌ನ ಮೊದಲ ಬಾಲ್‌ನಲ್ಲಿ ಅಪಾಯಕಾರಿ ರಾಹುಲ್ ವಿಕೆಟ್ ಪಡೆದರು. ಪಂದ್ಯದ ಗತಿ ಚೆನ್ನೈ ಕಡೆ ಸಾಗಿತು. ಮೂರನೇ ಕ್ರಮಾಂಕದಲ್ಲಿ ನಿತೀಶ್ ರಾಣಾ ಮತ್ತು ಕರುಣ್ ನಾಯರ್ ಕೊಂಚ ಹೊತ್ತು ನಿಧಾನ ಬ್ಯಾಟಿಂಗ್ ಮಾಡಿದರು. ಪವರ್ ಪ್ಲೇ ಅಂತ್ಯಗೊಂಡಿತು.





ದಿಲ್ಲಿ 37 ರನ್ ಗಳಿಸಿ 2 ವಿಕೆಟ್ ಕಳೆದುಕೊಂಡಿತ್ತು.

**ನೂರ್ ಕಮಾಲ್:** ಹುಸೈನ್ ಮತ್ತು ನೂರ್ ಅಹ್ಮದ್ ಕರಾರುವಾಕ್ ದಾಳಿ ಸಂಘಟಿಸಿದರು. ಮಧ್ಯಮ ಓವರ್‌ಗಳ ಆರಂಭದಲ್ಲಿ ನೂರ್ ಕರುಣ್‌ಗೆ ಪೆವಿಲಿಯನ್ ದಾರಿ ತೋರಿಸಿದರು. ನಾಯಕ ಅಕ್ಷರ್ ಪಟೇಲ್ ಬಂದ ತಕ್ಷಣ ಸೆಟ್ ಆಗುವ ಮುಲಾಜಿಗೆ ಬಿದ್ದರು. ಅತ್ತ ಮುಂದಿನ ಓವರ್‌ನಲ್ಲಿ ನೂರ್ ನಿತೀಶ್‌ಗೆ ಖೆಡ್ಡಾ ತೋಡಿದರು. ನಿತೀಶ್ ಹಿಂದೆಯೇ ಅಕ್ಷರ್ ಪೆವಿಲಿಯನ್‌ನತ್ತ ಸಾಗಿದರು. 2 ರನ್ ಮಾತ್ರಕ್ಕೆ ಅವರು ಗುರ್ಜಾಪ್ನೀತ್‌ಗೆ ಕ್ಯಾಚಿತ್ತರು. 69 ರನ್ ಅನ್ನುವಷ್ಟರಲ್ಲಿ ದಿಲ್ಲಿ 5 ವಿಕೆಟ್ ಕಳೆದುಕೊಂಡಿತು. ಆಗ ಸಮೀರ್ ರಿಜ್ವಿ ಅವರನ್ನು ಇಂಪ್ಯಾಕ್ಟ್ ಆಟಗಾರರನ್ನಾಗಿ ಬಳಸಿಕೊಳ್ಳುವ ಅನಿವಾರ್ಯತೆ ಹುಟ್ಟಿತು.

**ಸ್ಟಬ್ಸ್ ಆಸರೆ:** ಮಧ್ಯಮ ಕ್ರಮಾಂಕದಲ್ಲಿ ದಿಲ್ಲಿಗೆ ಸ್ಟಬ್ಸ್ ಆಸರೆಯಾದರು. ಮೊದಲಿಗೆ ಸಿಂಗಲ್‌ಗಳ ಮೂಲಕ ಸೆಟ್ ಆದ ಅವರು, ವಿಕೆಟ್ ಉಳಿಸಿದ್ದಲ್ಲದೆ, ತಂಡದ ಆಶಾಕಿರಣವಾದರು. ಗುರ್ಜಾಪ್ನೀತ್ ಖೆಡ್ಡಾ ತೋಡಿದ್ದರೂ, ನೂರ್ ಕ್ಯಾಚ್ ಬಿಟ್ಟರು. ಅಲ್ಲಿಂದ ಸ್ಟಬ್ಸ್ ಬೌಂಡರಿಗಳೊಂದಿಗೆ ಶುರು ಮಾಡಿತು. ಸಮೀರ್‌ಗೆ ವಿಕೆಟ್ ಉಳಿಸುವುದೊಂದೇ ಕೆಲಸವಿತ್ತು. ಮಧ್ಯಮ ಓವರ್‌ವರೆಗೂ ಈ ಜೋಡಿ ಬ್ಯಾಟಿಂಗ್ ಮಾಡಿತು. ಅಲ್ಲಿ 3 ವಿಕೆಟ್ ಕಳೆದುಕೊಂಡ ದಿಲ್ಲಿ 72 ರನ್ ಗಳಿಸಿತು.

**ಡೆತ್ ಓವರ್:** ಇಬ್ಬರೂ ಸೆಟ್ ಆಗಿದ್ದರು. ಡೆತ್‌ನಲ್ಲಿ ದಂಡಿಸುವುದೊಂದೇ ಬಾಕಿಯಿತ್ತು. 17ನೇ ಓವರ್ ಮಾಡಲು ಬಂದ ಗುರ್ಜಾಪ್ನೀತ್ ಹೆಚ್ಚಿನ ರನ್ ಬಿಟ್ಟು ಕೊಡಲಿಲ್ಲ. ಆದರೆ 18ನೇ ಓವರ್ ಬೌಲಿಂಗ್ ಮಾಡಲು ಬಂದ ಡೆತ್ ಓವರ್ ಸ್ಪೆಷಲಿಸ್ಟ್ ಅನ್ಶುಲ್ ಎರಡು ಸಿಕ್ಸರ್ ಕೊಟ್ಟರು. ವೈಡ್ ಯಾರ್ಕರ್ ಎಸೆಯಲೆತ್ನಿಸಿದ ಅವರ ಯೋಜನೆಗೆ ಸಮೀರ್ ಸ್ಕೂಪ್ ಮೂಲಕ ಸಿಕ್ಸ್ ಬಾರಿಸಿದರು. 19ನೇ ಓವರ್‌ನಲ್ಲಿ ಓವರ್‌ಟನ್ ಉತ್ತಮ ಬೌಲಿಂಗ್ ಮಾಡಿ ಸ್ಟಬ್ಸ್ ವಿಕೆಟ್ ಪಡೆದರು. 31 ಬಾಲ್ ಎದುರಿಸಿದ ಸ್ಟಬ್ಸ್ 38 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಸಮೀರ್ ಮತ್ತೆರಡು ಸಿಕ್ಸರ್ ಬಾರಿಸಿದರು. 24 ಬಾಲ್ ಎದುರಿಸಿದ ಅವರು ಔಟಾಗದೇ 40 ರನ್ ಗಳಿಸಿದರು. ದಿಲ್ಲಿ ಡೆತ್ ಓವರ್‌ನಲ್ಲಿ 46 ರನ್ ಗಳಿಸಿತು. ಒಟ್ಟು 155 ರನ್ ಗಳಿಸಿತು.

## ಕಿರುಸುದ್ದಿ

### ಬೆಂಗಳೂರಿನಿಂದ ಐಪಿಎಲ್ ಫೈನಲ್ ಪಂದ್ಯ ಸ್ಥಳಾಂತರ?

**• ಮುಂಬೈ:** ಟಿಕೆಟ್ ಹಂಚಿಕೆ ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪ್ಲೇಆಫ್ ಮತ್ತು ಫೈನಲ್ ಪಂದ್ಯದ ಆಯೋಜನೆ ಅವಕಾಶ ಕಳೆದುಕೊಳ್ಳಲಿದೆ. ಪಂದ್ಯಾವಳಿಯ ಪ್ಲೇಆಫ್ ಹತ್ತಿರವಾದಂತೆ ಬಿಸಿಸಿಐ ಬೆಂಗಳೂರಲ್ಲಿ ಆಡಿಸಲು ನಿರ್ಧರಿಸಿದ್ದ ಒಂದು ಪ್ಲೇಆಫ್ ಪಂದ್ಯ ಮತ್ತು ಫೈನಲ್ ಪಂದ್ಯವನ್ನು ಸ್ಥಳಾಂತರಿಸಲು ಚಿಂತನೆ ನಡೆಸಿದೆ ಎಂದು ವರದಿಯಾಗಿದೆ. ರಾಜ್ಯದ ಶಾಸಕರಿಗೆ ಟಿಕೆಟ್ ನೀಡುವ ವಿಚಾರ, ಸಿಸಿ ಕ್ಯಾಮೆರಾ ಮತ್ತು ಮೂಲ ಸೌಕರ್ಯ ಕೊರತೆ ಇದಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ.

» ಶಾಸಕರಿಗೆ ಟಿಕೆಟ್ ವಿಚಾರ
» ಮುಂಚೂಣಿಯಲ್ಲಿ ಅಹಮದಾಬಾದ್, ಮುಂಬೈ, ಕೋಲ್ಕತ್ತಾ

ಕಲಾಪದಲ್ಲಿ ಶಾಸಕರು ಐಪಿಎಲ್ ಟಿಕೆಟ್ ನೀಡಬೇಕೆಂಬ ಬೇಡಿಕೆ ಇಟ್ಟಿದ್ದರು. ಇದರ ಪರಿಣಾಮದಿಂದಾಗಿ ಎಲ್ಲಾ ಶಾಸಕರಿಗೂ ಟಿಕೆಟ್ ನೀಡುವುದಾಗಿ ಕೆಎಸ್‌ಸಿಎ ಹೇಳಿ, ಹಿಂದಿನ ಪಂದ್ಯಗಳ ಸಮಯದಲ್ಲಿ ಟಿಕೆಟ್ ಕೊಟ್ಟಿತ್ತು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಬಿಸಿಸಿಐ ಫೈನಲ್ ಆತಿಥ್ಯ ಬಗ್ಗೆ ಮರುಪರಿಶೀಲನೆ ನಡೆಸುವ ಸಾಧ್ಯತೆಗಳಿವೆ. ಹಾಲಿ ಚಾಂಪಿಯನ್ ತಂಡದ ತವರು ಫೈನಲ್ ಮತ್ತು ಒಂದು ಪ್ಲೇಆಫ್ ಪಂದ್ಯಕ್ಕೆ ಆತಿಥ್ಯ ನೀಡುವುದು ಐಪಿಎಲ್‌ನ ವಾಡಿಕೆ. ಅದರಂತೆ ಬೆಂಗಳೂರಿನ ಚಿನ್ನಸ್ವಾಮಿಯಲ್ಲೇ ಎರಡೂ ಪಂದ್ಯಗಳು ನಡೆಯಲಿವೆ ಎಂದು ಹೇಳಲಾಗಿತ್ತು. ಶೀಘ್ರದಲ್ಲೇ ಬಿಸಿಸಿಐ ಪ್ಲೇಆಫ್ ವೇಳಾಪಟ್ಟಿ ಶೀಘ್ರದಲ್ಲೇ ಪ್ರಕಟಿಸಲಿದೆ. ಬೆಂಗಳೂರು ಬಿಟ್ಟರೆ, ಅಹಮದಾಬಾದ್, ಕೋಲ್ಕತ್ತಾ ಮತ್ತು ಮುಂಬೈ ಮುಂಚೂಣಿಯಲ್ಲಿವೆ.

### ವೇಟ್‌ಲಿಫ್ಟಿಂಗ್: ಯಶ್‌ಗೆ ಬೆಳ್ಳಿ

**• ಹೊಸದಿಲ್ಲಿ:** ಈಜಿಪ್ಟ್‌ನ ಇಸ್ಮಾಯಿಲಿಯಾದಲ್ಲಿ ನಡೆದ ವಿಶ್ವ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪುರುಷರ 71 ಕೆಜಿ ವಿಭಾಗದಲ್ಲಿ ಯಶ್ ಖಂಡಗಾಲೆ ಒಟ್ಟು 309 ಕೆಜಿ ತೂಕ ಹೆಚ್ಚಿಸಿ ಒಟ್ಟಾರೆ ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕ ಗೆದ್ದರು. 'ಬಿ' ಗುಂಪಿನಲ್ಲಿ ಸ್ಪರ್ಧಿಸಿದ ಖಂಡಗಾಲೆ ಸ್ನ್ಯಾಚ್‌ನಲ್ಲಿ 140 ಕೆಜಿ ಮತ್ತು ಕ್ಲೀನ್ ಮತ್ತು ಜರ್ಕ್‌ನಲ್ಲಿ 169 ಕೆಜಿ ತೂಕ ಎತ್ತಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು. ಅವರ ಒಟ್ಟು ಮೊತ್ತವು ಚಿನ್ನದ ಪದಕ ವಿಜೇತ ಫಿಲಿಪ್ಪೈನ್ಸ್‌ನ ಆಲ್ಬರ್ಟ್ ಇಯಾನ್ ಡೆಲೋಸ್ ಸ್ಯಾಂಟೋಸ್ (326 ಕೆಜಿ) ಅವರ ಹಿಂದೆ ಇತ್ತು. ಈಕ್ವೆಡಾರ್‌ನ ಜಿಮ್ಮಿ ಲೋಪೆಜ್ (301 ಕೆಜಿ) ಕಂಚಿನ ಪದಕ ಗೆದ್ದರು.

### ರಾಜಸ್ಥಾನ್ ರಾಯಲ್ಸ್ ಮಾಲಿಕತ್ವ ವಿಚಾರ: ಸೋಮಾನಿ ನಿರಾಸೆ

**• ಜೈಪುರ:** ಅಮೆರಿಕ ಮೂಲದ ಹೂಡಿಕೆದಾರ ಕಾಲ್ ಸೋಮಾನಿ ನೇತೃತ್ವದ ಕನ್ಸಾರ್ಟಿಯಂ, ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯ ಮಾಲೀಕತ್ವ ಪಡೆಯುವ ಅವಕಾಶ ತಪ್ಪಿದ ಹಿನ್ನೆಲೆಯಲ್ಲಿ ನಿರಾಸೆ ವ್ಯಕ್ತಪಡಿಸಿದೆ. ಮಾರ್ಚ್‌ನಲ್ಲಿ ಬಂದ ವರದಿಗಳ ಪ್ರಕಾರ, ಈ ಕನ್ಸಾರ್ಟಿಯಂ ಸುಮಾರು 100 ಶೇಕಡಾ ಹಂಚಿಕೆಯನ್ನು 1.63 ಬಿಲಿಯನ್ ಅಮೆರಿಕನ್ ಡಾಲರ್ (ಸುಮಾರು 16,290 ಕೋಟಿ ರೂಪಾಯಿ)ಗೆ ಖರೀದಿಸಲು ಮುಂದಾಗಿತ್ತು. ಆದರೆ, ಭಾನುವಾರ ರಾಜಸ್ಥಾನ್ ರಾಯಲ್ಸ್ ತಂಡವನ್ನು ಮಿತ್ತಲ್ ಕುಟುಂಬ ಹಾಗೂ ಆದಾರ್ ಪೂನವಾಲಾ ಸಹಭಾಗಿತ್ವದಲ್ಲಿ ಸುಮಾರು 1.65 ಬಿಲಿಯನ್ ಡಾಲರ್‌ಗೆ ಪಡೆದುಕೊಂಡಿರುವುದಾಗಿ ಘೋಷಿಸಲಾಯಿತು. ಉಳಿದ ಸುಮಾರು 7 ಶೇಕಡಾ ಹಂಚಿಕೆಯನ್ನು ಮನುಜ್ ಬಡಾಲೆ ಸೇರಿದಂತೆ ಇತ್ತೀಚಿನ ಹೂಡಿಕೆದಾರರು ಕಾಯ್ದುಕೊಳ್ಳಲಿದ್ದಾರೆ. ಸೋಮಾನಿ ನೇತೃತ್ವದ ಗುಂಪು ಪ್ರಕಟಣೆಯಲ್ಲಿ, ಆರು ತಿಂಗಳ ಕಾಲ ನಡೆದ ಪ್ರಕ್ರಿಯೆಯಲ್ಲಿ ನಾವು ಆರಂಭದಿಂದ ಅಂತ್ಯವರೆಗೆ ಮುಂಚೂಣಿಯ ಬಿಡ್ ನೀಡಿದ್ದರೂ, ಅಂತಿಮವಾಗಿ ರಾಜಸ್ಥಾನ ರಾಯಲ್ಸ್ ಮಾಲೀಕತ್ವದ ಭಾಗವಾಗಲು ಸಾಧ್ಯವಾಗದೇ ನಿರಾಸೆ ಉಂಟಾಗಿದೆ ಎಂದು ತಿಳಿಸಿದೆ.

ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್ ಭರ್ಜರಿ ಗೆಲುವು

# ರಯಾನ್-ರೋಹಿತ್ ಶರ್ಮ ಅಬ್ಬರಕ್ಕೆ ನಲುಗಿದ ಲಖನೌ

**• ಮುಂಬೈ:** ಬ್ಯಾಟರ್‌ಗಳ ಹೊಡೆದಾಟದಲ್ಲಿ ಮುಂಬೈ ಇಂಡಿಯನ್ಸ್ ಲಖನೌ ಸೂಪರ್ ಜೇಂಟ್ಸ್ ತಂಡವನ್ನು 8 ಬಾಲ್ ಉಳಿದಿರುವಂತೆ 6 ವಿಕೆಟ್‌ಗಳಿಂದ ಗೆದ್ದಿದೆ.

ಪೂರಣ್(63) ಅವರ ಬಿರುಸಿನ ಬ್ಯಾಟಿಂಗ್ ನಂತರ 229 ರನ್ ಗುರಿ ಪಡೆದಿದ್ದ ಮುಂಬೈ, ರಯಾನ್ ರಿಕೆಲ್ಟನ್(83), ರೋಹಿತ್ ಶರ್ಮ(84) ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 18.4 ಓವರ್‌ಗಳಲ್ಲಿ ಪೇರಿಸಿ ಗೆದ್ದಿತು. ಇದರೊಂದಿಗೆ ಸತತ ಸೋಲುಗಳಿಂದ ಕಂಗೆಟ್ಟಿರುವ ಮುಂಬೈ ಪ್ಲೇಆಫ್‌ನ ರೇಸ್‌ನಲ್ಲಿ ಉಳಿದಿದೆ. ಆದಾಗ್ಯೂ ಮುಂಬೈ ಅರ್ಹತೆ ಪಡೆಯಲು ಮಿರ್ಯಾಕಲ್ ನಡೆಯಲೇ ಬೇಕು.

ಲಖನೌ ಸೂಪರ್ ಜೇಂಟ್ಸ್ ತಂಡದಲ್ಲಿ ಒಮ್ಮೆ ಬ್ಯಾಟಿಗರು ಕೈಕೊಟ್ಟರೆ ಒಮ್ಮೆ ಬೌಲರ್‌ಗಳು ಕೈಕೊಡುತ್ತಿದ್ದು, ಐಪಿಎಲ್‌ನಲ್ಲಿ ಏಳನೇ ಸೋಲು ಕಂಡಿತು. ಕಳೆದ ಲಖನೌ ಪಂದ್ಯದಲ್ಲಿ ಬೌಲರ್‌ಗಳು ಮಿಂಚಿದ್ದರು. ರಾಜಸ್ಥಾನ ತಂಡವನ್ನು 155 ಮತ್ತು ಕೆಕೆಆರ್ ತಂಡವನ್ನು ಸಣ್ಣ ಮೊತ್ತಕ್ಕೆ ತಡೆದಿತ್ತು. ಆದರೆ ಆ ಎರಡೂ ಪಂದ್ಯಗಳಲ್ಲಿ ಬ್ಯಾಟರ್‌ಗಳು ಕೈಕೊಟ್ಟರು. ಲಖನೌ ಸಾಮಾನ್ಯ ಗುರಿಯನ್ನೂ ಪೇರಿಸಲಿಲ್ಲ. ಮುಂಬೈ ವಿರುದ್ಧದ ಪಂದ್ಯದಲ್ಲಿ ಬ್ಯಾಟರ್‌ಗಳು ಅಬ್ಬರಿಸಿದ್ದಾರೆ. ಮಾರ್ಷ್, ಪೂರಣ್ ತಮ್ಮ ಲಯಕ್ಕೆ ಮರಳಿದ್ದಾರೆ. ಆದರೆ ಈ ಪಂದ್ಯದಲ್ಲಿ ಬೌಲರ್‌ಗಳು ಕೈಕೊಟ್ಟರು. ಯಾರೊಬ್ಬರೂ ಕೈಹಿಡಿಯಲಿಲ್ಲ, ಎಲ್ಲರೂ ದುಬಾರಿಯಾದರು.

**ಲಖನೌ ಉತ್ತಮ ಬ್ಯಾಟಿಂಗ್:** ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಪವರ್‌ಪ್ಲೇನಲ್ಲಿ ನಿಕೋಲಸ್ ಪೂರಣ್, ಮಾರ್ಷ್ ಅಬ್ಬರದೊಂದಿಗೆ 90 ರನ್ ಗಳಿಸಿತು. ಮಧ್ಯಮ ಓವರ್‌ಗಳೊಗೂ ಪೂರಣ್ ಹೊಡೆತ ವಿಸ್ತರಿಸಿದ ನಂತರ ಅಲ್ಲಿ 4 ವಿಕೆಟ್ ಕಳೆದುಕೊಂಡು 102 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ನಿಧಾನಗತಿ ಬ್ಯಾಟಿಂಗ್ ಮಾಡಿದ ಮಾರ್ಕ್ರಂ ಮತ್ತು ಹಿಮ್ಮತ್ 36 ರನ್ ಮಾತ್ರ ಗಳಿಸಿದರು. ನಿಧಾನವಾಗಿ ರನ್ ಮಟ್ಟ ಇಳಿಸಿಕೊಂಡ ಲಖನೌ 228 ರನ್ ಮಾತ್ರ ಗಳಿಸಿತು.

**ರಯಾನ್-ರೋಹಿತ್ ಅಬ್ಬರ:** ಮುಂಬೈಗೆ ರಯಾನ್ ರಿಕೆಲ್ಟನ್ ಮತ್ತು ಇದೇ ಪಂದ್ಯದ ಮೂಲಕ ಮರಳಿದ ರೋಹಿತ್ ಶರ್ಮ ಅಬ್ಬರದ ಆರಂಭ ನೀಡಿದರು. ಪವರ್‌ಪ್ಲೇನಲ್ಲಿ 70 ರನ್ ಬಂದರೆ 8 ಸಿಕ್ಸರ್ ಬಾರಿಸಿದ ರಯಾನ್ ರನ್ ವೇಗ ಏರಿಸಿದರು. 32 ಬಾಲ್ ಮಾತ್ರದಲ್ಲಿ 82 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮುಂದೆ ರೋಹಿತ್ ಆಬರ. ಒಂದು ಹಂತದಲ್ಲಿ ಮೊದಲಿನ ಹತ್ತು ಬಾಲ್‌ಗಳಲ್ಲಿ ನೂರರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಹಿಟ್‌ಮ್ಯಾನ್ ಮುಂದೆ ಬೌಂಡರಿ-ಸಿಕ್ಸರ್‌ಗಳ ಸುರಿಮಳೆಗೈದರು. ಮಧ್ಯಮ ಓವರ್‌ಗಳ ಮುಕ್ತಾಯಕ್ಕೆ ಅವರು 44 ಬಾಲ್‌ಗಳಲ್ಲಿ 84 ರನ್ ಚಚ್ಚಿದರು. 6 ಬೌಂಡರಿ ಮತ್ತು 7 ಸಿಕ್ಸರ್‌ಗಳು ಈ ಇನ್ನಿಂಗ್ಸ್‌ನಲ್ಲಿ ಸೇರಿವೆ. 16 ಓವರ್‌ಗಳಲ್ಲಿ ಮುಂಬೈ 190 ರನ್ ಗಳಿಸಿತ್ತು. ಉಳಿದ ರನ್‌ಗಳನ್ನು ಹೊಡೆಯುವಷ್ಟರಲ್ಲಿ 3 ವಿಕೆಟ್ ಉರುಳಿದವು. ಸೂರ್ಯಕುಮಾರ್(12) ತಿಲಕ್ (11) ಮತ್ತೊಮ್ಮೆ ವಿಫಲರಾದರು. ನಮನ್ ಧಿರ್ ಉಳಿದ ರನ್‌ಗಳನ್ನು ಬಾರಿಸಿ ಪಂದ್ಯ ಗೆಲ್ಲಿಸಿದರು. ಡೆತ್ ಓವರ್‌ನಲ್ಲಿ ಮುಂಬೈ 39 ರನ್‌ಗಳಿಸಿತು.



### ಸಂಕ್ಷಿಪ್ತ ಸ್ಕೋರ್

**ಲಖನೌ 20 ಓವರ್‌ಗಳಲ್ಲಿ 228/5:**
ಪೂರಣ್ 63, ಮಾರ್ಷ್ 44; ಬಾಷ್ 20/2
**ಮುಂಬೈ 18.4 ಓವರ್‌ಗಳಲ್ಲಿ 229/4:**
ರೋಹಿತ್ 84, 83; ಸಿದ್ಧಾರ್ಥ್ 47/2

ಹೈದರಾಬಾದ್‌ಗೆ ಗೆಲುವಿನ ಹಂಬಲ | ವಿಶ್ವಾಸದಲ್ಲಿ ಪಂಜಾಬ್


# ಸನ್‌ಗೆ ಪಂಜಾಬ್ ಕಿಂಗ್ಸ್ ಸವಾಲು

**• ಹೈದರಾಬಾದ್:** ಸತತ ಸೋಲಿನೊಂದಿಗೆ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಮತ್ತು ಎರಡು ಸೋಲಿನೊಂದಿಗೆ ನಿರಾಸೆ ಅನುಭವಿಸಿರುವ ಪಂಜಾಬ್ ತಂಡಗಳು ಬುಧವಾರ ನಡೆಯಲಿರುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಂಜಾಬ್ ಅಗ್ರ ಸ್ಥಾನದಲ್ಲಿರುವುದರಿಂದ ಇನ್ನೂ ಅವಕಾಶಗಳನ್ನು ಹೊಂದಿದೆ. ಆದರೆ ಹೈದರಾಬಾದ್ ಮೂರನೇ ಸ್ಥಾನದಲ್ಲಿದ್ದರೂ ಹೈದರಾಬಾದ್‌ನೊಂದಿಗೆ ಗೆಲ್ಲಬೇಕಾದ ಒತ್ತಡವಿದೆ. ಅಂಕಪಟ್ಟಿಯ ಹೊಡೆದಾಟ ಗಮನಿಸಿದರೆ ಎರಡೂ ತಂಡಗಳಿಗೆ ಇದು ಪ್ರಮುಖ ಪಂದ್ಯವಾಗಿರಲಿದೆ. ಜಯ ಗಳಿಸಿದರೆ ಸನ್ ಇನ್ನಷ್ಟು ಭದ್ರವಾಗಲಿದೆ. ಪಂಜಾಬ್ ಗೆದ್ದರೆ ಅಗ್ರಸ್ಥಾನ ಗಟ್ಟಿಗೊಳಿಸಲಿದೆ.

**ಗೆಲುವಿನ ಹಂಬಲದಲ್ಲಿ ಹೈದರಾಬಾದ್:** ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗ್ಯೂ ತಂಡ ಬೌಲಿಂಗ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿದೆ. ಕಳೆದ ಪಂದ್ಯದಲ್ಲಿ ಎಲ್ಲಾ ಬೌಲರ್‌ಗಳು ದುಬಾರಿಯಾಗಿದ್ದಾರೆ. ಕ್ಲಾಸೆನ್, ಇಶಾನ್ ಕಿಶನ್ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದರೂ ಅತ್ಯುತ್ತಮ ಫಿನಿಶ್ ತಂಡ ಪಡೆಯುತ್ತಿಲ್ಲ. ಹೆಡ್ ಕಳೆದೆರಡು ಪಂದ್ಯಗಳಲ್ಲಿ ತಮ್ಮ ಅಸಲು ಬ್ಯಾಟಿಂಗ್ ಲಯಕ್ಕೆ ಬಂದಿದ್ದಾರೆ. ಪ್ಯಾಟ್ ಕಮ್ಮಿನ್ಸ್, ಸಾಕೀಬ್ ಲಯದಲ್ಲಿದ್ದರೆ ಇನ್ನುಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ. ಶಿವಾಂಗ್ ತಂಡದಲ್ಲಿ ಲಯದಲ್ಲಿರುವ ಏಕೈಕ ಸ್ಪಿನ್ನರ್ ಆಗಿ ಹೊರಹೊಮ್ಮಿದ್ದಾರೆ.

**ಲಯಕ್ಕೆ ಮರಳೀತೇ ಪಂಜಾಬ್?:** ಪಂಜಾಬ್ ಕಿಂಗ್ಸ್ ತಂಡ ಆಡಿರುವ ಎಲ್ಲಾ ಪಂದ್ಯಗಳಲ್ಲಿ ಚೇಸಿಂಗ್ ಮಾಸ್ಟರ್ ಆಗಿದೆ. ಚೇಸ್ ಮಾಡಿರುವ ಎಲ್ಲಾ ಪಂದ್ಯಗಳಲ್ಲೂ ಗೆದ್ದಿದೆ. ಆದರೆ ಮೊದಲು ಬ್ಯಾಟಿಂಗ್ ಮಾಡುವಾಗ ದೊಡ್ಡ ಹಿನ್ನಡೆ ಅನುಭವಿಸಿದೆ. ಕಳೆದೆರಡು ಪಂದ್ಯದಲ್ಲಿ ಅದೇ ಸ್ಥಿತಿ ಎದುರಿಸಿದೆ. ಮೊದಲು ಬ್ಯಾಟಿಂಗ್ ಮಾಡುವಾಗ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್, ಕೊನೊಲಿ ಬೇಗನೆ ವಿಕೆಟ್ ಕಳೆದುಕೊಂಡರು. ಅತ್ತ ಚೇಸಿಂಗ್ ವೇಳೆ ಮಿಂಚಿರುವ ಶ್ರೇಯಸ್ ಕೂಡ ಮೊದಲು ಬ್ಯಾಟಿಂಗ್ ಮಾಡುವಾಗ ದೊಡ್ಡ ಹಿನ್ನಡೆ ಅನುಭವಿಸಿದ್ದಾರೆ. ಸೂರ್ಯಾಂಶ್ ಸ್ಫೋಟಕ ಅರ್ಧ ಶತಕ ಬಾರಿಸಿರುವುದು ತಂಡಕ್ಕೆ ವಿಶ್ವಾಸ ತಂದಿದೆ. ಸ್ಟೋಯಿನಿಸ್ ಕೂಡ ಲಯದಲ್ಲಿದ್ದು ವಿಶ್ವಾಸ ಹೆಚ್ಚಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಅರ್ಷದೀಪ್ ದುಬಾರಿಯಾದರೆ, ಬಾರ್ಟ್‌ಲೆಟ್‌ಗೆ ವಿಕೆಟ್ ಬೀಳುತ್ತಿಲ್ಲ, ಸ್ಪಿನ್ನರ್ ಚಹಲ್‌ಗೂ ವಿಕೆಟ್ ಬೀಳುತ್ತಿಲ್ಲ. ಗೆಲುವಿನ ಹಂಬಲದಲ್ಲಿರುವ ಪಂಜಾಬ್ ಎರಡೂ ವಿಭಾಗದೊಂದಿಗೆ ಲಯಕ್ಕೆ ಮರಳೀತೇ ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.



### ಪಿಚ್ ರಿಪೋರ್ಟ್

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಟ್ರ್ಯಾಕ್ ಸ್ಪಿಂಗ್‌ಗೆ ಸಹಾಯ ಮಾಡುತ್ತಿದ್ದರೂ ಬ್ಯಾಟರ್‌ಗಳು ದೊಡ್ಡ ಹೊಡೆತದೊಂದಿಗೆ ಮಿಂಚಿದ್ದಾರೆ. ಸ್ಪಿನ್ನರ್‌ಗಳಿಗೂ ಲಾಭವಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಅಲ್ಪ ಇಬ್ಬನಿ ಕಾಟವೂ ಇದೆ.

### ಪಂದ್ಯದ ವಿವರ

**ಯಾವಾಗ: ಬುಧವಾರ**
**ಎಲ್ಲಿ: ಹೈದರಾಬಾದ್**
**ಸಮಯ: ಸಂಜೆ 7:30**
**ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್**

# ಹಾಕಿ: ಆಸೀಸ್‌ನೊಂದಿಗೆ ಭಾರತ ಸರಣಿ

**• ಹೊಸದಿಲ್ಲಿ:** ಏಷ್ಯಾ ಕಪ್ ಸಿದ್ಧತೆಯ ಭಾಗವಾಗಿ ಭಾರತೀಯ ಪುರುಷ ಮತ್ತು ಮಹಿಳಾ ಅಂಡರ್-18 ಹಾಕಿ ತಂಡಗಳು ಮೇ 15 ರಿಂದ 20 ರವರೆಗೆ ಭೋಪಾಲ್‌ನಲ್ಲಿ ನಾಲ್ಕು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿವೆ.

ಏಪ್ರಿಲ್ 19 ರಂದು ಖೇಲೋ ಭೋಪಾಲ್‌ನಲ್ಲಿ ಪ್ರಾರಂಭವಾದ ಯು-18 ರಾಷ್ಟ್ರೀಯ ತರಬೇತಿ ಶಿಬಿರದ ನಂತರದ ಎಕ್ಸ್‌ಪೋಸರ್ ಸರಣಿಯು, ಈ ತಿಂಗಳ ಕೊನೆಯಲ್ಲಿ ಜಪಾನ್‌ನ ಕಾಕಮಿಗಹರಾದಲ್ಲಿ ಪ್ರಾರಂಭವಾಗುವ ಯು-18 ಏಷ್ಯಾ ಕಪ್‌ಗೆ ಪ್ರಮುಖ ತಯಾರಿಯಾಗಿ ಕಾರ್ಯನಿರ್ವಹಿಸುತ್ತದೆ.

ಪುರುಷರ ತರಬೇತುದಾರ ಸರ್ದಾರ್ ಸಿಂಗ್ ಶಿಬಿರದ ಸಮಯದಲ್ಲಿ ಮಾಡಿದ ಪ್ರಗತಿ ಮತ್ತು ಮುಂಬರುವ ಪಂದ್ಯಗಳ ಮಹತ್ವವನ್ನು ಎತ್ತಿ ತೋರಿಸಿದರು.

ಈ ಶಿಬಿರದ ಸಮಯದಲ್ಲಿ ಪ್ರಮುಖ ಗಮನವು ಎಲ್ಲಾ ಸ್ಥಾನಗಳಲ್ಲಿ ಅವರ ಮೂಲಭೂತ ಮತ್ತು ಮೂಲಭೂತ ಅಂಶಗಳನ್ನು ಬಲಪಡಿಸುವುದು, ಆದ್ದರಿಂದ ಅವರು ಆಧುನಿಕ ಹಾಕಿಯ ಬೇಡಿಕೆಗಳಿಗೆ ಉತ್ತಮವಾಗಿ ಸಿದ್ಧರಾಗಿದ್ದಾರೆ ಮತ್ತು ಹಿರಿಯ ಹಂತದತ್ತ ಸ್ಥಿರವಾಗಿ ಮುನ್ನಡೆಯಬಹುದು. ಆಸ್ಟ್ರೇಲಿಯಾದ ಯು18 ತಂಡಗಳ ವಿರುದ್ಧ ಮುಂಬರುವ ಎಕ್ಸ್‌ಪೋಸರ್ ಪಂದ್ಯಗಳು ನಮ್ಮ ತಯಾರಿಯಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದರು.

ಟಿ20 ಶ್ರೇಯಾಂಕ ಪಟ್ಟಿ ಬಿಡುಗಡೆ | 2ನೇ ಸ್ಥಾನಕ್ಕೆ ಇಳಿದ ಇಂಗ್ಲೆಂಡ್

# ನಂಬರ್ 1 ಸ್ಥಾನಕ್ಕೆ ಮರಳಿದ ಭಾರತ

**• ದುಬೈ:** ವಿಶ್ವ ಚಾಂಪಿಯನ್, ಹಾಲಿ ಚಾಂಪಿಯನ್ ಭಾರತ ತಂಡವು ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ(ಐಸಿಸಿ) ಶ್ರೇಯಾಂಕದಲ್ಲಿ ಮೊದಲನೇ ಸ್ಥಾನಕ್ಕೇರಿದೆ. ಇಂಗ್ಲೆಂಡ್ ತಂಡವನ್ನು ಹಿಂದಿಕ್ಕಿರುವ ಭಾರತ ಪುರುಷರ ತಂಡವು ತನ್ನ ಸ್ಥಾನಕ್ಕೆ ಮರಳಿದೆ.

ಬುಧವಾರ ಪ್ರಕಟವಾಗಿರುವ ಆಧುನಿಕ ಶ್ರೇಯಾಂಕ ಪಟ್ಟಿಯಲ್ಲಿ ಭಾರತ ಅಗ್ರದಲ್ಲಿರುವುದು ಖಚಿತವಾಗಿದೆ. ಆತಿಥ್ಯ ವಹಿಸಿದ್ದ ಟಿ20 ವಿಶ್ವಕಪ್ ಗೆದ್ದಿರುವ ಭಾರತ, ಟ್ರೋಫಿ ತನ್ನಲ್ಲೇ ಉಳಿಸಿಕೊಂಡ ಏಕೈಕ ತಂಡ ಅನಿಸಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಭಾರತ ನೀಡಿರುವ ಅಸಾಧಾರಣ ಫಲಿತಾಂಶದ ಫಲವಾಗಿ ಮತ್ತೆ ಅಗ್ರಸ್ಥಾನಕ್ಕೇರಿದೆ. ಇದರೊಂದಿಗೆ ವಿಶ್ವದಲ್ಲೇ ತನಗೆ ಯಾರೂ ಸರಿಸಾಟಿಯೇ ಇಲ್ಲ ಎಂಬ ಮಾತನ್ನು ಮತ್ತೊಮ್ಮೆ ಮನವರಿಕೆ ಮಾಡಿದೆ. ಮೇ 2025ರಿಂದ ಪರಿಗಣಿಸಲಾಗಿರುವ ಸರಣಿ ಮತ್ತು ವಿಶ್ವ ಕೂಟಗಳಲ್ಲಿ ಭಾರತ ಪಾರುಪತ್ಯ ಸಾಧಿಸಿದೆ. ಇದರಿಂದಾಗಿ ತನ್ನ ನಂಬರ್ 1 ಸ್ಥಾನಕ್ಕೆ ಮರಳಿದೆ ಎಂದು ಐಸಿಸಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

275 ರೇಟಿಂಗ್ ಅಂಕಗಳನ್ನು ಹೊಂದಿರುವ ಭಾರತ ಸರ್ವಶ್ರೇಷ್ಠ ತಂಡವಾಗಿದೆ. ಎರಡನೇ ಸ್ಥಾನದಲ್ಲಿ ಇಂಗ್ಲೆಂಡ್ ಇದ್ದು 262 ಅಂಕಗಳನ್ನು ಹೊಂದಿದೆ. 258 ಅಂಕಗಳನ್ನು ಹೊಂದಿರುವ ಆಸ್ಟ್ರೇಲಿಯಾ 3ನೇ ಸ್ಥಾನದಲ್ಲಿದೆ. ನ್ಯೂಜಿಲೆಂಡ್(247), ಆಫ್ರಿಕಾ(244), ಪಾಕಿಸ್ತಾನ(240) ನಂತರದ ಸ್ಥಾನದಲ್ಲಿವೆ.



# ಆರ್ಚರಿ ವಿಶ್ವಕಪ್: ಭಾರತ ಉತ್ತಮ ಆರಂಭ

**• ಶಾಂಘೈ:** ಭಾರತದ ಪುರುಷರ ಕಾಂಪೌಂಡ್ ತಂಡವು ಆರ್ಚರಿ ವಿಶ್ವಕಪ್ ಎರಡನೇ ಹಂತದ ಅರ್ಹತಾ ಸುತ್ತಿನಲ್ಲಿ ಶ್ರೇಷ್ಠ 10 ಸ್ಥಾನಗಳಲ್ಲಿ ಸ್ಥಾನ ಪಡೆದು ಉತ್ತಮ ಆರಂಭ ಮಾಡಿದೆ. ಓಜಸ್ ದಿಯೋತಲೆ ತಂಡವನ್ನು ಮುನ್ನಡೆಸಿದರು.

2023ರಲ್ಲಿ ಬರ್ಲಿನ್‌ನಲ್ಲಿ ನಡೆದ ವಿಶ್ವ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್ ಆಗಿ ಇತಿಹಾಸ ನಿರ್ಮಿಸಿದ್ದ ದಿಯೋತಲೆ, 711 ಅಂಕಗಳನ್ನು ಪಡೆದು ಒಟ್ಟು ಏಳನೇ ಸ್ಥಾನದಲ್ಲಿದ್ದು ಭಾರತೀಯರಲ್ಲೇ ಅಗ್ರಸ್ಥಾನ ಪಡೆದರು.


ಸಾಹಿಲ್ ಜಾಧವ್ ಕೂಡ 711 ಅಂಕಗಳನ್ನು ಗಳಿಸಿ ಎಕ್ಸ್ ಎಣಿಕೆಯ ಆಧಾರದ ಮೇಲೆ ಮುಂದಿನ ಸ್ಥಾನ ಪಡೆದರೆ, ಕುಶಾಲ್ ದಲಾಲ್ 18ನೇ ಸ್ಥಾನ ಪಡೆದು ತಂಡದ ಸಮಗ್ರ ಪ್ರದರ್ಶನಕ್ಕೆ ಸಹಾಯ ಮಾಡಿದರು. ಇದರೊಂದಿಗೆ ಭಾರತ ತಂಡ ಸ್ಪರ್ಧೆಯಲ್ಲಿ ಮೂರನೇ ಸೀಡಿಂಗ್ ಪಡೆದುಕೊಂಡಿದೆ.

**ಅಭಿಷೇಕ್ 25ನೇ ಸ್ಥಾನಕ್ಕೆ:** ಆದರೆ ಏಷ್ಯನ್ ಗೇಮ್ಸ್ ಪದಕ ವಿಜೇತ ಅಭಿಷೇಕ್ ವರ್ಮಾ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡದೆ 705 ಅಂಕಗಳೊಂದಿಗೆ 25ನೇ ಸ್ಥಾನಕ್ಕೆ ತೃಪ್ತಿಪಟ್ಟರು. ತಂಡದಲ್ಲಿ ಅವಕಾಶ ತಪ್ಪಿಸಿಕೊಂಡರೂ, ವೈಯಕ್ತಿಕ ವಿಭಾಗದಲ್ಲಿ ಅವರು ಮುಂದುವರಿಯಲಿದ್ದಾರೆ. ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಅದಿತಿ ಸ್ವಾಮಿ 700 ಅಂಕಗಳೊಂದಿಗೆ 13ನೇ ಸ್ಥಾನ ಪಡೆದರು. ಅಮೆರಿಕದ ಅಲೆಕ್ಸಿಸ್ ರೂಯಿಸ್ ಅಗ್ರಸ್ಥಾನ ಪಡೆದರು. ಪ್ರಗತಿ 19ನೇ ಸ್ಥಾನ (697 ಅಂಕ) ಪಡೆದರೆ, ಜ್ಯೋತಿ ಸುರೇಖಾ ವೆನ್ನಮ್ 21ನೇ ಸ್ಥಾನಕ್ಕೆ ಜಾರಿದರು. ಈ ಮೂವರು ಸೇರಿ ಮಹಿಳಾ ತಂಡಕ್ಕೆ ಐದನೇ ಸೀಡಿಂಗ್ ಒದಗಿಸಿದ್ದಾರೆ. ಮೆಕ್ಸಿಕೋ, ದಕ್ಷಿಣ ಕೊರಿಯಾ ಹಾಗೂ ಅಮೆರಿಕ ತಂಡಗಳು ಮೊದಲ ಮೂರು ಸ್ಥಾನಗಳನ್ನು ಪಡೆದುಕೊಂಡಿವೆ. ಮಿಶ್ರ ತಂಡ ವಿಭಾಗದಲ್ಲಿ ದಿಯೋತಲೆ ಮತ್ತು ಅದಿತಿ ಸ್ವಾಮಿ ಜೋಡಿ 1411 ಅಂಕಗಳೊಂದಿಗೆ ಆರನೇ ಸೀಡಿಂಗ್ ಪಡೆದಿದೆ.



## ಪದಬಂಧ

» ರಾಜಾ ಸಂಗಮೇಶ ಹಿರೇಮಠ



**5975**

**5974 ಉತ್ತರ**

ಎಡದಿಂದ ಬಲಕ್ಕೆ:
2.ಹಸ್ತಕೌಶಲ 5.ಸಂಪಾದಕ
7.ಒಂದೇಗುರಿ
10.ದುರುಳ 11.ತೊಡುಗೆ
13.ಅಂದಣ
15.ಗುಣವಂತ
16.ರಕ್ತಪಾತ 17.ಕಟುಕಿ
ಮೇಲಿನಿಂದ ಕೆಳಕ್ಕೆ :
1.ಸಂಕಲ್ಪ 2.ಹರದ
3.ದೇಗುಲ 4.ಜುಗಾರಿ
6.ಪಾಪಭೀರು 8.ಗುಬ್ಬಿಗೂಡು 9.ಗೂಢಪಾದ
10.ದುರುಗುಟ್ಟು
12.ಗೆಳೆತನ 13.ಅಂತಕ
14.ಕಿರಣ

ಎಡದಿಂದ ಬಲಕ್ಕೆ
1.ಮೊಂಡುತನದ ಸ್ವಭಾವವುಳ್ಳವಳು (7)
3.ಆಭರಣ-ವಸ್ತ್ರ ಧರಿಸುವಂತೆ ಮಾಡು (3)
5.ಕಸದ ವಸ್ತು-ಹಳೆಯ ಸಾಮಾನು (3)
7.ಬೆಳಕಿಲ್ಲದೆ ಮಂಕಾಗಿಸು (5)
8.ಕ್ಷೀರಾನ್ನ-ಸಿಹಿಪಾಕವಿದು (3)
9.ಮೃದು ಸ್ವಭಾವದವಳು ಕಡೆಯಲ್ಲಿ ದೀರ್ಘವಾಗಿದ್ದಾಳೆ (3)
11.ಐಹಿಕ ಸುಖ ತ್ಯಜಿಸುವಿಕೆಯಿದು (3)
13.ಆನೆಯ ಶತ್ರು ಈ ಸಿಂಹ (4)
14.ತೋಳಿನ ಹಾವಿನಾಕಾರದ ಆಭರಣ (4)
15.ದಿಕ್ಕಿನ ತುದಿ ತಿರುಗಿದೆ (3)
ಮೇಲಿನಿಂದ ಕೆಳಕ್ಕೆ
1.ದುಡಿಯ ನಡುವೆ ಕಡಿವಾಣವಡಗಿದೆ (3)
2.ಮಗ/ಮಗಳನ್ನು ಹೀಗೂ ಹೇಳಬಹುದು (3)
3.ನೀರಿನಿಂದ ಶುದ್ಧಮಾಡು-ಸ್ವಚ್ಛಗೊಳಿಸು (2)
4.ಮರ ನಡುವೆ ಇರುವ ಮಕರಂದ (4)
5.ಗುಪ್ತವಾಗಿ ಮೆಲ್ಲಗೆ ಮಾತನಾಡು (4)
6.ಋಣದ ರೂಪಾಂತರ ಶಬ್ದ (2)
8. ರಂಗ ನಡುವೆ ಇಟ್ಟುಕೊಂಡ ಚೆನ್ನಾಗಿ ತಿಳಿದವ (4)
10. ನಾಕದೆಡೆಗೆ ಗರಿಯೊಂದಿಗೆ ಹೊರಟ ಪೌರ (4)
11. ಮುಚ್ಚಳವಿರುವ ಪಾತ್ರೆ-ಭರಣಿ (3)
12. ಬಾಯಿಯಿಂದ ಊದುವ ಕೊಳೆಯಾಕಾರದ ವಾದ್ಯ (3)

# ಬಿಜೆಪಿ ಅಜೇಯ ದಂಡಯಾತ್ರೆಯ ಒಳಗುಟ್ಟು

## ಪ್ರಾದೇಶಿಕ ಗಡಿಗಳನ್ನು ದಾಟಿ ರಾಷ್ಟ್ರೀಯ ಶಕ್ತಿಯಾಗಿ ಬೆಳೆದ ಕಮಲ ಪಕ್ಷದ ಭಾರತ ದರ್ಶನ

ಜನಸಂಘವಾಗಿ ಹುಟ್ಟಿದ ಭಾರತೀಯ ಜನತಾ ಪಕ್ಷ(ಬಿಜೆಪಿ) ಇಡೀ ದೇಶವನ್ನು ಹೇಗೆ ಆವರಿಸಿತು? ರಾಷ್ಟ್ರೀಯತೆಯನ್ನೇ ಉದ್ದೇಶವಾಗಿರಿಸಿ, ಹಿಂದುತ್ವವನ್ನೇ ಆಧರಿಸಿ ದೊಡ್ಡ ರಾಜಕೀಯ ಶಕ್ತಿಯಾಗಿ ಹೇಗೆ ಪರಿವರ್ತಿತವಾಯಿತು? ಎಂಬುದಕ್ಕೆ ಉತ್ತರವು ಒಂದು ಸೂಕ್ಷ್ಮವಾಗಿ ರೂಪಿಸಲಾದ ನಾಯಕತ್ವ ಮಾದರಿಯಲ್ಲಿದೆ. ಇದು ಸಿದ್ಧಾಂತ ಆಧಾರಿತ ತರಬೇತಿ, ಸಂಘಟನಾ ಶಿಸ್ತಿನ ಸಂಯೋಜನೆ, ಚುನಾವಣಾ ತಂತ್ರಗಳು ಮತ್ತು ಬಲವಾದ ಕೇಂದ್ರ ಮಾರ್ಗದರ್ಶನವನ್ನು ಒಳಗೊಂಡಿದೆ. ಪ್ರಮುಖವಾಗಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಸೇರಿದಂತೆ ಕೇಂದ್ರ ನಾಯಕರ ನಿರ್ಣಾಯಕ ಪಾತ್ರವು ಅಡಕವಾಗಿದೆ. ಅಂತೆಯೇ, ಬಿಜೆಪಿ ದೀರ್ಘಕಾಲೀನ ತಂತ್ರದ ಪ್ರಮುಖ ಆಯಾಮವೆಂದರೆ, ರಾಜ್ಯಗಳಲ್ಲಿ ಹೊಸ ಹಾಗೂ ಕಡಿಮೆ ಪರಿಚಿತ ಮುಖಗಳನ್ನು ಮುಖ್ಯಮಂತ್ರಿಗಳಾಗಿ ಉತ್ತೇಜಿಸುವುದು. ಪ್ರಾದೇಶಿಕವಾಗಿ ಯುವ ಮತ್ತು ಭವಿಷ್ಯದ ನಾಯಕರನ್ನು ಬೆಳೆಸಲು ಪ್ರಾಮುಖ್ಯತೆ ನೀಡಲಾಗುತ್ತಿರುವುದು ಬಿಜೆಪಿ ರಾಷ್ಟ್ರೀಯ ಶಕ್ತಿಯಾಗಿ ಬೆಳೆಯಲು ಕಾರಣವಾಗಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.





### ಭವಿಷ್ಯಮುಖಿ ಮಾದರಿ

- ಭಾರತೀಯ ಜನತಾ ಪಕ್ಷ ನಾಯಕತ್ವ ತಂತ್ರವು ಸಂಯೋಜಿತ ಮತ್ತು ವ್ಯವಸ್ಥಿತ
- ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಪಾತ್ರ ಮಹತ್ವದ್ದು
- ಯೋಗಿ ಆದಿತ್ಯನಾಥ್, ಭೂಪೇಂದ್ರ ಪಟೇಲ್, ಹಿಮಂತ ಬಿಸ್ವಾ ಶರ್ಮಾ ಮುಂತಾದ ನಾಯಕರು ಈ ಮಾದರಿಯ ಫಲಿತಾಂಶ
- ಹೊಸ ಮುಖಗಳನ್ನು ಮುಂದಿರಿಸುವ ಮೂಲಕ ಬಿಜೆಪಿ ತನ್ನ ಭವಿಷ್ಯದ ನಾಯಕತ್ವವನ್ನು ನಿರ್ಮಿಸುತ್ತಿದೆ, ಇದೇ ಅದರ ಪ್ರಮುಖ ಬಲ

1 ಕಾರ್ಯಕರ್ತರ ಆಧಾರಿತ ರಾಜಕಾರಣದಿಂದ ದೇಶವ್ಯಾಪಿ ನಾಯಕತ್ವ ಬೆಳೆಸಿದ ಬಿಜೆಪಿ

2 ದೇಶದೆಲ್ಲೆಡೆ ಅಧಿಕಾರವನ್ನು ಬಲಪಡಿಸಲು ರಾಜ್ಯ ನಾಯಕತ್ವಕ್ಕೆ ವಿಶೇಷ ಆದ್ಯತೆ

3 ಪಕ್ಷದ ಭವಿಷ್ಯ ರೂಪಿಸಲು ಹೊಸ ಮುಖಗಳ ಮೇಲೆ ದಿಟ್ಟ ಭರವಸೆ

4 ಹೊಸ ಮುಖಗಳು, ಹಿರಿಯ ನಾಯಕರ ಮಾರ್ಗದರ್ಶನ ನಾಯಕತ್ವ ನಿರ್ಮಾಣದ ರಹಸ್ಯ

5 ಕೇಡರ್, ಕಮಾಂಡ್ ಮತ್ತು ಸಮೀಕರಣ; ಬಿಜೆಪಿಯ ರಾಜಕೀಯ ವಿಸ್ತರಣೆಯ ಸೂತ್ರ

### ಬಿಜೆಪಿಯ ನಾಯಕತ್ವ ಮಾದರಿ

ಭಾರತೀಯ ಜನತಾ ಪಕ್ಷದ(ಬಿಜೆಪಿ) ಉದಯವು ಕೇವಲ ಚುನಾವಣಾ ಜಯವಲ್ಲ, ಇದು ಒಂದು ಸಂಘಟನಾ ಕ್ರಾಂತಿ. ವಂಶಪಾರಂಪರ್ಯ ಅಥವಾ ಒಂದೇ ವ್ಯಕ್ತಿಯ ಆಕರ್ಷಣೆಯ ಮೇಲೆ ಅವಲಂಬಿತವಾಗಿರುವ ಹಲವಾರು ಪಕ್ಷಗಳಿಂದ ವಿಭಿನ್ನವಾಗಿ, ಬಿಜೆಪಿ ಬಹುಮಟ್ಟದ ನಾಯಕತ್ವ ವ್ಯವಸ್ಥೆಯನ್ನು ನಿರ್ಮಿಸಿದೆ. ಈ ಮಾದರಿಯ ಹೃದಯಭಾಗದಲ್ಲಿ ಸಿದ್ಧಾಂತದ ಏಕತೆ, ಕಾರ್ಯಕರ್ತರ ಆಧಾರಿತ ಸಂಘಟನಾ ಶಕ್ತಿ ಮತ್ತು ಕೇಂದ್ರದ ಪ್ರಭಾವವಿದ್ದರೂ ಸ್ಥಳೀಯವಾಗಿ ಹೊಂದಿಕೊಳ್ಳುವ ನಾಯಕತ್ವ ರಚನೆ ಇದೆ. ಇದರ ಮೂಲಕ ಪಕ್ಷವು ಕೇವಲ ಚುನಾವಣೆ ಗೆಲ್ಲುವುದಷ್ಟೇ ಅಲ್ಲ, ವಿಭಿನ್ನ ರಾಜ್ಯಗಳಲ್ಲಿ ಆಡಳಿತವನ್ನು ನಿರಂತರವಾಗಿ ಕಾಯ್ದುಕೊಳ್ಳಲು ಸಾಧ್ಯವಾಗಿದೆ.

### ಯೋಗಿ, ಬಿಸ್ವಾ ಆಡಳಿತದ ವ್ಯಾಪ್ತಿ ಮೀರಿದ ಪ್ರಭಾವ

ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮತ್ತು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ಇಬ್ಬರೂ ತಮ್ಮ ರಾಜ್ಯಗಳ ಗಡಿಗಳನ್ನು ಮೀರಿ ರಾಷ್ಟ್ರ ರಾಜಕೀಯದಲ್ಲಿ ಪ್ರಭಾವ ಬೀರುತ್ತಿರುವ ನಾಯಕರು. ಅಸ್ಸಾಂನಲ್ಲಿ ಬಿಸ್ವಾ ಶರ್ಮಾ ನೇತೃತ್ವದಲ್ಲಿ ಮದರಸಾಗಳ ರದ್ದು, ಏಕರೂಪ ನಾಗರಿಕ ಸಂಹಿತೆ(ಏನಾಸಂ)ಜಾರಿಗೆ ಚುರುಕು, ಗಡಿ ಭದ್ರತೆ ಮತ್ತು ಅಕ್ರಮ ವಲಸಿಗರ ವಿರುದ್ಧ ಕಠಿಣ ನಿಲುವು ಗಮನಾರ್ಹ. ಇನ್ನೊಂದೆಡೆ ಉತ್ತರ ಪ್ರದೇಶದಲ್ಲಿ ಯೋಗಿ ಆಡಳಿತವು ಕಠಿಣ ಕಾನೂನು-ಸುವ್ಯವಸ್ಥೆಗೆ ಒತ್ತು ನೀಡಿ, ಸಂಘಟಿತ ಅಪರಾಧದ ವಿರುದ್ಧ ದಿಟ್ಟ ಕ್ರಮ, ಮಾಫಿಯಾ ಆಸ್ತಿ ಜಪ್ತಿ, ವೇಗದ ನ್ಯಾಯಾಂಗ ಕ್ರಮಗಳು, ಹೂಡಿಕೆ ಆಕರ್ಷಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದೆ. ಅಪರಾಧ ನಿಯಂತ್ರಣಕ್ಕಾಗಿ 3 ಸಾವಿರಕ್ಕೂ ಹೆಚ್ಚು ಎನ್‌ಕೌಂಟರ್‌ಗಳು ಆಡಳಿತದ ದೃಢತೆಯನ್ನು ತೋರಿಸುತ್ತದೆ. ಈ ಇಬ್ಬರು ನಾಯಕರು ತಮ್ಮ ರಾಜ್ಯಗಳಲ್ಲಿ ದಕ್ಷ ಆಡಳಿತ ಮಾದರಿಯನ್ನು ರೂಪಿಸಿ, ಉಳಿದ ರಾಜ್ಯಗಳ ಜನರಿಗೆ ನಮ್ಮಲ್ಲೂ ಈ ರೀತಿ ಇರಬಾರದೇ ಎಂದು ಮನಸ್ಸಲ್ಲಿ ಮೂಡಿರುವುದು ಬಿಜೆಪಿಗೆ ಸಹಕಾರಿಯಾಗಿದೆ.



### ಮೋದಿ-ಶಾ ಜುಗಲ್‌ಬಂದಿ

ನರೇಂದ್ರ ಮೋದಿ ಮತ್ತು ಅಮಿತ್ ಶಾ ನಡುವಿನ ಸಹಕಾರವು ಬಿಜೆಪಿಯ ನಾಯಕತ್ವ ತಂತ್ರವನ್ನು ಸಂಪೂರ್ಣವಾಗಿ ಮರುರೂಪಿಸಿದೆ. ಪಕ್ಷದಲ್ಲಿ ತಂತ್ರಾತ್ಮಕ ಆಯ್ಕೆ ಮತ್ತು ಆಯ್ಕೆ ಹಾಗೂ ನಾಯಕತ್ವ ನಿರ್ಮಾಣ ಪ್ರಧಾನ ವಿಷಯಗಳಾಗಿವೆ. ಮೋದಿ-ಶಾ ಯುಗದ ಅತ್ಯಂತ ಗಮನಾರ್ಹ ಲಕ್ಷಣವೆಂದರೆ, ನಿರೀಕ್ಷಿಸದ ಅಥವಾ ಕಡಿಮೆ ಪರಿಚಿತ ನಾಯಕರನ್ನು ಮುಖ್ಯಮಂತ್ರಿಗಳಾಗಿ ನೇಮಿಸುವ ಧೈರ್ಯ. ಉದಾಹರಣೆಗೆ, ಯೋಗಿ ಆದಿತ್ಯನಾಥ್ 2017ರಲ್ಲಿ ಉತ್ತರ ಪ್ರದೇಶ ನಲ್ಲಿ ಸಾಮಾನ್ಯ ಆಯ್ಕೆಯಾಗಿರಲಿಲ್ಲ. ಆದರೆ, ಅವರ ನೇಮಕ ಒಂದು ಲೆಕ್ಕಾಚಾರದ ರಾಜಕೀಯ ಹೆಜ್ಜೆಯಾಯಿತು.

### ಹೊಸ ಮುಖಗಳ ಆಯ್ಕೆ ಉದ್ದೇಶವೇನು?

ನಾಯಕತ್ವ ನಿರ್ಮಾಣದಲ್ಲಿ ಬಿಜೆಪಿ ಹೊಸ ಮುಖಗಳಿಗೆ ಆದ್ಯತೆ ನೀಡುವುದು ದೀರ್ಘಕಾಲಿಕ ರಾಜಕೀಯ ತಂತ್ರದ ಭಾಗವಾಗಿದೆ. ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಮಾರ್ಗದರ್ಶನದಲ್ಲಿ, ಪಕ್ಷವು ವ್ಯಕ್ತಿ ಆಧಾರಿತ ರಾಜಕೀಯಕ್ಕಿಂತ ಸಂಘಟನೆ ಆಧಾರಿತ ನಾಯಕತ್ವವನ್ನು ರೂಪಿಸಲು ಪ್ರಯತ್ನಿಸುತ್ತದೆ. ಹೊಸ ಮುಖಗಳನ್ನು ಮುಂದಿರಿಸುವ ಮೂಲಕ ಆಡಳಿತ ವಿರೋಧದ ಅಲೆ ಕಡಿಮೆ ಮಾಡಿ, ಶುದ್ಧ ಇಮೇಜ್ ಹೊಂದಿರುವ ನಾಯಕರನ್ನು ಪರಿಚಯಿಸುವುದು ಪ್ರಮುಖ ಉದ್ದೇಶವಾಗಿದೆ. ಇದರಿಂದ ಯುವ ಮತದಾರರು ಮತ್ತು ಮಧ್ಯಮ ವರ್ಗದ ಬೆಂಬಲವನ್ನು ಗಳಿಸಲು ಸಹಕಾರಿ ಆಗುತ್ತದೆ. ಇದೇ ವೇಳೆ, ಹೊಸ ನಾಯಕತ್ವವು ಕೇಂದ್ರದ ನಿರ್ಧಾರಗಳಿಗೆ ಹೊಂದಿಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ರಾಜ್ಯಗಳಲ್ಲಿ ಶಿಸ್ತುಬದ್ಧ ಆಡಳಿತವನ್ನು ಒದಗಿಸಲು ಸಹಾಯಕವಾಗುತ್ತದೆ. ಆದರೆ, ಅನುಭವದ ಕೊರತೆ ಮತ್ತು ಸ್ಥಳೀಯ ಸಾಮಾಜಿಕ ಸಮೀಕರಣಗಳನ್ನು ನಿರ್ವಹಿಸುವಲ್ಲಿ ಸವಾಲುಗಳು ಎದುರಾಗಬಹುದು.

- ಆಡಳಿತ ವಿರೋಧಿ ಅಲೆ ಪರಿಣಾಮವನ್ನು ಕಡಿಮೆ ಮಾಡುವುದು
- ಕ್ಲೀನ್ ಇಮೇಜ್ ಮತ್ತು ಭ್ರಷ್ಟಾಚಾರ ವಿರೋಧಿ ಸಂದೇಶ ಬಲಪಡಿಸುವುದು
- ಯುವ ಮತ್ತು ಹೊಸ ಮತದಾರರನ್ನು ಆಕರ್ಷಿಸುವುದು
- ಸಂಘಟನೆಗೆ ನಿಷ್ಠೆಯುಳ್ಳ ನಾಯಕರನ್ನು ಬೆಳೆಸುವುದು
- ಕೇಂದ್ರ ನಾಯಕತ್ವದ ನಿಯಂತ್ರಣ ಮತ್ತು ಸಮನ್ವಯ ಹೆಚ್ಚಿಸುವುದು
- ದೀರ್ಘಕಾಲಿಕ ನಾಯಕತ್ವ ನಿರ್ಮಾಣ ಮಾಡುವುದು

ಒಟ್ಟಿನಲ್ಲಿ, ಹೊಸ ಮುಖಗಳಿಗೆ ಆದ್ಯತೆ ನೀಡುವುದು ಬಿಜೆಪಿಯ ವಿಸ್ತರಣಾ ರಾಜಕೀಯ ಮತ್ತು ಸ್ಥಿರ ಆಡಳಿತ ಗುರಿಗಳನ್ನು ಸಾಧಿಸಲು ರೂಪಿಸಿರುವ ವ್ಯವಸ್ಥಿತ ತಂತ್ರವಾಗಿದೆ.

### ಹೊಸ ಮುಖಗಳ ತಂತ್ರಗಾರಿಕೆ

ಬಿಜೆಪಿಯ ದೀರ್ಘಕಾಲೀನ ತಂತ್ರದ ಪ್ರಮುಖ ಅಂಶವೆಂದರೆ ಹೊಸ ಮುಖ್ಯಮಂತ್ರಿಗಳೊಂದಿಗೆ ಪ್ರಯೋಗ ಮಾಡುವುದು.

#### ಗುಜರಾತ್‌ನಲ್ಲಿ ಭೂಪೇಂದ್ರ ಪಟೇಲ್



ಗುಜರಾತ್‌ನಲ್ಲಿ ನರೇಂದ್ರ ಮೋದಿ ರಾಷ್ಟ್ರ ರಾಜಕೀಯಕ್ಕೆ ತೆರಳಿದ ನಂತರ ಹಲವು ನಾಯಕತ್ವ ಬದಲಾವಣೆಗಳು ನಡೆದವು. ಗುಜರಾತ್‌ನಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ, ಪಕ್ಷದ ''ಹೊಸ ಮುಖಗಳ'' ತಂತ್ರವನ್ನು ಸ್ಪಷ್ಟವಾಗಿ ತೋರಿಸುತ್ತದೆ. ವಿಜಯ್ ರೂಪಾಣಿ ಅವರನ್ನು ಬದಲಿಸಿ, ತೀರಾ ಲೋ-ಪ್ರೊಫೈಲ್ ನಾಯಕರಾದ ಭೂಪೇಂದ್ರ ಪಟೇಲ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿದ್ದು ಅಚ್ಚರಿ ಮೂಡಿಸಿತು. ಈ ಕ್ರಮವು ವ್ಯಕ್ತಿಪರ ಜನಪ್ರಿಯತೆಯಿಗಿಂತ ಸಂಘಟನಾ ನಿಷ್ಠೆ, ಆಡಳಿತ ಸಾಮರ್ಥ್ಯ ಮತ್ತು ಸಾಮಾಜಿಕ ಸಮೀಕರಣಗಳಿಗೆ ಹೆಚ್ಚಿನ ಮಹತ್ವ ನೀಡುವುದನ್ನು ಸೂಚಿಸುತ್ತದೆ. ಪಟೇಲ್ ಸಮುದಾಯದ ಪ್ರತಿನಿಧಿತ್ವವನ್ನು ಬಲಪಡಿಸುವ ಮೂಲಕ, ಪ್ರಮುಖ ಮತದಾರ ವರ್ಗವನ್ನು ಸಮತೋಲನದಲ್ಲಿಡುವ ಪ್ರಯತ್ನವೂ ಇದರಲ್ಲಿ ಕಾಣಿಸುತ್ತದೆ. ಜತೆಗೆ, ಹೊಸ ನಾಯಕತ್ವದ ಮೂಲಕ ಆಡಳಿತ ವಿರೋಧಿ ಅಲೆ ಮತ್ತು ಗುಂಪು ರಾಜಕಾರಣವನ್ನು ಕಡಿಮೆ ಮಾಡಿತು. ಪಟೇದಾರ್ ಸಮುದಾಯದ ಬೆಂಬಲವನ್ನು ಬಲಪಡಿಸಿತು. ಹೊಸ ಆಡಳಿತದ ಚಿತ್ರಣ ನೀಡಿತು. ಮೋದಿ-ಶಾ ಶೈಲಿಯ ಈ ನಿರ್ಧಾರ, ಕೇಂದ್ರದ ನಿಯಂತ್ರಣದಲ್ಲೇ ರಾಜ್ಯ ನಾಯಕತ್ವವನ್ನು ಪುನರ್‌ವ್ಯವಸ್ಥೆಗೊಳಿಸುವ ತಂತ್ರದ ಭಾಗವಾಗಿದೆ.

#### ಉತ್ತರಾಖಂಡದಲ್ಲಿ ಧಾಮಿ



ಉತ್ತರಾಖಂಡದಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ, ಹೊಸ ಮುಖಗಳಿಗೆ ಪಕ್ಷ ನೀಡುವ ಆದ್ಯತೆಯನ್ನು ಸ್ಪಷ್ಟಪಡಿಸಿದೆ. ಕಡಿಮೆ ಅವಧಿಯಲ್ಲಿ ತ್ರಿವೇಂದ್ರ ಸಿಂಗ್ ರಾವತ್, ತೀರ್ಥ ಸಿಂಗ್ ರಾವತ್ ನಂತರ ಪುಷ್ಕರ್ ಸಿಂಗ್ ಧಾಮಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ತರಲಾಗಿದೆ. ಈ ಸರಣಿ ಬದಲಾವಣೆಗಳು ಆಡಳಿತದ ಮೇಲೆ ಜನಾಭಿಪ್ರಾಯ, ಸಂಘಟನೆಯ ಅಂತರಿಕ ಅಸಮಾಧಾನ ಮತ್ತು ಚುನಾವಣಾ ಲೆಕ್ಕಾಚಾರಗಳ ಪರಿಣಾಮವಾಗಿವೆ. ವಿಶೇಷವಾಗಿ ಧಾಮಿ ಅವರನ್ನು ಆಯ್ಕೆ ಮಾಡಿರುವುದು ಯುವ ನಾಯಕತ್ವದ ಮೇಲಿನ ನಂಬಿಕೆಯನ್ನು ತೋರಿಸುತ್ತದೆ. ಹೊಸ ಮುಖದ ಮೂಲಕ ಆಡಳಿತ ವಿರೋಧಿ ಅಲೆ ಕಡಿಮೆ ಮಾಡುವ ಜತೆಗೆ, ಯುವ ಮತದಾರರನ್ನು ಸೆಳೆಯುವ ಪ್ರಯತ್ನವೂ ಇದರಲ್ಲಿ ಕಾಣುತ್ತದೆ. ಇದೇ ವೇಳೆ, ಕೇಂದ್ರದ ಮಾರ್ಗದರ್ಶನದಲ್ಲಿ ರಾಜ್ಯ ರಾಜಕಾರಣವನ್ನು ಪುನರ್‌ವ್ಯವಸ್ಥೆಗೊಳಿಸುವ ತಂತ್ರ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

#### ಅಸ್ಸಾಂನಲ್ಲಿ ಹಿಮಂತ ಬಿಸ್ವಾ



ಅಸ್ಸಾಂನಲ್ಲಿ ಬಿಜೆಪಿ ನಾಯಕತ್ವ ಬದಲಾವಣೆ ತಂತ್ರವು ಹೊಸ ಮುಖ ಮತ್ತು ಸ್ಥಳೀಯ ಪ್ರಭಾವ ಎರಡನ್ನೂ ಸಮತೋಲನಗೊಳಿಸುವ ರೀತಿಯಲ್ಲಿ ನಡೆದಿದೆ. ದೀರ್ಘಾವಧಿ ಮುಖ್ಯಮಂತ್ರಿಯಾಗಿದ್ದ ಸರ್ಬಾನಂದ ಸೋನಾವಾಲ್ ಅವರನ್ನು ಬದಲಿಸಿ, ಹಿಮಂತ ಬಿಸ್ವಾ ಶರ್ಮಾ ಅವರನ್ನು ಅಧಿಕಾರಕ್ಕೆ ತರಲಾಗಿದೆ. ಶರ್ಮಾ ಪೂರ್ವದಲ್ಲಿ ಕಾಂಗ್ರೆಸ್‌ನಿಂದ ಬಂದವರಾದರೂ, ಬಿಜೆಪಿ ಚೌಕಟ್ಟಿನಲ್ಲಿ ವೇಗವಾಗಿ ಬೆಳೆಯುವ ಮೂಲಕ ಪ್ರಬಲ ಪ್ರಾದೇಶಿಕ ನಾಯಕನಾಗಿ ಹೊರಹೊಮ್ಮಿದರು. ಈ ನಿರ್ಧಾರವು ಕೇವಲ ಹೊಸ ಮುಖದ ಆಯ್ಕೆಯಲ್ಲ, ಚುನಾವಣಾ ತಂತ್ರಗಾರಿಕೆ ಅನ್ವಯ ಸಂಘಟನಾ ಕೌಶಲ ಮತ್ತು ಮೈತ್ರಿ ರಾಜಕೀಯದಲ್ಲಿ ಶರ್ಮಾ ಅವರ ಸಾಮರ್ಥ್ಯವನ್ನು ಗುರುತಿಸಿದ ಹೆಜ್ಜೆಯಾಗಿದೆ. ಅಸ್ಸಾಂನಲ್ಲಿ ಜಾತಿ ಸಮೀಕರಣ, ಪ್ರಾದೇಶಿಕ ಗುರುತು ಮತ್ತು ರಾಷ್ಟ್ರೀಯ ಭದ್ರತೆ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲು ಅವರ ನಾಯಕತ್ವ ಬಳಸಲಾಗಿದೆ.

#### ಮಧ್ಯಪ್ರದೇಶದಲ್ಲಿ ಯಾದವ್



ಮಧ್ಯ ಪ್ರದೇಶದಲ್ಲಿ ದೀರ್ಘಾವಧಿ ನಾಯಕತ್ವ ಹೊಂದಿದ್ದ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಮುಂದುವರಿಸಬಹುದಾದ ಪರಿಸ್ಥಿತಿಯಿದ್ದರೂ, ಪಕ್ಷವು ಅಚ್ಚರಿಯ ನಿರ್ಧಾರವಾಗಿ ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿತು. ಈ ಆಯ್ಕೆ ವ್ಯಕ್ತಿಪರ ಜನಪ್ರಿಯತೆಯಿಗಿಂತ ಸಂಘಟನಾ ನಿಷ್ಠೆ, ಸೈದ್ಧಾಂತಿಕ ಬದ್ಧತೆ ಮತ್ತು ಸಾಮಾಜಿಕ ಸಮೀಕರಣಗಳಿಗೆ ಆದ್ಯತೆ ನೀಡುವುದನ್ನು ಸೂಚಿಸುತ್ತದೆ. ಯಾದವ ಸಮುದಾಯದ ಪ್ರಾತಿನಿಧ್ಯದ ಮೂಲಕ ಹೊಸ ಮತದಾರ ವರ್ಗವನ್ನು ಆಕರ್ಷಿಸುವ ಪ್ರಯತ್ನವೂ ಇದರಲ್ಲಿ ಕಾಣಿಸುತ್ತದೆ. ಜತೆಗೆ, ದೀರ್ಘಾವಧಿ ಆಡಳಿತದ ವಿರುದ್ಧ ಹುಟ್ಟಬಹುದಾದ ಆಡಳಿತ ವಿರೋಧ ಅಲೆ ಕಡಿಮೆ ಮಾಡಿ, ಪಕ್ಷದ ಚಿತ್ರವನ್ನು ಹೊಸದಾಗಿ ರೂಪಿಸುವ ಉದ್ದೇಶವೂ ಇದೆ. ಒಟ್ಟಿನಲ್ಲಿ, ಮಧ್ಯ ಪ್ರದೇಶದಲ್ಲಿ ಹೊಸ ಮುಖದ ಆಯ್ಕೆ ಬಿಜೆಪಿ ದಿಟ್ಟ ಹಾಗೂ ಲೆಕ್ಕಾಚಾರದ ರಾಜಕೀಯ ಹೆಜ್ಜೆಯಾಗಿದೆ.

#### ಉತ್ತರ ಪ್ರದೇಶದಲ್ಲಿ ಯೋಗಿ



ಉತ್ತರ ಪ್ರದೇಶದಲ್ಲಿ ನಾಯಕತ್ವ ಬದಲಾವಣೆ ತಂತ್ರದಲ್ಲಿ ಹೊಸ ಮುಖಗಳಿಗೆ ಆದ್ಯತೆ ಪ್ರಮುಖ ಅಂಶವಾಗಿ ಹೊರಹೊಮ್ಮಿದೆ. ಸಾಂಪ್ರದಾಯಿಕ ಜಾತಿ ಸಮೀಕರಣಗಳಿಗಿಂತ ಕಾರ್ಯಕ್ಷಮತೆ, ಆಡಳಿತ ಸಾಮರ್ಥ್ಯ ಮತ್ತು ಸಂಘಟನೆಗೆ ನಿಷ್ಠೆ ಇರುವ ನಾಯಕರನ್ನು ಮುಂದಿರಿಸುವ ನೀತಿಯನ್ನು ಪಕ್ಷ ಅನುಸರಿಸಿದೆ. ಯೋಗಿ ಆದಿತ್ಯನಾಥ್ ಅವರ ನೇಮಕವೇ ಇದಕ್ಕೆ ಉದಾಹರಣೆ. ಸಂಘಪರ ಹಿನ್ನೆಲೆ, ಕಠಿಣ ಆಡಳಿತ ಶೈಲಿ ಮತ್ತು ಸ್ಪಷ್ಟ ಐಡಿಯಾಲಜಿಯೊಂದಿಗೆ ಹೊಸ ಮಾದರಿಯ ನಾಯಕತ್ವವನ್ನು ಸ್ಥಾಪಿಸಿದರು. ಈ ತಂತ್ರದ ಉದ್ದೇಶ ಸ್ಥಳೀಯ ಅಸಮಾಧಾನವನ್ನು ಕಡಿಮೆ ಮಾಡುವುದು, ಭ್ರಷ್ಟಾಚಾರ ವಿರೋಧಿ ಭಾವನೆ ಬಲಪಡಿಸುವುದು ಮತ್ತು ಯುವ ಮತದಾರರನ್ನು ಆಕರ್ಷಿಸುವುದು. ಜತೆಗೆ, ಕೇಂದ್ರ ನಾಯಕತ್ವದ ನಿಯಂತ್ರಣ ಬಲಪಡಿಸಿ ರಾಜ್ಯದಲ್ಲಿ ಸಮನ್ವಯ ಸಾಧಿಸಲು ಸಹಾಯಕವಾಗಿದೆ. ಒಟ್ಟಿನಲ್ಲಿ, ಹೊಸ ಮುಖಗಳ ಮೇಲೆ ಹೂಡಿಕೆ ಬಿಜೆಪಿ ದೀರ್ಘಕಾಲಿಕ ರಾಜಕೀಯ ಸ್ಥಿರತೆಯನ್ನು ಗುರಿಯಾಗಿಸಿಕೊಂಡ ತಂತ್ರವಾಗಿದೆ.

## ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯ

ದೇಶದ ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯವು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಚರ್ಚೆಯ ಕೇಂದ್ರ ವಿಷಯವಾಗಿದೆ. ಇದು ಕೇವಲ ಚುನಾವಣಾ ಸೋಲುಗಳ ವಿಷಯವಲ್ಲ; ಸಂಘಟನಾ ದುರ್ಬಲತೆ, ಸ್ಪಷ್ಟವಾದ ನಾಯಕತ್ವದ ಕೊರತೆ, ತಂತ್ರಗಾರಿಕೆಯ ಅಭಾವ ಮತ್ತು ಜನರೊಂದಿಗೆ ಸಂಪರ್ಕ ಕಡಿಮೆಯಾಗಿರುವುದು ಸೇರಿದಂತೆ ಹಲವು ಅಂಶಗಳ ಸಮೂಹ ಫಲಿತಾಂಶವಾಗಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

### ವಿಪಕ್ಷಗಳ ಸಂಕಷ್ಟದ ಸ್ವರೂಪ

ಭಾರತದಲ್ಲಿ ಸಶಕ್ತ ಪ್ರಜಾಪ್ರಭುತ್ವಕ್ಕೆ ಬಲವಾದ ಆಡಳಿತದ ಜತೆಗೆ ಬಲವಾದ ವಿರೋಧ ಪಕ್ಷಗಳೂ ಅಗತ್ಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹಳೇ ಪಕ್ಷ ಕಾಂಗ್ರೆಸ್ ಸೇರಿದಂತೆ ಅನೇಕ ವಿರೋಧ ಪಕ್ಷಗಳು ನಾಯಕತ್ವದ ಪ್ರಶ್ನೆಯಲ್ಲಿ ಸಂಕಷ್ಟವನ್ನು ಎದುರಿಸುತ್ತಿವೆ.

### ವೈಫಲ್ಯಕ್ಕೆ ಮುಖ್ಯ ಕಾರಣ?



- ಏಕೀಕೃತ ನಾಯಕತ್ವದ ಕೊರತೆ
- ಸ್ಪಷ್ಟ ರಾಜಕೀಯ ಸಂದೇಶದ ಅಭಾವ
- ತಲಮಟ್ಟದ ಸಂಘಟನಾ ದುರ್ಬಲತೆ

### ಕಾಂಗ್ರೆಸ್ ಸವಾಲುಗಳು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ದೀರ್ಘಕಾಲ ದೇಶವನ್ನು ಆಡಳಿತ ನಡೆಸಿದ ಪಕ್ಷವಾಗಿದ್ದರೂ, ಇತ್ತೀಚೆಗೆ ಅದು ನಾಯಕತ್ವದ ಸಂಕಷ್ಟಕ್ಕೆ ಒಳಗಾಗಿದೆ.

- ರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವದ ಶೂನ್ಯತೆ
- ರಾಹುಲ್ ಗಾಂಧಿ ಅವರನ್ನು ಪ್ರಭಾವಿ ಪರ್ಯಾಯ ನಾಯಕನಾಗಿ ಸ್ಥಾಪಿಸುವಲ್ಲಿ ಸವಾಲುಗಳು
- ನಿರ್ಧಾರಾತ್ಮಕ ನಾಯಕತ್ವದ ಕೊರತೆ
- ರಾಜ್ಯ ಮಟ್ಟದಲ್ಲಿ ಬಲವಾದ ಮುಖಗಳ ಅಭಾವ

### ರಾಜ್ಯವಾರು ವಿಶ್ಲೇಷಣೆ



**ಪಶ್ಚಿಮ ಬಂಗಾಳ**
- ಏಕ ನಾಯಕತ್ವದ ಅವಲಂಬನೆ
- ಮಮತಾ ಬ್ಯಾನರ್ಜಿ ಅವರ ಸುತ್ತಲೇ ರಾಜಕೀಯ ಸೀಮಿತ
- ಎರಡನೇ ಸಾಲಿನ ನಾಯಕತ್ವದ ಕೊರತೆ
- ಆಂತರಿಕ ಸಂಘರ್ಷ
- ರಾಷ್ಟ್ರೀಯ ವಿಸ್ತರಣೆ ವಿಫಲ



**ಉತ್ತರ ಪ್ರದೇಶ**
- ವಿಪಕ್ಷಗಳ ಸಂಘಟನೆ ಕುಸಿತ
- ಸಮಾಜವಾದಿ ಪಕ್ಷ: ಅಖಿಲೇಶ್ ಮೇಲೆ ಹೆಚ್ಚು ಅವಲಂಬನೆ
- ಬಿಎಸ್‌ಪಿ: ಮಾಯಾವತಿ ರಾಜಕೀಯದಲ್ಲಿ ಸಕ್ರಿಯತೆ ಕುಸಿತ



**ಮಹಾರಾಷ್ಟ್ರ**
- ಶಿವಸೇನೆ ವಿಭಜನೆ
- ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದಲ್ಲಿ(ಎನ್‌ಸಿಪಿ) ಒಳಬೇಗುದಿ
- ನಾಯಕತ್ವದ ದ್ವಂದ್ವ
- ಮತದಾರರಲ್ಲಿ ಗೊಂದಲ
- ಸಂಘಟನಾ ದುರ್ಬಲತೆ



**ದಿಲ್ಲಿ**
- ಆಮ್ ಆದ್ಮಿ ಪಕ್ಷ ಸೀಮಿತ ವಿಸ್ತರಣೆ
- ರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಣೆ ಸವಾಲು
- ಸ್ಥಳೀಯ ನಾಯಕತ್ವದ ಮಿತಿ



**ತಮಿಳುನಾಡು**
- ಡಿಎಂಕೆಗೆ ರಾಜ್ಯ ಮಟ್ಟದಲ್ಲಿ ಬಲವಾದ ನಾಯಕತ್ವ
- ಆದರೆ, ರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಸೀಮಿತ

### ನಾಯಕತ್ವ ವೈಫಲ್ಯದ ಪ್ರಮುಖ ಕಾರಣಗಳು

1. ವಂಶಪಾರಂಪರ್ಯ ರಾಜಕೀಯ: ಕುಟುಂಬ ಆಧಾರಿತ ನಾಯಕತ್ವದಿಂದ ಹೊಸ ಮುಖಗಳ ಬೆಳವಣಿಗೆಗೆ ತಡೆ
2. ಸಂಘಟನಾ ದುರ್ಬಲತೆ: ತಲಮಟ್ಟದ ಕಾರ್ಯಕರ್ತರ ಕೊರತೆ
3. ತಂತ್ರದ ಕೊರತೆ: ಚುನಾವಣಾ ತಂತ್ರಗಾರಿಕೆಯಲ್ಲಿ ಸ್ಪಷ್ಟತೆ ಇಲ್ಲ.
4. ನಾಯಕತ್ವದ ಸ್ಪರ್ಧೆ: ಆಂತರಿಕ ಗುಂಪುಗಾರಿಕೆಯಿಂದ ಪಕ್ಷಗಳು ದುರ್ಬಲ

### ವಿಪಕ್ಷಗಳ ಮುಂದಿರುವ ಸವಾಲುಗಳು

- ರಾಷ್ಟ್ರೀಯ ಮಟ್ಟದಲ್ಲಿ ಏಕತೆ
- ವಿಶ್ವಾಸಾರ್ಹ ನಾಯಕತ್ವ ನಿರ್ಮಾಣ
- ತಲಮಟ್ಟದ ಸಂಘಟನೆ ಪುನರ್ ನಿರ್ಮಾಣ
- ಯುವ ನಾಯಕತ್ವಕ್ಕೆ ಉತ್ತೇಜನ

ದೇಶದಲ್ಲಿನ ವಿರೋಧ ಪಕ್ಷಗಳ ನಾಯಕತ್ವ ವೈಫಲ್ಯವು ಒಂದು ಬಹುಮಟ್ಟದ ಸಮಸ್ಯೆಯಾಗಿದೆ. ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ತಮ್ಮ ಸಂಘಟನಾ ಮತ್ತು ನಾಯಕತ್ವದ ಬಲವನ್ನು ಪುನರ್ ನಿರ್ಮಿಸಬೇಕಿದೆ.

ಪ್ರಜಾಪ್ರಭುತ್ವದಲ್ಲಿ ಬಲವಾದ ವಿರೋಧ ಪಕ್ಷಗಳು ಅಗತ್ಯವಾಗಿದ್ದು, ನಾಯಕತ್ವದ ಪುನರ್ ನಿರ್ಮಾಣವೇ ಅದರ ಮುಖ್ಯ ಕೀಲಿಕೈ ಆಗಬೇಕಿದೆ.

ಭವಿಷ್ಯದಲ್ಲಿ ಯಾರು ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಾರೋ, ಅವರು ಭಾರತೀಯ ರಾಜಕೀಯದಲ್ಲಿ ಹೊಸ ದಿಕ್ಕನ್ನು ನಿರ್ಧರಿಸಲಿದ್ದಾರೆ.

## ಕಿರುಸುದ್ದಿ

### ಬಿಜೆಪಿಗೆ ಆಶೀರ್ವಾದ



**ಗದಗ:** ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವು ಸಿಕ್ಕಿರುವುದು ಸಂತಸವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಮತಾ ಬ್ಯಾನರ್ಜಿ ಅವರ ಅಧಿಕಾರ ಅವಧಿಯಲ್ಲಿ ಪಶ್ಚಿಮ ಬಂಗಾಳದ ಜನ ಬೆಸತ್ತು ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ. ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯವೈಖರಿ ಮೆಚ್ಚಿ ದೇಶದ ಜನರ ಸುರಕ್ಷತೆ ಕಾಪಾಡುವಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು, ಅಭಿವೃದ್ಧಿ ಪಥದಲ್ಲಿ ದೇಶವನ್ನು ಮುನ್ನಡೆಸುತ್ತಾ ಬಂದಿರುವ ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸಲು ಪಶ್ಚಿಮ ಬಂಗಾಳದ ಮತದಾರರು ಬಿಜೆಪಿಗೆ ಆಶೀರ್ವದಿಸಿದ್ದು ಸ್ವಾಗತಾರ್ಹ ಎಂದರು.

### ಕಸಾಪ ಸಂಸ್ಥಾಪನಾ ದಿನಾಚರಣೆ

**ಮುಂಡರಗಿ:** ಕನ್ನಡ ಸಾಹಿತ್ಯ ಪರಿಷತ್ ಮುಂಡರಗಿ ತಾಲೂಕು ಘಟಕ ಮತ್ತು ಕ.ರಾ.ಬೆಲ್ಲದ ಕಾಲೇಜ ಆಶ್ರಯದಲ್ಲಿ ಮೇ 6ರಂದು ಬೆಳಗ್ಗೆ 9.30ಕ್ಕೆ ಕಾಲೇಜಿನ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಚಾರಣೆ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ವಹಿಸುವರು. ಉದ್ಘಾಟಕರಾಗಿ ಶ್ರೀ ಜ.ಅ.ವಿ.ಸಮಿತಿಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಆಗಮಿಸುವರು. ಹೆಸರೂರ ಪ್ರೌಢಶಾಲೆಯ ಶಿಕ್ಷಕ ರವಿ ದೇವರಡ್ಡಿ ಅವರು ಕಸಾಪ ನಡೆದು ಬಂದದಾರಿ ಕುರಿತು ಉಪನ್ಯಾಸ ನೀಡುವರು. ಬಿಇಒ ಗಂಘಾಧರ ಅಣ್ಣಿಗೇರಿ, ಪ್ರಾ. ಡಾ.ಸಂತೋಷ ಹಿರೇಮಠ, ಕಾಶಿನಾಥ ಬಿಳಿಮಗ್ಗದ ಅತಿಥಿಗಳಾಗಿ ಭಾಗವಹಿಸುವರು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯಕ್ಕೆ 125 ಕ್ಕೆ 125 ಅಂಕಪಡೆದ ಪೂಜಾ ಕವಲೂರ, ಗಿರೀಶ ಹಳ್ಳಿಕೇರಿ, ಕಾವ್ಯಾ ಕಬ್ಬಿಣದ, ಸುಪ್ರೀತಾ ಲಂಬಾಣಿ, ವಿನಾಯಕ ಕಾರಬಾರಿ ಅವರನ್ನು ಸತ್ಕರಿಸಲಾಗುವುದು. ನಾಟ್ಯ ಬಿಂದು ಅಕಾಡೆಮಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವವು.

### ಅವಧಿ ವಿಸ್ತರಣೆ

**ಗದಗ:** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ, ಶುಲ್ಕ ಮರುಪಾವತಿ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಂತಿಮ ಮೇ.16ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮೆಹಬೂಬ್ ತುಂಬರಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಲಿಂಗದೀಕ್ಷೆ ಕಾರ್ಯಕ್ರಮ

**ಗದಗ:** ಅಯ್ಯಾಚಾರವೆಂಬುದು ಆಚಾರ, ವಿಚಾರ ಮತ್ತು ಶಿವಾಚಾರವನ್ನು ಪಾಲಿಸುವ ಜವಾಬ್ದಾರಿಯನ್ನು ವಹಿಸುವ ಧಾರ್ಮಿಕ ಪ್ರಕ್ರಿಯೆಯಾಗಿದೆ ಎಂದು ಬನ್ನಿಕೊಪ್ಪದ ಡಾ. ಸುಜ್ಞಾನದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ತಾಲೂಕಿನ ನರಸಾಪೂರ ಗ್ರಾಮದ ರಂಭಾಪೂರಿ ಶಾಖಾ ಹಿರೇಮಠ ಗುರುಕುಲದಲ್ಲಿ ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್ ಹಾಗೂ ಅಖಿಲ ಭಾರತ ಜಂಗಮ ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಮಲ್ಲನಕೇರಿ ವಿರಕ್ತಮಠದ ಚನ್ನಬಸವ ಸ್ವಾಮೀಜಿ ಮಾತನಾಡಿದರು. ಅಖಿಲ ಭಾರತ ಜಂಗಮ ಸೇವಾ ಸಮಿತಿಯ ಅಧ್ಯಕ್ಷ ಪ್ರಭಯ್ಯ ದಂಡಾವತಿಮಠ ಅಧ್ಯಕ್ಷತೆ ವಹಿಸಿದ್ದರು. ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಡಾ. ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಮಂಜುನಾಥ ಹಳ್ಳೂರಮಠ, ಮೃತ್ಯುಂಜಯ ಭಿಕ್ಷಾವತಿಮಠ, ತೋಟಯ್ಯ ಗುಡ್ಡಿಮಠ, ಕೆ.ಎಸ್. ಹಿರೇಮಠ, ವೀರಯ್ಯ ಹೊಸಮಠ, ಲಿಂಗಯ್ಯ ಹಿರೇಮಠ, ವೀರಬಸಯ್ಯ ವಿರಕ್ತಮಠ ಸೇರಿ ಅನೇಕರು ಇದ್ದರು.

### ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

| | |
|---|---|
| ಕಡಲೆಕಾಳು | 1412-5670 |
| ಉದ್ದಿನಕಾಳು | 2244-4244 |
| ಹರಳು ಬೀಜ | 3814-3814 |
| ಅಲಸಂದಿ | 2011-5509 |
| ಬಟಾಣಿ | 5160-5160 |
| ಹೆಸರುಕಾಳು | 1569-6531 |
| ಶೇಂಗಾ | 4670-6727 |
| ಹುರುಳಿಕಾಳು | 3519-4469 |
| ಜೋಳ | 2399-4412 |
| ಮೆಕ್ಕೆಜೋಳ | 1269-1685 |
| ನವಣೆ | 4700-4700 |
| ಕುಸುಬೆ | 2311-5309 |
| ಸೂರ್ಯಕಾಂತಿ | 5869-6502 |
| ತೊಗರಿ | 4714-5569 |
| ಗೋಧಿ | 1902-4897 |



ಗದಗ: ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಜಯ ಗಳಿಸಿರುವ ಹಿನ್ನೆಲೆಯಲ್ಲಿ ನಗರದ ಹುಯಿಲಗೋಳ ನಾರಾಯಣರಾವ್ ವೃತ್ತದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಜಿಲ್ಲಾಧ್ಯಕ್ಷ ರಾಜು ಕುರುಡಗಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಎಂ.ಎಸ್. ಕರೀಗೌಡ್ರ, ಎಂ.ಎಂ.ಹಿರೇಮಠ, ಗ್ರಾಮೀಣ ಮಂಡಲ ಅಧ್ಯಕ್ಷ ಬೂದಪ್ಪ ಹಳ್ಳಿ, ಜಗನ್ನಾಥಸಾ ಭಾಂಡಗೆ, ಸಿದ್ದು ಪಲ್ಲೇದ, ಬಿ.ಎಸ್.ಚಿಂಚಲಿ, ವಿಜಯಕುಮಾರ ಗಡ್ಡಿ, ನಿಂಗಪ್ಪ ಹುಗ್ಗಿ, ಶಂಕರ ಕಾಕಿ, ಸುರೇಶ ಚಿತ್ತರಗಿ, ಚಂದ್ರು ತಡಸದ, ಮಂಜುನಾಥ ಹಳ್ಳೂರಮಠ, ಅಮರನಾಥ ಗಡಗಿ, ಕೆ.ಪಿ.ಕೋಟಿಗೌಡ್ರ, ನಿರ್ಮಲಾ ಕೊಳ್ಳಿ, ಸ್ವಾತಿ ಅಕ್ಕಿ, ರೇಖಾ ಗೌಳಿ, ಚನ್ನಮ್ಮ ಹುಳಕಣ್ಣವರ, ಕಮಲಾಕ್ಷಿ ಅಂಗಡಿ ಇತರರಿದ್ದರು.

## ಕನ್ನಡ ಆಡಳಿತ ಭಾಷೆಯಾಗಿ ಜಾರಿಯಾಗಲಿ

**ಗದಗ:** ಕರ್ನಾಟಕದಲ್ಲಿ ಕನ್ನಡ ಭಾಷೆ ಮಾತೃಭಾಷೆಯಾಗಿ, ಆಡಳಿತ ಭಾಷೆಯಾಗಿ ಕಟ್ಟುನಿಟ್ಟಾಗಿ ಜಾರಿಗೊಳ್ಳಬೇಕು. ಕನ್ನಡಿಗರಿಗೆ ಕನ್ನಡವೇ ಜೀವಾಳ. ಹಿಂದಿ ಇಂಗ್ಲಿಷ್ ಭಾಷೆ ಶಿಕ್ಷಣ, ಜ್ಞಾನ, ಸಂಪರ್ಕ ಭಾಷೆಯಾಗಿರಲಿ ಎಂದು ರಾಜ್ಯ ಸರ್ಕಾರದಿಂದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತೆ ರತ್ನಾ ಬದಿ ಹೇಳಿದರು.

ನಗರದ ಲಾಯನ್ಸ್ ಭವನದಲ್ಲಿ ಕರ್ನಾಟಕ ರಾಜ್ಯ ಲೇಖಕಿಯರ ಸಂಘ ಜಿಲ್ಲಾ ಘಟಕ ಹಾಗೂ ಶರಣೆ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ ಜಿಲ್ಲಾ ಘಟಕ ಧಾರವಾಡದ ಚೇತನ ಫೌಂಡೇಶನ್, ಬೆಂಗಳೂರಿನ ಗಂಧದ ಗುಡಿ ಕನ್ನಡ ಸಂಘ ಏರ್ಪಡಿಸಿದ್ದ ರಾಜ್ಯ ಮಟ್ಟದ ಕನ್ನಡ ನುಡಿ ಸಡಗರ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿ ಅವರು ಮಾತನಾಡಿದರು.

ಕನ್ನಡ ಭಾಷೆಯ ಸೊಗಸು, ಸೊಗಡು ಶ್ರೀಮಂತಗೊಂಡಿದೆ. ಕನ್ನಡ ಕಲಿಯಲು, ಬರೆಯಲು, ಮಾತನಾಡಲು ಹಾಗೂ ಕೇಳಲು ಬಹು ಇಂಪು. ಇತರ ಭಾಷೆಗಿಂತ ಕನ್ನಡ ಭಾಷೆ ತನ್ನದೇ ಆದ ಇತಿಹಾಸ ಮತ್ತು ಮಹತ್ವವನ್ನು ಹೊಂದಿದೆ. ಅಂತೆಯೇ ನಮ್ಮ ಹಿರಿಯ ಮೇಧಾವಿ ಸಾಹಿತಿಗಳು ರಚಿಸಿದ ಕನ್ನಡ ಕೃತಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಜ್ಞಾನಪೀಠ ಪ್ರಶಸ್ತಿಗಳು ದೊರೆತಿರುವುದು ಕನ್ನಡ ಭಾಷೆಗಿರುವ ಮಹತ್ವ ಮತ್ತು ಶ್ರೀಮಂತಿಕೆಯನ್ನು ಅಭಿವ್ಯಕ್ತಗೊಳಿಸುವುದು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ಶಿವಪ್ಪ ಕುರಿ, ಚೇತನ ಫೌಂಡೇಶನ್ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ, ಸಾಹಿತಿ ಶಿವಶಾಂತ ಬಿಸನಳ್ಳಿ, ಚಂಪಾ ಚಂದ್ರಶೇಖರ ಪಾಟೀಲ, ಗಣ್ಯ ವರ್ತಕ ವಿವೇಕಾನಂದ ಗುಡಿಮನಿ, ಸಾಹಿತಿ ಜಿ.ಎಸ್.ಪಾಟೀಲ ಉಪಸ್ಥಿತರಿದ್ದರು. ಡಾ.ಜಿ.ಪ್ರೇಮಾ ನಿರೂಪಿಸಿ ವಂದಿಸಿದರು.



ಗದಗ: ನಗರದ ಲಾಯನ್ಸ್ ಭವನದಲ್ಲಿ ಕರ್ನಾಟಕ ರಾಜ್ಯ ಲೇಖಕಿಯರ ಸಂಘ ಜಿಲ್ಲಾ ಘಟಕ ಹಾಗೂ ಶರಣೆ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆ ಜಿಲ್ಲಾ ಘಟಕ ಧಾರವಾಡದ ಚೇತನ ಫೌಂಡೇಶನ್, ಬೆಂಗಳೂರಿನ ಗಂಧದ ಗುಡಿ ಕನ್ನಡ ಸಂಘದ ವತಿಯಿಂದ ರಾಜ್ಯ ಮಟ್ಟದ ಕನ್ನಡ ನುಡಿ ಸಡಗರ ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗಿತ್ತು.

### ನಾಲ್ಕು ತಿಂಗಳಿಂದ ಹೆಚ್ಚಿದ ಅಪಘಾತ ಪ್ರಕರಣ | ಅಪಘಾತ ತಡೆಗೆ ಪೊಲೀಸರ ಕ್ರಮ

# 300ಕ್ಕಿಂತ ಹೆಚ್ಚು ಸವಾರರಿಗೆ ದಂಡ

▸ ಶಿವಲಿಂಗಯ್ಯ ಹೊತಗಿಮಠ

**ಲಕ್ಷ್ಮೇಶ್ವರ:** ಅತಿಯಾದ ವೇಗ, ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನ ಚಾಲನೆ, ಸಿಟ್ ಬೆಲ್ಟ್ ಹಾಕದಿರುವುದು, ಓವರ್ ಟೇಕ್, ಹೆಲ್ಮೆಟ್ ಹಾಕದೆ ಇರುವುದು, ನಿರ್ಲಕ್ಷ್ಯದಿಂದ ವಾಹನ ಚಲಾವಣೆ, ಮದ್ಯ ಸೇವಿಸಿ ವಾಹನ ಚಲಾವಣೆ ,ರಸ್ತೆ ಸಂಚಾರ ನಿಮಯ ಉಲ್ಲಂಘನೆ ಹೀಗೆ ಅನೇಕ ಕಾರಣಗಳಿಂದ ಲಕ್ಷ್ಮೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೇವಲ ಕಳೆದ 4 ತಿಂಗಳಿನಿಂದ ಅಪಘಾತ ಪ್ರಕರಣಗಳು ಹೆಚ್ಚುತ್ತಿದೆ.

ಅಪಘಾತ ತಡೆಗೆ ಪೊಲೀಸರ ಕ್ರಮ ಕೈಗೊಳ್ಳುತ್ತಿದ್ದು, ವಾಹನ ಸವಾರರಿಗೆ ರಸ್ತೆ ಸಂಚಾರ ನಿಯಮದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಆದರೂ ಈಗಾಗಲೇ 4 ತಿಂಗಳನಲ್ಲಿ ಮೋಟಾರ್ ಕಾಯ್ದೆ ಅಡಿಯಲ್ಲಿ ಹೆಲ್ಮೆಟ್, ಸಿಟ್ ಬೆಲ್ಟ್ ರ‍್ಯಾಕ್ ಲೆಸ್, ಡ್ರೈವಿಂಗ್, ಥ್ರಿಬಲ್ ರೈಡಿಂಗ್, ಮೊಬೈಲ್ ಬಳಕೆ, ಸೈಲೆನ್ಸರ್ ಡಿಫೆಕ್ಟಿವ್, ಇನ್ನು ಅನೇಕ ಸಂಚಾರಿ ಉಲ್ಲಂಘನೆ 300ಕ್ಕಿಂತ ಹೆಚ್ಚು ವಾಹನ ಸವಾರರಿಗೆ ದಂಡದ ಬಿಸಿ ಮುಟ್ಟಿಸಿದ್ದಾರೆ, 15ಕ್ಕೂ ಹೆಚ್ಚು ಮದ್ಯ ಸೇವಿಸಿ ವಾಹನ ಚಲಾವಣೆ ಮಾಡಿದ ಚಾಲಕರಿಗೆ ದಂಡವನ್ನು ಪೊಲೀಸರು ವಿಧಿಸಿದ್ದರೂ ವಾಹನ ಚಾಲಕರು ಎಚ್ಚೆತ್ತಕೊಳ್ಳುತ್ತಿಲ್ಲ.

ದಿಗಂತ ವಿಶೇಷ



- ಕಳೆದ 4 ತಿಂಗಳಲ್ಲಿ ಮಾರಣಾಂತಿಕ ಅಪಘಾತದಿಂದ 9 ಪ್ರಕರಣಗಳಲ್ಲಿ 10 ಸಾವು
- ಮಾರಣಾಂತಿಕವಲ್ಲದ 4 ಪ್ರಕರಣಗಳಲ್ಲಿ 7 ಜನರಿಗೆ ಗಂಭೀರ ಹಾಗೂ ಸಣ್ಣ ಪುಟ್ಟ ಗಾಯ


### ಜಾಗ್ರತೆಗೊಳ್ಳದ ಸಾರ್ವಜನಿಕರು

ಸವಣೂರ ರಸ್ತೆ, ಅಗಡಿ ಕಾಲೇಜು, ರಾಮಗೇರಿ ಹೈಸ್ಕೂಲ್, ಶಿಗ್ಲಿ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ ಸವಣೂರ ರಸ್ತೆ ಹುಬ್ಬಳ್ಳಿ ರಸ್ತೆ ಲೀಟಲ್ ಹಾರ್ಟ್ಸ್ ಶಾಲೆ ಹತ್ತಿರ, ಪಂಪವೃತ್ತ ಶಿಗ್ಲಿ ಕ್ರಾಸ್‌ನಲ್ಲಿ ಜಾಗೃತಿ ಮೂಡಿಸುವ ಬ್ಯಾನರ್‌ಗಳು , ಹೆಲ್ಮೆಟ್ ಬಗ್ಗೆ ತಿರುವುಗಳ ಬಗ್ಗೆ ವೇಗದ ಮಿತಿ ಸಿಗ್ನಲ್ ಉಲ್ಲಂಘನೆ ಆದರೆ ಆಗುವ ಅಪಘಾತಗಳ ಬಗ್ಗೆ ಓವರಸ್ಪೀಡ್ ವಿಷಯಗಳ ಬಗ್ಗೆ ಪೊಲೀಸರು ಜಾಗ್ರತೆ ಮೂಡಿಸುತ್ತಿದ್ದರೂ ಅಪಘಾತ ಹೆಚ್ಚುತ್ತಲೇ ಇವೆ.

“ಸಾರ್ವಜನಿಕರು ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಹಾಗೂ ವೇಗದ ಮಿತಿ ಕಡಿಮೆ ಇರಲಿ. ಮದ್ಯಸೇವನೆ ಮಾಡಿ ವಾಹನ ಚಾಲನೆ ಮಾಡಬಾರದು. ವಾಹನ ಲೈಸೆನ್ಸ್ ಮಾಡಿಸಿಕೊಂಡಿರಬೇಕು. ಸಂಚಾರಿ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

■ ನಾಗರಾಜ ಗಡದ, ಪಿಎಸ್‌ಐ, ಲಕ್ಷ್ಮೇಶ್ವರ

### ರಸ್ತೆಯ ಪಕ್ಕ ಜಾಗ್ರತೆ ಬೋರ್ಡ್ ಹಾಕಲು ಆಗ್ರಹ




ಪೊಲೀಸ್ ಇಲಾಖೆಯ ಮಾಹಿತಿ ಪ್ರಕಾರ ಅಪಘಾತ ಹೆಚ್ಚುತ್ತಿರುವ ರಾಮಗೇರಿ ಹಾಗೂ ಸವಣೂರ ರಸ್ತೆಯಲ್ಲಿ ವೈಜ್ಞಾನಿಕವಾಗಿ ಹಂಪ್ಸ್ ಹಾಕಲು ಲೋಕೋಪಯೋಗಿ ಇಲಾಖೆಗೆ ಪೊಲೀಸ್ ಠಾಣೆಯಿಂದ ಪತ್ರ ಬರೆದರೂ ಲೋಕೋಪಯೋಗಿ ಇಲಾಖೆ ಸ್ಪಂದನೆ ಕೊಟ್ಟಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣ ಸಿಗುತ್ತದೆ. ಕನಿಷ್ಠ ಲೋಕೋಪಯೋಗಿ ಇಲಾಖೆಯವರು ಅಪಘಾತ ಹೆಚ್ಚುತ್ತಿರುವ ರಸ್ತೆಯ ಪಕ್ಕ ಜಾಗ್ರತೆ ಬೋರ್ಡ್‌ಗಳನ್ನು ಹಾಕಲು ಆಗುವುದಿಲ್ಲವೇ? ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

## 4 ತಿಂಗಳಲ್ಲಿ ಕಳೆದುಹೋದ 769 ಮೊಬೈಲ್ ಪತ್ತೆ

**ಗದಗ:** 2026ರ ಜನವರಿಯಿಂದ ಏಪ್ರಿಲ್ ಅಂತ್ಯದವರೆಗೆ ಕೇವಲ 4 ತಿಂಗಳ ಅವಧಿಯಲ್ಲಿ 1.13 ಕೋಟಿ ರೂ. ಮೌಲ್ಯದ ಕಳೆದುಹೋದ 769 ಮೊಬೈಲ್ ಪತ್ತೆ ಮಾಡಿ ಪೊಲೀಸರು ಮಂಗಳವಾರ ಸಾರ್ವಜನಿಕರಿಗೆ ಮರಳಿಸಿದರು. ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಎಸ್‌ಪಿ ರೋಹನ ಜಗದೀಶ ಅವರು ಮೊಬೈಲ್ ಕಳೆದುಕೊಂಡ ಸಾರ್ವಜನಿಕರಿಗೆ ಮತ್ತೆ ಮಾಡಲಾದ ಮೊಬೈಲ್‌ಗಳನ್ನು ಹಸ್ತಾಂತರಿಸಿದರು.

ಮೊಬೈಲ್‌ಗಳನ್ನು ಪತ್ತೆ ಮಾಡುವ ಕುರಿತು ಕೇಂದ್ರ ಸರ್ಕಾರ ಸಿಇಐಆರ್ ಪೋರ್ಟಲ್‌ನ್ನು ಜಾರಿಗೆ ತಂದಿದ್ದು, ತಂತ್ರಾಂಶವನ್ನು ಪರಿಣಾಮಕಾರಿಗಯಾಗಿ ಜಾರಿ ಮಾಡಿ ಸಾರ್ವಜನಿಕರ ಪರವಾಗಿ ಸ್ವತಃ ನಾವೇ ದೂರು ದಾಖಲಿಸಿ 2025ರ ಅಂತ್ಯದವರೆಗೆ ಒಟ್ಟು 1,527 ಮೊಬೈಲ್‌ಗಳನ್ನು ಸಾರ್ವಜನಿಕರಿಗೆ ಮರಳಿ ನೀಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ ತಿಳಿಸಿದರು. ಸಿಇಐಆರ್ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 5,546 ಮೊಬೈಲ್ ಬ್ಲಾಕ್ ಮಾಡಿದ್ದು, ಅದರಲ್ಲಿ 3,251 ಮೊಬೈಲ್‌ಗಳು ಪತ್ತೆಯಾಗಿದ್ದು, ಅದರಲ್ಲಿ 2,295 ಮೊಬೈಲ್‌ಗಳನ್ನು ಜಪ್ತಿ ಮಾಡಿ ಮೂಲ ಮಾಲೀಕರಿಗೆ ಹಿಂದಿರುಗಿಸಲಾಗಿದೆ ಎಂದರು.

ಡಿವೈಎಸ್‌ಪಿ ಎಂ.ಬಿ. ಸಜ್ಜನ, ಮುರ್ತುಜಾ ಖಾದ್ರಿ, ಪ್ರಭುಗೌಡ ಕಿರೇದಹಳ್ಳಿ, ಸಿಪಿಐ ಶಿವಾನಂದ ವಾಲಿಕಾರ, ಧೀರಜ ಶಿಂದೆ, ಎಲ್.ಕೆ. ಜೂಲಕಟ್ಟಿ, ಸಿದ್ರಾಮೇಶ ಗಡೇದ, ಮಂಜುನಾಥ ನಡುವಲಮನಿ, ನ್ಯಾಮಗೌಡ, ಪಿಎಸ್‌ಐ ಚನ್ನಪ್ಪ ದೇವೂರ, ಲಕ್ಷ್ಮಣ ಆರಿ, ಮಾರುತಿ ಜೋಗದಂಡಕರ, ಈರಪ್ಪ ರಿತ್ತಿ, ಐಶ್ವರ್ಯ ನಾಗರಾಳ, ಪ್ರಕಾಶ ಬಣಕಾರ, ಪ್ರಕಾಶ ಡಿ., ನಾಗರಾಜ ಗಡಾದ ಹಾಗೂ ಸಿಬ್ಬಂದಿ ಶರಣಪ್ಪ ನಾಗೇಂದ್ರಗಡ, ಕುಮಾರ ತಿಗರಿ, ಅಣಪ್ಪ ಕವಲೂರ, ಮಂಜುನಾಥ ಬಂಡಿವಡ್ಡರ, ಶಿವಕುಮಾರ ಹುಬ್ಬಳ್ಳಿ, ಜೆ.ಐ. ಬಚೇರಿ ಇತರರಿದ್ದರು.

- ಗದಗ ಶಹರ ಠಾಣೆ ವ್ಯಾಪ್ತಿಯಲ್ಲಿ 131
- ಗದಗ ಗ್ರಾಮೀಣ 83
- ಬೆಟಗೇರಿ 8
- ಬೆಟಗೇರಿ ಬಡಾವಣೆ 46
- ಮುಳಗುಂದ 14
- ಲಕ್ಷ್ಮೇಶ್ವರ 83
- ಶಿರಹಟ್ಟಿ 5
- ನರಗುಂದ 41
- ರೋಣ 166
- ಗಜೇಂದ್ರಗಡ 53
- ಮುಂಡರಗಿ 109
- ನರೇಗಲ್ಲ 13
- ಸೈಬರ್ ಠಾಣೆಯಲ್ಲಿ 17 ಸೇರಿ ಒಟ್ಟು 769 ಕಳೆದುಹೋದ ಮೊಬೈಲ್ ಮರಳಿ ಮಾಲೀಕರ ಕೈಗೆ



## ಕನ್ನಡ ಕಡೆಗಣನೆ ಭಾಷೆಗೆ ಮಾಡಿದ ಅಪಮಾನ

**ನರಗುಂದ:** ರೈಲ್ವೆ ಪರೀಕ್ಷಾ ನೇಮಕಾತಿಯಲ್ಲಿ ಕನ್ನಡವನ್ನು ಕಡೆಗಣಿಸುತ್ತಿರುವುದು ಕನ್ನಡ ಭಾಷೆಗೆ ಮಾಡುತ್ತಿರುವ ಬಹುದೊಡ್ಡ ಅಪಮಾನವಾಗಿದೆ. ಇತ್ತೀಚಿಗೆ ಕೇಂದ್ರ ಸರ್ಕಾರ ನೈರುತ್ಯ ರೈಲ್ವೆ ಇಲಾಖೆಯು ಹೊರಡಿಸಿರುವ ಪರೀಕ್ಷಾ ಸುತ್ತೋಲೆಯಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡ ಬಳಸದೆ ಕೇವಲ ಹಿಂದಿ-ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಸುತ್ತೋಲೆ ಹೊರಡಿಸಿರುವುದು ಖಂಡನೀಯ ಎಂದು ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಶ್ರೀಗಳು ಹೇಳಿದರು.

ಅವರು ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ದೊರೆಸ್ವಾಮಿ ವಿವಿಧೋದ್ದೇಶ ಟ್ರಸ್ಟ್ ಬೈರನಹಟ್ಟಿ ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಹಾಗೂ ನಾದಬ್ರಹ್ಮಾನಂದ ಸ್ವಾಮಿಗಳ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿದರು.ಕರ್ನಾಟಕದಲ್ಲಿ ಕನ್ನಡ ಅಧಿಕೃತ ಭಾಷೆಯಾಗಿದೆ. ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಕನ್ನಡ ಅನುಷ್ಠಾನವನ್ನು ಕಡ್ಡಾಯಗೊಳಿಸಿದೆ. ಇಷ್ಟಿದ್ದರೂ ಕೇಂದ್ರ ಸರ್ಕಾರದ ನೈರುತ್ಯ ರೇಲ್ವೆ ಇಲಾಖೆಯು ಪರೀಕ್ಷಾ ನೇಮಕಾತಿಯಲ್ಲಿ ಕರ್ನಾಟಕದಲ್ಲಿ ಸಂಪೂರ್ಣವಾಗಿ ಕನ್ನಡವನ್ನು ಕಡೆಗಣಿಸುತ್ತಿದೆ. ಈ ಕುರಿತು ಮುಖ್ಯಮಂತ್ರಿಗಳು ಹಾಗೂ ರಾಜ್ಯದ 28 ಜನ ಸಂಸದರು, ರಾಜ್ಯಸಭಾ ಸದಸ್ಯರು ಮತ್ತು ರೆಲ್ವೆ ಇಲಾಖೆಯ ರಾಜ್ಯ ಖಾತೆ ಸಚಿವರಾದ ವ್ಹಿ. ಸೋಮಣ್ಣನವರು ಮೌನ ಮುರಿದು ಕನ್ನಡಕ್ಕಾಗುತ್ತಿರುವ ಅನ್ಯಾಯವನ್ನು ತಡೆಯಬೇಕು ಎಂದು ಮನವಿ ಮಾಡಿದರು.

ಚನ್ನಬಸಪ್ಪ ಕಂಠಿ ಮಾತನಾಡಿ, ಕನ್ನಡ ಭಾಷೆ ಸಾಹಿತ್ಯ ಕಲೆ ಜಾನಪದ ಸಂಸ್ಕೃತಿಗಳ ಸಂವರ್ಧನೆಯ ಉದ್ದೇಶದೊಂದಿಗೆ ಸ್ಥಾಪಿತವಾದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆಯನ್ನು ಉಳಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ಕರ್ನಾಟಕದ ರಾಜಕೀಯ ಏಕೀಕರಣಕ್ಕೆ ಪರಿಷತ್ತಿನ ಪ್ರಯತ್ನ ಹಾಗೂ ಕರ್ನಾಟಕದ ಭೌಗೋಳಿಕ ಗಡಿ ರೇಖೆಗಳನ್ನು ಗುರುತಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಯತ್ನ ಮಹತ್ವದ್ದಾಗಿದೆ ಎಂದರು.

2025-26ನೇ ಸಾಲಿನ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಅಲೆಮಾರಿ ಜನಾಂಗದ ನೀಲಾವತಿ ಯಣ್ಣಿ ಹಾಗೂ ಹತ್ತನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬೈರನಹಟ್ಟಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನೀಯರನ್ನು ಶ್ರೀಮಠದಿಂದ ಪ್ರತಿಭಾ ಪುರಸ್ಕಾರ ನೀಡಿ ಸತ್ಕರಿಸಲಾಯಿತು. ಬಿಆರ್‌ಸಿ ಬಿ ಆರ್ ರಾಯನಗೌಡ್ರ, ಸಿ.ಎಫ್. ಕುರಿ, ಮುಖ್ಯಶಿಕ್ಷಕ ಎಂ.ಡಿ. ಸಕ್ಕರಿ, ಜೆ.ಆರ್. ಕದಂ, ಸಂಗಪ್ಪ ಪೂಜಾರ, ಪ್ರೊ. ಆರ್ ಬಿ ಚಿನಿವಾಲರ, ಅಮರೇಶ ತೆಗ್ಗಿಮನಿ ಪ್ರಮುಖರಿದ್ದರು. ಪ್ರೊ. ಆರ್.ಕೆ. ಐನಾಪೂರ ನಿರ್ವಹಿಸಿದರು. ಮಹಾಂತೇಶ ಹಿರೇಮಠ ವಂದಿಸಿದರು.



## ಬಿ.ಕೆ. ಬ್ರದರ್ಸ್ ತಂಡಕ್ಕೆ ಒಲಿದ ಜಯ



**ಲಕ್ಷ್ಮೇಶ್ವರ:** ತಾಲೂಕಿನ ಯುಟಿ ಖಾದರ ಅಭಿಮಾನಿ ಬಳಗ ಏರ್ಪಡಿಸಿದ್ದ ಹಾರ್ಡ್ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಾಮೆಂಟ್ ಚಾಂಪಿಯನ್ಸ್ ಟ್ರೋಫಿ 2026 ಫೈನಲ್ ಪಂದ್ಯದಲ್ಲಿ ಉಡುಪಿಯ ಬಿ.ಕೆ. ಬ್ರದರ್ಸ್ ತಂಡ ಗೆಲುವನ್ನು ಮೂಡಿಗೇರಿಸಿಕೊಂಡಿತು.

ಪಟ್ಟಣದ ಉಮಾ ವಿದ್ಯಾಲಯ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಉಡುಪಿ ಬಿ.ಕೆ. ಬ್ರದರ್ಸ್ ತಂಡ ನಿಗದಿತ 8 ಓವರಗಳಲ್ಲಿ 6 ವಿಕೆಟ್ ನಷ್ಟಕ್ಕೆ 91ರನ್ ಗಳಿಸಿತು. ಗೌಸಶೇಖ 39,ಬಾರಿಸಿದರೆ ರಬ್ಬಾನಿ 22ರನ್ ಬಾರಿಸಿ ತಂಡದ ಉತ್ತಮ ಮೊತ್ತಕ್ಕೆ ಕಾರಣರಾದರು.

ಹೊಸಪೇಟೆಯ ಎಫ್ ಎಂ 11ತಂಡದ ಪರ ಆಕಾಶ ಕೆ 3ವಿಕೆಟ್, ಎಸ್ ಕೆ2ವಿಕೆಟ್ ಪ್ರಥಮೇಶ್ 1 ವಿಕೇಟ್ ಪಡೆದುಕೊಂಡರು. ನಂತರ ಬ್ಯಾಟಿಂಗ್ ಆರಂಭಿಸಿದ ಹೊಸಪೇಟೆಯ ಎಫ್ ಎಂ 11 ತಂಡ ಪ್ರಥಮೇಶ್ 26 ರನ್ ನಾಗಾ ಟಿ,14ರನ್ ಹೊಡೆಯುವ ಮೂಲಕ ಗೆಲುವಿನ ಗುರಿಯನ್ನು ತಲುಪಲು ಆಗಲಿಲ್ಲ, 8 ಓವರ್‌ನಲ್ಲಿ 6ವಿಕೆಟ್ ನಷ್ಟಕ್ಕೆ 72ರನ್ ಗಳಿಸಲು ಸಾಧ್ಯವಾಯಿತು. ಉಡುಪಿಯ ಬಿ.ಕೆ. ಬ್ರದರ್ಸ್ ತಂಡದ ಪರ ಸಂತೋಷ ಪಾಟೀಲ್ 2 ವಿಕೆಟ್, ಕಿರಣ 1ವಿಕೆಟ್, ಕುರೆಷಿ 1ವಿಕೆಟ್ ಪಡೆದುಕೊಂಡರು. 5 ದಿನ ನಡೆದ ಈ ಪಂದ್ಯಾವಳಿಯಲ್ಲಿ 16ಟೀಮ್ ಭಾಗವಹಿಸಿದ್ದವು. ಉಡುಪಿ ಹಾನಗಲ್, ಹೊಸಪೇಟೆ, ದಾಂಡೇಲಿ,ಸವಣೂರ, ಹುಬ್ಬಳ್ಳಿ ಸೇರಿದಂತೆ ಸ್ಥಳೀಯ ಟೀಮ್‌ಗಳು ಭಾಗವಹಿಸಿದ್ದವು. ಫೈನಲ್ ಪಂದ್ಯದಲ್ಲಿ ರಾಮು ಕಲಾದಗಿ ಸಿದ್ದು ಗುರವ ಅಂಪೇರ್ ಆಗಿ, ಕಾಮೆಂಟರ ಆಗಿ ಸಂತೋಷ ಕಾರಬಾರಿ ಸ್ಕೋರರ್ ಆಗಿ ಓಂಪ್ರಕಾಶ ಕಾರ್ಯನಿರ್ವಹಿಸಿದರು. ಜಾಹಿರುದ್ದೀನ್ ತಾಡಪತ್ರಿ ಇಸ್ಮಾಯಿಲ್ ಆಡೂರ, ಸಿಕಂದರಕಣಕೆ, ಅಭಿದ್ ಕ್ರಿಕೆಟ್ ಟೂರ್ನಾಮೆಂಟ್ ನಡೆಸಿಕೊಟ್ಟರು. ಗೆದ್ದ ಉಡುಪಿ ತಂಡಕ್ಕೆ ಪುರಸಭೆ ಮಾಜಿ ಸದಸ್ಯ ರಾಜೀವ. ಕುಂಬಿ, ದಾದಾಪೀರ ಮುಚ್ಚಾಲೆ, ಸೋಮೇಶ್ವರ ರಿಯಲ್ ಎಸ್ಟೇಟ್ ಸಂಘ ತಾಲೂಕು ಅಧ್ಯಕ್ಷ ಮೌಲಾಲಿ ಮುಲ್ಲಾ ಬಹುಮಾನ ವಿತರಿಸಿದರು.

## ರಥ ಲೋಕಾರ್ಪಣೆ, ಧರ್ಮ ಸಮಾರಂಭ ಇಂದು

**ಗದಗ:** ಗಜೇಂದ್ರಗಡ ತಾಲೂಕಿನ ಸೂಡಿಯಲ್ಲಿ ಪ್ರಪ್ರಥಮವಾಗಿ ವೀರಶೈವ ಧರ್ಮಪೀಠದಜಗದ್ಗುರುಗಳಅಡ್ಡಪಲ್ಲಕ್ಕಿ ಮಹೋತ್ಸವ, ಜುಕ್ತಿಹಿರೇಮಠದ 50ನೇ ವರ್ಷದ ರಥೋತ್ಸವದ ನಿಮಿತ್ತ ನೂತನವಾಗಿ ತಯಾರಿಸಲಾದ ರಥ ಲೋಕಾರ್ಪಣೆಯ ಧರ್ಮ ಸಮಾರಂಭ ಮೇ 6 ರಿಂದ 10ರವರೆಗೆ ನಡೆಯಲಿದೆ ಎಂದು ಸೂಡಿ-ಗದಗ ಜುಕ್ತಿಹಿರೇಮಠದ ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಸ್ಥಾನ ಜುಕ್ತಿ ಹಿರೇಮಠ, ಸೂಡಿ ಇದರ ಆಶ್ರಯದಲ್ಲಿ ನಡೆಯುತ್ತಿರುವ ಐದು ದಿನಗಳ ಭವ್ಯ ಸಮಾರಂಭದಲ್ಲಿ ಸೂಡಿ ಗ್ರಾಮದ ಮಾನವ ಧರ್ಮ ಮಂಟಪದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವು ಮೇ 6ರಂದು ಚಾಲನೆಗೊಳ್ಳಲಿದೆ. ಬೆಳಗ್ಗೆ 10.30ಕ್ಕೆ ಆರೋಗ್ಯ ಸಂವರ್ಧನ ಸಮಾರಂಭ ನೆರವೇರಲಿದೆ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವಈಕಾರ್ಯಕ್ರಮದಲ್ಲಿಕಣ್ಣಿನ ಹಾಗೂ ಆರೋಗ್ಯದ ಉಚಿತ ತಪಾಸಣೆ ಮತ್ತು ರಕ್ತದಾನ ಶಿಬಿರ ನೆರವೇರಲಿದೆ. ವಿವಿಧ ಮಠಾಧೀಶರ ಸಮ್ಮುಖದಲ್ಲಿ ಮಾಜಿ ಶಾಸಕ ಡಿ. ಆರ್ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಸ್ವಾಗತ ಸಮಿತಿ ಅಧ್ಯಕ್ಷ ಎಚ್.ಡಿ. ಪಾಟೀಲ, ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ ಅವರು ಆಹಾರ-ಆರೋಗ್ಯ-ಆಧ್ಯಾತ್ಮ ಕುರಿತು ನಲ್ಮೆಯ ನುಡಿಗಳನ್ನಾಡುವರು. ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ನಿರ್ದೇಶಕ ವೈ.ಎಸ್. ಪಾಟೀಲ ಸೇರಿ ಹಲವರು ಉಪಸ್ಥಿತಿ ಇರಲಿದೆ ಎಂದರು.

ಮೇ 7ರಂದು ಗುರುವಾರ ಕೃಷಿ ಋಷಿಯ ನೆನಹು... ಶೀರ್ಷಿಕೆ ಅಡಿಯಲ್ಲಿ ಇಡೀ ದಿನ ವಿಶೇಷ ಕಾರ್ಯಕ್ರಮ ನೆರವೇರಲಿದೆ. ರೋಣ ಶಾಸಕ ಜಿಎಸ್. ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮೇ 8 ರಂದು ಮಹಿಳಾ ಜಾಗೃತಿ ಸಮಾರಂಭ ಹಾಗೂ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ಮೇ 9ರಂದು ಬೆಳಗ್ಗೆ 10.30 ಕ್ಕೆ ಯುವ ಜಾಗೃತಿ ಮತ್ತು ಹಿರಿಯ ನಾಗರಿಕ ಸಂರಕ್ಷಣಾ ಸಮಾವೇಶ, ಮೇ 10ರಂದು ಬೆಳಗ್ಗೆ 9ಕ್ಕೆ ರಂಭಾಪುರಿ, ಉಜ್ಜಯಿನಿ, ಶ್ರೀಕಾಶಿ, ಶ್ರೀಶೈಲ ಮಠಾಧೀಶರು ಗ್ರಾಮಕ್ಕೆ ಆಗಮಿಸಲಿದ್ದು, ಈ ಎಲ್ಲ ಪಂಚಪೀಠದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ನೆರವೇರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಎಸ್.ಎಂ. ಮಾರನಬಸರಿ, ಅಧ್ಯಕ್ಷ ಎಸ್.ಡಿ. ಪಾಟೀಲ, ಕಾರ್ಯಾಧ್ಯಕ್ಷ ಶರಣಬಸವ ಎಸ್. ಗುಡಿಮನಿ, ಶಿವಾನಂದಯ್ಯ ಹಿರೇಮಠ, ಚಂದ್ರು ಬಾಳಿಹಳ್ಳಿಮಠ ಸೇರಿ ಹಲವರಿದ್ದರು.



## ಆರೋಪಕ್ಕೆ ಕಡಿವಾಣ: ಮೋರನಾಳ



**ಮುಂಡರಗಿ:** ದಾವಣಗೇರಿ ಹಾಗೂ ಬಾಗಲಕೋಟಿ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಅತ್ಯಧಿಕ ಮತಗಳನ್ನು ಪಡೆಯುವ ಮೂಲಕ ವಿಜಯ ಸಾಧಿಸಿದರು. ಬಿಜೆಪಿ ಪಕ್ಷದಿಂದ ಸತತವಾಗಿ ಕಾಂಗ್ರೆಸ್ ಮೇಲೆ ಆರೋಪ ಮಾಡಿದರೂ ಸಹ ಸುಮಾರು 22 ಸಾವಿರಕ್ಕಿಂತ ಹೆಚ್ಚು ಮತಗಳಿಂದ ಗೆಲುವು ಸಾಧಿಸುವ ಮೂಲಕ ಬಿಜೆಪಿ ಪಕ್ಷದ ಆರೋಪಕ್ಕೆ ಕಡಿವಾಣ ಹಾಕಿದಂತಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಡಿ.ಮೋರನಾಳ ಹೇಳಿದರು.


ಪಟ್ಟಣದ ಬೃಂದಾವನ ಸರ್ಕಲ್‌ನಲ್ಲಿ ಬಾಗಲಕೋಟಿ ಹಾಗೂ ದಾವಣಗೇರಿಯ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶದಲ್ಲಿ ಅತ್ಯಧಿಕ ಮತಗಳಿಂದ ಜಯಗಳಿಸಿದ ಪ್ರಯುಕ್ತ ಮುಂಡರಗಿ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಹಮ್ಮಿಕೊಂಡ ವಿಜಯೋತ್ಸವದಲ್ಲಿ ನೇತೃತ್ವವಹಿಸಿ ಮಾತನಾಡಿದರು.

ಗದಗ ವಿಧಾನ ಪರಿಷತ್ ಪದವಿಧರ ಕ್ಷೇತ್ರದ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿಗಳು ಅತ್ಯಧಿಕ ಮತಗಳಿಂದ ಗೆಲುವು ಕಂಡು ವಿರೋಧ ಪಕ್ಷದ ಆರೋಪಕ್ಕೆ ತಕ್ಕ ಉತ್ತರ ನೀಡಿದರು ಎಂದರು. ಡಾ.ಬಿ.ಎಸ್.ಮೇಟಿ, ಡಿ.ಎಂ. ಕಾತರಕಿ, ನಾಗರಾಜ ಹೊಂಬಳಗಟ್ಟಿ, ರಾಜಾಭಕ್ಷಿ ಬೆಟಗೇರಿ, ರುದ್ರಗೌಡ ಪಾಟೀಲ್, ರಾಘವೇಂದ್ರ ಕುರಿ, ಸುರೇಶ ಮಾಗಡಿ, ರಾಜು ಡಾವಣಗೇರಿ, ಮುದಿಯಪ್ಪ ಕುಂಬಾರ್, ಯಲ್ಲಪ್ಪ ಹೊಂಬಳಗಟ್ಟಿ, ಅಶೋಕ ಹುಬ್ಬಳ್ಳಿ, ಕೌಸರಭಾನು ಪೀರವಾಲೆ, ಆನಂದಗೌಡ ಪಾಟೀಲ್, ರಾಮು ಭಜಂತ್ರಿ, ಅಂದಪ್ಪ ಬಳ್ಳಾರಿ, ಉಮೇಶ ಕಲಾಲ್, ವಿಶ್ವನಾಥ ಪಾಟೀಲ್ ಸೇರಿದಂತೆ ಇತರರಿದ್ದರು.

## ಗಾಯಾಳುಗಳಿಗೆ ಸಂಕನೂರ ಸಾಂತ್ವನ

**ಗದಗ:** ತೋಂಟದಾರ್ಯ ಜಾತ್ರಾ ಮಹೋತ್ಸವದಲ್ಲಿ ಆಕಸ್ಮಿಕವಾಗಿ ಡ್ಯಾನ್ಸಿಂಗ್ ಫ್ಲೈ ಜೋಕಾಲಿ ಆಡುವ ಸಂದರ್ಭದಲ್ಲಿ ತಾಂತ್ರಿಕ ದೋಷ ಉಂಟಾಗಿ ದುರ್ಘಟನೆ ನಡೆದು ಸುಮಾರು 18 ಜನ ಗಾಯಗೊಂಡು ಕೆ.ಎಚ್. ಪಾಟೀಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾದವರನ್ನು ಭೇಟಿ ಮಾಡಿದ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರು ಆರೋಗ್ಯದ ಸ್ಥಿತಿಗತಿ ಕುರಿತು ವಿಚಾರಿಸಿ ಗಾಯಾಳುಗಳಿಗೆ ಸಾಂತ್ವನ ಹೇಳಿದರು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 18 ಗಾಯಾಳುಗಳಲ್ಲಿ ಈವರೆಗೆ ಮಾತ್ರ ಹೆಚ್ಚಿನ ಚಿಕಿತ್ಸೆ ಮಾಡಬೇಕಾಗಿದ್ದು, ಉಳಿದವರನ್ನು 3-4 ದಿನಗಳಲ್ಲಿ ಬಿಡುಗಡೆಗೊಳಿಸುವುದಾಗಿ ಆಸ್ಪತ್ರೆಯ ನಿರ್ದೇಶಕ ಬಸವರಾಜ ಬೊಮ್ಮನಹಳ್ಳಿ ಹೇಳಿದರು. ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿರುವ ಎಲುಬು ಕೀಲು ವೈದ್ಯರಾದ ಮಹಾಂತೇಶ ಪಾಟೀಲ ಹಾಗೂ ಜನರಲ್ ಸರ್ಜನ್ ಸುನೀಲ ತೇಲಕರ ಜೊತೆ ಮಾತನಾಡಿ ಹೆಚ್ಚಿನ ಕಾಳಜಿ ವಹಿಸಿ ಚಿಕಿತ್ಸೆ ನೀಡಲು ಎಸ್.ವಿ. ಸಂಕನೂರ ಮನವಿ ಮಾಡಿಕೊಂಡರು. ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಜು ಕುರಡಗಿ, ನಗರಾಭಿವೃದ್ಧಿ ಮಾಜಿ ಅಧ್ಯಕ್ಷ ಸಿದ್ದಣ್ಣ ಪಲ್ಲೇದ, ರಮೇಶ ಸಜ್ಜಗಾರ, ವಕೀಲ ಕೆ.ಪಿ. ಕೋಟಿಗೌಡ್ರ, ಅಮರನಾಥ ಗಡಗಿ ಹಾಗೂ ರವಿ ಮಾನ್ವಿ ಇದ್ದರು.



## ಮಳೆಗಾಗಿ ದೇವಿಗೆ ಉಡಿ ತುಂಬಿ ಪೂಜೆ



**ಲಕ್ಷ್ಮೇಶ್ವರ:** ತಾಲೂಕಿನ ಗೊಜನೂರಿನ ಗ್ರಾಮಸ್ಥರು ಮಳೆಗಾಗಿ ದೇವರಿಗೆ ಮೊರೆ ಹೋದರು. ಗ್ರಾಮದ ರೈತರು ಗುಡ್ಡದ ಮೇಲೆ ಇರುವ ಗೋಲಕವ್ವಾ ದೇವಿಗೆ ಉಡಿ ತುಂಬಿ ಪೂಜೆ ಸಲ್ಲಿಸಿದರು. ಹಲವಾರು ವರ್ಷಗಳಿಂದ ಮಳೆ ಬಾರದೆವಿದ್ದಾಗ ದೇವಿಗೆ ಮೊರೆ ಹೋದರೆ ಮಳೆ ಬರುತ್ತದೆ ಎಂದು ಗ್ರಾಮಸ್ಥರಲ್ಲಿ ನಂಬಿಕೆವಿದ್ದು ಎಲ್ಲರೂ ಒಂದೇ ಕಡೆ ಸೇರಿ ಪೂಜೆ ಸಲ್ಲಿಸುವ ಮೂಲಕ ದೇವರಿಗೆ ಮಳೆ ಬರಲಿ ಎಂದು ಬೇಡಿಕೊಂಡರು.

ಮಹಿಳೆಯರು ಜೋಗುಳ ಹಾಡಿದರು. ಮಲ್ಲಿಕಾರ್ಜುನ ತರುಣ ಭಜನಾ ಸಂಘದಿಂದ ಭಜನೆ ಸೇವೆ ನಡೆಯಿತು. ಈ ಸಂದರ್ಭದಲ್ಲಿ ಬಾಪುಗೌಡ ಪಾಟೀಲ, ಚನ್ನಪ್ಪ ಷಣ್ಮುಖಿ, ಹನುಮಂತಪ್ಪ ಹೂಗಾರ, ಈರಯ್ಯ ಹಿರೇಮಠ, ಮಲ್ಲಪ್ಪ ದೇವರೊಳ್ಳಿ, ಅಜ್ಜಪ್ಪ ಪಾಟೀಲ, ರುದ್ರಗೌಡ ಪಾಟೀಲ್, ಫಕೀರೇಶ ಚಿಕ್ಕಗಸಿ, ಜೋಗಮ್ಮ ಚಿನ್ನಮ್ಮ ದುರಗಣ್ಣವರ ಗಿರಿಜವ್ವ ಹೂಗಾರ, ಲಕ್ಷ್ಮವ್ವ ದೊಡ್ಡಮನಿ, ನೀಲವ್ವ ಪಾಟೀಲ್ ಇತರರಿದ್ದರು.

## ಜಕ್ಕಲಿಯಲ್ಲಿ ಪಟಾಕಿ ಸಿಡಿಸಿ ಸಂಭ್ರಮ

**ನರೇಗಲ್ಲ:** ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಮೋಘ ಜಯ ಸಾಧಿಸಿದ ಹಿನ್ನೆಲೆಯಲ್ಲಿ ಸಮೀಪದ ಜಕ್ಕಲಿ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಅದ್ದೂರಿ ವಿಜಯೋತ್ಸವ ಆಚರಿಸಿದರು.

ಗ್ರಾಮದ ಬಸ್ ನಿಲ್ದಾಣದ ಹತ್ತಿರ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಘೋಷಣೆಗಳನ್ನು ಕೂಗಿ, ಗ್ರಾಮದಲ್ಲಿ ವಿಜಯದ ನಾದ ಮೊಳಗಿಸಿದರು.

ರೋಣ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಮುತ್ತಣ್ಣ ಕಡಗದ ಮಾತನಾಡಿ, ಈ ಫಲಿತಾಂಶವು ಪ್ರಧಾನಿ ನರೇಂದ್ರ ಮೋದಿ ಅವರ ದಕ್ಷ ನಾಯಕತ್ವ ಮತ್ತು ಕೇಂದ್ರ ಸರ್ಕಾರದ ಜನಪರ ಯೋಜನೆಗಳಿಗೆ ಜನರು ನೀಡಿದ ಬೆಂಬಲದ ಪ್ರತಿಫಲವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಗೆ ಇದು ದಿಕ್ಸೂಚಿಯಾಗಿದ್ದು, ಅಭಿವೃದ್ಧಿಯ ರಾಜಕಾರಣವನ್ನು ಜನತೆ ಮೆಚ್ಚಿಕೊಂಡಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ಮುಖಂಡರಾದ ಶಿವನಾಗಪ್ಪ ದೊಡ್ಡಮೇಟಿ, ಚೆನ್ನಬಸವ ಕೊಪ್ಪದ, ಶೇಖಪ್ಪ ಮಾರನಬಸರಿ, ಜಗದೀಶ ಪಲ್ಲೇದ, ಮಲ್ಲಪ್ಪ ಪಲ್ಲೇದ, ವಿನಾಯಕ ಉಮತಾರ, ಶಿವಕುಮಾರ್ ಸ್ಟಾಂಪಿನ್, ಶರಣಪ್ಪ ಕೋರಿ, ಮಂಜುನಾಥ ವಾಲಿ, ಮಲ್ಲಪ್ಪ ಪಟ್ಟಣಶೆಟ್ಟಿ, ವೀರಭದ್ರಪ್ಪ ಚಿನ್ನೂರ, ನಾಗರಾಜ ಸೋಮನಕಟ್ಟಿ, ಆದಾಮಸಾಬ ಬಾಲೇಸಾಬನವರ, ನಾಗರಾಜ ಸಂಗನಬಶೆಟ್ರ ಸೇರಿದಂತೆ ಇತರರಿದ್ದರು.



ಆರೆಸ್ಸೆಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಅಭಿಪ್ರಾಯ

# ಶಿಕ್ಷಣದಲ್ಲಿ ಬದಲಾವಣೆ ಅಗತ್ಯ

**ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿಯ ಲೋಕಾರ್ಪಣಾ ಸಮಾರಂಭ**



**ಹುಬ್ಬಳ್ಳಿ:** ದೇಶದಲ್ಲಿ 50 ವರ್ಷದ ಹಿಂದೆ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರಬೇಕಿತ್ತು. ಅದನ್ನು ಪ್ರಧಾನಿ ಮೋದಿಯವರು ಜಾರಿಗೊಳಿಸಿದ್ದಾರೆ. ಶಿಕ್ಷಣದಲ್ಲಿ ಬದಲಾವಣೆಯಾಗಬೇಕಿದೆ. ಅಶಿಕ್ಷಿತರನ್ನು ಸುಶಿಕ್ಷಿತರನ್ನಾಗಿ ಮಾಡಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ತಿಳಿಸಿದರು.

ಮಂಗಳವಾರ ಗೋಕುಲ ರಸ್ತೆ ರೇಣುಕಾ ನಗರದಲ್ಲಿ ಭಾರತೀಯ ಶಿಕ್ಷಣ ಪ್ರಸಾರ ಸಮಿತಿ ಸಂಚಾಲಿತ ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿಯ ಲೋಕಾರ್ಪಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಕ್ಕಳ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ರಾಷ್ಟ್ರೋತ್ಥಾನ ಪರಿಷತ್, ಭಾರತೀಯ ಶಿಕ್ಷಣ ಪ್ರಸಾರ ಸಮಿತಿ ಕಾರ್ಯ ನಿರ್ವಹಿಸುತ್ತಿದೆ. ಸಮಾಜದ ಮಕ್ಕಳಿಗೆ ಸಂಸ್ಕಾರಯುತ, ಚಾರಿತ್ರ್ಯವಂತ, ಆದರ್ಶ ಶಿಕ್ಷಣ ನೀಡುವ ಉದ್ದೇಶದಿಂದಲೇ ಶಾಲೆ ಆರಂಭಿಸಿದೆ ಎಂದರು.

ಪ್ರಸ್ತುವಾಗಿ ಮಕ್ಕಳಿಗೆ ಚಾರಿತ್ರ್ಯವಂತ, ದೇಶ ಭಕ್ತಿಯ ಹಾಗೂ ದೇಶಕ್ಕೆ ಕೀರ್ತಿ ತರುವಂಥ ಶಿಕ್ಷಣ ಅವಶ್ಯವಾಗಿದೆ. ಶಾಲೆ ಕಟ್ಟಿದರೆ ಸಾಲದು. ದೇಶದ ಭವಿಷ್ಯ ನಿರ್ಮಿಸುವ ಮಕ್ಕಳ ತಯಾರಿ ಮಾಡಬೇಕಿದೆ ಎಂದು ಹೇಳಿದರು.

ಶಾಲೆಗೆ ಬರುವ ಮಕ್ಕಳಿಗೆ ಮುಂಬರುವ ದಿನಗಳಲ್ಲಿ ಈ ದೇಶಕ್ಕೆ ಕೀರ್ತಿ ತರುವ ಅಡಿಪಾಯ ಹಾಕಬೇಕಿದೆ. ಅಂತಹ ಶಿಕ್ಷಣ ನೀಡುವ ಶಾಲೆಗಳು ನಮ್ಮದಾಗಬೇಕಿದೆ. ಅದಕ್ಕೆ ಬೇಕಾದ ಪ್ರಯತ್ನ, ಸಹಕಾರವು ಶಿಕ್ಷಕರು, ಸಮಾಜದಿಂದ ಆಗಬೇಕಿದೆ. ಮಕ್ಕಳಿಗೆ ನ್ಯಾಯವಾದ ಶಿಕ್ಷಣ ಸಿಗಬೇಕು. ಬರುವಂತಹ ಮುಂದಿನ ಪೀಳಿಗೆಯು ನಿಜವಾದ ಶಿಕ್ಷಣವಂತರಾಗಬೇಕು. ಅವರು ದೇಶದ ಆಸ್ತಿ ಆಗಬೇಕು ಎಂದು ಹೇಳಿದರು.

ಗದಗ ಶಿವಾನಂದ ಬೃಹನ್ಮಠದ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮೀಜಿ, ಭಾರತವು ಜ್ಞಾನ, ಶಿಕ್ಷಣ ಕ್ಷೇತ್ರವಾಗಿದೆ. ನಮ್ಮ ಪೂರ್ವಜರು ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ಶಿಕ್ಷಣ, ತರ್ಕ ಒಳಗೊಂಡು ಎಲ್ಲವನ್ನೂ ಸಂರಕ್ಷಿಸಿಕೊಂಡು ಬಂದಿದ್ದಾರೆ. ನಮ್ಮ ದೇಶದಲ್ಲಿ ಬುದ್ಧಿ, ಭಾವ ಬೆಳೆಸುವುದಾಗಿದೆ. ಹೀಗಾಗಿ ಜಗತ್ತು ಭಾರತದ ಬುದ್ಧಿಗಾಗಿ ಹೆದರುತ್ತಿದೆ. ಇಡೀ ಸಮಾಜ ಪಾಠಶಾಲೆಯ ಜವಾಬ್ದಾರಿ ಹೊರುತ್ತಿತ್ತು ಎಂದು ಹೇಳಿದರು.

> ಹುಬ್ಬಳ್ಳಿಯ ಕಲಘಟಗಿ ರಸ್ತೆಯಲ್ಲಿ ಸುಮಾರು 20 ಎಕರೆ ಜಾಗ ಪಡೆಯಲಾಗಿದ್ದು, ಅಲ್ಲಿ ಸುಸಜ್ಜಿತ, ಅತ್ಯುತ್ತಮವಾದ ರಾಷ್ಟ್ರೋತ್ಥಾನ ಶಾಲೆಯನ್ನು ಇನ್ನೆರಡು ವರ್ಷಗಳಲ್ಲಿ ಪ್ರಾರಂಭಿಸಲಾಗುವುದು.
> ■ **ಮಂಗೇಶ ಭೇಂಡೆ,** ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ

ನಮ್ಮ ದೇಶದ ಮೇಲೆ ಸಾವಿರಾರು ವರ್ಷಗಳ ಕಾಲ ಪರಕೀಯರಿಂದ ಯುದ್ಧ, ಆಕ್ರಮಣ ಆಗಿರಬಹುದು. ಆದರೆ, ಜ್ಞಾನ ಕಳೆದುಕೊಂಡಿಲ್ಲ. ಸರ್ಕಾರ ಪಾಠಶಾಲೆ ಆವರಣ ಪ್ರವೇಶಿಸುತ್ತಿದ್ದಿಲ್ಲ. ಆದರೆ, ವಿಪರ್ಯಾಸವೆಂದರೆ ಇಂದು ಶಿಕ್ಷಣವೆಂಬುದು ಉದ್ಯಮವಾಗಿದೆ. ಕಾರಣ, ದೇಶ ಪುನರ್ ಸಂಘಟಿತ ಆಗಬೇಕಾದರೆ ಶಿಕ್ಷಣ ಕ್ಷೇತ್ರದ ಸುಧಾರಣೆ ಆಗಬೇಕಿದೆ. ಅದರ ವ್ಯಾಪಾರೀಕರಣ ನಿಲ್ಲಬೇಕಾಗಿದೆ. ಅದು ಮುಕ್ತವಾಗಿ ಎಲ್ಲರಿಗೂ ದೊರೆಯಬೇಕು. ಅಂದಾಗ ಭಾರತ ಜ್ಞಾನಿಗಳಿಂದ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ವಿದ್ಯಾ ಕೇಂದ್ರದ ಅಧ್ಯಕ್ಷ ಶಿವಲಿಂಗಯ್ಯ ಶಿವಯೋಗಿಮಠ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಅಧ್ಯಕ್ಷ ವಿಜಯಾನಂದ ಶೆಟ್ಟಿ, ಗುಂಡಣ್ಣ ರಾಜಬನ್ನಿ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಶಾಸಕ ಮಹೇಶ ಟೆಂಗಿನಕಾಯಿ, ಆರ್‌ಎಸ್‌ಎಸ್‌ನ ಪ್ರಾಂತ ಪ್ರಚಾರಕ ನರೇಂದ್ರ, ಪ್ರಾಂತ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಿಗೇರ, ಉದ್ಯಮಿಗಳಾದ ವಿ.ಎಸ್.ವಿ ಪ್ರಸಾದ, ಜಿತೇಂದ್ರ ಮಜೇಥಿಯಾ, ಮಹಾದೇವ ಕರಮರಿ, ಶಾಲಾ ಆಡಳಿತ ಮಂಡಳಿ ಸದಸ್ಯರಾದ ವೀರೇಂದ್ರ ಕೌಜಲಗಿ, ಎಂ.ಆರ್.ಪಾಟೀಲ, ಗೌತಮ ಬಾಫನಾ, ರಾಮಣ್ಣ ಬಡಿಗೇರ, ವಿಶ್ವನಾಥ ರಾನಡೆ, ಸಂಜೀವ ಜೋಶಿ, ಶ್ರೀಗಂಧ ಶೇಟ, ಸಾವನ ಕಟಾರಿಯಾ, ಮುಖಂಡರಾದ ರಘು ಅಕಮಂಚಿ, ಸುಭಾಷಸಿಂಗ್ ಜಮಾದಾರ, ಮುಖ್ಯೋಪಾಧ್ಯಾಯಿನಿ ಶರಾವತಿ ಕುಲಕರ್ಣಿ ಇತರರಿದ್ದರು.

ವಿದ್ಯಾ ಕೇಂದ್ರದ ಕಾರ್ಯದರ್ಶಿ ದತ್ತಮೂರ್ತಿ ಕುಲಕರ್ಣಿ ಸ್ವಾಗತಿಸಿದರು. ಆಡಳಿತಾಧಿಕಾರಿ ಶ್ರೀಧರ ಜೋಶಿ ಪ್ರಾಸ್ತಾವಿಕ ಮಾತನಾಡಿದರು. ವಿಜಯಲಕ್ಷ್ಮೀ ಹಿರೇಮಠ ನಿರೂಪಿಸಿದರು. ಲಕ್ಷ್ಮಣ ಬೀಳಗಿ ವಂದಿಸಿದರು.

ನಿರ್ಣಯ ಒಗ್ಗಟ್ಟಿನ ಮಂತ್ರವೋ?, ರಾಜಕೀಯ ತಂತ್ರವೋ?

# ಪ್ರತ್ಯೇಕ-ಬೃಹತ್ ಪಾಲಿಕೆ ಹಗ್ಗಜಗ್ಗಾಟ!

▸ ಮಹಾಂತೇಶ ಕಣವಿ



**ಧಾರವಾಡ:** ಹುಬ್ಬಳ್ಳಿ-ಧಾರವಾಡ ಅವಳಿನಗರ ಮಧ್ಯೆದ ಅಧಿಕಾರ ಮತ್ತು ಅಭಿವೃದ್ಧಿಯ ಹಗ್ಗಜಗ್ಗಾಟ ಇದೀಗ ತಾರಕ್ಕೇರಿದೆ. ಒಂದೆಡೆ ಧಾರವಾಡ ಪ್ರತ್ಯೇಕ ಪಾಲಿಕೆಯ ಕೂಗು ಜೋರಾಗಿದ್ದರೆ, ಮತ್ತೊಂದೆಡೆ ಬೃಹತ್ ಪಾಲಿಕೆ ಅಸ್ತಿತ್ವ ರಚನೆ ನಿರ್ಣಯ ಸಾಗುತ್ತಿದೆ!

ಹು-ಧಾ ನಗರಗಳು ಆಡಳಿತಾತ್ಮಕವಾಗಿ ಒಂದೇ ಪಾಲಿಕೆಯಡಿ ಬಂದರೂ ಭಾವನಾತ್ಮಕವಾಗಿ ಹಾಗೂ ಭೌಗಳಿಕವಾಗಿಯೂ ಇಂದಿಗೂ ಭಿನ್ನವಾಗಿ ಉಳಿದಿದೆ. ಧಾರವಾಡಿಗರ ದೂರು ಅಂದರೆ, ಹುಬ್ಬಳ್ಳಿಯ ಅಬ್ಬರದಲ್ಲಿ ಧಾರವಾಡದ ಧ್ವನಿ ಗೌಣ ಎಂಬುದು.

**ಸದಸ್ಯರ ಬಲಾಬಲ**

| | |
|---|---|
| ವಾರ್ಡ್‌ಗಳು | 82 |
| ಬಿಜೆಪಿ | 39 |
| ಕಾಂಗ್ರೆಸ್ | 33 |
| ಪಕ್ಷೇತರ | 06 |
| ಜೆಡಿಎಸ್ | 01 |
| ಎಐಎಂಐಎಂ | 03 |

ಸಣ್ಣ ಕೆಲಸಕ್ಕೂ ಹುಬ್ಬಳ್ಳಿಯ ಪ್ರಧಾನ ಕಚೇರಿಗೆ ಅಲೆಯುವುದು ಜನರಿಗೆ ಹೊರೆ. ಅಲ್ಲದೇ, ಪಾಲಿಕೆಗೆ ಬರುವ ಬಹುಪಾಲು ಅನುದಾನ ಹುಬ್ಬಳ್ಳಿ ಭಾಗದ ಅಭಿವೃದ್ಧಿಗೆ ಬಳಸುವ ಜೊತೆಗೆ ಧಾರವಾಡ ಕಡೆಗಣಿ ಸಲ್ಪಡುತ್ತಿದೆ ಎಂಬುದು ಹೋರಾಟಗಾರರ ಆರೋಪ.

**ದಿಗಂತ ವಿಶೇಷ**

**ಸಾಂಸ್ಕೃತಿಕ ಅಸ್ಮಿತೆ:** ವಿದ್ಯಾಕಾಶಿ ಹೆಗ್ಗಳಿಕೆಯ ಧಾರವಾಡ, ವಾಣಿಜ್ಯನಗರಿ ಹುಬ್ಬಳ್ಳಿ ನೆರಳಿನಲ್ಲಿ ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳಲಿದೆಂಬ ಆತಂಕ ಹೋರಾಟಗಾರರ ಅಂಬೋಣ. ಇದುವೇ ಪ್ರತ್ಯೇಕತೆ ವರ್ಸಸ್ ಬೃಹತ್ ಪಾಲಿಕೆ ಜಿದ್ದಾಜಿದ್ದಿಗೆ ಮುಖ್ಯ ಕಾರಣ.

**ಜನರಲ್ಲಿ ಯಕ್ಷಪ್ರಶ್ನೆ:** ಈಚೆಗೆ ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಹು-ಧಾ ಮಹಾನಗರ ಪಾಲಿಕೆಯನ್ನು ವಿಭಜಿಸದಂತೆ ಮಹತ್ವದ ನಿರ್ಣಯ ಕೈಗೊಂಡಿದೆ. ಈ ಬೃಹತ್ ಪಾಲಿಕೆಯ ನಿರ್ಣಯ ಒಗ್ಗಟ್ಟಿನ ಮಂತ್ರವೋ? ರಾಜಕೀಯ ತಂತ್ರವೋ? ಎಂಬುದು ಕೂಡ ಯಕ್ಷಪ್ರಶ್ನೆ.

**ಅಭಿವೃದ್ಧಿಯ ವಾದ:** ಅವಳಿನಗರ ಒಂದಾಗಿದ್ದರೆ ಮಾತ್ರ 16ನೇ ಹಣಕಾಸು ಆಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮೆಗಾಸಿಟಿ ಅಂತಹ ದೊಡ್ಡ ಯೋಜನೆಗೆ ಹೆಚ್ಚಿನ ಅನುದಾನ ಪಡೆಯಲು ಸಾಧ್ಯ ಎಂಬುದು ಬೃಹತ್ ಪಾಲಿಕೆ ನಿರ್ಣಯದ ವಾದ.

**ಜನಸಂಖ್ಯೆ ಲೆಕ್ಕಾಚಾರ:** ದೊಡ್ಡ ಮೊತ್ತದ ಅನುದಾನ ಹರಿದು ಬರಲು ಜನಸಂಖ್ಯೆ ಮುಖ್ಯ ಕಾರಣ. ನಗರಗಳನ್ನು ವಿಭಜಿಸಿದರೆ, ಎರಡು ನಗರಗಳ ಶಕ್ತಿ ಕುಂದುತ್ತದೆ. ಅಲ್ಲದೇ, ಬೃಹತ್ ನಗರದ ಮಾನ್ಯತೆ ತಪ್ಪಲಿದೆಂಬ ಆತಂಕ ಆಡಳಿತ ಮಂಡಿಯಲ್ಲಿ ಇದೆ.

> ಬೆಂಗಳೂರು ಮಾದರಿಯಲ್ಲಿ ಹುಬ್ಬಳ್ಳಿ-ಧಾರವಾಡ ಬೆಳವಣಿಗೆ ಹೊಂದಲು ಬೃಹತ್ ಪಾಲಿಕೆ ನಿರ್ಣಯ ಅಂಗೀಕರಿಸಿದೆ. ಪಾಲಿಕೆಯ ಇಬ್ಭಾಗಕ್ಕೆ ಆಸ್ಪದ ನೀಡುವುದಿಲ್ಲ.
> ■ **ಈರೇಶ ಅಂಚಟಗೇರಿ,** ಹು-ಧಾ ಪಾಲಿಕೆ ಸಭಾನಾಯಕ

> ಧಾರವಾಡ ಪ್ರತ್ಯೇಕ ಪಾಲಿಕೆ ನಿರ್ಣಯ ಅಂಗೀಕರಿಸಿ, ಸರ್ಕಾರವೂ ಒಪ್ಪಿದ ಬಳಿಕ ಕಡತ ರಾಜ್ಯಪಾಲರ ಅನುಮೋದನೆ ಹಂತದಲ್ಲಿದ್ದಾಗ ಬೃಹತ್ ಪಾಲಿಕೆ ನಿರ್ಣಯ ಖಂಡನೆ. ಪ್ರತ್ಯೇಕ ಪಾಲಿಕೆ ಆಗುವರೆಗೂ ಹೋರಾಟ ನಿಲ್ಲುವುದಿಲ್ಲ.
> ■ **ಈಶ್ವರ ಶಿವಳ್ಳಿ,** ಅಧ್ಯಕ್ಷರು, ಧಾರವಾಡ ಧ್ವನಿ ಸಂಘಟನೆ

**ಮುಂದೇನು?:** ಧಾರವಾಡ ನಾಗರಿಕ ಸಮಿತಿಗಳು ಮತ್ತು ಹೋರಾಟಗಾರರು ಈ ನಿರ್ಣಯ ವಿರೋಧಿಸಿ ಕೋರ್ಟ್ ಮೊರೆ ಹೋಗಲು ಅಥವಾ ಬೃಹತ್ ಧರಣಿಗೂ ಸನ್ನದ್ಧರಾಗಿದ್ದರೂ, ಸರ್ಕಾರವು ಈ ಸೂಕ್ಷ್ಮ ವಿಷಯದಲ್ಲಿ ತನ್ನ ನಿಲುವು ತಾಳುವಲ್ಲಿ ಮೌನವಾಗಿದೆ. ಪ್ರತ್ಯೇಕತೆ ವರ್ಸಸ್ ಬೃಹತ್ ಪಾಲಿಕೆ ಕೇವಲ ರಸ್ತೆ, ಚರಂಡಿಯ ಹೋರಾಟವಲ್ಲ, ಅಸ್ಮಿತೆ-ಅಧಿಕಾರದ ಸಮತೋಲನದ ಹೋರಾಟ. ಉಭಯ ನಗರಗಳು ಒಂದಾಗಿ ಬೆಳೆಯುವ ಹಂಬಲ ಒಂದೆಡೆ, ಸ್ವಾಯತ್ತತೆ ಉಳುವಿನ ಆಶಯ ಮತ್ತೊಂದೆಡೆ. ಈ ಟ್ವಿನ್ ಸಿಟಿ ಸಂಘರ್ಷಕ್ಕೆ ಪೂರ್ಣವಿರಾಮ ಬೀಳುವುದು ಯಾವಾಗ? ಎಂಬುದು ಕಾಲ ನಿರ್ಧರಿಸಲಿದೆ.



## ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ನೈತಿಕ ಗೆಲುವಲ್ಲ: ಚರಂತಿಮಠ



**ಬಾಗಲಕೋಟೆ:** ವಿಧಾನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ದುರ್ಬಳಕೆ ಮತ್ತು ಹಣಬಲದ ಮೂಲಕ ಅನೈತಿಕ ಗೆಲುವು ಸಾಧಿಸಿದೆ. ಇದರಿಂದ ಬಿಜೆಪಿ ಪಕ್ಷದ ಕಾರ್ಯಕರ್ತರು ಎದೆಗುಂದಿಲ್ಲ ಎಂದು ಬಿಜೆಪಿ ಅಭ್ಯರ್ಥಿ ಡಾ. ವೀರಣ್ಣ ಚರಂತಿಮಠ ತಿಳಿಸಿದ್ದಾರೆ.

ಒಂದು ಕ್ಷೇತ್ರದ ಉಪ ಚುನಾವಣೆಯನ್ನು ಗೆಲ್ಲುವುದಕ್ಕಾಗಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಇಡೀ ಸಂಪುಟ ತಂಡದೊಂದಿಗೆ ಬಂದು ಠಿಕಾಣಿ ಹೂಡಿದ್ದರು. ಇದು ಆಡಳಿತ ಪಕ್ಷ ಜನತೆಯ ವಿರೋಧಿ ಅಲೆಗೆ ಬೆಚ್ಚಿ ಬಿದ್ದಿತ್ತು ಎಂಬುದಕ್ಕೆ ಸಾಕ್ಷಿಯಾಗಿತ್ತು. ಈ ಸರ್ಕಾರ ಕಳೆದ 3 ವರ್ಷಗಳಲ್ಲಿ ರಾಜ್ಯದ ಜನತೆಯ ಹಾಗೂ ಕೃಷ್ಣಾ ಯೋಜನಾ ಸಂತ್ರಸ್ತರ ಒಂದೇ ಒಂದು ಸಮಸ್ಯೆಯನ್ನು ಆಲಿಸಲಿಲ್ಲ. ಮೊತ್ತೊಂದೆಡೆ ಕಾಂಗ್ರೆಸ್ಸಿಗೆ ಮತ ಹಾಕದೆ ಇದ್ದರೆ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವುದಾಗಿ ಮತದಾರರಿಗೆ ಬೆದರಿಕೆ ಹಾಕಿದ್ದರು. ಚುನಾವಣೆ ಪೂರ್ವದಲ್ಲಿ ಮತದಾರರ ಮೇಲೆ ಪ್ರಭಾವ ಬಿರುವುದಕ್ಕಾಗಿ ಗ್ಯಾರಂಟಿ ಯೋಜನೆಗಳ ಅನುದಾನವನ್ನು ಬಿಡುಗಡೆ ಗೊಳಿಸುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಲಾಯಿತು.

ಕಾಂಗ್ರೆಸ್ಸಿನ ಎಲ್ಲ ಕುತಂತ್ರಗಳನ್ನು ಗಮನಿಸಿದರೆ ಕಾಂಗ್ರೆಸ್ ಹಾಗೂ ಸರ್ಕಾರ ಉಪ ಚುನಾವಣೆ ಎದುರಿಸಲು ಅಧೀರವಾಗಿತ್ತು ಎಂಬುದನ್ನು ದೃಢ ಪಡಿಸುತ್ತದೆ ಎಂದು ಹರಿಹಾಯ್ದಿದ್ದಾರೆ.

ಒಂದು ಕ್ಷೇತ್ರ ಗೆಲ್ಲುವುದಕ್ಕಾಗಿ ಇಡೀ ಸರ್ಕಾರವೇ ಬಾಗಲಕೋಟೆಯಲ್ಲಿ ಬೀಡು ಬಿಟ್ಟಿತ್ತು. ಹಾಗಾಗಿ ಅಧಿಕಾರದ ದುರ್ಬಳಕೆ, ಹಣಬಲ ಹಾಗೂ ಜಾತಿ ರಾಜಕಾರಣದಂತಹ ಕುತಂತ್ರಗಳ ಮೂಲಕ ಕಾಂಗ್ರೆಸ್ ಅನೈತಿಕ ಗೆಲುವು ಸಾಧಿಸಿದೆ.

ಬಿಜೆಪಿ ಸರ್ಕಾರ ಮಾಡಿರುವ ಸಾಧನೆ ಕ್ಷೇತ್ರದಲ್ಲಿ 3 ಬಾರಿ ಶಾಸಕನಾಗಿ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಿ ಬಿಜೆಪಿ ಕಾರ್ಯಕರ್ತರು ನೈತಿಕ ವಿಜಯ ಸಾಧಿಸಿದ್ದಾರೆ. ಕಾರ್ಯಕರ್ತರು ನೈತಿಕವಾಗಿ ಕುಗ್ಗದೆ ಮುಂಬರುವ ಸ್ಥಳೀಯ ಚುನಾವಣೆಗಳ ಮೂಲಕ ಕಾಂಗ್ರೆಸ್ಸಿನ ಕುತಂತ್ರಗಳಿಗೆ ಮತದಾರರು ಮತ್ತು ಪಕ್ಷದ ಕಾರ್ಯಕರ್ತರು ತಕ್ಕ ಉತ್ತರ ನೀಡಲಿದ್ದಾರೆ ಎಂದಿದ್ದಾರೆ. ಹಿಂದಿನ ಚುನಾವಣೆಗಿಂತ ಈ ಉಪ ಚುನಾವಣೆಯಲ್ಲಿ ಹೆಚ್ಚಿನ ಮತ ನೀಡಿದ ಕ್ಷೇತ್ರದ ಎಲ್ಲ ಮತದಾರರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ಬಿಜೆಪಿ ಅಭ್ಯರ್ಥಿಯಾಗಿದ್ದ ನನ್ನ ಪರವಾಗಿ ಪ್ರಚಾರ ಮೂಲಕ ಮತಯಾಚನೆಗೆ ಆಗಮಿಸಿದ್ದ ಬಿಜೆಪಿ ಪಕ್ಷದ ಎಲ್ಲ ರಾಜ್ಯವರಿಷ್ಠರಿಗೂ, ಜಿಲ್ಲೆಯ ಎಲ್ಲ ನಾಯಕರಿಗೂ ಹಾಗೂ ಪಕ್ಷದ ಎಲ್ಲ ಕಾರ್ಯಕರ್ತರಿಗೂ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

**ಕಿರುಸುದ್ದಿ**

### ಸಿಗ್ನಲ್‌ಗಳಲ್ಲಿ ನೆರಳು ಛಾವಣಿ: ಮೆಚ್ಚುಗೆ

**ಬೆಳಗಾವಿ:** ಹಿಂದಿನ ವರ್ಷಗಳಿಗಿಂತ ಭಾರೀ ಪ್ರಮಾಣದಲ್ಲಿ ಬಿಸಿಲು ಹೆಚ್ಚಾಗಿರುವುದರಿಂದ ಸಾರ್ವಜನಿಕರು ತತ್ತರಿಸಿ ಹೋಗಿದ್ದಾರೆ. ಬಿಸಿಲು ಏರುತ್ತಿದ್ದಂತೆ ಹೊರಗಡೆ ಹೋಗುವುದೇ ದುಸ್ತರವಾಗಿದೆ. ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನ ಸವಾರರು ನೆತ್ತಿಸುಡುವ ಬಿಸಿಲಲ್ಲೇ ನಿಲ್ಲಬೇಕಾಗುತ್ತಿದೆ. ಇಂಥ ಪರಿಸ್ಥಿತಿಯನ್ನು ಮನಗಂಡಿರುವ ಬೆಳಗಾವಿ ಜಿಲ್ಲಾ ಆಡಳಿತ, ಪೊಲೀಸ್ ಇಲಾಖೆ ಹಾಗೂ ಮಹಾನಗರ ಪಾಲಿಕೆಯು ನಗರದ ಆಯ್ದ ಕೆಲ ಸಿಗ್ನಲ್ ಸ್ಥಳಗಳಲ್ಲಿ ನೆರಳು ಛಾವಣಿ ಅಳವಡಿಸುವ ಕಾರ್ಯಕ್ಕೆ ಮುಂದಾಗಿದ್ದು, ಅದರ ಮೊದಲ ಹೆಜ್ಜೆಯಾಗಿ ನಗರದ ಹೃದಯ ಭಾಗದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಸಿಗ್ನಲ್‌ನಲ್ಲಿ ನೆರಳು ಛಾವಣಿ ಅಳವಡಿಸಲಾಗಿದೆ. ಮಂಗಳವಾರ ಸಿಗ್ನಲ್ ಬೀಳುತ್ತಲೇ ಕೆಲಕ್ಷಣ ಹಾಯಾಗಿ ನೆತ್ತಿ ತಂಪಾಗಿಸಿಕೊಂಡ ವಾಹನ ಸವಾರರು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಪೊಲೀಸ್ ಕಮಿಷನರ್ ಕೆ. ರಾಮಾನುಜನ್ ಹಾಗೂ ಪಾಲಿಕೆ ಆಯುಕ್ತ ಕಾರ್ತಿಕ್ ಎಂ ಅವರ ಈ ಜನಪರ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಅಭಿಮಾನೋತ್ಸವಕ್ಕೆ ಅಮಿತ್ ಶಾ ಭಾಗಿ: ಬಿಸಿಪಾ



**ಹಾವೇರಿ:** ಕರ್ನಾಟಕ ಬಿಜೆಪಿಯ ಭೀಷ್ಮ, ದಕ್ಷಿಣ ಭಾರತದಲ್ಲಿ ಕಮಲ ಅರಳಿಸಿದ ರೂವಾರಿ, ಮಾಜಿಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯ ರಾಜ್ಯಕಾರಣದಲ್ಲಿ 50ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಂಡಿರುವ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಪಾಲ್ಗೊಳ್ಳಲಿದ್ದಾರೆ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

ನಗರದ ಕಾಗಿನೆಲೆ ರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಬಾರಿ ಸಿಎಂ ಆಗಿ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದು, ಅವರ ಅಭಿಮಾನೋತ್ಸವ ಕಾರ್ಯಕ್ರಮದ ಮೂಲಕ ಮುಂದಿನ ಚುನಾವಣೆಗೆ ಬಿಜೆಪಿ ರಣಕಹಳೆ ಮೊಳಗಿಸಲಿದೆ. ಈ ಕಾರ್ಯಕ್ರಮದಲ್ಲಿ ಸುಮಾರು 10ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಹಾವೇರಿ ಜಿಲ್ಲೆಯಿಂದಲೂ ಸಹ 50ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಹೆಚ್ಚು ವಿವಿಧ ಜಾತಿ, ಸಮುದಾಯಗಳ ಸ್ವಾಮೀಜಿಗಳು ಪಾಲ್ಗೊಂಡು ಬಿ.ಎಸ್.ವೈಗೆ ಆಶೀರ್ವದಿಸಲಿದ್ದಾರೆ ಎಂದು ತಿಳಿಸಿದರು.

> **ಸ್ಟಾಲಿನ್ ದುರಾಡಳಿತ**
> ಸನಾತನ ಧರ್ಮ ವಿರೋಧಿಸುವ ಸ್ಟಾಲಿನ್ ದುರಾಡಳಿತದಿಂದ ಅಲ್ಲಿನ ಜನ ಬೇಸತ್ತು, ಬದಲಾವಣೆ ಬಯಸಿ ಟಿವಿಕೆ ಬೆಂಬಲಿಸಿದ್ದಾರೆ. ತಮಿಳುನಾಡಿನಲ್ಲಿ ನಡೆಸಿದ ಚುನಾವಣೋತ್ತರ ಸಮೀಕ್ಷೆಗಳು ಸುಳ್ಳಾಗಿವೆ. ವಿಜಯ ಪಾಪ್ಯುಲರ್ ನಟರಾಗಿದ್ದು, ಹಾಗಾಗಿ ಬೆಂಬಲಿಸಿದ್ದಾರೆ. ಪ್ರಣಾಳಿಕೆಗಳನ್ನು ಘೋಷಣೆ ಮಾಡಿ ಈಡೇರಿಸದಿದ್ದರೆ, ವಾಪಾಸ್ ಮನೆಗೆ ಕಳುಹಿಸುತ್ತಾರೆ ಎಂದು ಬಿ.ಸಿ.ಪಾಟೀಲ ಹೇಳಿದರು.

ಬಿಜೆಪಿ ಕಾರ್ಯಕರ್ತರ ಪಕ್ಷವಾಗಿದ್ದು, ಬಿಎಸ್‌ವೈ ನಮ್ಮ ಶಕ್ತಿ, ಈ ಮೂಲಕ ಪಕ್ಷದ ಕಾರ್ಯಕರ್ತರಿಗೆ ಸಂಘಟನೆ ಮಾಡುವಂತೆ ಸಂದೇಶ ನೀಡುವ ಜತೆಗೆ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ರಾಜ್ಯದ ಬೇಸತ್ತಿದ್ದಾರೆ, ಹೀಗಾಗಿ ಕಾಂಗ್ರೆಸ್ ಸರ್ಕಾರಕ್ಕೂ ಎಚ್ಚರಿಕೆ ಗಂಟೆಯಾಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಈಗಾಗಲೇ ಅಭಿಮಾನೋತ್ಸವಕ್ಕೆ ಸಕಲ ಸಿದ್ಧತೆ ನಡೆಸಿದ್ದೇವೆ. ಚಿತ್ರದುರ್ಗ ಇಲ್ಲಿಂದ ಸುಮಾರು 130-140 ಕೀಮಿ ದೂರದಲ್ಲಿದ್ದು, ಅಗತ್ಯ ಬಸ್ ಸೌಲಭ್ಯ ಮಾಡಲಾಗುತ್ತಿದೆ. ಆದಾಗ್ಯೂ ಸಾಕಷ್ಟು ಜನರು ತಮ್ಮ ವೈಯಕ್ತಿಕ ವಾಹನದಲ್ಲಿ ತೆರಳುವುದಾಗಿ ತಿಳಿಸಿದ್ದಾರೆ. ಸುಮಾರು 50-55ಸಾವಿರ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಶಿವರಾಜ ಸಜ್ಜನರ, ಭರತ ಬೊಮ್ಮಾಯಿ, ಭೋಜರಾಜ ಕರೂದಿ, ವಿಜಯಕುಮಾರ ಚಿನ್ನಿಕಟ್ಟಿ, ನಿರಂಜನ ಹೇರೂರ ಮತ್ತಿತರರು ಇದ್ದರು.

## 2028ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ: ಖಂಡ್ರೆ



**ಲೋಕಾಪುರ:** ಸಿಎಂ ಸಿದ್ದರಾಮಯ್ಯ ಅವರ ಉತ್ತಮ ಆಡಳಿತ, ಅಭಿವೃದ್ಧಿಗೆ ಜನತೆ ಮನ್ನಣೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಹೆಚ್ಚಿನ ಒಲವು ನೀಡುತ್ತಿದ್ದಾರೆ. ಈ ಉಪಚುನಾವಣೆಯ ಫಲಿತಾಂಶ ಮುಂದಿನ 2028ರ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಕಾಂಗ್ರೆಸ್ ಮುಖಂಡ ಗುರುರಾಜ ಉದಪುಡಿ ನಿವಾಸದಲ್ಲಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಾಗಲಕೋಟೆ ಮತ್ತು ದಾವಣಗೇರಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅಭೂತಪೂರ್ವ ಗೆಲುವಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ ಮತ್ತು ಎಲ್ಲ ಕಾಂಗ್ರೆಸ್ ಶಾಸಕರ, ಮುಖಂಡರ, ಕಾರ್ಯಕರ್ತರ ಅವಿರತ ಪ್ರಯತ್ನದಿಂದಾಗಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದಕ್ಕೆ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಕರ್ನಾಟಕ ಜನತೆಗೆ ನೀಡಿದ ಪಂಚ ಗ್ಯಾರಂಟಿ ಯೋಜನೆಗಳು ಉಪಚುನಾವಣೆಯಲ್ಲಿ ಹೆಚ್ಚಿನ ಪ್ರಭಾವ ಬೀರಿವೆ. ಕರ್ನಾಟಕ ಜನತೆ ಕಾಂಗೇಸ್ ಪಕ್ಷಕ್ಕೆ ಹೆಚ್ಚಿನ ಆಶೀರ್ವಾದ ಮಾಡಿದ್ದಾರೆ. ಇನ್ನಷ್ಟು ಸ್ಫೂರ್ತಿ ಪಡೆದು ಅಭಿವೃದ್ಧಿ ಪಥದತ್ತ ಕರ್ನಾಟಕವನ್ನು ಕೊಂಡುಯುತ್ತೇವೆ. ಈ ಗೆಲುವು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಲಬಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮುಖಂಡರಾದ ಶಿವಾನಂದ ಉದಪುಡಿ, ಗುರುರಾಜ ಉದಪುಡಿ, ರವಿ ಬೋಳಿಶೆಟ್ಟಿ, ಷಣ್ಮುಖಪ್ಪ ಕೋಲ್ಹಾರ, ಹೊಳಬಸು ದಂಡಿನ, ಗೋಪಾಲಗೌಡ ಪಾಟೀಲ, ಚನ್ನಯ್ಯ ಗಣಾಚಾರಿ, ಮುತ್ತಪ್ಪ ಚೌಧರಿ, ಕೃಷ್ಣಾ ಜಟ್ಟೆನ್ನವರ, ರೆಹೆಮಾನ್ ತೊರಗಲ್, ಶಾಂತೇಸ ಬೋಳಿಶೆಟ್ಟಿ, ಪ್ರಭು ಬೋಳಿಶೆಟ್ಟಿ, ಬಸವರಾಜ ಕುಂದರಗಿ, ಕುಮಾರ ಕಾಳಮ್ಮನವರ, ಜಾವೇದ ಮುಧೋಳ, ಅಬ್ದುಲ ವಾಲೀಕಾರ, ಲೋಕಣ್ಣಾ ಗಣಾಚಾರಿ ಮತ್ತಿತರು ಇದ್ದರು.

## ಹ್ಯಾಕಥಾನ್ ಸ್ಪರ್ಧೆ: ವಿಡಿಐಟಿ ವಿದ್ಯಾರ್ಥಿಗಳು ಪ್ರಥಮ



**ಹಳಿಯಾಳ:** ಧಾರವಾಡದ ಎಸ್‌ಡಿಎಂ ತಾಂತ್ರಿಕ ಮಹಾವಿದ್ಯಾಲಯವು ಆಯೋಜಿಸಿದ್ದ ಇನ್ಸಿಗ್ನೇಯಾ ಹ್ಯಾಕಥಾನ್ ಸ್ಪರ್ಧೆಯಲ್ಲಿ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದ್ದಾರೆ.

ಇತ್ತೀಚೆಗೆ ಎಸ್‌ಡಿಎಂ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಈ ಹ್ಯಾಕಥಾನ್ ಸ್ಪರ್ಧೆಯಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಅಭಿಲಾಷ್ ಕುಲಕರ್ಣಿ , ಸೃಷ್ಟಿ ಕುಲಕರ್ಣಿ , ಸೌಮ್ಯ ಪೂಜಾರಿ , ತನು ಗೊಂಡಿ ಇವರುಗಳು ಕಾಲೇಜು ಬಸ್ಸುಗಳ ನಿರ್ವಹಣೆ ಹಾಗೂ ಸಾರಿಗೆ ದಕ್ಷತೆ ಕುರಿತಾದ ನೀಡಿದ ಸಲಹೆ ಮತ್ತು ಅಭಿವೃದ್ಧಿ ಪಡಿಸಿದ ತಂತ್ರಾಂಶ ಪರಿಗಣಿಸಿ ಪ್ರಥಮ ಸ್ಥಾನ ನೀಡಿ ಪುರಸ್ಕರಿಸಲಾಯಿತು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಹ್ಯಾಕಥಾನ್ ಸ್ಪರ್ಧೆಯಲ್ಲಿ ವಿಜಯಶಾಲಿಯಾಗಿರುವುದು ಸಂತಸ ತಂದಿದೆ ಎಂದು ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ್ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದ್ದಾರೆ. ಕಂಪ್ಯೂಟರ್ ಸೈನ್ಸ್ ವಿಭಾಗ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಸರ್ಕಾರಿ ಸೌಲಭ್ಯ ಕೊಡಿಸುವುದಾಗಿ ನಂಬಿಸಿ ವಂಚನೆ

## ಲಕ್ಷಾಂತರ ರೂ. ಪಡೆದು ವ್ಯಕ್ತಿ ನಾಪತ್ತೆ

**ಮುಂಡಗೋಡ:** ಸರ್ಕಾರದ ವಿವಿಧ ಯೋಜನೆಗಳಲ್ಲಿ ಸಾಲ ಹಾಗೂ ಸಹಾಯಧನ ಕೊಡಿಸುತ್ತೇನೆಂದು ವ್ಯಕ್ತಿಯೊಬ್ಬ ಸಾರ್ವಜನಿಕರನ್ನು ನಂಬಿಸಿ ಹತ್ತಾರು ಜನರಿಂದ ಲಕ್ಷಾಂತರ ರೂಪಾಯಿ ಹಣ ಪಡೆದು ನಾಪತ್ತೆಯಾಗಿರುವ ಕುರಿತು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಹುನಗುಂದ ಗ್ರಾಮದ ಪ್ರಶಾಂತಗೌಡ ಪಾಟೀಲ ಸಾರ್ವಜನಿಕರಿಗೆ ಮೋಸ ಮಾಡಿದ ವ್ಯಕ್ತಿ. ಇದೇ ಗ್ರಾಮದ ಫಕೀರೇಶ ಜಾಧವ ಪೊಲೀಸ್ ದೂರು ನೀಡಿದವರು.

**ಘಟನೆಯ ವಿವರ:** ತಾಲೂಕಿನ ಹುನಗುಂದ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಪ್ರಶಾಂತಗೌಡ ಪಾಟೀಲ ಹುನಗುಂದ ಗ್ರಾಪಂ ವ್ಯಾಪ್ತಿಯ ಹಳ್ಳಿಗಳ ಜನರಿಗೆ ಸರ್ಕಾರದ ಯೋಜನೆಗಳಾದ ಗಂಗಾ ಕಲ್ಯಾಣ ಯೋಜನೆ, ವಿಧವಾ, ವಸತಿ ಯೋಜನೆ, ಆಶ್ರಯ ಯೋಜನೆ, ಅಂಗವಿಕಲ, ವಿವಾಹ ಪ್ರೋತ್ಸಾಹಧನ, ಅಲ್ಪಸಂಖ್ಯಾತರ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಕೊಡಿಸುವುದಾಗಿ ಹೇಳಿ ಜನರಿಗೆ ವಂಚನೆ ಮಾಡಿದ್ದಾನೆ.

ಆದರಂತೆ ಫಕೀರೇಶ ಜಾಧವ ಅವರ ಬಳಿ 2025ರ ಆ.20ರಂದು 50ಸಾವಿರ ರೂಪಾಯಿ ನಂತರ ಹಲವು ದಿನಗಳ ನಂತರ 1ಲಕ್ಷ ರೂಪಾಯಿ ಹೀಗೆ ಒಂದೂವರೆ ಲಕ್ಷ ರೂಪಾಯಿ ಹಣ ಪಡೆದುಕೊಂಡಿದ್ದಾನೆ. ಚನ್ನಬಸವ್ವ ಬೆಟದೂರ ಎಂಬುವರ ಬಳಿ 50ಸಾವಿರ ರೂಪಾಯಿ, ಪತ್ತೆಸಾಬ ಬೆಲವಂತರ ಎಂಬುವರ ಬಳಿ 70ಸಾವಿರ ರೂಪಾಯಿ, ಚಂದ್ರಕಲಾ ಬಾಗಾಯಿ ಎಂಬುವರಿಂದ 50 ಸಾವಿರ ರೂಪಾಯಿ, ಇಮ್ತಿಯಾಜ್ ಅಹಮ್ಮದ್ ಶೇಖ್ ಎಂಬುವರಿಂದ 20ಸಾವಿರರೂ, ರಮೇಶ ಹಡಪದ ಎಂಬುವರಿಂದ 10 ಸಾವಿರ ರೂಪಾಯಿ, ಪಕ್ಕೀರೇಶ ಹರಿಜನ ಎಂಬುವರಿಂದ 22 ಸಾವಿರ ರೂಪಾಯಿ, ಬಸವರಾಜ ಹರಿಜನ ಎಂಬುವರಿಂದ 22 ಸಾವಿರ ರೂಪಾಯಿ ಹೀಗೆ ಹಲವಾರು ಜನರಿಂದ ಒಟ್ಟು 3.94ಲಕ್ಷ ರೂ. ಹಣವನ್ನು ಪಡೆದುಕೊಂಡಿದ್ದು ಇದುವರೆಗೂ ಸರ್ಕಾರದ ಯಾವುದೇ ಯೋಜನೆಗಳನ್ನು ಜನರಿಗೆ ಕೊಡಿಸಿಲ್ಲ.

ಹಣವನ್ನಾದರೂ ಮರಳಿ ಕೊಡು ಎಂದು ಕೇಳಿದರೂ ಕೊಡದೆ ಇದೀಗ ಜನರಿಗೆ ವಂಚನೆ ಮಾಡಿ ಪರಾರಿಯಾಗಿದ್ದು , ಕೂಡಲೇ ಅವನನ್ನು ಪತ್ತೆ ಹಚ್ಚಿ ಅವನ ಮೇಲೆ ಕಾನೂನು ಕ್ರಮ ಕೈಗೊಂಡು ನಮ್ಮೆಲ್ಲರ ಹಣವನ್ನು ಮರಳಿ ಕೊಡಿಸುವಂತೆ ಫಕೀರೇಶ ಜಾಧವ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಲವ್ ಜಿಹಾದ್‌ಗೆ ಪ್ರಯತ್ನ?

## ಪ್ರಶ್ನಿಸಿದ ಹಿಂದು ಯುವಕನ ಹತ್ಯೆ



**ರಾಯಚೂರು:** ಸ್ನೇಹಿತನ ತಮ್ಮನ ಅಪ್ರಾಪ್ತ ವಯಸ್ಸಿನ ಮಗಳನ್ನು ಮುಸ್ಲಿಂ ಯುವಕರು ರಾತ್ರಿ ಸಮಸಯದಲ್ಲಿ ಕರೆದೊಯ್ಯುವ ಸಮಯದಲ್ಲಿ ಪ್ರಶ್ನಿಸಿದ್ದಕ್ಕೆ ಮೊಬೈಲ್ ಚಾರ್ಜ್‌ನ ವೈರ್‌ನಿಂದ ಕುತ್ತಿಗೆಗೆ ಬಿಗಿದು ಕೊಲೆಗೈದ ಘಟನೆ ನಡೆದಿದೆ.

ಈ ಘಟನೆ ತಾಲೂಕಿನ ಯಾಪಲದಿನ್ನಿ ಗ್ರಾಮದಲ್ಲಿ ಸೋಮವಾರ ರಾತ್ರಿ ಸಂಭವಿಸಿದ್ದು, ಕೊಲೆಯಾದ ವ್ಯಕ್ತಿಯಲ್ಲಿ ಯಾಪಲದಿನ್ನಿ ಗ್ರಾಮದ ಈಶಪ್ಪ (35) ಎಂದು ಗುರುತಿಸಲಾಗಿದೆ.

ಈಶಪ್ಪ ತಮ್ಮ ಮನೆ ಮಾಳಿಗೆ ಮೇಲೆ ಮಲಗಿದ್ದ. ಈ ಸಂದರ್ಭದಲ್ಲಿ ಕೆಲವರು ಮಾತನಾಡುವುದನ್ನು ಕೇಳಿಸಿಕೊಂಡಿದ್ದ ಈಶಪ್ಪ ತಕ್ಷಣ ಮಾಳಿಗೆಯಿಂದ ಕೆಳಗಿಳಿದು ಬಂದು ಆ ಯುವಕರನ್ನು ಮಾತನಾಡಿಸಿದ್ದಾನೆ. ಈ ಸಂದರ್ಭದಲ್ಲಿ ಅವರೊಂದಿಗೆ ಓರ್ವ ಹಿಂದು ಯುವತಿಯನ್ನು ಗಮನಿಸಿದ್ದಾನೆ.

ಅಸ್ಲಮ್ ಹಾಗೂ ಆತನ ಸ್ನೇಹಿತರೊಂದಿಗೆ ಇದ್ದದ್ದು ತನ್ನ ಗೆಳೆಯ ಆಂಜನೇಯನ ತಮ್ಮನ ಮಗಳು ಅನ್ನುವುದು ಗೊತ್ತಾಗಿ ಆ ಯುವಕರನ್ನು ಏನು ಎತ್ತ ಎಂದು ಈಶಪ್ಪ ಪ್ರಶ್ನಿಸಿದ್ದಾರೆ. ಆಗ ಆ ಯುವಕರು ಅವನನ್ನು ಉಸಿರುಗಟ್ಟಿಸಿ ಕೊಲೆಗೈದು ಈಶಪ್ಪ ಅವರ ಮನೆಯ ಹಿಂಭಾಗದಲ್ಲಿ ಹಾಕಿ ಹೋಗಿದ್ದಾರೆ.

ಮುಸ್ಲಿಂ ಯುವಕರು ಹದಿನಾಲ್ಕು ವರ್ಷದ ಹಿಂದು ಯುವತಿಯನ್ನು ಲವ್ ಜಿಹಾದ್ ಬಲೆಗೆ ಹಾಕಿ ಯುವತಿಯನ್ನು ರಾತ್ರಿ ಸಮಯದಲ್ಲಿನೇ ಕರೆದುಕೊಂಡು ಹೋಗಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆ ಎರಡು ಕೋಮಿನ ನಡುವೆ ಸಂಭವಿಸಿದ್ದರಿಂದಾಗಿ ಸ್ಥಳದಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಯಾಪಲದಿನ್ನಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಪೊಲೀಸ್ ಅಧಿಕಾರಿಗಳು, ಶ್ವಾನದಳ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದ್ದಾರೆ.

## ಪೊಲೀಸ್ ಇಲಾಖೆ ಬಲವರ್ಧನೆಗೆ ಸರ್ಕಾರ ಬದ್ಧ



**ವಿಜಯನಗರ:** ಜಿಲ್ಲಾ ಪೊಲೀಸ್ ಇಲಾಖೆಯ ಬಲವರ್ಧನೆಗೆ ಸೆನ್ ಪೊಲೀಸ್ ಠಾಣೆ, ಮಹಿಳಾ ಪೊಲೀಸ್ ಠಾಣೆ ಸ್ಥಾಪಿಸುವ ಜೊತೆಗೆ ಪೊಲೀಸ್ ಸಿಬ್ಬಂದಿಗೆ ವಸತಿ ಗೃಹಗಳನ್ನು ಕಲ್ಪಿಸಬೇಕಿದೆ. ಈ ಕುರಿತಂತೆ ಮತ್ತೊಮ್ಮೆ ಗೃಹ ಸಚಿವರ ಗಮನ ಸೆಳೆಯುವುದಾಗಿ ಸ್ಥಳೀಯ ಶಾಸಕ ಎಚ್.ಆರ್. ಗವಿಯಪ್ಪ ತಿಳಿಸಿದರು.

ಹೊಸಪೇಟೆ ನಗರ ಟಿ.ಬಿ.ಡ್ಯಾಂ ನಲ್ಲಿರುವ ಜಿಲ್ಲಾ ಮೀಸಲು ಪೊಲೀಸ್ ಪಡೆಯ ಪರೇಡ್ ಆವರಣದಲ್ಲಿ 6.69 ಕೋಟಿ ರೂ. ಅಂದಾಜು ಮೊತ್ತದಲ್ಲಿ 12 ಪಿಸಿ ಹಾಗೂ 6 ಎಸ್.ಐ ವಸತಿ ಗೃಹ ನಿರ್ಮಾಣಕ್ಕೆ ಮಂಗಳವಾರ ಭೂಮಿಪೂಜೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜಿಲ್ಲಾ ಪೊಲೀಸ್ ಇಲಾಖೆಯ ಗೃಹ ನಿರ್ಮಾಣ ಯೋಜನೆಯಡಿ ಈಗಾಗಲೇ 36 ವಸತಿ ಗೃಹಗಳನ್ನು ನಿರ್ಮಿಸಲಾಗಿದ್ದು, ಶೀಘ್ರವೇ ಗೃಹ ಸಚಿವರಿಂದ ಉದ್ಘಾಟಿಸಲಾಗುವುದು ಎಂದು ತಿಳಿಸಿದರು.

ನೂತನ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿರುವ ಹೊಸಪೇಟೆಯಲ್ಲಿ ಮನೆ ಬಾಡಿಗೆ ದುಬಾರಿಯಾಗಿವೆ. ಕಡಿಮೆ ಸಂಬಳ ಇರುವ ಪೊಲೀಸ್ ಸಿಬ್ಬಂದಿಗೆ ಬಾಡಿಗೆ ಮನೆಯಲ್ಲಿ ವಾಸಮಾಡುವುದು ಕಷ್ಟಕರ. ಹೀಗಾಗಿ ವಸತಿ ಗೃಹಗಳಿಗೆ ಪೊಲೀಸರಿಂದ ಹೆಚ್ಚಿನ ಬೇಡಿಕೆಯಿದ್ದು, ಕನಿಷ್ಠ 142 ವಸತಿ ಮನೆಗಳ ನಿರ್ಮಾಣ ಅವಶ್ಯ. ಈ ಹಿನ್ನೆಲೆಯಲ್ಲಿ ಮತ್ತೆ 32 ವಸತಿ ಗೃಹಗಳನ್ನು ಮಂಜೂರು ಮಾಡುವಂತೆ ಗೃಹ ಸಚಿವರಿಗೆ ಮನವಿ ಮಾಡುತ್ತೇನೆ. ಜೊತೆಗೆ ಸೆನ್ ಪೊಲೀಸ್ ಸ್ಟೇಷನ್, ಮಹಿಳಾ ಠಾಣೆ ಮಂಜೂರಾತಿ ಹಾಗೂ ಜಿಲ್ಲಾ ಶಸ್ತ್ರ ಮೀಸಲು ಪಡೆಯ ಪೇದೆಗಳ ನೇಮಕಾತಿಗೆ ಸಂಬಂಧಿಸಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅವರೊಂದಿಗೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಎಸ್ಪಿ ಎಸ್.ಜಾಹ್ನವಿ, ಎಎಸ್ಪಿ ಜಿ.ಮಂಜುನಾಥ, ಡಿವೈಎಸ್‌ಪಿ ಡಾ.ಟಿ.ಮಂಜುನಾಥ್, ಸಂಚಾರಿ ಠಾಣೆ ಪಿಐ ಡಿ.ಹುಲುಗಪ್ಪ, ಬಡಾವಣೆ ಠಾಣೆ ಪಿಐ ಮಹಮದ್ ಗೌಸ್, ಪಟ್ಟಣ ಠಾಣೆ ಪಿಐ ಫೈಜುಲ್ಲ, ಗ್ರಾಮೀಣ ಠಾಣೆ ಪಿಐ ಗುರುರಾಜ್ ಕಟ್ಟಿಮನಿ, ಕಾಂಗ್ರೆಸ್ ನಾಯಕರು ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

## ಕಿರುಸುದ್ದಿ

### ಪತ್ರಿಕಾ ವಾಹನಕ್ಕೆ ಚಾಲನೆ

**ಕಾರವಾರ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉತ್ತರ ಕನ್ನಡ ಜಿಲ್ಲೆಗೆ ಹಂಚಿಕೆಯಾದ ಹೊಸ ಪತ್ರಿಕಾ ವಾಹನಕ್ಕೆ ಮಂಗಳವಾರ ಕುಮಟಾ ಆಡಳಿತ ಸೌಧದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹಸಿರು ನಿಶಾನೆ ತೋರಿದರು.

ಜಿಲ್ಲಾಧಿಕಾರಿ ಕಚೇರಿಯ ಡಿಪಿ ಶಾಖೆಯ 3 ಹೊಸ ವಾಹನ, ಚುನಾವಣೆ ಶಾಖೆ ಹಾಗೂ ದಾಂಡೇಲಿ ತಹಶಿಲ್ದಾರ ಕಚೇರಿಯ ನೂತನ ವಾಹನಕ್ಕೂ ಸಚಿವರು ಚಾಲನೆ ನೀಡಿದರು. ಶಾಸಕರಾದ ದಿನಕರ ಶೆಟ್ಟಿ, ಭೀಮಣ್ಣ ನಾಯ್ಕ, ಡಿಸಿ ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್., ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ, ಉಪ ವಿಭಾಗಾಧಿಕಾರಿ ಶ್ರವಣ್ ಕುಮಾರ್, ಮತ್ತಿತರರು ಇದ್ದರು.

### ಲಾಕಡ್ ಹೌಸ್ ಬೀಟ್ ಸಿಸ್ಟಮ್ ರಕ್ಷಾ ಕಾರ್ಯಕ್ರಮ ಆರಂಭ

**ಕಾರವಾರ:** ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ಮನೆಯ ಸುರಕ್ಷತೆಗಾಗಿ ರಾಜ್ಯ ಪೊಲೀಸ್ ಇಲಾಖೆಯಿಂದ ಸಮುದಾಯ ಪೊಲೀಸ್ ವ್ಯವಸ್ಥೆಯ ಭಾಗವಾಗಿ ರೂಪಿಸಿರುವ ಲಾಕಡ್ ಹೌಸ್ ಬೀಟ್ ಸಿಸ್ಟಮ್ ರಕ್ಷಾ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಆರಂಭಿಸಲಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳ ನಗರ ಭಾಗಗಳ ಬೀಟ್ ವ್ಯಾಪ್ತಿಯಲ್ಲಿ ರಕ್ಷಾ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು ಮನೆಗಳಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನಡೆಯುವ ಕಳ್ಳತನ, ದರೋಡೆ, ಕನ್ನದಂತ ಅಪರಾಧ ಕೃತ್ಯಗಳನ್ನು ತಡೆಯುವುದು ಮತ್ತು ಮನೆ ಮಾಲಿಕರು ಬರುವವರೆಗೆ ಮನೆಗೆ ಸುರಕ್ಷತೆ ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿದ್ದು ಸಾರ್ವಜನಿಕರು ಮನೆಯಿಂದ ಹೊರಗಡೆ ಹೋಗುವ ಪೂರ್ವ ಮನೆಯಿಂದ ಹೊರಗೆ ಹೋಗುವ ಮತ್ತು ಮರಳುವ ದಿನಾಂಕ, ಮನೆಯ ವಿಳಾಸ ಮತ್ತು ಲೊಕೇಶನ್ ಜೊತೆಗೆ ಮನೆಯ ಜೊತೆಗೆ ಒಂದು ಸೆಲ್ಫೀ ಪೋಟೋ ಅಪಲೋಡ್ ಮಾಡಿ 8277988303 ಮೊಬೈಲ್ ಸಂಖ್ಯೆಗೆ ವಾಟ್ಸಪ್ ಸಂದೇಶ ಕಳುಹಿಸಿದರೆ ಸಂಬಂಧಿಸಿದ ಬೀಟ್ ವ್ಯಾಪ್ತಿಯ ಪೊಲೀಸರು ಗಸ್ತು ಸಂಚಾರ ನಡೆಸಿ ಮನೆಯ ಮೇಲೆ ವಿಶೇಷ ನಿಗಾ ಇಡಲಿದ್ದಾರೆ ಇಲಾಖೆಯ ಕಾರ್ಯಕ್ರಮದ ಪ್ರಯೋಜನ ಪಡೆಯುವಂತೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಮಹಿಳೆ ಮೃತದೇಹ ಪತ್ತೆ

**ಅಂಕೋಲಾ:** ತಾಲೂಕಿನ ಹಾರವಾಡದಲ್ಲಿ ಮಗಳ ಮನೆಯಿಂದ ಕಾಣೆಯಾಗಿದ್ದ ಮಹಿಳೆ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದ್ದು ಬಾಳೆಗುಳಿಯ ಹಳ್ಳದ ಸಮೀಪ ತಗ್ಗು ಪ್ರದೇಶದಲ್ಲಿ ಮೃತ ದೇಹ ಪತ್ತೆಯಾಗಿದೆ.

ಹಾರವಾಡ ತರಂಗಮೇಟ್ ನಿವಾಸಿ ಸಾವಿತ್ರಿ ಸುಕ್ರು ಹರಿಕಂತ್ರ(70) ಮೃತ ಮಹಿಳೆಯಾಗಿದ್ದು ಕೆಲವು ವರ್ಷಗಳಿಂದ ಮಾನಸಿಕ ಅನಾರೋಗ್ಯಕ್ಕೀಡಾಗಿದ್ದ ಅವರು ಮಗಳ ಮನೆಯಲ್ಲಿ ವಾಸವಾಗಿದ್ದರು.ಮೇ3 ರಂದು ಬೆಳಗ್ಗೆ 6 ಗಂಟೆಗೆ ಮನೆಯಿಂದ ಹೊರಗೆ ಹೋಗಿದ್ದವರು ಮರಳಿ ಬಾರದೇ ಇರುವುದರಿಂದ ಅಂಕೋಲಾ ಪೊಲೀಸ್ ಠಾಣೆಯಲ್ಲಿ ಕಾಣೆಯಾಗಿರುವ ಕುರಿತಂತೆ ದೂರು ದಾಖಲಾಗಿತ್ತು.ಮಂಗಳವಾರ ಬೆಳಗ್ಗೆ ಮಹಿಳೆಯ ಮೃತದೇಹ ಬಾಳೇಗುಳಿ ಹಳ್ಳದ ಸಮೀಪ ಪತ್ತೆಯಾಗಿದ್ದು ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### ಎಪಿಎಂಸಿ ಕೃಷಿ ಧಾರಣೆ

| ಶಿರಸಿ | ಕನಿಷ್ಠ | ಗರಿಷ್ಠ |
|---|---|---|
| ಕಾಳುಮೆಣಸು | 62009 | 71099 |
| ಬಿಳಿಗೋಟು | 26919 | 40599 |
| ಕೆಂಪುಗೋಟು | 26709 | 37199 |
| ಬೆಟ್ಟೆ | 42799 | 50299 |
| ರಾಶಿ | 50799 | 54100 |
| ಚಾಲಿ | 44229 | 48671 |
| ಬಿ.ಕಾಳುಮೆಣಸು | 78005 | 83805 |

| ಯಲ್ಲಾಪುರ | ಕನಿಷ್ಠ | ಗರಿಷ್ಠ |
|---|---|---|
| ಅಪಿ | 58179 | 60779 |
| ರಾಶಿ | 50199 | 56821 |
| ಬೆಟ್ಟೆ | 38701 | 50199 |
| ಕೆಂಪುಗೋಟು | 20600 | 37599 |
| ಬಿಳಿಗೋಟು | 15199 | 38299 |
| ಚಾಲಿ | 37609 | 49288 |
| ಕೋಕಾ | 13900 | 35299 |
| ಕಾಳುಮೆಣಸು | 54555 | 69599 |



ಕಾರವಾರ: ಕಾರವಾರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉತ್ತರ ಕನ್ನಡ ಜಿಲ್ಲೆಗೆ ಹಂಚಿಕೆಯಾದ ಹೊಸ ಪತ್ರಿಕಾ ವಾಹನಕ್ಕೆ ಮಂಗಳವಾರ ಕುಮಟಾ ಆಡಳಿತ ಸೌಧದ ಆವರಣದಲ್ಲಿ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಹಸಿರು ನಿಶಾನೆ ತೋರಿದರು.

## ಏಕಮುಖ ವಾಹನ ಸಂಚಾರ: ಕ್ರಮಕ್ಕೆ ಆಗ್ರಹ

**ಗೋಕರ್ಣ:** ಪ್ರತಿ ಬಾರಿ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಆಗಮಿಸುವ ವೇಳೆ ಇಲ್ಲಿನ ಪ್ರಮುಖ ಮಾರ್ಗಗಳಲ್ಲಿ ಎಲ್ಲೆಂದರಲ್ಲಿ ವಾಹನ ನಿಲ್ಲಿಸುವುದು, ಏಕಮುಖ ಸಂಚಾರ ವ್ಯವಸ್ಥೆಯ ನಿಯಮ ಮುರಿದು ಸಾಗುತ್ತಿರುವುದರಿಂದ ವಾಹನ ದಟ್ಟಣೆ ಉಂಟಾಗಿ ಸಂಚಾರಕ್ಕೆ ತೊಡಕಾಗುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸರಣಿ ರಜೆ, ವಾರಾಂತ್ಯದ ರಜೆಯಲ್ಲಿ ಇಲ್ಲಿನ ಗಂಜೀಗದ್ದೆ ,ಮುಖ್ಯರಸ್ತೆ , ಮಹಾಬಲೇಶ್ವರ ಮಂದಿರದ ಮೂಲಕ ಮುಖ್ಯಕಡಲತೀರಕ್ಕೆ ತೆರಳುವ ಮಾರ್ಗ, ಏಕಮುಖ ಸಂಚಾರ ವ್ಯವಸ್ಥೆಯ ಊರಿನಿಂದ ಹೊರ ಹೋಗುವ ಮೀನುಮಾರುಕಟ್ಟೆ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದೆ. ಈ ಎಲ್ಲಾ ಮಾರ್ಗದಲ್ಲಿ ಏಕಮುಖ ಸಂಚಾರ ವ್ಯವಸ್ಥೆಯ ನಿಯಮ ಮುರಿದು ಬರುತ್ತಿದ್ದು, ಇದರಿಂದ ಇಕ್ಕಟ್ಟಾದ ರಸ್ತೆಯಲ್ಲಿ ಸಾಗಲು ಪರದಾಡಬೇಕಿದೆ.

ಏಕಮುಖ ಸಂಚಾರ ವ್ಯವಸ್ಥೆ ಬಗ್ಗೆ ಕಟ್ಟುನಿಟ್ಟಿನ ನಿಗಾ ಇಟ್ಟು, ನಿಯಮ ಪಾಲಿಸದವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡುತ್ತಲೇ ಬಂದಿದ್ದಾರೆ. ಎಲ್ಲೆಂದರಲ್ಲಿ ವಾಹನಗಳನ್ನ ನಿಲ್ಲಿಸುತ್ತಿದ್ದು, ಈ ಬಗ್ಗೆಯೂ ಕ್ರಮವಾಗಬೇಕಿದೆ.

ಆದರೆ ಯಾವುದೇ ಕ್ರಮ ಜಾರಿಯಾಗಿಲ್ಲ, ಹೀಗೆ ಸಮಸ್ಯೆ ನಿರಂತರ ಮುಂದುವರಿದಿದೆ. ಅಧಿಕ ಸಂಖ್ಯೆಯಲ್ಲಿ ಜನರು ಬರುವಾಗ ಹೆಚ್ಚಿನ ಪೊಲೀಸ್ ಸಿಬ್ಬಂದಿ ನೇಮಿಸಿ ಸಂಚಾರ ವ್ಯವಸ್ಥೆಗೆ ತೊಡಕಾಗದಂತೆ ನೋಡಿಕೊಳ್ಳಬೇಕು ಎಂಬುದು ಜನರ ಅಭಿಪ್ರಾಯವಾಗಿದ್ದು, ಈ ಕುರಿತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಗಮನಹರಿಸಬೇಕಿದೆ.



ಗೋಕರ್ಣ: ಇಲ್ಲಿನ ಗಂಜೀಗದ್ದೆ ,ಮುಖ್ಯರಸ್ತೆ , ಮಹಾಬಲೇಶ್ವರ ಮಂದಿರದ ಮೂಲಕ ಮುಖ್ಯ ಕಡಲತೀರಕ್ಕೆ ತೆರಳುವ ಮಾರ್ಗ, ಏಕಮುಖ ಸಂಚಾರದಿಂದ ಹೆಚ್ಚಾದ ವಾಹನ ದಟ್ಟಣೆ.

### ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಸೂಚನೆ

# ಕುಡಿಯುವ ನೀರಿನ ಸಮಸ್ಯೆಯಾಗದಿರಲಿ

**ಕಾರವಾರ:** ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಅಧಿಕಾರಿಗಳು ಕಾರ್ಯ ನಿರ್ವಹಿಸಿ, ಸಾರ್ವಜನಿಕರ ನೀರಿನ ಸಮಸ್ಯೆಯ ದೂರುಗಳಿಗೆ ತಕ್ಷಣವೇ ಸೂಕ್ತ ರೀತಿಯಲ್ಲಿ ಸ್ಪಂದಿಸುವಂತೆ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್.ವೈದ್ಯ ಸೂಚನೆ ನೀಡಿದರು.

ಅವರು ಮಂಗಳವಾರ ಕುಮಟಾ ಉಪ ವಿಭಾಗಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಮಸ್ಯೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಈ ಬಾರಿ ಕುಡಿಯುವ ನೀರಿನ ಅಭಾವದಿಂದ ಜನರು ತೊಂದರೆಗಿಡಾಗಿದ್ದು, ಕುಡಿಯುವ ನೀರಿನ ಮೂಲಗಳು ಇಲ್ಲದೇ ಕಡೆ ಟ್ಯಾಂಕರ್ ಮೂಲಕ ನೀರು ಒದಗಿಸುವಂತೆ ನಿರ್ದೇಶನ ನೀಡಿದ ಅವರು, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವವರಿಗೆ 15 ದಿನಗಳ ಒಳಗೆ ಹಣ ಪಾವತಿಸಬೇಕು. ಜಲ ಜೀವನ ಮಿಷನ್ ಮೂಲಕ ಪ್ರತಿ ಮನೆಗಳಿಗೆ ನೀರಿನ ನಳ ಅಳವಡಿಸಿದರೂ ಕೂಡ ನೀರು ಸರಬರಾಜು ಮಾಡಲು ಇಲಾಖೆ ವಿಫಲವಾಗಿದೆ. ಎಲ್ಲಾ ತಾಲೂಕುಗಳಲ್ಲಿ ಕನಿಷ್ಠ 100 ಕೋಟಿಯ ಜೆಜೆಎಂ ಕಾಮಗಾರಿಗಳು ನಡೆಯುತ್ತಿದ್ದು, ಯಾವುದೇ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಶಿರಸಿ ತಾಲೂಕಿನ 14 ಗ್ರಾಪಂ ಮತ್ತು ಸಿದ್ದಾಪುರ ತಾಲೂಕಿನ 19 ಗ್ರಾಪಂಗಳಲ್ಲಿ ಕುಡಿಯುವ ನೀರಿನ ಅಭಾವವಾಗಿದೆ. ಬಹುತೇಕ ಈ ಭಾಗದ ಕೆರೆಗಳು ಬತ್ತಿ ರುವುದರಿಂದ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಜೆಜೆಎಂ ಮೂಲಕವೂ ನೀರು ಸರಬರಾಜು ಆಗುತ್ತಿಲ್ಲ ಎಂದರು.

ಕುಡಿಯುವ ನೀರಿನ ಸಮಸ್ಯೆಗೆ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ ತಹಶೀಲ್ದಾರ್ ಕಚೇರಿ ಮತ್ತು ತಾ. ಪಂ. ಕಚೇರಿ ಗಳಲ್ಲಿ ಸಹಾಯವಾಣಿ ಸಂಖ್ಯೆ ಗಳನ್ನು ತೆರೆಯುವಂತೆ ಸಚಿವರು ತಿಳಿಸಿದರು.



**ಜಿಲ್ಲೆಯ ಎಲ್ಲಾ ತಾಲೂಕಿಗೆ ಟಾಸ್ಕ್ ಪೋರ್ಸ್ ಅಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ರೂ.25 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಜಿಲ್ಲೆಗೆ ಇನ್ನೂ 3 ಕೋಟಿ ರೂ. ಹೆಚ್ಚುವರಿ ಅನುದಾನ ಬರಲಿದೆ. ಕುಡಿಯುವ ನೀರಿನ ಸಮಸ್ಯೆಗೆ ಯಾವುದೇ ಅನುದಾನದ ಕೊರತೆಯಿಲ್ಲ, ಇನ್ನೂ ಹೆಚ್ಚುವರಿ ಅನುದಾನದ ಅಗತ್ಯವಿದ್ದರೂ ಕೂಡಾ ಸರ್ಕಾರ ದಿಂದ ಬಿಡುಗಡೆ ಮಾಡಿಸಲಾಗುವದು. ಯಾವುದೇ ಸಂದರ್ಭದಲ್ಲೂ ಸಾರ್ವಜನಿಕರಿಗೆ ನೀರಿನ ತೊಂದರೆ ಆಗದಂತೆ ಎಚ್ಚರ ವಹಿಸಿ.**

■ ಮಂಕಾಳ ಎಸ್.ವೈದ್ಯ. ಸಚಿವ

ಕಾರವಾರ ಭಟ್ಕಳದ ವರೆಗಿನ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭಗೊಂಡು 15 ವರ್ಷ ಆದ್ರೂ ಮುಕ್ತಾಯವಾಗದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತ ಪಡಿಸಿದ ಸಚಿವರು, ಕಾಮಗಾರಿಯ ಮುಕ್ತಾಯಕ್ಕೆ ಅನಗತ್ಯ ವಿಳಂಬ ಮಾಡದೇ ಬಾಕಿ ಇರುವ ಎಲ್ಲಾ ಪ್ರಪೋಸಲ್ಗಳನ್ನು ಒಂದೇ ಬಾರಿ ಸಲ್ಲಿಸಿ ಅಗತ್ಯ ಅನುಮೋದನೆ ಪಡೆದು ಕಾಮಗಾರಿಗೆ ವೇಗ ನೀಡುವಂತೆ ನಿರ್ದೇಶನ ನೀಡಿದರು.

ಶಿರಸಿಯಿಂದ ಹಾವೇರಿ ವರೆಗೆ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಸಂಬಂಧಿಸಿದಂತೆ ಮಳೆಗಾಲದಲ್ಲಿ ಸಾರ್ವಜನಿರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆ ಯಾಗದಂತೆ ತುರ್ತು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಮಳೆಗಾಲಕ್ಕೆ ಮುಂಚೆ ಒಂದು ಲೇಯರ್ ಆದ್ರೂ ಡಾಂಬರ್ ಹಾಕಿ ವಾಹನ ಸುಗಮ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡುವಂತೆ ಸೂಚಿಸಿದ ಸಚಿವರು ಕಾಮಗಾರಿ ಮುಕ್ತಾಯಕ್ಕೆ ನಿಗಧಿಪಡಿಸಿರುವ ಅವಧಿಯನ್ನು ಯಾವುದೇ ಕಾರಣಕ್ಕೂ ವಿಸ್ತರಣೆ ಮಾಡದಂತೆ ಜಿಲ್ಲಾಧಿಕಾರಿ ಅವರಿಗೆ ತಿಳಿಸಿದರು.

ಶಿರಸಿ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಈ ರಸ್ತೆಯಲ್ಲಿ ಸಾರ್ವಜನಿಕರಿಗೆ ಉಸಿರು ಕಟ್ಟುವ ವಾತಾವರಣ ನಿರ್ಮಾಣ ವಾಗಿದೆ, ಧೂಳಿನಿಂದ ಉಸಿರಾಟ ಸಮಸ್ಯೆ ಕಂಡುಬರುತ್ತಿದೆ,ಕೊನೆಯ ಪಕ್ಷ ಧೂಳು ಏಳದಂತೆ ನೀರು ಸಿಂಪಡಿಸುವ ಕೆಲಸವೂ ಆಗುತ್ತಿಲ್ಲ, ಜನಪ್ರತಿನಿದಿಗಳು ಪ್ರತಿನಿತ್ಯ ಸಾರ್ವಜನಿಕರಿಂದ ದೂರು ಕೇಳುವಂತಾಗಿದೆ ಮಳೆಗಾಲ ಆರಂಭವಾಗುವುದರ ಒಳಗೆ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದರು.

ಮಳೆಗಾಲದಲ್ಲಿ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಎಲ್ಲಾ ರಸ್ತೆಗಳ ಪಕ್ಕದಲ್ಲಿರುವ ಚರಂಡಿಗಳನ್ನು ಸ್ವಚ್ಛಗೊಳಿಸಿ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಮೆಸ್ಕಾಂ ವತಿಯಿಂದ ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು, ವಿದ್ಯುತ್ ಕಂಬಗಳು ಮತ್ತು ಟ್ರಾನ್ಸ್‌ಫಾರ್ಮ್‌ಗಳ ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು. ಅಂಗನವಾಡಿ, ಶಾಲೆ ಸೇರಿದಂತೆ ಸಾರ್ವಜನಿಕ ಸ್ಥಳದಲ್ಲಿರುವ ಅಪಾಯಕಾರಿ ಮರಗಳನ್ನು ತೆರವುಗೊಳಿಸುವಂತೆ ಮತ್ತು ಯಾವುದೇ ಅನಾಹುತ ಸಂಭವಿಸಿದಲ್ಲಿ 24 ಗಂಟೆಯ ಒಳಗೆ ಪರಿಹಾರ ವಿತರಿಸುವಂತೆ ಸೂಚನೆ ನೀಡಿದರು.

ಶಾಸಕ ದಿನಕರ ಶೆಟ್ಟಿ, ಡಿಸಿ ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ಅಪರ ಜಿಲ್ಲಾಧಿಕಾರಿ, ಸಾಜೀದ್ ಮುಲ್ಲಾ, ಉಪ ವಿಭಾಗಾಧಿಕಾರಿ ಶ್ರವಣ್ ಕುಮಾರ್ , ಎಲ್ಲಾ ತಹಶೀಲ್ದಾರ್‌ಗಳು, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಸಮಸ್ಯೆಗೆ ಶೀಘ್ರ ಪರಿಹಾರ: ಸಚಿವ ವೈದ್ಯ

**ಹೊನ್ನಾವರ:** ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ಅರಣ್ಯ ಹಕ್ಕು ಹೋರಾಟ ಪ್ರಮುಖರೊಂದಿಗೆ ಉನ್ನತ ಅಧಿಕಾರ ಮಟ್ಟದ ಸಂವಾದ ಸಭೆ ಏರ್ಪಡಿಸಿ ಅರಣ್ಯ ಹಕ್ಕುಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಉಂಟಾಗಿರುವ ಗೊಂದಲವನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಸದ್ಯದಲ್ಲೇ ಮಾಡುವುದಾಗಿ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಭರವಸೆ ನೀಡಿದರು.

ಉ.ಕ ಜಿಲ್ಲಾ ಅರಣ್ಯ ಭೂಮಿ ಸಾಗುವಳಿದಾರರ ಹೋರಾಟ ಸಮಿತಿಯ ಅಧ್ಯಕ್ಷ ಚಂದ್ರಕಾಂತ ಕೊಚರೇಕರ ನೇತೃತ್ವದ ನಿಯೋಗ ಮೀನುಗಾರಿಕೆ ಸಚಿವರ ಪಟ್ಟಣದ ಕಚೇರಿಯಲ್ಲಿ ಭೇಟಿಯಾಗಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿನ ಗೊಂದಲ ಬಗೆಹರಿಸುವ ಸಂಬಂಧ ವಿಸ್ತ್ರತ ಚರ್ಚೆ ನಡೆಸಿದ ನಂತರ ಸಚಿವ ವೈದ್ಯ ಅವರು ಹೋರಾಟ ಪ್ರಮುಖರೊಂದಿಗೆ ಜಂಟಿ ಸಂವಾದ ಸಭೆ ನಡೆಸಲು ಸಮ್ಮತಿಸಲಾಯಿತು. ಹೋರಾಟ ಸಮಿತಿ ಮಂಗಳವಾರ ಸಚಿವರಿಗೆ ನೀಡಿದ ಮನವಿಯಲ್ಲಿ, ಈ ಹಿಂದೆ ತಿರಸ್ಕೃತಗೊಂಡಿರುವ ಅರಣ್ಯ ಹಕ್ಕು ಕ್ಲೇಮು ಅರ್ಜಿಗಳ ಪುನರ್ ಪರಿಶಿಲನೆ ನಡೆಸಲು ಉಚ್ಚ ನ್ಯಾಯಾಲಯ ಮತ್ತು ರಾಜ್ಯ ಮಟ್ಟದ ಅರಣ್ಯ ಹಕ್ಕು ಮೇಲ್ವಿಚಾರಣ ಸಮಿತಿ ಆದೇಶ ಮಾಡಿದರೂ ಸಹ ಅನುಷ್ಠಾನ ಪ್ರಕ್ರಿಯೆಯಲ್ಲಿ ಈ ಹಿಂದೆ ಅಧಿಕಾರಿಗಳ ಮಟ್ಟದಲ್ಲಿದ್ದ ಗೊಂದಲದಿಂದ ಜಿಲ್ಲೆಯ ಬಹುತೇಕ ಅರಣ್ಯ ಹಕ್ಕು ಅರ್ಜಿಗಳು ಸಾರಾ ಸಗಟು ತಿರಸ್ಕೃತ ಗೊಂಡಿದ್ದವು. ಈ ಪ್ರಮುಖ ವಿಚಾರದಲ್ಲಿ ಸಚಿವರು ಮತ್ತು ಜಿಲ್ಲಾಡಳಿತ ಮಧ್ಯ ಪ್ರವೇಶ ಮಾಡಬೇಕು. ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ಹೋರಾಟ ಪ್ರಮುಖರ ಮತ್ತು ಉನ್ನತಾಧಿಕಾರ ಮಟ್ಟದ ಜಂಟಿ ಸಂವಾದ ಸಭೆಯೊಂದನ್ನು ಜಿಲ್ಲೆಯ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಆಯೋಜಿಸಿ ಜಿಲ್ಲೆಯ ಈ ಪ್ರಮುಖ ಸಮಸ್ಯೆಯನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಚಂದ್ರಕಾಂತ ಕೊಚರೇಕರ ಸಚಿವರಿಗೆ ಸಲ್ಲಿಸಿದ ತಮ್ಮ ಮನವಿಯಲ್ಲಿ ಆಗ್ರಹಿಸಿದ್ದಾರೆ.

ನಿಯೋಗದಲ್ಲಿ ಹೋರಾಟ ಸಮಿತಿಯ ತಾಲೂಕು ಘಟಕದ ಅಧ್ಯಕ್ಷ ಶ್ರೀಧರ ಶೆಟ್ಟಿ ಹಿರೇಬೈಲ, ವಾಮನ ನಾಯ್ಕ ಮಂಕಿ, ಅಶ್ಫಕ್ ಶೇಖ್, ಶ್ರೀಕಾಂತ ನಾಯ್ಕ ಗುಂಡಿಬೈಲ, ಮಂತು ಫರ್ನಾಂಡಿಸ್ ಜನಕಡ್ಕಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ಎಸ್. ನಾಯ್ಕ, ಸಂಕೇತ ನಾಯ್ಕ, ಮತ್ತಿತರ ಪ್ರಮುಖರು ಇದ್ದರು.



## ಚುನಾವಣೆ: 53 ಜಿಪಂ ಕ್ಷೇತ್ರಗಳು ಅಂತಿಮ

**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಜಿಪಂ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಅಂತಿಮ ಅಧಿಸೂಚನೆ ಪ್ರಕಟಗೊಂಡಿದ್ದು ಜಿಲ್ಲೆಯಲ್ಲಿ ಒಟ್ಟು 53 ಜಿಲ್ಲಾ ಪಂಚಾಯತ್ ಕ್ಷೇತ್ರಗಳು ಅಂತಿಮಗೊಂಡಿವೆ.

ಈ ಹಿಂದೆ 39 ಇದ್ದ ಜಿಪಂ ಕ್ಷೇತ್ರಗಳನ್ನು 54 ಕ್ಕೆ ಏರಿಸಲಾಗಿತ್ತಾದರೂ ಇದೀಗ ಭಟ್ಕಳದ ಒಂದು ಕ್ಷೇತ್ರ ಕಡಿತಗೊಂಡು ಒಟ್ಟು 53 ಕ್ಷೇತ್ರಗಳು ಅಂತಿಮಗೊಂಡಿದ್ದು

ಕಳೆದ ಚುನಾವಣೆಗೆ ಹೋಲಿಸಿದರೆ 14 ಕ್ಷೇತ್ರಗಳು ಹೆಚ್ಚಿರುವುದು ಜಿಪಂ ಚುನಾವಣೆಯಲ್ಲಿ ಹೆಚ್ಚಿನ ಸ್ಪರ್ಧಾಕಾಂಕ್ಷಿಗಳಿಗೆ ಅವಕಾಶ ಒದಗಿಬಂದಂತಾಗಿದೆ. ಕಾರವಾರ ತಾಲೂಕಿನಲ್ಲಿ ಹಿಂದೆ ಇದ್ದ 3 ಜಿಲ್ಲಾ ಪಂಚಾಯತ್ ಕ್ಷೇತ್ರಗಳಿಗೆ ಇನ್ನೆರಡು ಕ್ಷೇತ್ರಗಳು ಸೇರಿ ಕಡವಾಡ, ಮಾಜಾಳಿ, ಚಿತ್ತಾಕುಲ, ಮಲ್ಲಾಪುರ ಮತ್ತು ಚೆಂಡಿಯಾ ಐದು ಜಿಲ್ಲಾ ಪಂಚಾಯತ್ ಕ್ಷೇತ್ರಗಳಾಗಿದ್ದು ಅಂಕೋಲಾ ತಾಲೂಕಿನಲ್ಲಿ ಸಹ ಕ್ಷೇತ್ರಗಳ ಸಂಖ್ಯೆ 3 ರಿಂದ 5 ಕ್ಕೇರಿದೆ ಅವರ್ಸಾ,ಶೆಟಗೇರಿ,ಅಗಸೂರು ಕ್ಷೇತ್ರಗಳು ವಿಂಗಡನೆಗೊಂಡು ಹೊಸದಾಗಿ ಬೆಳಸೆ ಮತ್ತು ಬಾವಿಕೇರಿ ಕ್ಷೇತ್ರಗಳು ಉದಯಿಸಿವೆ.

ಕುಮಟಾದಲ್ಲಿದ್ದ 5 ಜಿಪಂ ಕ್ಷೇತ್ರ ವಿಂಗಡನೆ ಯಾಗಿ ಒಂದು ಕ್ಷೇತ್ರ ಹೆಚ್ಚುವರಿಯಾಗಿದ್ದು ಮೂರೂರು, ಹೆಗಡೆ, ಮಿರ್ಜಾನ, ಗೋಕರ್ಣ, ಹೊಲನಗದ್ದೆ, ದೇವಗಿರಿ 6ಜಿಪಂ ಕ್ಷೇತ್ರಗಳಾಗಿವೆ ಹೊನ್ನಾವರ ತಾಲೂಕಿನ ಕ್ಷೇತ್ರಗಳ ಸಂಖ್ಯೆ 5 ರಿಂದ 7 ಕ್ಕೇರಿ ಜಿಲ್ಲೆಯ ಅತಿ ಹೆಚ್ಚು ಜಿಪಂ ಸ್ಥಾನ ಹೊಂದಿದಂತಾಗಿದ್ದು ನಗರಬಸ್ತಿಕೇರಿ, ಹಳದಿಪುರ, ಮುಗ್ವಾ,ಮಾವಿನಕುರ್ವ, ಚಂದಾವರ,ಕಾಸರಕೋಡ ಮತ್ತು ಬಳ್ಕೂರು ಜಿಪಂ ಕ್ಷೇತ್ರಗಳಾಗಿ ವಿಂಗಡಿಸಲ್ಪಟ್ಟಿವೆ.

ಭಟ್ಕಳ ತಾಲೂಕಿನಲ್ಲಿ ಮಾವಳ್ಳಿ, ಕಾಯ್ಕಿಣಿ, ಶಿರಾಲಿ, ಮುಟ್ಟಳ್ಳಿ ಮತ್ತು ಬೆಳ್ಕೆ ಸೇರಿದಂತೆ 5 ಜಿ.ಪಂ ಕ್ಷೇತ್ರಗಳಾಗಿದ್ದು ಶಿರಸಿ ತಾಲೂಕಿನಲ್ಲಿ ಸಹ ಒಂದು ಕ್ಷೇತ್ರ ಹೆಚ್ಚಳವಾಗಿ ಹುಲೇಕಲ್, ಸೋಂದಾ,ದೊಡ್ನಳ್ಳಿ, ಬನವಾಸಿ, ಬದನಗೋಡ, ಜಾನ್ಮನೆ ಆರು ಜಿ.ಪಂ ಕ್ಷೇತ್ರಗಳು ರಚಿಸಲ್ಪಟ್ಟಿವೆ.

ಸಿದ್ದಾಪುರದಲ್ಲಿದ್ದ ಮೂರು ಜಿ.ಪಂ ಕ್ಷೇತ್ರಗಳು 4 ಕ್ಕೇರಿ ಅಣಲೇಬೈಲ್, ದೊಡ್ಮನೆ, ಕಾನಗೋಡ, ಹಲಗೇರಿ ಕ್ಷೇತ್ರಗಳಾಗಿದ್ದು ಮುಂಡಗೋಡದಲ್ಲಿ ಪಾಳಾ, ಚಿಗಳ್ಳಿ, ಮೈನಳ್ಳಿ, ಇಂದೂರು ಜಿಪಂ ಕ್ಷೇತ್ರಗಳಾಗಿ ಒಂದು ಕ್ಷೇತ್ರ ಹೆಚ್ಚಿದೆ, ಹಳಿಯಾಳ ತಾಲೂಕಿನ 4 ಜಿ.ಪಂ ಕ್ಷೇತ್ರಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಜೊಯಿಡಾದಲ್ಲಿದ್ದ 2 ಕ್ಷೇತ್ರಗಳು ಮೂರಕ್ಕೇರಿದ್ದು ದಾಂಡೇಲಿಯಲ್ಲಿ ಅಂಬಿಕಾನಗರ ಹೊಸ ಜಿ.ಪಂ ಕ್ಷೇತ್ರವಾಗಿ ಉದಯಿಸಿದೆ.

ಜಿಪಂ ಕ್ಷೇತ್ರಗಳ ವಿಂಗಡನಾ ಕಾರ್ಯ ಅಂತಿಮಗೊಂಡಿರುವ ಕಾರಣ ವಿವಿಧ ಪಕ್ಷಗಳಿಂದ ಜಿಪಂ ಸ್ಥಾನದ ಆಕಾಂಕ್ಷಿಗಳೂ ಚುನಾವಣೆ ಘೋಷಣೆ ಮತ್ತು ಮೀಸಲಾತಿ ಪ್ರಕಟಣೆಯ ನಿರೀಕ್ಷೆಯಲ್ಲಿದ್ದಾರೆ.ಜಿಪಂಗೆ ಜನಪ್ರತಿನಿಧಿಗಳು ಇಲ್ಲದೇ ವರ್ಷಗಳೇ ಕಳೆದಿದ್ದು ಆದಷ್ಟು ಬೇಗ ಚುನಾವಣೆ ನಡೆದು ಜನಪ್ರತಿನಿಧಿಗಳ ಆಯ್ಕೆ ನಡೆಯಲಿ ಎನ್ನುವುದು ಗ್ರಾಮೀಣ ಭಾಗದ ಜನರ ಆಶಯವಾಗಿದೆ. ಜೂನ್ ತಿಂಗಳ ಒಳಗೆ ಜಿಪಂಮತ್ತು ತಾಪಂ ಚುನಾವಣೆ ನಡೆಸುವುದಾಗಿ ಗಂಗಾವಳಿ ಸೇತುವೆಯ ಉದ್ಘಾಟನೆ ಸಂದರ್ಭದಲ್ಲಿ ಜಿಲ್ಲೆಗೆ ಆಗಮಿಸಿದ್ದ ಸಿಎಂ ಸಿದ್ದರಾಮಯ್ಯ ಅವರು ಘೋಷಿಸಿದ್ದು ಚುನಾವಣಾ ಪ್ರಕ್ರಿಯೆಗಳು ಯಾವಾಗ ಆರಂಭವಾಗಲಿದೆ ಎನ್ನುವ ಕುತೂಹಲ ಜನತೆಯಲ್ಲಿದೆ.



ಯಲ್ಲಾಪುರ: ಅಂಗಾರಕ ಸಂಕಷ್ಟಿ ಹಿನ್ನಲೆಯಲ್ಲಿ ಚಂದಗುಳಿಯ ಶ್ರೀ ಸಿದ್ಧಿವಿನಾಯಕ ದೇವಾಲಯಕ್ಕೆ ಶಾಸಕ ಶಿವರಾಮ ಹೆಬ್ಬಾರ್ ಭೇಟಿ ನೀಡಿ ಕ್ಷೇತ್ರದ ಜನತೆಯ ಒಳಿತಿಗಾಗಿ ವಿಶೇಷ ಪೂಜೆ ಸಲ್ಲಿಸಿದರು, ಈ ಸಂದರ್ಭದಲ್ಲಿ ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳು ಶಾಸಕರನ್ನು ಸನ್ಮಾನಿಸಿ ಗೌರವಿಸಿದರು.

## ಮಹಾಗಣಪತಿ ದರ್ಶನಕ್ಕೆ ಭಕ್ತರ ಸಾಲು

**ಗೋಕರ್ಣ:** ಪುರಾಣ ಪ್ರಸಿದ್ಧ ಕ್ಷೇತ್ರ ಅಂಗಾರಕ ಸಂಕಷ್ಟಿ ದಿನವಾದ ಮಂಗಳವಾರ ಇಲ್ಲಿನ ವಿವಿಧ ಗಣೇಶನ ಮಂದಿರದಲ್ಲಿ ವಿಶೇಷ ಪೂಜೆ, ವಿವಿಧ ದೈವಿಕ ಕಾರ್ಯಗಳು ನಡೆಯಿತು.

ಇಲ್ಲಿನ ಮಹಾಗಣಪತಿ ಮಂದಿರದಲ್ಲಿ ಮುಂಜಾನೆಯಿಂದಲೇ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ದರ್ಶನ, ಪೂಜೆ ನೆರವೇರಿಸಿದರು. ಈ ವರ್ಷದ ಮೊದಲ ಅಂಗಾರಕ ಸಂಕಷ್ಟಿ ಇದಾಗಿದ್ದು ಭಕ್ತರು ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ ಸೇರಿದಂತೆ ವಿವಿಧ ಪೂಜೆ ನೆರವೇರಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು.

ಇದರಂತೆ ಕೋಟಿತೀರ್ಥ ಕಟ್ಟೆಯಲ್ಲಿರುವ ಪಟ್ಟೆ ವಿನಾಯಕ, ತಾರಮಕ್ಕಿಯಲ್ಲಿರುವ ಕೇತಕಿ ವಿನಾಯಕ ಮಂದಿರ, ರಥ ಬೀದಿಯಲ್ಲಿರುವ ವನವಿನಾಯಕ ಮಂದಿರಗಳಲ್ಲಿ ಭಕ್ತರು ದೇವರ ದರ್ಶನ ಪೂಜೆ ಕೈಗೊಂಡರು.

ಇದರಂತೆ ಹಾರೂಮಾಸ್ಕೇರಿಯಲ್ಲಿರುವ ಗಣಪತಿ ದೇವಾಲಯ, ಗಂಗಾವಳಿ, ತದಡಿ, ತೊರ್ಕೆ, ಮಾದನಗೇರಿ, ಹಿರೇಗುತ್ತಿ ಭಾಗದ ಗಣಪತಿ ದೇವಾಲಯಗಳಲ್ಲಿ ಸಹ ವಿಶೇಷ ಪೂಜೆಗಳು ನೆರವೇರಿತು.

## ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

**ಯಲ್ಲಾಪುರ:** ಇಂದಿನ ಯಾಂತ್ರಿಕ ಜೀವನದಲ್ಲಿ ಹಣದ ಬೆನ್ನುಹತ್ತಿ ಸಾಹಿತ್ಯ ಪ್ರೀತಿ ಆಸಕ್ತಿ ಕ್ಷೀಣಿಸುತ್ತಿದೆ. ಭೌತಿಕ ಸಂಪತ್ತು ಹೆಚ್ಚಿಸಿಕೊಳ್ಳುವ ಹಂಬಲದ ನಡುವೆಯೂ ಭಾವನಾತ್ಮಕವಾಗಿ ಬೆಳೆಯುವ ಬೆಳೆಸುವ ಪ್ರವೃತ್ತಿ ಹೆಚ್ಚಬೇಕು. ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಸದಾ ಜಾಗೃತವಾಗಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಆರ್.ಡಿ. ಜನಾರ್ಧನ ಹೇಳಿದರು.

ಅವರು ಮಂಗಳವಾರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಸಾಹಿತ್ಯ ಪರಿಷತ್ತಿನ 112 ನೇಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು,

ಕಲಘಟಗಿ ಕಾಲೇಜಿನ ಪ್ರಾಧ್ಯಾಪಕ ಡಾ. ಪಿ.ಬಿ. ಚಾರಿ ಕನ್ನಡ ಸಾಹಿತ್ಯ ಪರಿಷತ್ತು ಬೆಳೆದುಬಂದ ದಾರಿ ಕುರಿತು ಉಪನ್ಯಾಸನೀಡಿ, ಸತ್ಯ ಮತ್ತು ಅಸತ್ಯದ ನಡುವೆ ಇರುವೆ ಭ್ರಮೆಯನ್ನು ಕಳಚಿ ಹಾಕಿ ಸತ್ಯದ ದರ್ಶನ ಮಾಡುವ ಕೆಲಸ ಸಾಹಿತ್ಯ ಮಾಡುತ್ತ ಬಂದಿದೆ. ಪುರಾಣ ಸಾಹಿತ್ಯಗಳು ಮೌಲಿಕ ಪ್ರಾತಿನಿಧಿಕ ಕನ್ನಡದ ಆಕರಗಳಾಗಿವೆ. ಧರ್ಮ ಜಾತಿ ಮೀರಿ ಮನುಷ್ಯತ್ವವನ್ನು ಬೆಳೆಸಿಕೊಳ್ಳಬೇಕು ಎಂದರು.

ವೈಟಿಎಸ್ ಎಸ್ ಪ್ರಾಂಶುಪಾಲ ಆನಂದ ಹೆಗಡೆ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ ಉಪಸ್ಥಿತರಿದ್ದರು.

ಕಸಾಪ ತಾಲೂಕಾ ಅಧ್ಯಕ್ಷ ವಿದ್ವಾನ್ ಸುಬ್ರಹ್ಮಣ್ಯ ಭಟ್ಟ ಅಧ್ಯಕ್ಷತೆವಹಿಸಿ ಮಾತನಾಡಿ, ಮಾತೃಭಾಷೆ ಕನ್ನಡದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ವಿದ್ಯಾರ್ಥಿಗಳು ಭಾಷೆಯಮೇಲೆ ಪ್ರಭುತ್ವ ಹೊಂದಬೇಕು ಎಂದರು.

ಪ್ರಾಧ್ಯಾಪಕ ಡಾ. ರವಿ ಶೇಷಗಿರಿ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ನಟಾಲಿಯ ನಿರೂಪಿಸಿದರು. ವೈಷ್ಣವಿ ದೇವಾಡಿಗ ವಂದಿಸಿದರು.



## ಕನ್ನಡ ಭಾಷೆ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ: ಹೊನ್ನಮ್ಮ ನಾಯಕ

**ಅಂಕೋಲಾ:** ಭಾಷೆ, ಸಾಹಿತ್ಯ, ಸಂಸ್ಕೃತಿ, ಬದುಕು ಒಂದಕ್ಕೊಂದು ಪೂರಕವಾಗಿದ್ದು, ಅದರಲ್ಲಿ ಭಾಷೆ ಉಳಿದವುಗಳನ್ನೆಲ್ಲವನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಅವಶ್ಯಕವಾಗಿದೆ. ಭಾಷೆಯು ನಾಶವಾದರೆ ಸಂಸ್ಕೃತಿಯೂ ನಾಶವಾದಂತೆ. ಆದ್ದರಿಂದ, ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ಅಂಕೋಲಾದ ಹಿರಿಯ ಸಾಹಿತಿಗಳಾದ ಹೊನ್ನಮ್ಮ ನಾಯಕ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಕೆಎಲ್ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಂಕೋಲಾ ಘಟಕದ ವತಿಯಿಂದ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ, ಸಂಸ್ಥಾಪಕರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್,



ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಶಯ ಈಡೇರುವಂತೆ, ವಿಧಾಯಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡ ನಾಡು-ನುಡಿಯನ್ನು ಬೆಳೆಸಬೇಕು ಎಂದರು.

ಕರ್ನಾಟಕದಲ್ಲಿ ಕನ್ನಡವೇ ಸತ್ಯ, ನಿತ್ಯ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ವಿನಾಯಕ ಜಿ. ಹೆಗಡೆ ಅವರು ಆಧುನಿಕ ಜಗತ್ತಿನಲ್ಲಿ ಕನ್ನಡ ಭಾಷೆಯು ಕೇವಲ ಭಾವನಾತ್ಮಕ ವಿಷಯವಾಗಿ ಉಳಿಯದೆ, ಆರ್ಥಿಕ ಮತ್ತು ತಾಂತ್ರಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ನ್ಯಾಯಾಲಯದ ಕಲಾಪಗಳಿಂದ ಹಿಡಿದು, ಬ್ಯಾಂಕಿಂಗ್ ಸೇವೆಗಳವರೆಗೆ ಕನ್ನಡ ಲಭ್ಯವಾಗುತ್ತಿರುವುದು ಭಾಷೆಯ ಸಾರ್ವಭೌಮತ್ವಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ ಅದನ್ನು ಪ್ರೀತಿಸಿ ಗೌರವಿಸಿ ಆದರೆ ನಮ್ಮ ಮಾತೃ ಭಾಷೆಯನ್ನು ಮರೆಯಬಾರದು ಎಂದರು.

ಅಧ್ಯಕ್ಷತೆ ವಹಿಸಿದ ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷರಾದ ಗೋಪಾಲಕೃಷ್ಣ ನಾಯಕ ಮಾತನಾಡುತ್ತಾ ಕರ್ನಾಟಕದ ಕೆಲವು ನಗರಗಳಲ್ಲಿ ಕನ್ನಡವನ್ನು ಹುಡುಕುವ ಸ್ಥಿತಿ ಎದುರಾಗಿದೆ. ಕನ್ನಡ ನಮ್ಮ ಹೃದಯ ಭಾಷೆ ಅದನ್ನು ಮರೆಯಬಾರದು ಅದರ ಮೂಲಕ ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕಾಗಿದೆ ಎಂದರು.

ಅತಿಥಿಗಳಾಗಿ ಕಾರ್ಯಕರ್ತರ, ಕಾರ್ಯನಿರತ ಪತ್ರಕರ್ತರ ಸಂಘ ಅಂಕೋಲಾದ ಅಧ್ಯಕ್ಷರಾದ ರಾಘು ಕಾಕರಮಠ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಪುಷ್ಪಾ ನಾಯ್ಕ ಚುಟುಕು ಕವಿ ಸಾತು ಗೌಡ ಬಡಗೇರಿ ಜಿಲ್ಲಾ ಕಸಾಪ ಸದಸ್ಯರಾದ ಜಯಶೀಲ ಆಗೇರ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಉಪನ್ಯಾಸ ನೀಡಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿನಾಯಕ ಹೆಗಡೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.


ಸುವಿಧಾ ಸಂಗಡಿಗರು ಪ್ರಾರ್ಥಿಸಿ ನಾಡಗೀತೆ ಹಾಡಿದರು. ಕಸಾಪ ಸಂಘಟನಾ ಕಾರ್ಯದರ್ಶಿ ಸುಜಿತ ನಾಯ್ಕ ಸ್ವಾಗತಿಸಿದರು. ಜಿ.ಸಿ. ಕಾಲೇಜಿನ ಪ್ರಾಚಾರ್ಯರು ಹಾಗೂ ಕಸಾಪ ಅಂಕೋಲಾ ಘಟಕದ ಖಜಾಂಚಿ ಡಾ. ಎಸ್.ವಿ. ವಸ್ತ್ರದ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸದಸ್ಯರಾದ ಎಂ.ಬಿ. ಆಗೇರ ವಂದಿಸಿದರು. ಮಹಾಂತೇಶ ರೇವಡಿ ಅವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ತಿಮ್ಮಣ್ಣ ಭಟ್, ರಫೀಕ್ ಶೇಖ್ ಮುಂತಾದ ಸಾಹಿತ್ಯಾಸಕ್ತರು ಉಪನ್ಯಾಸಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಗದ್ದೆಗೆ ನೀರು ಹರಿಸಲು ಆಗ್ರಹಿಸಿ ಧರಣಿ

**ಮುಂಡಗೋಡ:** ತಾಲೂಕಿನ ನ್ಯಾಸರ್ಗಿ ಗ್ರಾಮದ ಜಲಾಶಯದಿಂದ ಬಾಚಣಕಿ ಗ್ರಾಮದ ರೈತರ ಗದ್ದೆಗಳಿಗೆ ನೀರು ಬಿಡುತ್ತಿಲ್ಲ ಎಂದು ಬಾಚಣಕಿ ಗ್ರಾಮದ ರೈತರು ಇಲ್ಲಿನ ಸಣ್ಣ ನೀರಾವರಿ ಇಲಾಖೆ ಉಪವಿಭಾಗ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

40ವರ್ಷಗಳ ಹಿಂದೆಯೇ ನ್ಯಾಸರ್ಗಿ ಜಲಾಶಯದ ನಿರ್ಮಾಣವಾಗಿದೆ. ಈ ಜಲಾಶಯದ ಕಾಲುವೆ ಮೂಲಕ ಬಾಚಣಕಿ ಗ್ರಾಮದ ರೈತರ ಗದ್ದೆಗಳಿಗೆ ನೀರು ಹರಿದು ಬರಬೇಕಿತ್ತು ಆದರೆ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಇಲ್ಲಸಲ್ಲದ ನೆಪ ಹೇಳುತ್ತಾ ನಮ್ಮ ಜಮೀನುಗಳಿಗೆ ಕಳೆದ 20ವರ್ಷಗಳಿಂದ ನೀರು ಬಿಡುತ್ತಿಲ್ಲ ಇದರಿಂದ ಬಾಚಣಕಿ ಭಾಗದ ಹಲವಾರು ರೈತರಿಗೆ ಭಾರಿ ಅನ್ಯಾಯವಾಗಿದೆ. ಕೂಡಲೇ ನೀರು ಹರಿಸಬೇಕು ಎಂದು ಕಚೇರಿಯ ಎದುರು ಧರಣಿ ಕುಳಿತರು.

ಈ ವೇಳೆ ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ಆರ್. ಎನ್. ನಾಯ್ಕ ಮಾತನಾಡಿ, ಕಾಲುವೆಯ ದುರಸ್ತಿ ಕಾರ್ಯ ಮಾಡಿಸಬೇಕು ಹಾಗೂ ಈ ಭಾಗದ ಜಲಾಶಯ ಗೇಟ್ ತೆರೆದರೆ ಮರಳಿ ಮುಚ್ಚಲು ಬರುವುದಿಲ್ಲ, ಅದಕ್ಕಾಗಿ ಗೇಟ್ ದುರಸ್ತಿ ಮಾಡಿದ ನಂತರ ನೀರು ಬಿಡುತ್ತೇವೆ ಜಲಾಶಯದ ಗೇಟ್ ದುರಸ್ತಿಗೆ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಆದರೆ ಅನುದಾನ ಬಂದಿಲ್ಲ, ಅನುದಾನ ಬಂದ ನಂತರ ಜಲಾಶಯದ ಗೇಟ್ ದುರಸ್ತಿ ಪಡಿಸಿ ನೀರು ಬಿಡುತ್ತೇವೆ ಎಂದು ಭರವಸೆ ನೀಡಿದ ನಂತರ ರೈತರು ಪ್ರತಿಭಟನೆ ಹಿಂಪಡೆದರು.



## ಅಪರಿಚಿತ ವ್ಯಕ್ತಿ ಮೃತದೇಹ ಅಂತ್ಯಸಂಸ್ಕಾರ



**ಅಂಕೋಲಾ:** ತಾಲೂಕಿನ ಉಳುವರೆಯ ರೈಲ್ವೆ ಸೇತುವೆ ಬಳಿ ಗಂಗಾವಳಿ ನದಿಯಲ್ಲಿ ಬಿದ್ದು ಮೃತಪಟ್ಟ ಅಪರಿಚಿತ ವ್ಯಕ್ತಿಯ ಮೃತದೇಹ ಗುರುತಿಸಲು ವಾರಸುದಾರರು ಯಾರೂ ಬಾರದಿರುವ ಕಾರಣ ಅಂಕೋಲಾ ಪೊಲೀಸರು ಕೋಟೆವಾಡದ ರುದ್ರಭೂಮಿಯಲ್ಲಿ ನಿಯಮಗಳಂತೆ ಸಂಸ್ಕಾರ ಕಾರ್ಯ ನಡೆಸಿದರು.

ಏ.27 ರಂದು ಉಳುವರೆಯ ರೈಲ್ವೆ ಸೇತುವೆ ಬಳಿ ಗಂಗಾವಳಿ ನದಿಯಲ್ಲಿ ಸುಮಾರು 50 ರಿಂದ 55 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಮೃತದೇಹ ದೇಹ ಪತ್ತೆಯಾಗಿತ್ತು ವಾರಸುದಾರರು ಯಾರು ಇಲ್ಲದ ಕಾರಣ ಮೃತದೇಹವನ್ನು ಆಸ್ಪತ್ರೆಯ ಶೈತ್ಯಾಗಾರದಲ್ಲಿ ಇಡಲಾಗಿತ್ತು.

ಮೃತ ವ್ಯಕ್ತಿಯ ಕುರಿತು ಸಾಕಷ್ಟು ಮಾಹಿತಿ ನೀಡಲಾದರೂ ಒಂದು ವಾರ ಕಳೆದರೂ ಯಾರೂ ವಾರಸುದಾರರು ಬಾರದ ಕಾರಣ ನಿಯಮಗಳಂತೆ ಪೊಲೀಸ್ ಇಲಾಖೆಯವರು ಜೆಸಿಬಿ ಯಂತ್ರದಿಂದ ರುದ್ರಭೂಮಿಯಲ್ಲಿ ಗುಂಡಿ ತೋಡಿ ಮೃತದೇಹ ಹೂಳುವ ಕಾರ್ಯ ನಡೆಸಿದರು. ಅಂಕೋಲಾ ಪಿ.ಎಸ್.ಐ ಗುರುನಾಥ ಹಾದಿಮನಿ ಅವರ ಉಪಸ್ಥಿತಿಯಲ್ಲಿ ಪುರಸಭೆಯ ಸಿಬ್ಬಂದಿಗಳು, ಪೌರ ಕಾರ್ಮಿಕರು, ಸಾಮಾಜಿಕ ಕಾರ್ಯಕರ್ತ ವಿಜಯಕುಮಾರ ನಾಯ್ಕ ಅವರು ಮೃತದೇಹದ ಸಂಸ್ಕಾರ ಕಾರ್ಯಕ್ಕೆ ನೆರವಾದರು.

## ಕಿರುಸುದ್ದಿ

### ದಲ್ಜಿತ್ ಕುಮಾರ್ ನೇಮಕ

**ಹಾವೇರಿ:** ಇಲ್ಲಿನ ಜಿಲ್ಲಾ ಪಂಚಾಯಿತಿ ಸಿಇಒ ಆಗಿ 2021ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ ದಲ್ಜಿತ್ ಕುಮಾರ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಗ್ರೇಟರ್ ಬೆಂಗಳೂರಿನ ಸೆಂಟ್ರಲ್ ವಿಭಾಗದ ಹೆಚ್ಚುವರಿ ಆಯುಕ್ತರಾಗಿ ದಲ್ಜಿತ್ ಕುಮಾರ್‌ಕಾರ್ಯ ನಿರ್ವಹಿಸುತ್ತಿದ್ದರು. ಇವರು ರೂರ್ಕಿಯ ಐಐಟಿಯಲ್ಲಿ ಪೇಪರ್ ಟೆಕ್ನಾಲಜಿ ಕುರಿತ ಬಿ.ಟೆಕ್ ಪದವೀಧರರಾಗಿದ್ದಾರೆ.



### ಅರ್ಜಿ ಆಹ್ವಾನ

**ಗುತ್ತಲ:** ಸಮೀಪದ ನೆಗಳೂರ ಗ್ರಾಮದ ಶ್ರೀಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಧಾರ್ಮಿಕ ಪಾಠ ಶಾಲೆಗೆ ಪ್ರಸಕ್ತ 2026-27ನೇ ಸಾಲಿಗೆ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಹಾಗೂ ವೇದಾಧ್ಯಯನ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಶ್ರೀಮಠದಲ್ಲಿ ಮೂರು ವರ್ಷಗಳ ಕಾಲ ಊಟ, ವಸತಿಯೊಂದಿಗೆ ವಿದ್ಯಾರ್ಥಿಗಳಿಗೆ ವೇದ, ಸಂಸ್ಕೃತ, ಜ್ಯೋತಿಷ್ಯ ಅಧ್ಯಯನ, ಷೋಡಶಧರ್ಮ ಸಂಸ್ಕಾರಗಳ ಅರಿವು ಹಾಗೂ ಪೂಜಾ ವಿಧಿ ವಿಧಾನಗಳ ಬಗ್ಗೆ ತಿಳಿಸಲಾಗುವದು. ಕೇವಲ 25ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಆಸಕ್ತರು ಮೇ 15ರೊಳಗಾಗಿ ಶ್ರೀಮಠದಲ್ಲಿ ಹೆಸರು ನೋಂದಾಯಿಸಿಕೊಂಡು ಮೇ 18ರ ಬೆಳಗ್ಗೆ 10.30 ಕ್ಕೆ ಶ್ರೀಮಠದಲ್ಲಿ ನಡೆಯುವ ಸಂದರ್ಶನದಲ್ಲಿ ಭಾಗವಹಿಸಬೇಕು. ಸಂದರ್ಶನದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾತ್ರ ಪಾಠಶಾಲೆಗೆ ಪ್ರವೇಶ ನೀಡಲಾಗುವದು. ಹೆಚ್ಚಿನ ಮಾಹಿತಿಗಾಗಿ ಮೊ: 9731381099, 9741117174 ಸಂಪರ್ಕಿಸಲು ಶ್ರೀಮಠದ ಸೇವಾ ಸಮಿತಿ ಅಧ್ಯಕ್ಷ ರೇವಣೆಪ್ಪ ಕಿವುಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಸಾಪ ಸಂಸ್ಥಾಪನಾ ದಿನಾಚರಣೆ ಇಂದು

**ಮುಂಡರಗಿ:** ಕನ್ನಡ ಸಾಹಿತ್ಯ ಪರಿಷತ್ ಮುಂಡರಗಿ ತಾಲೂಕು ಘಟಕ ಮತ್ತು ಕ.ರಾ.ಬೆಲ್ಲದ ಕಾಲೇಜ ಆಶ್ರಯದಲ್ಲಿ ಮೇ 6ರಂದು ಬೆಳಗ್ಗೆ 9.30ಕ್ಕೆ ಕಾಲೇಜಿನ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಚಾರಣೆ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.ಅಧ್ಯಕ್ಷತೆಯನ್ನು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ವಹಿಸುವರು. ಉದ್ಘಾಟಕರಾಗಿ ಶ್ರೀ ಜ.ಅ.ವಿ.ಸಮಿತಿಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಆಗಮಿಸುವರು. ಹೆಸರೂರ ಪ್ರೌಢಶಾಲೆಯ ಶಿಕ್ಷಕ ರವಿ ದೇವರಡ್ಡಿ ಅವರು ಕಸಾಪ ನಡೆದು ಬಂದದಾರಿ ಕುರಿತು ಉಪನ್ಯಾಸ ನೀಡುವರು. ಬಿಇಒ ಗಂಘಾಧರ ಅಣ್ಣೆಗೇರಿ, ಪ್ರಾ. ಡಾ.ಸಂತೋಷ ಹಿರೇಮಠ, ಕಾಶಿನಾಥ ಬಿಳಿಮಗ್ಗದ ಅತಿಥಿಗಳಾಗಿ ಭಾಗವಹಿಸುವರು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯಕ್ಕೆ 125 ಕ್ಕೆ 125 ಅಂಕಪಡೆದ ಪೂಜಾ ಕವಲೂರ, ಗಿರೀಶ ಹಳ್ಳಿಕೇರಿ, ಕಾವ್ಯಾ ಕಬ್ಬಿಣದ, ಸುಪ್ರೀತಾ ಲಂಬಾಣಿ, ವಿನಾಯಕ ಕಾರಬಾರಿ ಅವರನ್ನು ಸತ್ಕರಿಸಲಾಗುವುದು. ನಾಟ್ಯ ಬಿಂದು ಅಕಾಡೆಮಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವವು.

### ಅವಧಿ ವಿಸ್ತರಣೆ

**ಗದಗ:** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ, ಶುಲ್ಕ ಮರುಪಾವತಿ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಂತಿಮ ಮೇ.16ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮೆಹಬೂಬ್ ತುಂಬರಮಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ ಸುದ್ದಿ

### ನೀಲಗಂಗಮ್ಮ ಅಂದಾನಿಗೌಡ್ರ

**ಹಾವೇರಿ:** ಇಲ್ಲಿಯ ಇಜಾರಿ ಲಕಮಾಪುರದ ನಿವಾಸಿ ನೀಲಗಂಗಮ್ಮ ಕೋಂ.ಬಸವನಗೌಡ ಅಂದಾನಿಗೌಡ್ರ, (90) ಮಂಗಳವಾರ ನಿಧನ ಹೊಂದಿದರು. ಮೃತರಿಗೆ ಓರ್ವ ಪುತ್ರ, ನಾಲ್ಕು ಜನ ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



### ಶೇಖರಗೌಡ ಲಕ್ಕನಗೌಡ್ರ

**ಹಾವೇರಿ:** ಜಿಲ್ಲೆಯ ಸವಣೂರ ತಾಲೂಕ ಮೆಳ್ಳಗಟ್ಟಿ ಗ್ರಾಮದ ಶೇಖರಗೌಡ ನಾಗನಗೌಡ ಲಕ್ಕನಗೌಡ್ರ, (85) ಸೋಮವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಗದಗ: ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಜಯ ಗಳಿಸಿರುವ ಹಿನ್ನೆಲೆಯಲ್ಲಿ ನಗರದ ಹುಯಿಲಗೋಳ ನಾರಾಯಣರಾವ್ ವೃತ್ತದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಜಿಲ್ಲಾಧ್ಯಕ್ಷ ರಾಜು ಕುರುಡಗಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಎಂ.ಎಸ್. ಕರೀಗೌಡ್ರ, ಎಂ.ಎಂ.ಹಿರೇಮಠ, ಗ್ರಾಮೀಣ ಮಂಡಲ ಅಧ್ಯಕ್ಷ ಬೂದಪ್ಪ ಹಳ್ಳಿ, ಜಗನ್ನಾಥಸಾ ಭಾಂಡಗೆ, ಸಿದ್ದು ಪಲ್ಲೇದ, ಬಿ.ಎಸ್.ಚಿಂಚಲಿ, ವಿಜಯಕುಮಾರ ಗಡ್ಡಿ, ಇತರರಿದ್ದರು.

## ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

**ಹಾನಗಲ್ಲ:** ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಗ್ರಾಮಗಳ ಒಳಗಿನ ರಸ್ತೆಗಳನ್ನು ಸಿಸಿ ರಸ್ತೆಗಳನ್ನಾಗಿ ಸುಧಾರಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಶೀಘ್ರದಲ್ಲಿ ಮತ್ತಷ್ಟು ಸಿಸಿ ರಸ್ತೆ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳುವುದಾಗಿ ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ತಾಲೂಕಿನ ಸಾಂವಸಗಿ ಗ್ರಾಪಂ ವ್ಯಾಪ್ತಿಯ ಶಿರಮಾಪುರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 12 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು ಪಂಚ ಗ್ಯಾರಂಟಿ ಯೋಜನೆಗಳ ಜೊತೆಗೆ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ವಿಶೇಷವಾಗಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಇವೆಲ್ಲವೂ ಜನ ನೀಡಿರುವ ಮತದ ಶಕ್ತಿಯಿಂದ ಸಾಧ್ಯವಾಗುತ್ತಿದ್ದು, ಜನಸೇವೆ, ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಸಿಕ್ಕಿರುವ ಅವಕಾಶವನ್ನು ಪ್ರಾಮಾಣಿಕತೆ, ಬದ್ಧತೆಯಿಂದ ನಿಭಾಯಿಸಲಾಗುತ್ತಿದೆ ಎಂದು ತಿಳಿಸಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಮುಖಂಡರಾದ ಟಾಕಪ್ಪ ದೊಡ್ಡಮನಿ, ಶಿವಪ್ಪ ದೊಡ್ಡಮನಿ, ಆದರ್ಶ ಶೆಟ್ಟಿ, ಬಸನಗೌಡ ಪಾಟೀಲ, ಶಿವಪ್ಪ ತಳವಾರ, ಜಗದೀಶ ದ್ಯಾಮನಕೊಪ್ಪ, ಶಿವರಾಜ ದೊಡ್ಡಮನಿ, ಜಗದೀಶ ದೊಡ್ಡಮನಿ, ರಾಜೂ ಚಂದ್ರಗಿರಿ, ನಿಂಗಪ್ಪ ಕಟ್ಟಿ, ಚಂದ್ರು ದೊಡ್ಡಮನಿ, ಶಾಂತಪ್ಪ ದೊಡ್ಡಮನಿ, ಗುತ್ತೆಪ್ಪ ತಳವಾರ, ದೇವರಾಜ ತಳವಾರ ಸೇರಿದಂತೆ ಇನ್ನೂ ಹಲವರು ಇದ್ದರು.



ಹಾನಗಲ್ಲ: ತಾಲೂಕಿನ ಸಾಂವಸಗಿ ಗ್ರಾಪಂ ವ್ಯಾಪ್ತಿಯ ಶಿರಮಾಪುರ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 12 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

# ಕೆಎಸ್‌ಆರ್‌ಟಿಸಿ ಮಳಿಗೆಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಿ: ಡಿಸಿ

**ಹಾವೇರಿ:** ಜಿಲ್ಲೆಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಮಳಿಗೆಗಳಲ್ಲಿ ಕಡ್ಡಾಯವಾಗಿ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧಿಸಲು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ತಂಬಾಕು ನಿಯಂತ್ರಣ ಕುರಿತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ನಡೆಸಿದ ಅವರು, ತಂಬಾಕು ನಿಯಂತ್ರಣ ತಿದ್ದುಪಡಿ ಕಾಯ್ದೆ-2024ರನ್ವಯ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ನಿಷೇಧಿಸಲಾಗಿದೆ. 21 ವರ್ಷದೊಳಗಿನವರಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವಂತಿಲ್ಲ ಹಾಗೂ ದಂಡದ ಮೊತ್ತವನ್ನು ರೂ.200 ಮೊತ್ತದ ಬದಲಾಗಿ ರೂ. ಒಂದು ಸಾವಿರಕ್ಕೆ ಹೆಚ್ಚಿಸಲಾಗಿದೆ. ಈ ಕಾಯ್ದೆಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ದಂಡದ ಸೂಚನಾ ಫಲಕ ಅಳವಡಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗಳಲ್ಲಿ ತಂಬಾಕು ಮಾರಾಟಗಾರರಿಗೆ ನಿಯಮನುಸಾರ ಪ್ರತ್ಯೇಕ ಪರವಾನಗಿ ನೀಡಬೇಕು ಎಂದು ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ನಿಯಮಾನುಸಾರ ಶಾಲಾ-ಕಾಲೇಜುಗಳ 100 ಮೀಟರ್ ಅಂತರದೊಳಗೆ ತಂಬಾಕು ಉತ್ಪನ್ನಗಳ ಮಾರಾಟ ಮಾಡುವಂತಿಲ್ಲ, ಆಯಾ



> ತಂಬಾಕು ಉತ್ಪನ್ನಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ, ಶಾಲಾ-ಕಾಲೇಜು ಮಕ್ಕಳಿಗೆ ಸತತವಾಗಿ ಅರಿವು ಮೂಡಿಸಬೇಕು. ತಾಲೂಕು ಮಟ್ಟದಲ್ಲಿ ನಿಯಮಾನುಸಾರ ಸಭೆ ನಡೆಸಬೇಕು ಹಾಗೂ ಅಂಗಡಿಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸಬೇಕು.
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ. ಜಿಲ್ಲಾಧಿಕಾರಿ

ಶಾಲಾ-ಕಾಲೇಜುಗಳ ವ್ಯಾಪ್ತಿಯ ಸ್ಥಳೀಯ ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಶಿಕ್ಷಕರು, ಎಸ್.ಡಿ.ಎಂ.ಸಿ. ಪ್ರತಿನಿಧಿಗಳು ಹಾಗೂ ಪೊಲೀಸ್ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ಶಾಲಾ-ಕಾಲೇಜುಗಳ 100 ಮೀಟರ್ ಅಂತರದೊಳಗೆ ತಂಬಾಕು ಉತ್ಪನ್ನಗಳ ಮಾರಾಟ ತಡೆಗೆ ಕ್ರಮಕ್ಕೆಗೊಳ್ಳಬೇಕು. ತಂಬಾಕು ಮುಕ್ತ ಶಿಕ್ಷಣ ಸಂಸ್ಥೆ ಮಾಡಬೇಕು ಹಾಗೂ ಮಕ್ಕಳ ಕಲಿಕೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡಿಕೊಡಬೇಕು ಹಾಗೂ ಕೋಟ್ಪಾ ಕಾಯ್ದೆ ಪರಿಣಾಮಕಾರಿ ಅನುಷ್ಠಾನದ ಮೂಲಕ ತಂಬಾಕು ಮುಕ್ತ ಗ್ರಾಮ ಘೋಷಣೆಯಾದ ಗ್ರಾಮಗಳಲ್ಲಿ ನಾಮಫಲಕ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಗದೀಶ್ ಪಾಟೀಲ ಅವರು ಮಾತನಾಡಿ, ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿ ಕಳೆದ - 2025-26ನೇ ಸಾಲಿನಲ್ಲಿ 29ದಾಳಿ ನಡೆಸಿ, 316 ಪ್ರಕರಣ ದಾಖಲಿಸಲಾಗಿದೆ ಹಾಗೂ ರೂ.30,100 ದಂಡ ಸಂಗ್ರಹಣೆ ಮಾಡಲಾಗಿದೆ. 494 ಪುರುಷ ಹಾಗೂ 58 ಮಹಿಳೆಯರು ಸೇರಿ 552 ಜನರಿಗೆ ಆಪ್ತಸಮಾಲೋಚನೆ ನಡೆಸಲಾಗಿದೆ, ನಿಕೋಟಿನ್ ಗಮ್ಸ್ ಹಾಗೂ ಅಗತ್ಯ ಚಿಕಿತ್ಸೆ ನೀಡಲಾಗಿದೆ. ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ತಂಬಾಕು ನಿಯಂತ್ರಣ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಯಾನಂದ, ಡಾ. ಚನ್ನಬಸಯ್ಯ ವಿರಕ್ತ ಮಠ, ಡಾ. ಸರಿತಾ, ಡಾ. ನೀಲೇಶ,ಡಾ.ಸಂತೋಷ ದಡ್ಡಿ, ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಿರೇಕೆರೂರಿನಲ್ಲಿ ಇಂದು ಪ್ರತಿಭಟನೆ: ಬಿಸಿಪಾ

**ಹಾವೇರಿ:** ಹಿರೇಕೆರೂರ ತಾಲೂಕಿನ ಸುಮಾರು 23 ಗ್ರಾಪಂಗಳ ಬೆಳೆವಿಮೆ ಬಂದಿಲ್ಲ, ಇದನ್ನು ಖಂಡಿಸಿ ಮೇ 6ರಂದು ಹಿರೇಕೆರೂರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ಹೇಳಿದರು.



ನಗರದಕಾಗಿನೆಲೆರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳೆ ನಷ್ಟವಾಗಿದ್ದು ಈ ಕುರಿತು ಬೆಳೆವಿಮೆ ಪರಿಹಾರ ಕೊಡಿಸುವಲ್ಲಿ ಕೃಷಿ, ಕಂದಾಯ ಮತ್ತು ಸಾಂಖ್ಯಿಕ ಇಲಾಖೆ ವಿಫಲವಾಗಿವೆ. ಬೆಳೆ ವಿಮೆಯಿಂದ ರೈತರು ವಂಚಿತರಾಗಿದ್ದು, ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರವೇ ರೈತನ ರಕ್ತ ಕುಡಿಯುತ್ತಿದೆ. ಸಕಾಲಕ್ಕೆ ಗೊಬ್ಬರ ಸಿಗುತ್ತಿಲ್ಲ. ದಿನಕ್ಕೊಂದು ಹೊಸ ನಿಯಮ ಮಾಡುತ್ತಿದ್ದು, ಇದೀಗ ಗೊಬ್ಬರಕ್ಕೆ ಎಫ್ ಐಡಿ ಮತ್ತು ಲಿಂಕ್ ಎಂಬುದನ್ನು ತಂದಿದ್ದಾರೆ ಎಂದರು.

**ಅಧಿಕಾರಿಗಳಬೇಜವಾಬ್ದಾರಿ**: ಜಿಲ್ಲೆಯಲ್ಲಿ ಗೊಬ್ಬರದ ಅಭಾವ ಎದುರಾಗುತ್ತಿದೆ. ಬೆಳೆ ವಿಮೆ ಬೇಕಾಬಿಟ್ಟಿ ಮಾಡಿದ್ದಾರೆ. ಬರುವ ಬೆಳೆ ವಿಮೆಯಿಂದ ರೈತರು ವಂಚಿತರಾಗಿದ್ದಾರೆ. ಬೆಳೆ ಹಾನಿ ಪರಿಹಾರ ಕೊಟ್ಟಿದ್ದಾರೆ ವಿನಃ ವಿಮೆ ಬಂದಿಲ್ಲ. ಅಕಾರಿಗಳನ್ನು ಕೇಳಿದರೆ ಬೇಜವಾಬ್ದಾರಿ ಹೇಳಿಕೆ ಕೊಡುತ್ತಾರೆ. ಸರಕಾರ ರೈತರ ರಕ್ತವನ್ನು ಕುಡಿಯುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

**ನಟ ಚೇತನ್ ತಿಳಿಗೇಡಿ:** ಡಾ.ರಾಜ ಕುಮಾರ ಬಗ್ಗೆ ಅವಹೇಳನಕಾರಿ ಮಾತನಾಡಿದ ನಟ ಚೇತನ್ ಅಹಿಂಸಾ ಹೇಳಿಕೆಯನ್ನು ಖಂಡಿಸುತ್ತೇವೆ. ರಾಜಕುಮಾರ ಒಬ್ಬ ಕಲಾವಿದರಾಗಿ, ಮೇರುನಟರಾಗಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ, ರಾಜಕುಮಾರ ಮಾಡದ ಪಾತ್ರಗಳಿಲ್ಲ, ಸರಕಾರ ಅವರಿಗೆ ಸೂಕ್ತ ಗೌರವ ಕೊಟ್ಟಿದೆ. ಅದನ್ನು ಅರಿಯದೇ ಹೇಳಿಕೆ ಕೊಡುವವರು ತಿಳಿಗೇಡಿಗಳು ಎಂದು ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಶಿವರಾಜ ಸಜ್ಜನರ, ಭರತ ಬೊಮ್ಮಾಯಿ, ಭೋಜರಾಜ ಕರೂದಿ, ವಿಜಯಕುಮಾರ ಚನ್ನಿಕಟ್ಟಿ, ನಿರಂಜನ ಹೇರೂರ ಇದ್ದರು.

### ಅರ್ಜಿ ಆಹ್ವಾನ

**ಹಾವೇರಿ:** ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ 17 ಶಾಖಾಧಿಕಾರಿಗಳ ಹುದ್ದೆಗೆ ಉಳಿದ ಮೂಲ ವೃಂದದಡಿಯಲ್ಲಿ ನೇರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ನಿಗದಿಪಡಿಸಿರುವ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು ಎಂದು ಅಧಿಸೂಚಿಸಲಾಗಿದೆ. ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ (ಎಲ್.ಎಲ್.ಬಿ) ಪಡೆದಿರಬೇಕು, ಹುದ್ದೆಗಳ ವರ್ಗೀಕರಣ, ವೇತನಶ್ರೇಣಿ, ನೇಮಕಾತಿ ವಿಧಾನ, ವಯೋಮಿತಿ, ಆಯ್ಕೆ ವಿಧಾನ, ಸ್ಪರ್ಧಾತ್ಮಕ ಪರೀಕ್ಷಾ ವಿಧಾನದ ಕುರಿತು ಮಾಹಿತಿಗಾಗಿ www.cite.karnataka.gov.in ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ ಅವರು ತಿಳಿಸಿದ್ದಾರೆ.

## ಅಚ್ಚರಿ ಮೂಡಿಸಿದ ವಿಮಾನ ಹಾರಾಟ!

**ಹಾನಗಲ್ಲ:** ಪಟ್ಟಣ ಹಾಗೂ ಹಲವು ಗ್ರಾಮಗಳ ವ್ಯಾಪ್ತಿಯಲ್ಲಿ ವಿಮಾನವೊಂದು ಅತಿ ಕೆಳಮಟ್ಟದಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಹಾರಾಟ ನಡೆಸುತ್ತಿರುವುದು ಜನರ ಆತಂಕಕ್ಕೆ ಮತ್ತು ಅಚ್ಚರಿ ಮೂಡಿಸಿದಂತಾಗಿದೆ.



ಶಿರಸಿ ಮತ್ತು ಮುಂಡಗೋಡ ತಾಲೂಕಿಗೆ ಹೊಂದಿಕೊಂಡ ಹಾನಗಲ್ಲ ತಾಲೂಕಿನ ಗಡಿ ಗ್ರಾಮಗಳ ಮೇಲೆ ಕಳೆದ ನಾಲ್ಕು ದಿನಗಳಿಂದ ವಿಶೇಷ ವಿಮಾನ ಸಂಚಾರ ಮಾಡುತ್ತಿದೆ ಎಂದು ಸುದ್ದಿ ಹರಿದಾಡುತ್ತಿತ್ತು.ಅದರಂತೆ ಹಾನಗಲ್ಲ ಪಟ್ಟಣದ ಆಕಾಶದ ಮೇಲೆ ಪ್ರತಿ ದಿನ ಪ್ರತ್ಯಕ್ಷವಾದ ವಿಮಾನ ಕುತೂಹಲಕ್ಕೆ ಕಾರಣವಾಯಿತು.ಹಾರಾಟ ಭಾನುವಾರ ಬೆಳಗ್ಗೆಯಿಂದ ಭೂಮಿಯಿಂದ ಅತಿ ಕೆಳಮಟ್ಟದಲ್ಲಿ ಸಂಜೆ ತನಕ ಸುಮಾರು ಮೂರು ಬಾರಿ ಗಸ್ತು ಹೊಡೆದ ವಿಮಾನದ ಕುರಿತು ಜನರಲ್ಲಿ ಹಲವಾರು ಊಹೆಗಳು ಹುಟ್ಟಿಕೊಂಡಿವೆ.

ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧ ವಿಮಾನಗಳ ದಾಳಿಯನ್ನು ಟಿವಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತಿರುವ ಜನರಿಗೆ ತಮ್ಮಲ್ಲೂ ವಿಮಾನ ಹಾರಾಟ ನಡೆದಿರುವುದು ಗಲಿಬಿಲಿಗೆ ಒಳಗಾಗುವಂತೆ ಮಾಡಿತು.

ವಿಮಾನದ ಶಬ್ದ ಕೇಳಿದ ಜನರು ಮನೆಯಿಂದ ಹೊರಗೆ ಬಂದು ಆಕಾಶದತ್ತ ಮುಖ ಮಾಡಿ ನಿಂತಿದ್ದರು. ಮಕ್ಕಳು ವಿಮಾನ ನೋಡಿ ಕುಣಿದು ಕುಪ್ಪಳಿಸಿದರು. ಕೆಲವರು ಮೊಬೈಲ್‌ನಲ್ಲಿ ವಿಮಾನದ ಫೋಟೊ, ವಿಡಿಯೋ ಮಾಡಿಕೊಂಡರು. ವರದಾ ಮತ್ತು ಬೇಡ್ತಿ ನದಿ ಜೋಡಣೆ ಕಾಮಗಾರಿ ಅನುಷ್ಠಾನದ ಸಮಯ ಬಂದಿದ್ದು, ಇದೇ ಕಾರಣಕ್ಕಾಗಿ ವಿಮಾನದ ಮೂಲಕ ಸ್ಥಳ ಸರ್ವೆ ಕಾರ್ಯ ನಡೆಯುತ್ತಿದೆ ಎಂದೂ ಜನರು ಮಾತನಾಡಿಕೊಂಡರು.

**ಭೂವಿಜ್ಞಾನ ಸಮೀಕ್ಷೆ:** ಪಟ್ಟಣ ಮತ್ತು ತಾಲೂಕಿನ ಹಲವು ಗ್ರಾಮಗಳ ಆಕಾಶದ ಮೇಲೆ ನಾಲ್ಕೈದು ದಿನಗಳಿಂದ ವಿಮಾನ ಹಾರಾಡುತ್ತಿದೆ. ಇದು ಖನಿಜ ಸಂಪನ್ಮೂಲಗಳ ಸಮೀಕ್ಷೆ ಎಂದು ಪೊಲೀಸ್ ಇಲಾಖೆ ಖಚಿತಪಡಿಸಿದೆ.

ಕಡಿಮೆ ಎತ್ತರದ ಹಾರಾಟದ ಮೂಲಕ ಕೆಲ ಜಿಲ್ಲೆಗಳ ಹಾನಗಲ್ಲ ಪಟ್ಟಣ ವ್ಯಾಪ್ತಿಯಲ್ಲಿ ಭಾನುವಾರ ಕೆಳಮಟ್ಟದಲ್ಲಿ ಸಣ್ಣ ಗಾತ್ರದ ವಿಮಾನ ಹಾರಾಟ ನಡೆಸಿತು.

ಕೆಳ ಮಟ್ಟದಲ್ಲಿ ವಿಮಾನ ಹಾರಾಟದಿಂದ ಜನರು ಆತಂಕ ಪಡುವ ಅವಶ್ಯಕತೆ ಇಲ್ಲ, ಭೂ ಸಮೀಕ್ಷೆ ಕಾರ್ಯ ಜು. 31ರ ತನಕ ನಡೆಯಲಿದೆ. ಆಗಾಗ ಈ ಭಾಗದಲ್ಲಿ ವಿಮಾನಗಳು ಕಾಣಿಸಿಕೊಳ್ಳಲಿವೆ. ಮಂಗಳೂರು ಮತ್ತು ಶಿವಮೊಗ್ಗ ವಿಮಾನ ನಿಲ್ದಾಣದಿಂದ ಈ ಎರಡು ವಿಮಾನಗಳು ಉಡಾವಣೆ ಮಾಡುತ್ತಿವೆ ಎಂದು ಹಾನಗಲ್ ಪಿಎಸ್‌ಐ -ಸಂಪತ್‌ಕುಮಾರ ಆನಿಕಿವಿ ಪ್ರಕಟಣೆಯೊಂದಿಗೆ ಸುದ್ದಿಗಾರರಿಗೆ ವಿವರ ನೀಡಿದ್ದಾರೆ.

ಕಡಿಮೆ ಹಾರಾಟದ ವ್ಯಾಪ್ತಿಯಲ್ಲಿ ಸಮೀಕ್ಷೆ ಕಾರ್ಯ ನಡೆಯುತ್ತಿದೆ. ಭಾರತೀಯ ಭೂ ವಿಜ್ಞಾನ ಅಧೀನಾಧಿಕಾರಿ (ಜಿಎಸ್‌ಐ) ನೇತೃತ್ವದಲ್ಲಿ ಹಿಮಾಲಯನ್ ಹೆಲಿ ಸೇವಿಸನ್ ಲಿಮಿಟೆಡ್ ಮತ್ತು ಆಸ್ಟ್ರೇಲಿಯಾ ದೇಶದ ಕಂಪನಿ ವತಿಯಿಂದ ಸಮೀಕ್ಷೆ ನಡೆಯುತ್ತಿದೆ. ಎರಡು ವಿಮಾನಗಳು ಸಮೀಕ್ಷೆಯಲ್ಲಿ ತೊಡಗಿವೆ ಎಂದು ಹಾನಗಲ್ಲ ಪಿಎಸ್‌ಐ ಸಂಪತ್‌ಕುಮಾರ ಆನಿಕಿವಿ ತಿಳಿಸಿದ್ದಾರೆ.

## ರೈತ ಸಂಘದ ಕಾರ್ಯಕರ್ತರಿಂದ ಮನವಿ

**ರಾಣೇಬೆನ್ನೂರ:** ಕೇಂದ್ರ ಸರ್ಕಾರ ಗೊಬ್ಬರಕ್ಕಾಗಿ ರೈತರು ಎಫ್ ಐಡಿ ಮಾಡಿದರೆ ಮಾತ್ರ ರಸಗೊಬ್ಬರ ನೀಡಲಾಗುವುದು ಎಂಬ ಆದೇಶವನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿ, ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಕೃಷಿ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರ ರೈತರನ್ನು ದಿಕ್ಕು ದಾರಿ ತಪ್ಪಿಸುವಂತ ವ್ಯವಸ್ಥೆ ಮಾಡುತ್ತದೆ. ಏಕೆಂದರೆ ಗೊಬ್ಬರಕ್ಕಾಗಿ ರೈತರು ಎಫ್.ಐ.ಡಿ. ಮಾಡಿದ್ದರೆ ಮಾತ್ರ ರೈತರಿಗೆ ಗೊಬ್ಬರಕೊಡುತ್ತೇವೆ ಎಂದು ಆದೇಶ ಮಾಡಿದೆ. ಅದರೆ ರೈತರಿಗೆ ಇದು ಒಂದು ಬರಸಿಡಿಲು ಬಡಿದಂತಾಗಿದೆ. ಈಗಾಗಲೇ ರೈತರು ಮುಂಗಾರು ಬಿತ್ತನೆಗೆ ಭೂಮಿಯನ್ನು ಹದಗೊಳಿಸಿ ಬಿತ್ತನೆಯ ತಯಾರಿಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರಿಗೆ ಎಫ್.ಐ.ಡಿ. ಮಾಡಿಸಿ ಎಂದು ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. ಒಂದು ಕಡೆಗೆ ಅಧಿಕಾರಿಗಳು ಸರ್ಕಾರದ ಆದೇಶವನ್ನು ಪಾಲನೆ ಮಾಡಲಿಕ್ಕೆ ರೈತರನ್ನು ದಿಕ್ಕುದಾರಿ ತಪ್ಪಿಸುವಂತ ವ್ಯವಸ್ಥೆ ಆದಂತಾಗುತ್ತದೆ. ಕೂಡಲೇ ಇದನ್ನು ಈ ಮುಂಗಾರು ಬಿತ್ತನೆಗೆ ಕೈಬಿಟ್ಟು ಕೂಡಲೇ ರೈತರಿಗೆ ಬೀಜ ಮತ್ತು ಗೊಬ್ಬರ ಸಮರ್ಪಕವಾಗಿ ಸಿಗುವಂತೆ ವ್ಯವಸ್ಥೆಯನ್ನು ಜಿಲ್ಲಾ ಆಡಳಿತ ಮತ್ತು ತಾಲೂಕ ಆಡಳಿತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ರೈತ ಮುಖಂಡ ಹನುಮಂತಪ್ಪ ಕಬ್ಬಾರ, ಈರಣ್ಣ ಬುಡಪನಹಳ್ಳಿ, ಮಲ್ಲಿಕಾರ್ಜುನ ತೆಗ್ಗಿನ, ಬಸವರಾಜ ನಲವಾಗಲ, ಸೋಮನಗೌಡ ಪಾಟೀಲ, ಫಕ್ಕಿರಪ್ಪ ಮಾಡೇನಹಳ್ಳಿ, ಬಸವರಾಜ ಹಾದಿಮನಿ, ಫಕ್ಕೀರಡ್ಡಿ ರಂಗರಡ್ಡಿ, ಸಂಪತ್ ನಾಗೇನಹಳ್ಳಿ, ಸಿದ್ದಪ್ಪ ಪೂಜಾರ, ಶೇಖಪ್ಪ ಕೊಪ್ಪದ ಸೇರಿ ಇನ್ನೂ ಮುಂತಾದ ರೈತರು ಇದ್ದರು.



## ಗುಡುಗೂರು ಗ್ರಾಪಂನಿಂದ ರೋಜಗಾರ್ ದಿನ ಆಚರಣೆ



**ರಾಣೇಬೆನ್ನೂರ:** ಬೇಸಿಗೆಯ ಸಮಯದಲ್ಲಿ ಕೂಲಿ ಕಾರ್ಮಿಕರು ಬೇರೆ ಊರುಗಳಿಗೆ ಕೆಲಸಕ್ಕೆ ವಲಸೆ ಹೋಗದೆ ಸ್ಥಳೀಯವಾಗಿ ಗುಡುಗೂರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿಯಲ್ಲಿ ದೊಡ್ಡ ಕೆರೆ ಹೂಳೆತ್ತುವ ಕಾಮಗಾರಿಯಲ್ಲಿ ಸುಮಾರು 45 ಜನರಿಗೆ ಕೂಲಿ ಕೆಲಸ ನೀಡಿದೆ ಇದರಿಂದ ವಲಸೆ ಹೋಗುವುದನ್ನು ತಡೆಗಟ್ಟಿದೆ ಎಂದು ತಾಲೂಕ ಸಯೋಜಕ ದಿಂಗಾಲೇಶ ಅಂಗೂರ ಹೇಳಿದರು.

ತಾಲೂಕಿನ ಗುಡುಗೂರು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ದೊಡ್ಡ ಕೆರೆ ಕಾಮಗಾರಿ ಸ್ಥಳದಲ್ಲಿ ರೋಜಗಾರ್ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾಲೂಕಿನ ಎಲ್ಲಾ 40 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನರೇಗಾ ಯೋಜನೆಯಡಿಕೂಲಿಕಾರ್ಮಿಕರಿಗೆ ಕೂಲಿ ಕೆಲಸ ನೀಡಲಾಗುವುದು ಯಾರು ವಲಸೆ ಹೋಗಬಾರದು ಎಂದು ಕರೆ ನೀಡಿದರು.

ಈಗಾಗಲೇ ನರೇಗಾ ಯೋಜನೆ ಅಡಿ ತಾಲೂಕಿನ ಸುಣಕಲ್ ಬಿದರಿ, ನಿಟ್ಟೂರ, ಅಸುಂಡಿ, ಚಿಕ್ಕಕುರವತ್ತಿ, ಗುಡಿಹೊನ್ನತ್ತಿ, ಮೇಡ್ಲೇರಿ, ನದಿಹರಿಹಳ್ಳಿ, ಸೋಮಲಾಪುರ, ಕರೂರು, ಬೇಲೂರ, ಹನುಮಾಪುರ, ಅರೇಮಲ್ಲಾಪುರ, ಜೋಯಿಸರಹಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿಯಲ್ಲಿ ಕೂಲಿ ಕೆಲಸ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಕಾರ್ಯದರ್ಶಿ ಅನುರಾದ ಪಾಟೀಲ್, ನಾಗರಾಜ ಮಾಚೇನಹಳ್ಳಿ, ಹನುಮಂತ. ಬಿ.ಏಮ್, ಗಂಗಮ್ಮ ನಾಯ್ಕರ ಹಾಗೂ ಕೂಲಿ ಕಾರ್ಮಿಕರು ಇದ್ದರು.

## ಅಭಿಮಾನೋತ್ಸವ: ಪೂರ್ವಭಾವಿ ಸಭೆ



**ಹಾನಗಲ್ಲ:** ಪಟ್ಟಣದ ಉದಾಸಿ ಸಾವಿತ್ರಮ್ಮ ಕಲ್ಯಾಣ ಮಂಟಪದಲ್ಲಿ ಹಾನಗಲ್ ಮಂಡಲ ಬಿಜೆಪಿ ಅಧ್ಯಕ್ಷ ಮಹೇಶಕುಮಾರ ಕಮಡೊಳ್ಳಿ ಅಧ್ಯಕ್ಷತೆಯಲ್ಲಿ, ಮಾಜಿ ಸಚಿವ ಬಿ ಸಿ ಪಾಟೀಲ್‌ವರ ನೇತೃತ್ವದಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಜನಸೇವೆಯ 50 ವರ್ಷಗಳು ಪೂರ್ಣಗೊಂಡ ಪ್ರಯುಕ್ತ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಬಗ್ಗೆ ಮಂಗಳವಾರದಂದು ಪೂರ್ವಭಾವಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಹಾನಗಲ್ ತಾಲೂಕಿನಾದ್ಯಂತ 25 ಬಸ್‌ಗಳು ಮತ್ತು 100ಕ್ಕೂ ಹೆಚ್ಚು ಕಾರುಗಳು ಸೇರಿದಂತೆ ತಾಲೂಕಿನಲ್ಲಿ 5000ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ಕಾರ್ಯಕ್ರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಮೆ.9 ಬೆಳಿಗ್ಗೆ 7 ಗಂಟೆಗೆ ಹಾನಗಲ್ ಪಟ್ಟಣದಿಂದ ಹಾವೇರಿ ಮೂಲಕ ಚಿತ್ರದುರ್ಗ ತಲುಪಲಿವೆ. ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಬಿ.ಸಿ.ಪಾಟೀಲ ಬಿಜೆಪಿ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಈ ಸಭೆಯಲ್ಲಿ ಮಾಜಿ ಶಾಸಕರಾದ ಶಿವರಾಜ ಸಜ್ಜನರ, ವಿಭಾಗ ಸಹ ಪ್ರಭಾರಿಗಳಾದ ಭೋಜರಾಜ ಕರೂದಿ, ಮುಖಂಡರಾದ ಭರತ್ ಬೊಮ್ಮಾಯಿ ಮತ್ತು ಪಕ್ಷದ ಪಧಾಧಿಕಾರಿಗಳು, ಪ್ರಮುಖರು, ಕಾರ್ಯಕರ್ತರು ಸಭೆಯಲ್ಲಿ ಉಪಸ್ಥಿತರಿದ್ದರು.

## ಗಾಯಾಳುಗಳಿಗೆ ಸಂಕನೂರ ಸಾಂತ್ವನ

**ಗದಗ:** ತೋಂಟದಾರ್ಯ ಜಾತ್ರಾ ಮಹೋತ್ಸವದಲ್ಲಿ ಆಕಸ್ಮಿಕವಾಗಿ ಡ್ಯಾನ್ಸಿಂಗ್ ಫ್ಲೈ ಜೋಕಾಲಿ ಆಡುವ ಸಂದರ್ಭದಲ್ಲಿ ತಾಂತ್ರಿಕ ದೋಷ ಉಂಟಾಗಿ ದುರ್ಘಟನೆ ನಡೆದು ಸುಮಾರು 18 ಜನ ಗಾಯಗೊಂಡು ಕೆ.ಎಚ್. ಪಾಟೀಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾದವರನ್ನು ಭೇಟಿ ಮಾಡಿದ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರು ಆರೋಗ್ಯದ ಸ್ಥಿತಿಗತಿ ಕುರಿತು ವಿಚಾರಿಸಿ ಗಾಯಾಳುಗಳಿಗೆ ಸಾಂತ್ವನ ಹೇಳಿದರು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 18 ಗಾಯಾಳುಗಳಲ್ಲಿ ಈವರೆಗೆ ಮಾತ್ರ ಹೆಚ್ಚಿನ ಚಿಕಿತ್ಸೆ ಮಾಡಬೇಕಾಗಿದ್ದು, ಉಳಿದವರನ್ನು 3-4 ದಿನಗಳಲ್ಲಿ ಬಿಡುಗಡೆಗೊಳಿಸುವುದಾಗಿ ಆಸ್ಪತ್ರೆಯ ನಿರ್ದೇಶಕ ಬಸವರಾಜ ಬೊಮ್ಮನಹಳ್ಳಿ ಹೇಳಿದರು. ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿರುವ ಎಲುಬು ಕೀಲು ವೈದ್ಯರಾದ ಮಹಾಂತೇಶ ಪಾಟೀಲ ಹಾಗೂ ಜನರಲ್ ಸರ್ಜನ್ ಸುನೀಲ ತೇಲಕರ ಜೊತೆ ಮಾತನಾಡಿ ಹೆಚ್ಚಿನ ಕಾಳಜಿ ವಹಿಸಿ ಚಿಕಿತ್ಸೆ ನೀಡಲು ಎಸ್.ವಿ. ಸಂಕನೂರ ಮನವಿ ಮಾಡಿಕೊಂಡರು. ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಜು ಕುರಡಗಿ, ನಗರಾಭಿವೃದ್ಧಿ ಮಾಜಿ ಅಧ್ಯಕ್ಷ ಸಿದ್ದಣ್ಣ ಪಲ್ಲೇದ, ರಮೇಶ ಸಜ್ಜಗಾರ, ವಕೀಲ ಕೆ.ಪಿ. ಕೋಟಿಗೌಡ್ರ, ಅಮರನಾಥ ಗಡಗಿ ಹಾಗೂ ರವಿ ಮಾನ್ವಿ ಇದ್ದರು.



## ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ: ಸಾಧಕರಿಗೆ ಸನ್ಮಾನ

**ಹಾವೇರಿ:** ಸಾಂಘಿಕ ಪ್ರಯತ್ನ ಮತ್ತು ಸತತ ಪರಿಶ್ರಮದ ಫಲವಾಗಿ ಕನ್ನಡ ಪರಂಪರೆಯನ್ನು ಬೆಳೆಸುವ ಕಾರ್ಯ ಮಾಡುತ್ತಿರುವ ಜಿಲ್ಲೆಯ ಕನ್ನಡದ ಮನಸ್ಸುಗಳು ಮಾದರಿ ರೂಪದಲ್ಲಿ ಬೆಳೆದಿರುವುದು ಅಭಿಮಾನ ಮೂಡಿಸಿದೆ ಎಂದು ಹುತಾತ್ಮ ಮೈಲಾರ ಮಹಾದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ನಿಯೋಜಿತ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಹೇಳಿದರು.

ಇಲ್ಲಿನ ವಿನಾಯಕ ನಗರದ ಶ್ರೀ ಗಂಗಾಧರ ನಂದಿ ಕನ್ನಡ ಸಾಹಿತ್ಯ ಭವನದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ಜರುಗಿದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಆಯೋಜಿಸುವ ಮೂಲಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇತಿಹಾಸದ ಪುಟಗಳಲ್ಲಿ ಸದಾ ಉಳಿಯುವ ಕಾರ್ಯ ಮಾಡಿದೆ. ಯಾವುದೇ ಒಂದು ಸಂಸ್ಥೆ ಕ್ರಿಯಾಶೀಲವಾಗಿ ಕೆಲಸ ಮಾಡಲು ಸಕ್ರಿಯ ರೂಪದ ತಂಡ ಇರಬೇಕು. ಆಗ ಮಾತ್ರ ಗುರಿ ಮತ್ತು ಉದ್ದೇಶ ತಲುಪಲು ಸಾಧ್ಯ ಎಂದರು.



ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಎಸ್.ಎನ್. ದೊಡ್ಡಗೌಡ್ರ ಮಾತನಾಡಿ, ಜಿಲ್ಲಾ ಕಸಾಪ ಲಿಂಗಯ್ಯ ಹಿರೇಮಠ ನೇತೃತ್ವದಲ್ಲಿ ಅನೇಕ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯ ಮಾಡಿದೆ. ಅವರ ಅವಧಿಯಲ್ಲಿ ನಾನು ಕೋಶಾಧ್ಯಕ್ಷನಾಗಿ ಕನ್ನಡ ಸೇವೆ ಮಾಡಿರುವುದು ತೃಪ್ತಿ ತಂದಿದೆ ಎಂದರು.

ಸಾಹಿತಿ ಡಾ.ಎಚ್.ಐ. ತಿಮ್ಮಾಪುರ ಉಪನ್ಯಾಸ ನೀಡಿದರು.

ಡಿಡಿಪಿಯು ಅಶೋಕ ಶಾಸ್ತ್ರಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾದಿನಾಚರಣೆಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಹ್ವಾನಿಸಿಗೌರವಿಸಿರುವುದು ಅಭಿನಂದನೀಯ. ವಿದ್ಯಾರ್ಥಿಗಳು ತಮ್ಮ ಸತತ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸಿ ನಮ್ಮ ಇಲಾಖೆಗೂ ಹಾಗೂ ಹೆತ್ತವರಿಗೂ ಹೆಸರು ತಂದಿರುವರು ಎಂದರು.

ಇದೇ ಸಂದರ್ಭದಲ್ಲಿ ಸಂಜೀವಕುಮಾರ ನೀರಲಗಿ, ಲಿಂಗರಾಜ ಸೊಟ್ಟಪ್ಪನವರ, ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ವಿದ್ಯಾರ್ಥಿಗಳಾದ ಲಕ್ಷ್ಮೀ ವಾಲ್ಮೀಕಿ, ಆರತಿ ಆನ್ವೇರಿ, ಶಂಭುಲಿಂಗ ಸುಂಕದ, ಪ್ರಸನ್ನಕುಮಾರ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಹಿರಿಯ ಸಾಹಿತಿ ಡಾ.ಸತೀಶ ಕುಲಕರ್ಣಿ, ಕಸಾಪ ತಾಲೂಕಾಧ್ಯಕ್ಷ ವೈ.ಬಿ. ಆಲದಕಟ್ಟಿ, ಪರಿಷತ್ತಿನ ಶಂಕರ ಸುತಾರ, ಪೃಥ್ವಿರಾಜ್ ಬೆಟಗೇರಿ, ವಿ.ಪಿ. ದ್ಯಾಮಣ್ಣವರ, ಹನುಮಂತಗೌಡ ಗೊಲ್ಲರ, ಈರಣ್ಣ ಬೆಳವಡಿ, ರೇಣುಕಾ ಗುಡಿಮನಿ, ಜುಬೇದಾ ನಾಯಕ್, ಅಕ್ಕಮಹಾದೇವಿ ಹಾನಗಲ್ಲ ಉಪಸ್ಥಿತರಿದ್ದರು.

ಎನ್.ಬಿ. ಕಾಳೆ ನಿರೂಪಿಸಿದರು. ಸಿ.ಎಸ್. ಮರಳಿಹಳ್ಳಿ ಸ್ವಾಗತಿಸಿದರು. ಸಿದ್ದೇಶ್ವರ ಹುಣಸಿಕಟ್ಟಿಮಠ ವಂದಿಸಿದರು.

## ಕಿರುಸುದ್ದಿ

### ಅಕ್ರಮ ಚಟುವಟಿಕೆಗಳ ಕಡಿವಾಣಕ್ಕೆ ಆಗ್ರಹ



**ಗೋಕಾಕ:** ನಗರದ ಹೈಸ್ಕೂಲ್ ರಸ್ತೆಯಲ್ಲಿ (ಕಿಲ್ಲಾ ಹತ್ತಿರ) ನಿರ್ಮಾಣ ಮಾಡಿದ ಹೊಸ ಬ್ರಿಡ್ಜ್ ಮೇಲೆ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಸ್ಥಳೀಯರು ಪೋಲಿಸ್ ಠಾಣೆಗೆ ಮನವಿ ಮಾಡಿದ್ದಾರೆ. ಶಿಂಗಳಾಪೂರ ಬಂಗಲೇ, ಶಿಂಗಳಾಪೂರ ಹಾಗೂ ಲೋಳಸೂರ ಗ್ರಾಮಕ್ಕೆ ನಿತ್ಯ ಸಾರ್ವಜನಿಕರು ಸಂಚರಿಸುತ್ತಿದ್ದು, ಅಲ್ಲದೇ ಗೋಕಾಕ ನಗರದ ಸಾರ್ವಜನಿಕರು ಬೆಳಗ್ಗೆ, ಸಂಜೆ ವಾಯುವಿಹಾರಕ್ಕೆ ತೆರಳುತ್ತಾರೆ. ಈ ಬ್ರಿಡ್ಜ್ ಮೇಲೆ ಬೈಕ್, ಕಾರ್ ಮತ್ತು ಆಟೋಎಲ್ಲೆಂದರಲ್ಲಿ ಪಾರ್ಕ್ ಮಾಡಿ ಹಾಡು ಹಚ್ಚಿಕೊಂಡು ಸರಾಯಿ ಕುಡಿಯುತ್ತಿದ್ದು, ಹೀಗಾಗಿ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಕೂಡಲೇ ಕಾನೂನು ಕ್ರಮಕ್ಕೈಗೊಳ್ಳಬೇಕು ಎಂದು ಪೋಲಿಸರಿಗೆ ಮನವಿ ಸಲ್ಲಿಸಿದರು. ರೈತ ಹೋರಾಟಗಾರ ಮಂಜುನಾಥ ಪೂಜೇರಿ ಸೇರಿದಂತೆ ಅನೇಕರು ಇದ್ದರು.

### ಇಬ್ಬರು ರೌಡಿಗಳಿಗೆ ಗಡಿಪಾರು ಆದೇಶ

**ಬೆಳಗಾವಿ:** ಕೊಲೆ ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಿ ಕಾನೂನು ಸುವ್ಯವಸ್ಥೆಗೆ ಭಂಗ ತರುವಂತ ಕೆಲಸ ಮಾಡುತ್ತಿದ್ದ ಹುಕ್ಕೇರಿ ತಾಲೂಕಿನ ಇಬ್ಬರು ಪುಡಿ ರೌಡಿಗಳಿಗೆ ಗಡಿಪಾರು ಆದೇಶ ಮಾಡಿ ಬೆಳಗಾವಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕೆ ರಾಮರಾಜನ್ ಆದೇಶ ಮಾಡಿದ್ದಾರೆ.
ಹುಕ್ಕೇರಿ ತಾಲೂಕಿನ ಇಂಗಳಿ ಗ್ರಾಮದ ಲಾಡಜಿಸಾಬ ಗಜಬರಸಾಬ ಮುಲ್ಲಾನಿ ಇತನಿಗೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಸಾವಳಗಿ ಪೋಲಿಸ್ ಠಾಣೆ ವ್ಯಾಪ್ತಿಗೆ ಹಾಗೂ ಹತ್ತರಗಿ ಗ್ರಾಮದ ಆನಂದಪೂರ ನಗರದ ಪಾರಿಷ ಉರ್ಫ ಪ್ರಶಾಂತ ಸುರೇಶ ನಾಶಿಪುಡಿ ಇತನಿಗೆ ಧಾರವಾಡ ಉಪ ನಗರ ಪೋಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಿ ಬೆಳಗಾವಿ ಎಸ್ಪಿ ರಾಮರಾಜನ ಅವರು ಆದೇಶ ಹೊರಡಿಸಿದ್ದಾರೆ.

### ಸಿಬಿಎಸ್ಇ ಟಾಪರ್ಸ್ ಅಭಿನಂದನಾ ಸಮಾರಂಭ



**ಬೆಳಗಾವಿ:** 2025-26ನೇ ಸಾಲಿನ ಸಿಬಿಎಸ್ಇ ಟಾಪರ್ಸ್ ಅಭಿನಂದನಾ ಸಮಾರಂಭವು ವೇಣುಗ್ರಾಮ್ ನಾರ್ತ್ ಕರ್ನಾಟಕ ಸಹೋದಯ ಸಂಸ್ಥೆ ವತಿಯಿಂದ ಬೆಳಗಾವಿ ಖಾಸಗಿ ಹೊಟೆಲ್‌ನಲ್ಲಿ ಮಂಗಳವಾರ ನಡೆಯಿತು.
ಸಿಬಿಎಸ್ಇ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ವಿದ್ಯಾರ್ಥಿಗಳ ಈ ಅದ್ಭುತ ಸಾಧನೆ ಎಲ್ಲರಿಗೂ ಪ್ರೇರಣೆಯಾಗಲಿ ಎನ್ನುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತು. ಸಂಸ್ಥೆಯ ಅಧ್ಯಕ್ಷೆ ದೇವಯಾನಿ ದೇಸಾಯಿ, ಕಾರ್ಯದರ್ಶಿ ಲಕ್ಷ್ಮೀ ಇಂಚಲ, ಖಜಾಂಚಿ ಪಂಢರಿನಾಥ ಖವಾರೆ, ಉಪಕಾರ್ಯದರ್ಶಿ ಡಾ.ಬಿ.ಅನಿಲಕುಮಾರ್ ಹಾಗೂ ಉಪಾಧ್ಯಕ್ಷೆ ವರ್ಷಾ ಗಾಯೋಂಕರ್ ಹಾಗೂ ಸಿಬಿಎಸ್ ಸಿ ಶಾಲೆಗಳ ಪ್ರಾಚಾರ್ಯರು ಉಪಸ್ಥಿತರಿದ್ದರು.

## ನಿಧನ ಸುದ್ದಿ

### ದುರಗವ್ವ ಉದ್ದಪ್ಪನವರ



**ಗೋಕಾಕ:** ತಾಲೂಕಿನ ಕೌಜಲಗಿ ನಿವಾಸಿ ದುರಗವ್ವ ವಸಂತ ಉದ್ದಪ್ಪನವರ(82) ನಿಧನರಾದರು. ಮೃತರು ಗೋಕಾಕ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ಅಶೋಕ ಉದ್ದಪ್ಪನವರ ಸೇರಿದಂತೆ ನಾಲ್ಕು ಜನ ಸುಪುತ್ರರು, ಓರ್ವ ಸುಪುತ್ರಿ, ಮೊಮ್ಮಕ್ಕಳು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಯರಗಟ್ಟಿ: ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಧೀಶರಾದ ಮಂಜುನಾಥ ನಾಯ್ಕ ಪಟ್ಟಣಕ್ಕೆ ಭೇಟಿ ನೀಡಿ ನ್ಯಾಯಾಲಯದ ನಿರ್ಮಾಣದ ಸ್ಥಳ ಪರಿಶೀಲಿಸಿದರು. ಸವದತ್ತಿ ಹಿರಿಯ ಸಿವಿಲ್ ನ್ಯಾ.ಸಿದ್ದರಾಮ ಟಿ.ಪಿ., ಕಿರಿಯ ಸಿವಿಲ್ ನ್ಯಾ. ಕೃಷ್ಣಪ್ಪ ಪಮ್ಮಾರ, ತಹಶೀಲ್ದಾರ್ ಎಂ.ವಿ.ಗುಂಡಪ್ಪಗೋಳ, ಲೋಕೋಪಯೋಗಿ ಇಲಾಖೆ ಅಧಿಕಾರಿ ಪ್ರಕಾಶಗೌಡ ಪಾಟೀಲ, ಸರ್ವೇ ಅಧಿಕಾರಿಗಳಾದ ಸಂಜು ಕಡ್ಲಾಸಕರ, ದೇವೇಂದ್ರ ಮುಗಳಿ, ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷ ವಿ.ಜಿ.ಬಿರಾದಾರ ಪಾಟೀಲ, ನ್ಯಾಯವಾದಿಗಳಾದ ಎಂ.ಎಂ.ಮಡಿವಾಳರ, ಎಸ್.ಎನ್.ರಾಯರ, ಎನ್.ಐ.ನೇಗಿನಾಳ, ಐ.ಬಿ.ಗೌಡರ, ಸಿದ್ದು ಮಾಳಕ್ಕನವರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಉತ್ತಮ ಸಮಾಜ ನಿರ್ಮಾಣದ ಗುರಿ ಇರಲಿ

**ಚಿಕ್ಕೋಡಿ:** ಆಧುನಿಕ ಸಮಾಜದಲ್ಲಿ ಮಾದಕವಸ್ತುಗಳಾದ ಗಾಂಜಾ, ಕೊಕೇನ್, ಚರಸ್, ಅಫೀಮು ಸೇವನೆಯಿಂದ ಯುವ ಜನತೆ ದಾರಿ ತಪ್ಪುತ್ತಿದ್ದಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ಆಲೋಚನೆಯೊಂದಿಗೆ ಉತ್ತಮ ಸಮಾಜ ನಿರ್ಮಾಣದ ಗುರಿ ಹೊಂದಬೇಕು ಎಂದು ಚಿಕ್ಕೋಡಿ ಪಿಎಸ್ಐ ಬಸಗೌಡ ನೇರ್ಲಿ ಹೇಳಿದರು.
ಪಟ್ಟಣದ ಕೆಎಲ್ಇ ಸಂಸ್ಥೆಯ ಬಸಪ್ರಭು ಕೋರೆ ಪದವಿ ಮಹಾವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಎನ್ಎಸ್ಎಸ್ ಘಟಕ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ ಮಾದಕದ್ರವ್ಯ ವ್ಯಸನ ತಡೆ ಜಾಗೃತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುಡಿ,ಯುವ ಜನತೆ ದೇಶದ ದೊಡ್ಡ ಸಂಪತ್ತು. ಉತ್ತಮ ಸಲಹೆ ಹಾಗೂ ಮಾರ್ಗದರ್ಶನ ಮೂಲಕ ಒಳ್ಳೆಯ ಬದುಕನ್ನು ಯುವ ಜನತೆ ಕಟ್ಟಿಕೊಳ್ಳಬೇಕು ಎಂದರು. ಯುವ ನಾಯಕ ಚೇತನ ಪಾಟೀಲ ಮಾತನಾಡಿ, ಮಾದಕ ವ್ಯಸನದಿಂದ ಮಾನಸಿಕ ಹಾಗೂ ದೈಹಿಕವಾಗಿ ತೊಂದರೆ ಅನುಭವಿಸಬೇಕಾಗುತ್ತದೆ. ಮಾದಕ ವ್ಯಸನಕ್ಕೆ ವಿದ್ಯಾರ್ಥಿಗಳು ದಾಸರಾಗುವದನ್ನು ತಪ್ಪಿಸಬೇಕಿದೆ ಎಂದರು.ಕಾಲೇಜಿನ ಪ್ರಾಚಾರ್ಯ ಬಿ ಜಿ ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥ ಸದಾಶಿವ ಹಾದಿಮನಿ, ಎನ್ಸಿಸಿ ಅಧಿಕಾರಿ ಲೆಫ್ಟಿನೆಂಟ್ ಸಿದ್ದಣ್ಣಾ ನಾಯಕ, ದಿವ್ಯಶ್ರೀ ನೇರ್ಲಿ, ಸುಕನ್ಯಾ ಮನಗುತ್ತೆ, ಸೃಷ್ಠಿ ಅಮ್ಮಣಗಿ ಮುಂತಾದವರು ಇದ್ದರು.



ಚಿಕ್ಕೋಡಿ: ಪಟ್ಟಣದ ಕೆಎಲ್ಇ ಸಂಸ್ಥೆಯ ಬಸಪ್ರಭು ಕೋರೆ ಪದವಿ ಮಹಾವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಎನ್ಎಸ್ಎಸ್ ಘಟಕ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಮಾದಕದ್ರವ್ಯ ವ್ಯಸನ ತಡೆ ಜಾಗೃತಿ ಕಾರ್ಯಕ್ರಮ ಜರುಗಿತು.

ಪ್ರಗತಿ ಪರಿಶೀಲನಾ ಸಭೆ | ಅಧಿಕಾರಿಗಳಿಗೆ ಜಿಪಂ ಸಿಇಒ ಸೂಚನೆ

## ಯೋಗ, ಆಯುಷ್ ಪದ್ಧತಿ ಬಲವರ್ಧನೆಗೊಳಿಸಿ

**ಬೆಳಗಾವಿ:** ಜಿಲ್ಲೆಯ ಎಲ್ಲ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಾಲೆಗಳಲ್ಲಿ ಯೋಗ ಮತ್ತು ಆಯುಷ ಪದ್ಧತಿಗಳ ಬಲವರ್ಧನೆಗೊಳಿಸುವ ಪ್ರಯುಕ್ತ ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ತಂಡದವರು ಎಲ್ಲ ತಾಲೂಕುಗಳ ದೈಹಿಕ ಶಿಕ್ಷಕರಿಗೆ ಯೋಗ ತರಬೇತಿ ನೀಡುವ ಮೂಲಕ ಕಡ್ಡಾಯವಾಗಿ ಶಾಲಾ ಮಕ್ಕಳಿಗೆ ಆರೋಗ್ಯ ಸುಧಾರಣೆ ನಿಟ್ಟಿನಲ್ಲಿ ಸರಳ ಯೋಗಾಸನಗಳು ಮತ್ತು ಆಯುಷ್ ಗಿಡ ಮೂಲಿಕೆಗಳ ಬಗ್ಗೆ ಪ್ರಾತ್ಯಕ್ಷಿತೆ ನೀಡುವ ಮೂಲಕ ಬಲವರ್ಧನೆಗೊಳಿಸಬೇಕೆಂದು ಜಿಪಂ ಸಿಇಒ ರಾಹುಲ್ ಶಿಂಧೆ ಅಧಿಕಾರಿಗಳಿಗೆ ಸೂಚಿಸಿದರು.
ಮಂಗಳವಾರ ಇಲ್ಲಿನ ಜಿಪಂ ಸಭಾಂಗಣದಲ್ಲಿ ಆಯುಷ್ ಇಲಾಖೆ ಜಿಲ್ಲೆ ಎಲ್ಲ ವೈದ್ಯಾಧಿಕಾರಿಗಳಿಗೆ ಹಮ್ಮಿಕೊಂಡಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಜಿಲ್ಲಾ ಆಯುಷ್ ಅಧಿಕಾರಿ ಡಾ.ಶ್ರೀಕಾಂತ ಸುಣಧೋಳಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ, ಆಸ್ಪತ್ರೆ ಚಿಕಿತ್ಸಾಲಯಗಳ ಬಗ್ಗೆ ಸಭೆಗೆ ಮಾಹಿತಿ ನೀಡಿ, ಅದರಂತೆ 2025-26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕೈಗೊಂಡಿರುವ ಆಯುಷ್ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಮುಂದುವರೆದು, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ವೈದ್ಯಾಧಿಕಾರಿಗಳು ತಮ್ಮ ಅಧೀನದಲ್ಲಿ ಬರುವ ಕನಿಷ್ಟ 3 ವಸತಿ ಶಾಲೆಗಳ



ವಸತಿ ನಿಲಯ ದತ್ತು ಪಡೆದು ಅಲ್ಲಿರುವ ಮಕ್ಕಳಿಗೆ ನಿಯಮಿತ ಆರೋಗ್ಯ ತಪಾಸಣೆ, ಔಷಧ ವಿತರಣೆ ಮತ್ತು ಯೋಗಗಳ ಬಗ್ಗೆ ಮಾಹಿತಿ ನೀಡಿ ದತ್ತಾಂಶ ಸಂಗ್ರಹಣೆ ಮಾಡಲು ನಿರ್ದೇಶನ ನೀಡಿದರು.
ಜಿಲ್ಲೆಯಲ್ಲಿನ ಆಯುಷ ವೈದ್ಯರು ಆಯುಷ್ ಪದ್ಧತಿ ಮುಖ್ಯ ವಾಹಿನಿಗೆ ತರಲು ಜನರು, ಜನಪ್ರತಿಧಿಗಳ ಜೊತೆಗೆ ಉತ್ತಮ ಸಂಬಂಧ ಏರಿಸಿಕೊಂಡು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಈ ಔಷಧ ಪದ್ಧತಿ ತಲುಪಿಸಲು ಸೂಚಿಸಿದರು.
ಕೇಂದ್ರ ಪುರಸ್ಕೃತ ಯೋಜನೆಯಡಿ ಬರುವ ಆಯುಷ್ ಇಲಾಖೆ ಕಾರ್ಯಕ್ರಮ ಜಿಲ್ಲೆಯಲ್ಲಿ ಉತ್ತಮ ರೀತಿಯ ಐಇಸಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮುಖಾಂತರ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅವಶ್ಯಕವಾಗಿದೆ. ಪ್ರಸ್ತುತಲಭ್ಯವಿರುವ ಐಇಸಿ ಅನುದಾನ ಬಳಸಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಸೂಚನೆ ನೀಡಿದರು.ಜಿಲ್ಲಾ, ತಾಲೂಕಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆಗಳ ಮಾಹಿತಿ ಪಡೆದುಕೊಂಡ ವ್ಯವಸ್ಥೆಯಲ್ಲಿ ಪಂಚಕರ್ಮ, ಅಗ್ನಿಕರ್ಮಗಳಂತಹ ಚಿಕಿತ್ಸೆ ನೀಡುತ್ತಿರುವ ಬಗ್ಗೆ ಮತ್ತು ರಾಜ್ಯದಲ್ಲಿ ಪ್ರಥಮವಾಗಿ ಜಿಲ್ಲಾ ಆಯುಷ್ ಆಸ್ಪತ್ರೆ ಬೆಳಗಾವಿಯಲ್ಲಿ ಜೀವಕ ನೇತ್ರ ವಿಭಾಗದಲ್ಲಿ ಆಶಾ ಕಿರಣ-ದೃಷ್ಟಿ ಕೇಂದ್ರ ವಿಸ್ತರಿಸಿದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲೆಯ ಯಾವದೇ ಚಿಕಿತ್ಸಾಲಯ, ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಔಷಧ ಕೊರತೆ ಆಗದಂತೆ ನೋಡಿಕೊಳ್ಳಲು ತಿಳಿಸಿದರು. ರಾಜ್ಯ ಆಯುಷ್ ಇಲಾಖೆ ಸಮನ್ವಯ ಅಧಿಕಾರಿ ಡಾ.ಚಂದ್ರಶೇಖರ ಸಿದ್ದಾಪೂರ, ಎಲ್ಲ ಆಯುಷ್ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

### ಯೋಗ ತರಬೇತಿ ಶಿಬಿರ ಮೇ 8ರಿಂದ

**ಘಟಪ್ರಭಾ:** ಜೈಂಟ್ಸ ಗ್ರುಪ್ ಆಫ್ ಘಟಪ್ರಭಾ ಹಾಗೂ ಗೋಕಾಕ ಪತಂಜಲಿ ಯೋಗ ಸಮಿತಿ ಸಂಯುಕ್ತ ಆಶ್ರಯದಲ್ಲಿ ಉಚಿತ ಇಂಟಿಗ್ರೇಟೆಡ್ ಯೋಗ ತರಬೇತಿ ಶಿಬಿರ ಮೇ 8ರಿಂದ ಬೆಳಗ್ಗೆ 5.30ರಿಂದ 7ರವರೆಗೆ ಯಲ್ಲಾಲಿಂಗೇಶ್ವರ ಮುಗಳಖೋಡ ಶಾಖಾ ಮಠ ಘಟಪ್ರಭಾದಲ್ಲಿ ಪ್ರಾರಂಭವಾಗಲಿದೆ.ಈ ಶಿಬಿರದ ಪ್ರಾರಂಭೋತ್ಸವ ಘಟಪ್ರಭಾದ ವೈದ್ಯ ಡಾ.ವಿಲಾಸ ಬಿ.ನಾಯಿಕವಾಡಿ ನೇತೃತ್ವದಲ್ಲಿ ಮತ್ತು ಘಟಪ್ರಭಾದ ನಾಗರಿಕರ ಸಹಕಾರದೊಂದಿಗೆ ಆಯೋಜಿಸಲಾಗಿದೆ.ಈ ಶಿಬಿರದಲ್ಲಿ ಸೂರ್ಯನಮಸ್ಕಾರ, ಆಸನ, ಪ್ರಾಣಾಯಾಮ, ಅಕ್ಯುಪ್ರೆಶರ್ ಮತ್ತು ಪ್ರಾಕೃತಿಕ ಚಿಕಿತ್ಸೆ ಬಗ್ಗೆ ನುರಿತ ಯೋಗ ಶಿಕ್ಷಕರಿಂದ ಮನದಟ್ಟು ಮಾಡಿ ಕೊಡಲಾಗುವುದು. ಸೈಯ್ಯದ ಬಾಸಿಕ ಅಲಿ ಗುರುಗಳಿಂದ ಭಗವದ್ಗೀತೆ ಶ್ಲೋಕ ಕಲಿಸಿಕೊಡುವರು. ಶಿಬಿರವು ವರ್ಷ ಪೂರ್ತಿ ನಡೆಯುತ್ತಿದ್ದು, ಸಮಸ್ತ ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ಜೈಂಟ್ಸ ಗ್ರುಪ್ ಆಫ್ ಘಟಪ್ರಭಾ ಉಪಾಧ್ಯಕ್ಷ ಶ್ರೀಕಾಂತ ಕುಲಕರ್ಣಿ ಕೋರಿದ್ದಾರೆ.

## ದೇವಸ್ಥಾನಗಳು ಟ್ಯಾಕ್ಸ್ ಕಟ್ಟಲ್ಲ; ಶಾಸಕ ಅಭಯ

**ಬೆಳಗಾವಿ:** ದಕ್ಷಿಣ ಕ್ಷೇತ್ರದಲ್ಲಿ ಇನ್ಮುಂದೆ ದೇವಸ್ಥಾನಗಳ ಮೇಲೆ ವಿಽಸಲಾದ ದುಬಾರಿ ತೆರಿಗೆ ಪಾವತಿಸುವುದಿಲ್ಲ, ಎಂದು ನಗರದ ಶಾಸ್ತ್ರೀನಗರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ದೂರಿಗೆ ಸ್ಪಂದಿಸಿ ಪಾಲಿಕೆ ಅಽಕಾರಿಗಳ ವಿರುದ್ಧ ಶಾಸಕ ಅಭಯ ಪಾಟೀಲ ಅಸಮಾಧಾನಗೊಂಡರು.
ಮಂಗಳವಾರ ನಗರದ ಶಾಸ್ತ್ರೀನಗರದ ಪಾಟಿದಾರ ಭವನದಲ್ಲಿ ಆಯೋಜಿಸಲಾಗಿರುವ, ಜನಸಂಪರ್ಕ ಸಭೆಯಲ್ಲಿ ಸಾರ್ಜಜನಿಕರ ಕುಂದು ಕೊರತೆಗಳ ಬಗ್ಗೆ ವಿಚಾರಿಸಲಾಯಿತು.
ಗೂಡ್ಸ್ ಶೇಡ್ ರಸ್ತೆ, ಶಾಸ್ತ್ರೀ ನಗರ, ಮಹಾದ್ವಾರ ರಸ್ತೆ, ಕಪಿಲೇಶ್ವರ ಕಾಲನಿ, ಹೊಸೂರು, ಓಂ ನಗರ ಮತ್ತು ಶಹಾಪುರದ ಜನರು ಸಮಸ್ಯೆಗಳ ಬಗ್ಗೆ ಸ್ಥಳೀಯರು ಶಾಸಕ ಅಭಯ್ ಪಾಟೀಲ ಅಹವಾಲು ಸ್ವೀಕರಿಸಿದರು.
ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿನ ನಗರಸೇವಕರಾದ ಗಿರೀಶ್ ಧೋಂಗಡಿ, ರಾಜು ಭಾತಕಾಂಡೆ, ರವಿ ಸಾಂಬ್ರೇಕರ, ಜಯಂತ್ ಜಾಧವ್, ಭಾಗವತ್ ಇನ್ನುಳಿದವರೊಂದಿಗೆ ಸುಮಾರು 20ಕ್ಕೂ ಹೆಚ್ಚು ಇಲಾಖೆ ಅಽಕಾರಿಗಳು ಜನಸಂಪರ್ಕ ಸಭೆಯಲ್ಲಿ ಭಾಗಿಯಾಗಿದ್ದರು. ಕೆಲ ಸಮಸ್ಯೆ ಸ್ಥಳದಲ್ಲಿಯೇ ಪರಿಹರಿಸುವ ಕಾರ್ಯ ಮಾಡಲಾಯಿತು. ಇನ್ನುಳಿದ ಉನ್ನತಮಟ್ಟದ ಅಽಕಾರಿಗಳ ವ್ಯಾಪ್ತಿಯಲ್ಲಿ ಬರುವ ಸಮಸ್ಯೆ ಮುಂಬರುವ 15 ದಿನಗಳಲ್ಲಿ ಚರ್ಚಿಸಿ ಪರಿಹರಿಸುವ ಭರವಸೆ ನೀಡಿದರು.
ಮುಂಬರುವ ದಿನಗಳಲ್ಲಿ, ವಡಗಾಂವ, ಖಾಸಭಾಗ, ಟಿಳಕವಾಡಿ, ಹಿಂದವಾಡಿ, ಭಾಗ್ಯನಗರ, ರಾಣಿಚೆನ್ನಮ್ಮ ನಗರ, ಗುರುಪ್ರಸಾದ ಕಾಲನಿಗಳಲ್ಲಿ 4 ವಾರಗಳಲ್ಲಿ ದಕ್ಷಿಣ ಕ್ಷೇತ್ರದಲ್ಲಿ ಜನಸಂಪರ್ಕ ಸಭೆ ನಡೆಯಲಿದೆ.
ಪ್ರತಿ ಮೂರು ತಿಂಗಳಿಗೊಮ್ಮೆ ಸೈಕಲ್ ಯಾತ್ರೆ ಮೂಲಕ ಜನರನ್ನು ಸಂಪರ್ಕಿಸುವ ಕೆಲಸ ಮಾಡುವುದರೊಂದಿಗೆ ಈಗ ಜನಸಂಪರ್ಕ ಸಭೆ ಮೂಲಕ ಜನರ ಅಹವಾಲು ಆಲಿಸಲಾಗುತ್ತಿದೆ ಎಂದರು.
ಇನ್ನು ದೇವಸ್ಥಾನಗಳ ಮೇಲೆ ಅತೀಯಾದ ಕರ ಹೇರಿಕೆ ವಿಷಯ ಜನರಿಂದ ಪ್ರಸ್ತಾಪವಾಗುತ್ತಿದ್ದಂತೆ ಶಾಸಕ ಅಭಯ್ ಪಾಟೀಲ್ ಪಂಚತಾರಾ ಹೋಟೆಲ್‌ಗಳಂತೆ ಹೇರಿರುವ ಕರ ಕಡಿಮೆಗೊಳಿಸಿ ಮೂಲ ಪದ್ಧತಿ ಅನುಸರಿಸಬೇಕು. ಅಲ್ಲದೇ ಬೆಳಗಾವಿ ದಕ್ಷಿಣ ಕ್ಷೇತ್ರದ ದೇವಸ್ಥಾನ ಕರ ನೀಡುವುದಿಲ್ಲ. ಈ ಕುರಿತು ಕಮಿಷ್ನರ್ ಅವರೊಂದಿಗೆ ಮಾತನಾಡುವುದಾಗಿ ಶಾಸಕರು ತಿಳಿಸಿದರು.
ಈ ವೇಳೆ 20ಕ್ಕೂ ಅಽಕ ಇಲಾಖೆಯ ಅಽಕಾರಿಗಳು, ಸ್ಥಳೀಯರು ಸೇರಿದಂತೆ ಸಾರ್ಜಜನಿಕರು ಇತರರು ಇದ್ದರು.

## ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ



**ಖಾನಾಪುರ:** ಹುಟ್ಟಿದ ಮಗುವಿನಿಂದ ಹಿಡಿದು 18 ವರ್ಷ ವಯಸ್ಸಿನ ಯುವಕ-ಯುವತಿಯರು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಬರುತ್ತಾರೆ ಎಂದು ತಾಲೂಕಾ ಆರೋಗ್ಯಾಧಿಕಾರಿ ಡಾ.ಮಹೇಶ ಕಿವಡಸಣ್ಣವರ ಹೇಳಿದರು.
ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ಮಂಗಳವಾರ ತಾಲೂಕು ಮಟ್ಟದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಅಂತರ್ ಇಲಾಖಾ ಸಮನ್ವಯಸಮಿತಿಸಭೆಯಲ್ಲಿ ಮಾತನಾಡಿ, ಇಲಾಖೆ ದಾಖಲೆಗಳ ಪ್ರಕಾರ ತಾಲೂಕಿನ 387 ಅಂಗನವಾಡಿಗಳು, 401 ಶಾಲೆಗಳು, 7 ಪದವಿಪೂರ್ವ ಮಹಾವಿದ್ಯಾಲಯಗಳು ಮತ್ತು 11 ವಸತಿ ನಿಲಯಗಳಲ್ಲಿ ಒಟ್ಟು 49936 ಮಕ್ಕಳಿದ್ದಾರೆ. ಇವರನ್ನು ಈಗಾಗಲೇ ಆರೋಗ್ಯ ಇಲಾಖೆಯಿಂದ ಆರೋಗ್ಯ ತಪಾಸಣೆಗೆ ಒಳಪಡಿಸಲಾಗಿದೆ. ಇವರಲ್ಲಿ ವೈದ್ಯಕೀಯ ನ್ಯೂನ್ಯತೆಗಳಿರುವ 11 ಮಕ್ಕಳನ್ನು ಗುರುತಿಸಿ ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸು ಮಾಡಲಾಗಿದೆ.
ತಹಶೀಲ್ದಾರ್ ಮೂಲಕ ತಲಾ ಒಂದೊಂದು ಇಲಾಖೆಗೆ ಒಂದೊಂದು ಮಗುವಿನ ಜವಾಬ್ದಾರಿ ನೀಡಿ, ಮಕ್ಕಳ ಚಿಕಿತ್ಸೆಗೆ ಗಮನಹರಿಸುವಂತೆ ಸೂಚಿಸಲಾಗಿದೆ ಎಂದರು.ಸಭೆಯಲ್ಲಿ ತಹಶೀಲ್ದಾರ್ ದುಂಡಪ್ಪ ಕೋಮಾರ, ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿ ಗೌರಿ ಕಟಾಪುರಿಮಠ, ಸಮಾಜ ಕಲ್ಯಾಣ ಇಲಾಖೆ ನಿಲಯ ಮೇಲ್ವಿಚಾರಕ ಗಿರೀಶ ಕುರಹಟ್ಟಿ, ಐಇಆರ್‌ಟಿ ಸಂಯೋಜಕ ಶಂಕರ ಕಮ್ಮಾರ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ. ಆರೋಗ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

## ಕುಡಿಯುವ ನೀರಿಗೆ ಆದ್ಯತೆ ನೀಡಿ: ರವಿ

**ಚನ್ನಮ್ಮನ ಕಿತ್ತೂರು:** ತಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ತಾಪಂ ಆಡಳಿತಾಧಿಕಾರಿಗಳು, ಪಶುವೈದ್ಯಕೀಯ ಇಲಾಖೆ ಉಪನಿರ್ದೇಶಕ ರವಿ ಸಾಲಿಗೌಡರ ಹೇಳಿದರು.
ತಾಪಂ ಸಭಾಭವನದಲ್ಲಿ ನಡೆದ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಬೇಸಿಗೆ ಸಮಯದಲ್ಲಿ ನೀರಿನ ಬೇಡಿಕೆ ಹೆಚ್ಚಾಗುವುದು ಸಹಜ. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಪೈಪ್‌ಲೈನ್ ದುರಸ್ತಿ, ಬೋರ್‌ವೆಲ್ ನಿರ್ವಹಣೆ, ಅಗತ್ಯವಿದ್ದಲ್ಲಿ



ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವ ವ್ಯವಸ್ಥೆ ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ಸೂಚಿಸಿದರು.
ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ಮಾತನಾಡಿ, ಜನರಿಗೆ ಶುದ್ಧ ಹಾಗೂ ನಿರಂತರ ಕುಡಿಯುವ ನೀರು ಒದಗಿಸುವುದು ಪ್ರಮುಖ ಕರ್ತವ್ಯ. ಗ್ರಾಮ ಮಟ್ಟದಲ್ಲಿ ಸಮಸ್ಯೆ ಕಂಡುಬಂದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ತ್ವರಿತ ಪರಿಹಾರ ಒದಗಿಸಬೇಕು ಎಂದರು.
ಸಭೆಯಲ್ಲಿ ಆರ್‌ಡಬ್ಲ್ಯೂಎಸ್ ಶಿಕ್ಷಣ, ಪಂಚಾಯತಿ ರಾಜ್, ತೋಟಗಾರಿಕೆ, ಕೃಷಿ, ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಕಾರ್ಯಪ್ರಗತಿ ಪರಿಶೀಲಿಸಲಾಯಿತು. ವಿವಿಧ ಯೋಜನೆಗಳ ಅನುಷ್ಠಾನ ಸ್ಥಿತಿ, ಎದುರಿಸುತ್ತಿರುವ ಸವಾಲುಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಅಧಿಕಾರಿಗಳು ಮಾಹಿತಿ ನೀಡಿದರು.
ಇಲಾಖೆಗಳ ನಡುವೆ ಸಮನ್ವಯ ಬೆಳೆಸಿ ಸಾರ್ವಜನಿಕರಿಗೆಉತ್ತಮಸೇವೆಒದಗಿಸುವಅಗತ್ಯತೆ ಒತ್ತಿ ಹೇಳಲಾಯಿತು. ಸಹಾಯಕ ನಿರ್ದೇಶಕ ಮಹಮ್ಮದ್ ಗೌಸ್ ರಿಸಲ್ದಾರ್, ವಿಜಯ ಪಾಟೀಲ್, ಯೋಜನಾಧಿಕಾರಿ ಗೌಡಪ್ಪ ಗಿರಿಮಲ್ಲಣವರ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

### ಕ ಸಾ ಪ 112 ನೇ ಸಂಸ್ಥಾಪನೆ ದಿನಾಚರಣೆ

**ಯಮಕನಮರಡಿ:** ಹುಕ್ಕೇರಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 5 ರಂದು ನಾಯಿಕ ಸ್ಟುಡೆಂಟ್ ಪೇಡರೇಷನ್ ಹತ್ತರಗಿ ಆನಂದಪೂರ ಶಾಲೆಯ ಸಭಾಭವನದಲ್ಲಿ ದಿ 5 ರಂದು ಕ ಸಾ ಪ 112 ನೇ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು ಉದ್ಘಾಟಕರಾಗಿ ಹಿರಿಯ ಸಾಹಿತಿ ಎಲ್ ವ್ಹಿ ಪಾಟೀಲರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ಎಸ್ತ ಎಮ್ ಶಿರೂರ ಮುಖ್ಯ ಅತಿಥಿಗಳಾಗಿ ಶಿವಗೌಂಡ ಶಂ ಅತ್ಯಾಳಿ, ಶಶಿಕಾಂತ ಹಟ್ಟಿ ಹಾಗೂ ಅತಿಥಿ ಉಪನ್ಯಾಸಕರಾಗಿ ಶಿವಾನಂದ ಮಠಪತಿ ಮಾತನಾಡುತ್ತಾ ಸ್ಥಳೀಯ ಯುವ ಕವಿಗಳನ್ನು ಒಗ್ಗೂಡಿಸಿ ಬೆಳೆಸುವುದೆ ಸಾಹಿತ್ಯ ಪರಿಷತ್ತಿನ ಮುಖ್ಯ ಕಾರ್ಯವಾಗಬೇಕು ಗಡಿಬಾಗದ ಸಾಹಿತಿಗಳನ್ನು ಸಹಿತ ಗುರುತಿಸಬೇಕು ಅಲ್ಲದೆ ಹೆಚ್ಚು ಹೆಚ್ಚಿಗೆ ಮಹಿಳಾ ಸಾಹಿತಿಗಳಿಗೆ ಪ್ರೋತ್ಸಾಹಿಸುವ ಕಾರ್ಯ ಮಾಡಬೇಕು. ಕಲೆ ಸಾಹಿತಿಗಳಿಗೆ ತಮ್ಮದೆ ಆದ ಕವನ ಸಂಕಲನಗಳನ್ನು ಬಿಡುಗಡೆ ಆಗದೇ ಇರುವಂತಹವರಿಗೆ ತಾಲೂಕ ಸಾಹಿತ್ಯ ಪರಿಷತ್ ಕೈಜೋಡಿಸಬೇಕು ಎಂದು ಹೇಳಿದರು. ಪ್ರಾರಂಭದಲ್ಲಿ ತಾಲೂಕ ಸಾಹಿತ್ಯ ಪರಿಷತ್ ಅಧ್ಯಕ್ಷ ಪಿ ಬಿ ಅವಲಕ್ಕಿ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು ಅದರಂತೆ ಎನ್ ಎಸ್ ಎಪ್ ಶಾಲೆಯಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಾಗೂ ಹಿರಿಯ ಮತ್ತು ಕಿರಿಯ ಸಾಹಿತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಕಿರಣ ನೆಸರಿ, ಡಾ. ಪ್ರಕಾಶ ಹೊಸಮನಿ, ಸುಭಾಷ ಘಸ್ತಿ ಹಾಗೂ ವಿನೋದ ಜಗಜಂಪಿ, ಗೀತಾ ಬಸ್ತವಾಡ ರವರು ಭಾಗವಹಿಸಿ ಸನ್ಮಾನ ಸ್ವಿಕರಿಸಿದರು. ಶಾಲೆಯ ಶಿಕ್ಷಕರಾದ ಅರ್ಪಣಾ ಕಂಠಿ ನಿರೂಪಿಸಿದರು ಪಾಟೀಲ ಶಿಕ್ಷಕಿ ವಂದಿಸಿದರು.



### ಲಕ್ಷ್ಮೀ ತಾಯಿ ಫೌಂಡೇಶನ್‌ನಿಂದ ಆರ್ಥಿಕ ನೆರವು



**ಬೆಳಗಾವಿ :** ಹಂಗರಗಾ ಗ್ರಾಮದ ರಾಜು ಭರ್ಮಾ ಪಾಟೀಲ ಮನೆಗೆ ಆಕಸ್ಮಿಕವಾಗಿ ಶಾರ್ಟ್ ಸರ್ಕ್ಯೂಟ್ ನಿಂದ ಬೆಂಕಿ ತಗುಲಿ, ಇಡೀ ಮನೆ ಹಾಗೂ ಸಾಮಗ್ರಿಗಳು ಸುಟ್ಟು ಭಸ್ಮವಾಗಿರುವ ಹಿನ್ನೆಲೆಯಲ್ಲಿ ಲಕ್ಷ್ಮೀ ತಾಯಿ ಫೌಂಡೇಶನ್ ವತಿಯಿಂದ ಆರ್ಥಿಕ ನೆರವು ನೀಡಲಾಯಿತು.
ಮಗಳ ಮದುವೆಗೆಂದು ಮನೆಯಲ್ಲಿ ಧವಸ-ಧಾನ್ಯ, ಹಣ ಸೇರಿದಂತೆ ಸಾಕಷ್ಟು ವಸ್ತು ಕೂಡಿಡಲಾಗಿತು. ಆ ವಸ್ತುಗಳೆಲ್ಲ ಬೆಂಕಿಗೆ ಆಹುತಿಯಾಗಿರುವುದು ಆ ಕುಟುಂಬ ಬೀದಿಗೆ ತಳ್ಳಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮ ಆಪ್ತ ಕಚೇರಿ ಸಿಬ್ಬಂದಿ ಹಾಗೂ ಸ್ಥಳೀಯ ಮುಖಂಡರನ್ನು ಕಳಿಸಿ ಲಕ್ಷ್ಮೀತಾಯಿ ಫೌಂಡೇಶನ್ ವತಿಯಿಂದ ಆರ್ಥಿಕ ನೆರವು ನೀಡಿದರು. ರಾಜು ಪಾಟೀಲ ಕುಟುಂಬಕ್ಕೆ ಈ ನೋವು ಸಹಿಸುವ ಶಕ್ತಿ ಭಗವಂತ ನೀಡಲಿ, ಅವರು ಯಾವುದೇ ಕಾರಣದಿಂದ ಧೃತಿಗೆಡಬಾರದು ಎಂದು ಸಚಿವರು ಪ್ರಾರ್ಥಿಸಿದ್ದಾರೆ.

### ಕಾಂಗ್ರೆಸ್ ಪರ ಪ್ರಚಾರ ಯಶಸ್ವಿ

**ಯಮಕನಮರಡಿ:** ಸ್ಥಳೀಯ ಯುವ ಧುರೀಣರು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಸತೀಶ್ ಜಾರಕಿಹೊಳಿಯವರ ಆಪ್ತ ಸಹಾಯಕರು ಆದ ರವೀಂದ್ರ ಜಿನರಾಳಿ ಅವರು ಸತೀಶ್ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ತಮ್ಮ ಬಳಗದೊಂದಿಗೆ ಒಂದು ವಾರದವರೆಗೆ ಪಕ್ಷದ ಪರ ಪ್ರಚಾರ ಮಾಡಿ ಮತದಾರರ ಮನವಲಿಸಲು ಯಶಸ್ವಿ ಕಂಡಿದ್ದಾರೆ.
ಇವರು ತಮ್ಮ ಹಾಗೂ ಯಮಕನಮರಡಿ ಮತಕ್ಷೇತ್ರದಿಂದ ಅಪಾರ ಯುವಕ ಮಿತ್ರರನ್ನು ಕರೆದುಕೊಂಡು ಕಾಂಗ್ರೆಸ್ ಪರ ಪ್ರಚಾರ ಮಾಡುವಲ್ಲಿ ಯಶಸ್ವಿ ಕಂಡವರಾಗಿದ್ದಾರೆ ಇವರ ಕಾರ್ಯಕ್ಕೆ ಗ್ರಾಮಸ್ಥರು ಅಭಿನಂದಿಸಿದ್ದಾರೆ.



## ಠೇವಣಿ ಮರುಪಾವತಿ ವಿಳಂಬ: ಅಹೋರಾತ್ರಿ ಧರಣಿ

**ಬೈಲಹೊಂಗಲ:** ನಗರದ ಟಿಪ್ಪು ಸುಲ್ತಾನ್ ಕ್ರೆಡಿಟ್ ಸೊಸೈಟಿಯಲ್ಲಿ ಇಟ್ಟಿದ್ದ 1.50 ಲಕ್ಷ ರೂ. ಠೇವಣಿ ಅವಽ ಪೂರ್ಣಗೊಂಡರೂ ಮರುಪಾವತಿಸದೆ ವಿಳಂಬ ದೋರಣೆ ಆರೋಪಿಸಿ, ಕಿಲ್ಲೇದಾರ ಗಲ್ಲಿ ನಿವಾಸಿ ಇಮ್ತಿಯಾಜ್ ಸುತಗಟ್ಟಿ , ಅವರ ಕುಟುಂಬದವರು ಮಂಗಳವಾರ ಉಪವಿಭಾಗಾಽಕಾರಿ ಕಚೇರಿ ಎದುರು ಅಹೋರಾತ್ರಿ ಧರಣಿ ನಡೆಸಿದರು.
ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ರೈತ ಸಂಘಟನೆಗಳ ಬೆಂಬಲದೊಂದಿಗೆ ನಡೆದ ಈ ಪ್ರತಿಭಟನೆಯಲ್ಲಿ, ತಮ್ಮ ಕುಟುಂಬ ಎದುರಿಸುತ್ತಿರುವ ಸಂಕಷ್ಟ ಇಮ್ತಿಯಾಜ್ ವಿವರಿಸಿದರು. ಮಳೆಗಾಲದಲ್ಲಿ ಚರಂಡಿ ನೀರು ಮನೆಗೆ ನುಗ್ಗಿ ದೈನಂದಿನ ಜೀವನವೇ ಸಂಕಷ್ಟಕರವಾಗಿದ್ದು, ರಾತ್ರಿ ನಿದ್ದೆ ಮಾಡಲಾಗದೆ ಭಯದಲ್ಲಿ ಕಾಲ ಕಳೆಯುವಂತಾಗಿದೆ. ಈ ಕುರಿತು ನಗರಸಭೆಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಶಾಶ್ವತ ಪರಿಹಾರ ಸಿಗಲಿಲ್ಲ ಎಂದರು.
ಸಮಾಜ ಸೇವಕ ರಫೀಕ ಬಡೇಘರ, ಕಿತ್ತೂರು ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಶಿವಾನಂದ ಕೋಲಕಾರ ಹಾಗೂ ಪುಣ್ಯಕೋಟಿ ಸಂಘಟನೆಯ ಮಂಜು ಮರಶೆಟ್ಟಿ ಮಾತನಾಡಿ, ಇಮ್ತಿಯಾಜ್ ದೃಷ್ಟಿಹೀನರಾಗಿದ್ದು, ಮನೆಯ ಮುಂಭಾಗದಲ್ಲಿ ಸಣ್ಣ ಡಬ್ಬಿ ಇಟ್ಟುಕೊಂಡು ಉಪಜೀವನ ನಡೆಸುತ್ತಿದ್ದಾರೆ. ಕುಟುಂಬದಲ್ಲಿ ಅಂಗವಿಕಲ ತಾಯಿ, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ತಂಗಿ, ಪತ್ನಿ, ಮೂರು ಪುತ್ರಿಯರು, ಒಬ್ಬ ಪುತ್ರ ಇದ್ದು, ಅಲ್ಪಾದಾಯದಿಂದಲೇ ಜೀವನ ಸಾಗಿಸುತ್ತಿದ್ದಾರೆ. ವಾಸಿಸುತ್ತಿರುವ ಮನೆ ಹಳೆಯದ್ದ, ಶಿಥಿಲಾವಸ್ಥೆಯಲ್ಲಿದೆ.ಯಾವ ಕ್ಷಣದಲ್ಲಾದರೂ ಕುಸಿಯುವ ಭೀತಿ ಇದೆ ಎಂದರು.
ಮನೆ ನಿರ್ಮಾಣಕ್ಕಾಗಿ ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದ ಹಣವನ್ನು ಮರಳಿ ಪಡೆಯಲು ಹಲವಾರು ಬಾರಿ ಸಂಬಂದಿಸಿದ ಇಲಾಖೆಗೆ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ಸಿಗಲಿಲ್ಲ ಎಂದು ಕುಟುಂಬಸ್ಥರು ಆರೋಪಿಸಿದರು.
ಗ್ರಾಹಕ ನ್ಯಾಯಾಲಯದಿಂದ ಠೇವಣಿ ಹಣ ಮರುಪಾವತಿಸಲು ಆದೇಶ ಬಂದಿದ್ದರೂ ಸಂಸ್ಥೆ ನಿರ್ಲಕ್ಷ್ಯಕ್ಕೆ ಅವರು ಆಕ್ರೋಶ ವ್ಯಕ್ತಪಡಿಸಿದರು.ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಉಪವಿಭಾಗಾಽಕಾರಿ ಪ್ರವೀಣ ಜೈನ, ಸಂಬಂಧಪಟ್ಟ ಅಽಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಸಮಸ್ಯೆ 24 ಗಂಟೆಗಳ ಒಳಗೆ ಬಗೆಹರಿಸಲು ಗಡುವು ನೀಡಿದರು. ಸಮಸ್ಯೆಗೆ ಶೀಘ್ರ ಪರಿಹಾರ ದೊರಕಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.
ಈ ವೇಳೆ ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು, ರಯತ ಸಂಘಟನೆಗಳ ಸದಸ್ಯರು ಇದ್ದರು.



## ಕಿರುಸುದ್ದಿ

### ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ: ಪಾಟೀಲ



**ಬೆಳಗಾವಿ:** ಇಡೀ ದೇಶದ ಗಮನ ಸೆಳೆದಿದ್ದ ಪಂಚರಾಜ್ಯಗಳ ಚುನಾವಣೆಲ್ಲಿ ಭಾರತೀಯ ಜನತಾ ಪಕ್ಷ ಜಯಭೇರಿ ಬಾರಿಸಿರುವುದರ ಹಿಂದೆ ಪ್ರಧಾನಿ ಮೋದಿ, ಅಮಿತ್ ಶಾ ಚಾಣಾಕ್ಷತೆ ಬಹಳ ಪ್ರಮುಖವಾಗಿದೆ. ದೊಡ್ಡ ರಾಜ್ಯವಾಗಿರುವ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಡಬಲ್ ಸೆಂಚುರಿ ಬಾರಿಸಿದ್ದರೆ, ಅಸ್ಸಾಂನಲ್ಲಿ ಶತಕದ ಸಾಧನೆಯೊಂದಿಗೆ ಮತ್ತೆ ಪುನಃ ಅಽಕಾರ ಪಡೆದಿದೆ. ಪುದುಚೇರಿಯಲ್ಲಿಯೂ ನಮದೇ ಸರ್ಕಾರ ಇತ್ತು. ಅಲ್ಲಿಯೂ ಜನ ಮತ್ತೊಮೆ ಆಶೀರ್ವಾದ ಮಾಡಿದ್ದಾರೆ. ಒಟ್ಟಿನಲ್ಲಿ, ಈ ಬಿಜೆಪಿ ಈ ಅಭೂತಪೂರ್ವ ಗೆಲುವಿನೊಂದಿಗೆ ದೇಶದಲ್ಲಿ ಅತೀ ಹೆಚ್ಚು ರಾಜ್ಯಗಳಲ್ಲಿ ಅಽಕಾರಕ್ಕೆ ಬಂದಂತಾಗಿದೆ ಎಂದು ನಿಕಟ ಪೂರ್ವ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ ಹೇಳಿದರು.

### ಬಿಜೆಪಿ ಗೆಲುವು, ಅಭಿವೃದ್ಧಿಗೆ ಸಂದ ಜಯ



**ಬೆಳಗಾವಿ:** ಪಂಚರಾಜ್ಯಗಳ ಚುನಾವಣೆ ಮೂರು ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷ ಅಭೂತಪೂರ್ವ ಗೆಲುವು ದಾಖಲಿಸಿರುವುದು. ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ ಎಂದು ಸಮಾಜ ಸೇವಕರು ಮಧನಕುಮಾರ ಭೈರಪ್ಪನವರ ಹೇಳಿದರು. ಬಿಜೆಪಿ ಗೆಲುವು ಸಾಧಿಸಿದ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಮೂರು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿರುವುದರಿಂದ ಡಬಲ್ ಇಂಜಿನ್ ಸರ್ಕಾರದ ರೂಪದಲ್ಲಿ ರಾಜ್ಯಗಳಲ್ಲಿ ಅಭಿವೃದ್ಧಿಯ ಶಕೆ ಆರಂಭವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ಜೋಡಿ ಮತ್ತೊಮೆ ಮೋಡಿ ಮಾಡಿರುವುದು ಸಂತಸ ತಂದಿದೆ. ಇಬ್ಬರೂ ಮಹಾನ್ ನಾಯಕರಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಎಂದರು.

### ಅರ್ಜಿ ಆಹ್ವಾನ

**ಬೆಳಗಾವಿ:** ಅಥಣಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ಅಂಗನವಾಡಿ ಕಂ ಕ್ರೀಚ್ ಸಹಾಯಕಿಯರ ಹೊಸದಾಗಿ ಪ್ರಾರಂಭಿಸುವ ಅಂಗನವಾಡಿ ಕಂ ಕ್ರೀಚ್ ಕೇಂದ್ರ ಹುದ್ದೆಗೆ ಗೌರವಧನದ ಆಧಾರದ ಮೇಲೆ ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಿಂದ ಪಡೆಂದುಕೊಂಡು ಮೇ 12ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ದೂ:08289-295150 ಗೆ ಸಂಪರ್ಕಿಸಲು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

### ಉದ್ಯೋಗ ಮೇಳ ಇಂದು

**ಬೆಳಗಾವಿ:** ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವತಿಯಿಂದ ಮೇ 6ರಂದು ಬೆಳಗ್ಗೆ 9.30ಕ್ಕೆ ಖಾಸಗಿ ಕಂಪನಿಗಳಿಂದ ನೇರ ಸಂದರ್ಶನ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು https://forms.gle/jBgZKYbzuaFuhc997 ವೆಬ್ ಸೈಟ್‌ನಲ್ಲಿ ಹೆಸರನ್ನು ನೊಂದಾಯಿಸಿಕೊಲು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

### ಜಿಲ್ಲಾಧ್ಯಕ್ಷರಾಗಿ ಶಿವಲೀಲಾ, ಕಾರ್ಯಾಧ್ಯಕ್ಷೆಯಾಗಿ ಲೀಲಾವತಿ ನೇಮಕ



**ಚಿಕ್ಕೋಡಿ:** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ, ಸಾಹಿತ್ಯಿಕ ಪರಿಷತ್ ಬೆಂಗಳೂರು ಚಿಕ್ಕೋಡಿ ಜಿಲ್ಲಾಧ್ಯಕ್ಷರಾಗಿ ಕೋಥಳಿ ವಲಯದ ಸಮೂಹ ಸಂಪನ್ಮೂಲ ವ್ಯಕ್ತಿ ಶಿವಲೀಲಾ ಹಿಪ್ಪರಗಿ, ಜಿಲ್ಲಾ ಕಾರ್ಯಾಧ್ಯಕ್ಷೆಯಾಗಿ ಚಿಕ್ಕೋಡಿ ತಾಲೂಕು ಖಜಾನೆ ಇಲಾಖೆ ಲೀಲಾವತಿ ನಾಯಿಕ, ಜಿಲ್ಲಾ ಖಜಾಂಚಿಯಾಗಿ ಮಂಗಲ ಅಂಬಾಯಿ, ರಾಜ್ಯ ಗೌರವಾಧ್ಯಕ್ಷರಾಗಿ ಎಲ್.ಬಿ.ಲಕ್ಕಣ್ಣವರ, ರಾಜ್ಯ ಪ್ರದಾನ ಕಾರ್ಯದರ್ಶಿಯಾಗಿ ಪರವೀನಬಾನು ಬುಳ್ಳನ್ನವರ, ಪ್ರದಾನ ಕಾರ್ಯದರ್ಶಿಯಾಗಿ ಪರಶುರಾಮ ಹರಿಜನ, ಗೌರವಾಧ್ಯಕ್ಷರಾಗಿ ಎಂ.ಬಿ.ಪಾಟೀಲ ನೇಮಕವಾಗಿದ್ದಾರೆ ಎಂದು ರಾಜ್ಯಾಧ್ಯಕ್ಷೆ ರಮಾ.ಆರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಖಾನಾಪುರ:** ರಾಜ್ಯದಲ್ಲಿ ಪಿಡಿಒಗಳ ಅಸಹಜ ಸಾವು ಮತ್ತು ಪಿಡಿಒಗಳ ಮೇಲಿನ ಹಲ್ಲೆ ಪ್ರಕರಣಗಳಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಆಗ್ರಹಿಸಿ ಪಿಡಿಒಗಳ ಸಂಘದಿಂದ ಮಂಗಳವಾರ ಪಟ್ಟಣದ ತಾಲೂಕು ಪಂಚಾಯತಿಯಲ್ಲಿ ತಾಪಂ ಇಒ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

## ಮಮತಾ ಆಡಳಿತದ ವಿರುದ್ಧ ಜನರಲ್ಲಿ ಅಸಮಾಧಾನ

**ಬೆಳಗಾವಿ:** ಪಂಚ ಪ್ರಾಂತ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ದೇಶದ ರಾಜಕೀಯ ಧೋರಣೆಗೆ ಸ್ಪಷ್ಟ ದಿಕ್ಕು ತೋರಿಸಿದ್ದು, ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಹಿಂದೂಪರ ಅಲೆ ಸ್ಪಷ್ಟವಾಗಿ ವ್ಯಕ್ತವಾಗಿದೆ ಎಂದು ಬಿಜೆಪಿ ಮುಖಂಡ ಕಿರಣ ಜಾದವ ಹೇಳಿದ್ದಾರೆ. ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಒಟ್ಟಾರೆ ಚುನಾವಣೆಯಲ್ಲಿ ಜನತೆ ಅಭಿವೃದ್ಧಿ, ಭದ್ರತೆ ಮತ್ತು ಸಮಾನತೆ ಪರ ಮತ ಚಲಾಯಿಸಿದ್ದಾರೆ. ಆದರೆ ಪಶ್ಚಿಮ ಬಂಗಾಳದಲ್ಲಿ ಮಾತ್ರ ಹಿಂದೂ ಸಮುದಾಯದ ಪರ ಒಲವು ಸ್ಪಷ್ಟವಾಗಿ ಗೋಚರಿಸಿದ್ದು, ಮತದಾರರು ತಮ್ಮ ಅಸ್ತಿತ್ವ , ಹಕ್ಕುಗಳ ರಕ್ಷಣೆಗೆ ಈ ಬಾರಿ ನಿರ್ಧಾರ ಕೈಗೊಂಡಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಆಡಳಿತದ ವಿರುದ್ಧ ಜನರಲ್ಲಿ ಅಸಮಾಧಾನ ಹೆಚ್ಚಾಗಿತ್ತು. ಕಾನೂನು ಸುವ್ಯವಸ್ಥೆ ಹಿನ್ನಡೆ, ರಾಜಕೀಯ ಹಿಂಸಾಚಾರ ಹಾಗೂ ಮಹಿಳಾ ಭದ್ರತೆ ಸಮಸ್ಯೆಗಳು ಮತದಾರರ ನಿರ್ಧಾರಕ್ಕೆ ಕಾರಣವಾಗಿದ್ದು, ಅದರ ಪರಿಣಾಮವಾಗಿ ಹಿಂದೂಪರ ಅಲೆ ರೂಪದಲ್ಲಿ ಫಲಿತಾಂಶ ಹೊರಬಂದಿದೆ ಎಂದರು.



ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಮೇಲೆ ಜನತೆ ಇಟ್ಟಿರುವ ವಿಶ್ವಾಸ ಈ ಫಲಿತಾಂಶದಲ್ಲಿ ಪ್ರತಿಬಿಂಬಿತವಾಗಿದೆ. ಇದೇ ಧೋರಣೆ ಮುಂದಿನ ದಿನಗಳಲ್ಲಿ ಇತರ ರಾಜ್ಯಗಳಲ್ಲಿಯೂ ಮುಂದುವರಿಯಲಿದೆ ಎಂದು ಜಾದವ ವಿಶ್ವಾಸ ವ್ಯಕ್ತಪಡಿಸಿದರು.



**ರಾಯಬಾಗ:** ಇಲ್ಲಿಯ ಗ್ರಾಮ ದೇವತೆ ಮಹಾಲಕ್ಷ್ಮೀ ದೇವಿ ಜಾತ್ರಾ ನಿಮಿತ್ತ ಪಟ್ಟಣದ ಮಹಾಲಕ್ಷ್ಮೀ ದೇವಿ ಆವರಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮೇ 6ರಮದು ಮಹಾಲಕ್ಷ್ಮೀ ದೇವಿ ಜಾತ್ರೆ ನಡೆಯಲಿದ್ದು, ಕನೇರಿ ಮಠ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳು ಆಗಮಿಸುವವರು ಎಂದು ಕಮಿಟಿ ಸದಸ್ಯರು ಹೇಳಿದರು. ದೇವಿ ಹಕ್ಕುದಾರ ಇನಾಮದಾರ, ಪಾಟೀಲ, ಕುಲಕರ್ಣಿ, ದೇಸಾಯಿ, ಮೇತ್ರಿ, ಕುಂಬಾರ, ಹೆಗಡೆ, ನಾಯಿಕ, ಮತ್ತು ಒಟ್ಟು ಹಳಬರು, ಬಡಿಗೇರ, ಅವಳಿ, ದಾವಣೆ, ಮಾನೆ, ಇರಗಾರ, ಅಸೋದೆ ಇನ್ನುಳಿದ ಹಕ್ಕುದಾರರು, ಕಮಿಟಿ ಸದಸ್ಯರು ಇದ್ದರು.

## ಪ್ರಾದೇಶಿಕ ಆಯುಕ್ತರಿಗೆ ಸ್ಥಳೀಯರ ಮನವಿ

# ಕಪಿಲತೀರ್ಥ ಕೆರೆ ಹಸ್ತಾಂತರಕ್ಕೆ ಒತ್ತಾಯ

**ಬೆಳಗಾವಿ:** ನಗರದಲ್ಲಿರುವ ಕಪಿಲತೀರ್ಥ ಕೆರೆಯ ಆವರಣದಲ್ಲಿ ಇತ್ತೀಚೆಗೆ ಗೋಡೆ ಕುಸಿದು ಇಬ್ಬರು ಬಾಲಕರು ಮೃತಪಟ್ಟ ಘಟನೆ ಇಡೀ ನಗರವನ್ನು ಬೆಚ್ಚಿಬೀಳಿಸಿದೆ. ಈ ಘಟನೆಯಿಂದ ಎಚ್ಚೆತ್ತುಕೊಂಡಿರುವ ಸ್ಥಳೀಯರು ಹಾಗೂ ಭೂಮಾಲೀಕರು, ಕೆರೆಯನ್ನು ಕೂಡಲೇ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಅಭಿವೃದ್ಧಿಪಡಿಸುವಂತೆ ಆಗ್ರಹಿಸಿ ಪ್ರಾದೇಶಿ ಆಯುಕ್ತರಿಗೆ ಮನವಿ ಸಲ್ಲಿಸಿದರು.



ಮಂಗಳವಾರ ನಗರದ ನಿವಾಸಿಗಳು ಪ್ರಾದೇಶಿಕ ಆಯುಕ್ತ ಕಛೇರಿಗೆ ತೆರಳಿ, ಕಪಿಲತೀರ್ಥ ಕೆರೆಯ ಆವರಣದಲ್ಲಿ ಸಂಭವಿಸಿದ ಗೋಡೆ ಕುಸಿತದ ದುರಂತವನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಡಳಿತ, ಕೂಡಲೇ ಕೆರೆಯನ್ನು ಮಹಾನಗರ ಪಾಲಿಕೆಯ ವಶಕ್ಕೆ ಪಡೆದು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು ಎಂದು ಭೂಮಾಲೀಕರಾದ ಗೋಡ್ರೆ ಕುಟುಂಬ ಹಾಗೂ ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಸ್ಥಳೀಯರ ಮನವಿಯನ್ನು ಸ್ವೀಕರಿಸಿದ ಪ್ರಾದೇಶಿಕ ಆಯುಕ್ತೆ ಕೆ.ಎಂ. ಜಾನಕಿ ಅವರು, ಘಟನಾ ಸ್ಥಳಕ್ಕೆ ಅಽಕಾರಿಗಳನ್ನು ಕಳುಹಿ ಪರಿಶೀಲನೆ ನಡೆಸಿ ಅದಕ್ಕೆ ಬೇಕಾಗಿರುವ ಸೌಲಭ್ಯ ಪೂರೈಸುವುದಕ್ಕೆ ಸೂಚಿಸುವದಾಗಿ ನೀಡಿದರು.

ಕೆರೆಯ ಮಾಲೀಕತ್ವ ಹಸ್ತಾಂತರ ಪ್ರಕ್ರಿಯೆಯನ್ನು ತುರ್ತಾಗಿ ಪೂರ್ಣಗೊಳಿಸಿ ಮುಂದಿನ ಅನಾಹುತಗಳನ್ನು ತಪ್ಪಿಸಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದರು.

ಈ ವೇಳೆ ವಿಕಾಸ್ ಕಲಘಟಗಿ, ಕಪಿಲ್ ಭೋಸಲೆ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಸೇರಿದಂತೆ ಇತರರು ಇದ್ದರು.



## ಬೆನ್ನುಮೂಳೆ ಶಸ್ತ್ರಚಿಕಿತ್ಸೆ ಯಶಸ್ವಿ

**ಬೈಲಹೊಂಗಲ:** ಪಟ್ಟಣದ ಮಲಪ್ರಭಾ ಆಸ್ಪತ್ರೆಯಲ್ಲಿ ಪ್ರಸಿದ್ಧ ಎಲುಬು ಹಾಗೂ ಕೀಲು ತಜ್ಞರಾದ ಡಾ.ಮಂಜುನಾಥ ಮುದಕನಗೌಡರ ನೇತೃತ್ವದ ವೈದ್ಯರ ತಂಡವು ಹಿಪ್ ರಿಪ್ಲೇಸ್‌ಮೆಂಟ್, ನೀ ರಿಪ್ಲೇಸ್‌ಮೆಂಟ್ ಹಾಗೂ ಬೆನ್ನು ಮೂಳೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸಿದೆ. ತಂಡದಲ್ಲಿ ಅರಿವಳಿಕೆ ತಜ್ಞ ಡಾ.ಮಹಾಂತೇಶ ಜಿಡ್ಡಿಮನಿ, ಡಾ.ಪ್ರಸಾದ ಮುದಕನಗೌಡರ, ಡಾ.ಸೂರಜ ಮತ್ತಿಕೊಪ್ಪ ಸೇರಿದಂತೆ ಇತರ ವೈದ್ಯರು ಸಹಕರಿಸಿದರು.

ವಿಜಯಪುರದ 67 ವರ್ಷದ ವಸಂತ ರಾವ್ ರಾಠೋಡ ಅವರಿಗೆ ಮೊಣಕಾಲು ಬದಲಾವಣೆ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, 45 ವರ್ಷದ ನೀಲಮ್ಮ ಕೋರಿ ಬೆನ್ನು ಮೂಳೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸಲಾಗಿದೆ.

ಇದಲ್ಲದೆ, 40 ವರ್ಷದ ಲಕ್ಷ್ಮೀ ಹೊಸೂರ ಅವರಿಗೆ ಪೃಷ್ಠದ ಕೀಲಿಗೆ ರಕ್ತಸಂಚಾರ ಕಡಿಮೆಯಾಗಿದ್ದ ಸಮಸ್ಯೆಗೆ ನೂತನ ಮಾದರಿ ಹಿಪ್ ರಿಪ್ಲೇಸ್‌ಮೆಂಟ್ ಶಸ್ತ್ರಚಿಕಿತ್ಸೆ ನಡೆಸಿ ಆರೋಗ್ಯ ಸುಧಾರಿಸಲಾಗಿದೆ. ಬೈಲಹೊಂಗಲ ನಗರ ಪ್ರದೇಶದಲ್ಲಿ ಇಂತಹ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ವಿರಳವಾಗಿದ್ದು, ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಚಿಕಿತ್ಸೆಗಳು ಕೈಗೊಳ್ಳಲಾಗಿದೆ ಎಂದು ಡಾ. ಮಂಜುನಾಥ ಮುದಕನಗೌಡರ ತಿಳಿಸಿದ್ದಾರೆ.ಆಸ್ಪತ್ರೆಯಲ್ಲಿ ಬಡವರಿಗೂ ಅನುಕೂಲವಾಗುವಂತೆ ಯಶಸ್ವಿನಿ, ಆಯುಷ್ಮಾನ್ ಭಾರತ, ಕರ್ನಾಟಕ ಆರೋಗ್ಯ ಸಂಜೀವಿನಿ ಸೇರಿದಂತೆ ವಿವಿಧ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ವಿಮೆ ಯೋಜನೆಗಳ ಸೌಲಭ್ಯ ಲಭ್ಯವಿದೆ. ಶೀಘ್ರದಲ್ಲೇ ಆರ್ಥೋಸ್ಕೋಪಿ, ಪ್ಲಾಸ್ಟಿಕ್ ಸರ್ಜರಿ, ಯೂರಾಲಜಿ ಹಾಗೂ ಕ್ಯಾಥ್ ಲ್ಯಾಬ್ ಸೇವೆಗಳನ್ನೂ ಪ್ರಾರಂಭಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

## ರಸ್ತೆಗಳ ಅಭಿವೃದ್ಧಿಗಾಗಿ ಶೆಟ್ಟರ್ ಮನವಿ

**ಬೆಳಗಾವಿ:** ನಗರದ ವ್ಯಾಪ್ತಿಯಲ್ಲಿರುವ ಕಣಬರ್ಗಿ ಕೈಗಾರಿಕಾ ಪ್ರದೇಶದಲ್ಲಿನ ರಸ್ತೆಗಳು ಸುಮಾರು ವರ್ಷಗಳಿಂದ ಹಾಳಾಗಿದ್ದು, ಇವುಗಳ ಸುಧಾರಣೆಗಾಗಿ ಮೂರು ಕಾಮಗಾರಿ ಪ್ರಸ್ತಾಪಿಸಿ ಸುಮಾರು 9.10 ಕೋಟಿ ರೂ. ಅನುದಾನ ಒದಗಿಸುವಂತೆ ಕೋರಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕರ್ನಾಟಕ ಸರ್ಕಾರ ಎಂ.ಬಿ ಪಾಟೀಲಗೆ 25 ಅಕ್ಟೋಬರ್ 2025ರಂದು ಬರೆದ ಪತ್ರಕ್ಕೆ ಮನ್ನಣೆ ನೀಡಿ, ಅವರು ಎರಡು ಕಾಮಗಾರಿಗೆ ಅನುಮೋದನೆ ನೀಡಿ7.37 ಕೋಟಿ ರೂ. ಬಿಡುಗಡೆ ಮಾಡಿರುವ ಬಗ್ಗೆ ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ ಶೆಟ್ಟರ್ ತಿಳಿಸಿದರು.



> ಕಣಬರ್ಗಿ ಕೈಗಾರಿಕಾ ಪ್ರದೇಶದಲ್ಲಿರುವ ರಸ್ತೆಗಳು ಹಲವಾರು ವರ್ಷಗಳಿಂದ ಈ ಹಾಳಾಗಿದ್ದು, ಇವುಗಳನ್ನು ದುರಸ್ತಿ ಮಾಡಿಸುವಂತೆ ಪ್ರದೇಶದ ಉದ್ಯಮದಾರರು ಮತ್ತು ಸಾರ್ವಜನಿಕರು ಮನವಿ ಕೈಗಾರಿಕಾ ಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ.
>
> ■ ಜಗದೀಶ ಶೆಟ್ಟರ್, ಬೆಳಗಾವಿ ಲೋಕಸಭಾ ಸದಸ್ಯ

ಕಣಬರ್ಗಿ ಕೈಗಾರಿಕಾ ಪ್ರದೇಶದಲ್ಲಿರುವ ರಸ್ತೆಗಳು ಹಲವಾರು ವರ್ಷಗಳಿಂದ ಈ ಹಾಳಾಗಿದ್ದು, ಇವುಗಳನ್ನು ದುರಸ್ತಿ ಮಾಡಿಸುವಂತೆ ಪ್ರದೇಶದ ಉದ್ಯಮದಾರರು ಮತ್ತು ಸಾರ್ವಜನಿಕರು ಮನವಿ ಕೈಗಾರಿಕಾ ಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ ಎಂದರು.

ಈ ಹಿನ್ನೆಲೆಯಲ್ಲಿ ಹಾಳಾದ ಮೂರು ರಸ್ತೆ ಕಾಮಗಾರಿ ಪ್ರಸ್ತಾಪಿಸಿ, ಇವುಗಳ ದುರಸ್ತಿಗಾಗಿ ತಗಲುವ ಅಂದಾಜು 9.10 ಕೋಟಿ ಅನುದಾನ ಬಿಡುಗಡೆಗಾಗಿ ಕೋರಲಾಗಿ ಇದರಲ್ಲಿ ಎರಡು ರಸ್ತೆ ಕಾಮಗಾರಿ ಅನುಮೋದಿಸಿ 7.37 ಕೋಟಿ ರೂ. ಬಿಡುಗಡೆಗೊಳಿಸಿದ್ದು ಇರುವದು.

ಇವುಗಳಲ್ಲಿ: ರೂ: 5.62 ಕೋಟಿಯಲ್ಲಿ ಕಣಬರ್ಗಿ ಕೈಗಾರಿಕಾ ಕ್ಷೇತ್ರದ ಪ್ರದೇಶದಲ್ಲಿನ 5, 6, 7, 8, 9,? 10 ನೇ ಮುಖ್ಯ ರಸ್ತೆ ಹಾಗೂ 1, 2, 3, 7, 9 ನೇ ಅಡ್ಡ ರಸ್ತೆ (ಹಾಳಾಗಿರುವ ರಸ್ತೆಗಳ) ಸುಧಾರಣೆ ಹಾಗೂ ಹೊಸ ಚರಂಡಿ ನಿರ್ಮಾಣ ಮತ್ತು 2) ರೂ: 1.75 ಕೋಟಿ ವೆಚ್ಚದಲ್ಲಿ ಕಣಬರ್ಗಿ ಕೈಗಾರಿಕಾ ಕ್ಷೇತ್ರದ ಪ್ರದೇಶದಲ್ಲಿನ ನಿವೇಶನ ಸಂಖ್ಯೆ 750 ದಿಂದ 660/ಬಿ 4ನೇ ಅಡ್ಡ ರಸ್ತೆ ) 1193 ರಿಂದ 1178 ( 8 ನೇ ಅಡ್ಡ ರಸ್ತೆ) 1210 ದಿಂದ 1217 ಹಾಗೂ 1119 ದಿಂದ 1115 ರಲ್ಲಿ ಹಾಳಾಗಿರುವ ರಸ್ತೆಗಳ ಸುಧಾರಣೆ ಹಾಗೂ ಹೊಸ ಚರಂಡಿಗಳ ನಿರ್ಮಾಣ ಸೇರಿವೆ ಎಂದು ಜಗದೀಶ ಶೆಟ್ಟರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನರ ಸಮಸ್ಯೆಗೆ ಸ್ಪಂದಿಸಿದ ಸಂಸದೆ

**ಬೆಳಗಾವಿ:** ಕಳೆದ ನಾಲ್ಕು ದಿನಗಳ ಹಿಂದೆ ನಡೆದ ಪತ್ರಿಕಾಗೋಷ್ಠಿಯಲ್ಲಿ ನೀಡಿದ್ದ ಭರವಸೆಯಂತೆ ಕೇವಲ ನಾಲ್ಕೇ ದಿನಗಳಲ್ಲಿ ರಸ್ತೆ ಕಾಮಗಾರಿಗೆ ಚಾಲನೆ ಜಿಲ್ಲೆಯ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಗೋಟುರ ರಾಜ್ಯ ರಸ್ತೆಯ ದುಸ್ಥಿತಿಗೆ ಮುಕ್ತಿ ಹಾಡಿದ್ದಾರೆ. ನೀಡುವ ಮೂಲಕ, ಅಭಿವೃದ್ಧಿ ಕೆಲಸಗಳಲ್ಲಿ ತಮಗೆ ತಾವೇ ಸಾಟಿ ಎಂಬುದನ್ನು ಸಾಬೀತುಪಡಿಸಿದ್ದಾರೆ.

**ಹದಗೆಟ್ಟ ರಸ್ತೆಗೆ ದುರಸ್ತಿ ಭಾಗ್ಯ:**
ಪ್ರಯಾಣಿಕರು ಮತ್ತು ಸಾರ್ವಜನಿಕರು ಸಂಚರಿಸಲು ಪ್ರತಿನಿತ್ಯ ನರಕಯಾತನೆ ಪಡುತ್ತಿದ್ದ ಗೋಟೂರು ರಸ್ತೆಯನ್ನು ದುರಸ್ತಿ ಪಡಿಸಲು ಸಂಸದೆ ಪ್ರಿಯಂಕಾ ಜಾರಕಿಹೊಳಿ ಸೂಚನೆ ಮೇರೆಗೆ ಅಽಕಾರಿಗಳು ಈಗ ಮುಂದಾಗಿದ್ದಾರೆ. ಗೋಟುರು ರಾಜ್ಯ ರಸ್ತೆಯಲ್ಲಿ ಬೃಹತ್ ಗಾತ್ರದ ಹೊಂಡಗಳಿಂದಾಗಿ ಸಾರ್ವಜನಿಕರು, ವಾಹನ ಓಡಾಟಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಇತ್ತೀಚೆಗೆ ಸಂಸದೆ ಪ್ರಿಯಂಕಾ ಜಾರಕಿಹೊಳಿ ಅವರಿಗೆ ಸಾರ್ವಜನಿಕರು ಮನವಿ ಮಾಡಿಕೊಂಡಿದ್ದರು. ಇಲ್ಲಿರುವ ಸಮಸ್ಯೆಯನ್ನು ಅರಿತ ಸಂಸದೆ ಪ್ರಿಯಂಕಾ ಅವರು ಸಂಬಂಽತ ಇಲಾಖೆಯ ಅಽಕಾರಿಗಳೊಂದಿಗೆ ಸಭೆ ನಡೆಸಿ, ಪ್ರಾಥಮಿಕತೆಯ ಆಧಾರದಲ್ಲಿ ಕಾಮಗಾರಿ ಆರಂಭಿಸಲು ಸೂಚನೆ ನೀಡಿ ನುಡಿದಂತೆ ನಡೆದಿದ್ದಾರೆ.

ನಾಲ್ಕು ದಿನಗಳ ಹಿಂದೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಗೋಟುರ ರಾಜ್ಯ ರಸ್ತೆಯ ಹದಗೆಟ್ಟ ಸ್ಥಿತಿಯ ಬಗ್ಗೆ ಸಾರ್ವಜನಿಕರು ಮತ್ತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಸ್ಪಂದಿಸಿದ್ದ ಅವರು, 3-4 ದಿನಗಳಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಮಾತು ನೀಡಿದ್ದರು. ಅದರಂತೆ ಕೂಡಲೇ ಅಽಕಾರಿಗಳೊಂದಿಗೆ ಸಭೆ ನಡೆಸಿ ಚುರುಕು ಮುಟ್ಟಿಸಿದ ಪರಿಣಾಮವಾಗಿ, ಇಂದು ರಸ್ತೆ ಕಾಮಗಾರಿ ಅಽಕೃತವಾಗಿ ಆರಂಭಗೊಂಡಿದೆ.



ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಈ ಕಾಮಗಾರಿ ನಡೆಯುತ್ತಿದ್ದು, ರಸ್ತೆಯಲ್ಲಿನ ಗುಂಡಿಗಳಿಂದಾಗಿ ಸಂಭವಿಸುತ್ತಿದ್ದ ಅಪಘಾತಗಳಿಗೆ ಈಗ ಬ್ರೇಕ್ ಬೀಳಲಿದೆ. ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಮತ್ತು ನಿಗದಿತ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸಬೇಕೆಂದು ಸಂಸದರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ. ಸಂಸದರ ಈ ಕ್ಷಿಪ್ರ ಕ್ರಮಕ್ಕೆ ಗೋಟುರ ಗ್ರಾಮಸ್ಥರು ಹಾಗೂ ಚಿಕ್ಕೋಡಿ ಕ್ಷೇತ್ರದ ಜನತೆ ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿದ್ದು, ಅಭಿವೃದ್ಧಿಪರ ನಾಯಕತ್ವಕ್ಕೆ ಇದು ಸಾಕ್ಷಿ ಎಂದು ಬಣ್ಣಿಸಿದ್ದಾರೆ.

## ಪಿಡಿಒಗಳ ಅಸಹಜ ಸಾವು: ಮಧ್ಯಸ್ಥಿಕೆ ವಹಿಸಲು ರಾಜ್ಯಪಾಲರಿಗೆ ಮನವಿ

**ಖಾನಾಪುರ:** ರಾಜ್ಯದಲ್ಲಿ ಪಿಡಿಒಗಳ ಅಸಹಜ ಸಾವು ಮತ್ತು ಪಿಡಿಒಗಳ ಮೇಲಿನ ಹಲ್ಲೆ ಪ್ರಕರಣಗಳಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಆಗ್ರಹಿಸಿ ಪಿಡಿಒಗಳ ಸಂಘದಿಂದ ಮಂಗಳವಾರ ಪಟ್ಟಣದ ತಾಲೂಕು ಪಂಚಾಯತಿಯಲ್ಲಿ ತಾಪಂ ಇಒ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಪಿಡಿಒಗಳ ಅಸಹಜ ಸಾವು ಮತ್ತು ಪಿಡಿಒಗಳ ಮೇಲಿನ ಹಲ್ಲೆ ಪ್ರಕರಣ ಸಂಬಂಧಿಸಿದಂತೆ ಮನವಿ ಸಲ್ಲಿಸಿ ಪಿಡಿಒಗಳ ಸಂಘದ ಜಿಲ್ಲಾಧ್ಯಕ್ಷ ಉಸ್ಮಾನ್ ನದಾಫ್ ಮಾತನಾಡಿ, ಪಿಡಿಒ ಮಕ್ತುಮಸಾಬ್ ಕರಡಿಗುಡ್ಡ ಇತ್ತೀಚೆಗೆ ಅಸಹಜ ಸಾವಿಗೀಡಾಗಿದ್ದು, ಜೊತೆಗೆ ಇತ್ತೀಚೆಗೆ ಪಿಡಿಒಗಳ ಮೇಲೆ ಒತ್ತಡ ಮತ್ತು ಹಲ್ಲೆಯ ಪ್ರಕರಣಗಳು ಹೆಚ್ಚಾಗಿವೆ. ಕೆಲಸದ ಒತ್ತಡ, ರಾಜಕೀಯ ಪ್ರಭಾವ, ಮೇಲಧಿಕಾರಿಗಳ ಕಿರುಕಳ ಮತ್ತಿತರ ಕಾರಣಗಳಿಂದ ಪಿಡಿಒಗಳ ಅಸಹಜ ಸಾವು ಪ್ರಕರಣಗಳು ವರದಿಯಾಗುತ್ತಿವೆ ಎಂದರು.

ಕೆಲವು ಗ್ರಾಮ ಪಂಚಾಯತಿಗಳಲ್ಲಿ ಪಿಡಿಒಗಳ ಮೇಲೆ ಮಾರಣಾಂತಿಕ ಹಲ್ಲೆಗಳು ನಡೆದಿವೆ. ಇದರಿಂದ ಪಿಡಿಒಗಳು ಭಯದ ವಾತಾವರಣದಲ್ಲಿ ಕೆಲಸ ನಿರ್ವಹಿಸುವಂತಾಗಿದೆ. ಪಿಡಿಒಗಳ ಈ ಎಲ್ಲ ಸಮಸ್ಯೆಗಳ ಕುರಿತು ಬೆಳಗಾವಿ ಜಿಪಂ ಸಿಇಒ ಹಾಗೂ ಎಲ್ಲ ತಾಲೂಕುಗಳ ಇಒಗಳ ಮೂಲಕ ರಾಜ್ಯಪಾಲರಿಗೆ ಲಿಖಿತ ಮನವಿಯನ್ನು ಸಲ್ಲಿಸಲಾಗುತ್ತಿದೆ. ರಾಜ್ಯಪಾಲರಿಂದ ಪಿಡಿಒಗಳಿಗೆ ನ್ಯಾಯ ಸಿಗುವ ನಿರೀಕ್ಷೆಯಿದೆ ಎಂದರು.

ಪಿಡಿಒಗಳ ಸಂಘದ ರಾಜ್ಯ ಉಪಾಧ್ಯಕ್ಷ ಜಯಗೌಡ ಪಾಟೀಲ, ರಾಜ್ಯ ಸಮಿತಿ ಸದಸ್ಯ ಆನಂದ ಹೊಳೆಣ್ಣವರ, ಜಿಲ್ಲಾ ಪರಿಷತ್ ಸದಸ್ಯೆ ಲಕ್ಷ್ಮೀ ಕಾಂಬಳೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಎಸ್ಸಿ, ಎಸ್ಟಿ ನೌಕರರ ಹಾಗೂ ಅಧಿಕಾರಿಗಳ ಕಲ್ಯಾಣ ಸಂಘ ಜಿಲ್ಲಾಧ್ಯಕ್ಷ ಬಾಲರಾಜ ಭಜಂತ್ರಿ, ಗೌರವಾಧ್ಯಕ್ಷ ರವಿಕಾಂತ್.ಸಿ.ಎಂ ಸೇರಿದಂತೆ ವಿವಿಧ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಗ್ರಾಮೀಣಾಭಿವೃದ್ಧಿ , ಪಂಚಾಯತಿರಾಜ್ ಇಲಾಖೆ ಸಹಾಯಕ ನಿರ್ದೇಶಕ ವಿಜಯಕುಮಾರ ಕೋತಿನ ಮನವಿ ಸ್ವೀಕರಿಸಿ ಮನವಿ ರಾಜ್ಯಪಾಲರಿಗೆ ರವಾನಿಸುವುದಾಗಿ ತಿಳಿಸಿದರು.

## ನೀಲಕಂಠ ಶ್ರೀಗಳ ಕೆಲಸ ನಿಸ್ವಾರ್ಥದಿಂದ ಕೂಡಿದ್ದು: ಮಲ್ಲಿಕಾರ್ಜುನ

**ಮುರಗೋಡ:** ಇಳಿಯ ವಯಸ್ಸಿನಲ್ಲಿ ಮುರಗೋಡದ ನೀಲಕಂಠ ಶ್ರೀಗಳು ಸಮಾಜಮುಖಿಯಾಗಿ ಧರ್ಮ ಕಾರ್ಯದಲ್ಲಿ ತೊಡಗಿದ್ದಾರೆ. ಇವರು ತ್ರಿಕಾಲ ಲಿಂಗ ಪೂಜಾನಿಷ್ಠರಾಗಿದ್ದು, ಉತ್ತರ ಕರ್ನಾಟಕದಲ್ಲಿ ಬೆರಳೆಣಿಕೆ ಎಷ್ಟು ಜನ ನೋಡಲು ಸಿಗುತ್ತಾರೆ. ದೇಶ ಧರ್ಮ ಸಂಸ್ಕೃತಿ, ಸಂಸ್ಕಾರ ಮಹತ್ವವಾಗುತ್ತಾರೆ. ಉಳಿಸುವುದರ ಕಡೆಗೆ ಯಾರು ಗಮನ ಹರಿಸುತ್ತಾರೆ. ಅವರು ಮಹಾತ್ಮರಾಗುತ್ತಾರೆ. ಅಂತಹ ಕೆಲಸ ನೀಲಕಂಠ ಶ್ರೀಗಳು ಮಾಡುತ್ತಿದ್ದಾರೆ ಎಂದು ಘಟಪ್ರಭಾದ ಮಲ್ಲಿಕಾರ್ಜುನ ಶ್ರೀಗಳು ಹೇಳಿದರು.

ಮಹಾಂತದುರ ದುಂಡೇಶ್ವರ ಮಠದ ಪೀಠಾಧಿಕಾರಿ ನೀಲಕಂಠ ಶ್ರೀಗಳ 79ನೇ ಜನ್ಮ ದಿನದ ನಿಮಿತ್ತ ಭಕ್ತರ ವತಿಯಿಂದ ಇತ್ತೀಚಿಗೆ ಮಠದ ಆವರಣದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.



ಸನ್ಮಾನ ಸ್ವೀಕರಿಸಿ ನೀಲಕಂಠ ಶ್ರೀಗಳು ಮಾತನಾಡಿ, ಮುರಗೋಡದ ಮಹಾಂತ ಶಿವಯೋಗಿಗಳ ಮಠವು ಒಂದು ಧಾರ್ಮಿಕ ನೆಲೆಯಾಗಿದೆ. ಅನ್ನದಾಸೋಹ, ಅಕ್ಷರ ದಾಸೋಹ ನೀಡುತ್ತಾ ಬಂದಿದೆ. ಶಿವಯೋಗಿಗಳು ಹಾಕಿಕೊಟ್ಟ ಮಾರ್ಗದಲ್ಲಿ ಇಂದಿಗೂ ಮಠ ನಡೆಯುತ್ತಾ ಬಂದಿದೆ ಎಂದರು.

ಮುನವಳ್ಳಿ ಮುರುಘರಾಜೇಂದ್ರ ಶ್ರೀಗಳು, ಬೈಲಹೊಂಗಲದ ಪ್ರಭುನೀಲಕಂಠ ಶ್ರೀಗಳು, ತಾರಿಹಾಳದ ಅಡಿವೀಶ ದೇವರು, ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಎನ್.ಬ್ಯಾಳಿ, ಶರಣೆ ಪ್ರೇಮಕ್ಕಾ ಅಂಗಡಿ ಮಾತನಾಡಿದರು.

ಮುರಗೋಡ ಯರಗಟ್ಟಿ, ಹೊಸೂರ, ಕಾರಿಮಣಿ, ಸೊಗಲ, ಇನ್ನು ಹಲವಾರು ಗ್ರಾಮದ ಭಕ್ತರು ಶ್ರೀಗಳಿಗೆ ಸನ್ಮಾನಿಸಲಾಯಿತು. ಮಹಾಂತಯ್ಯ ಶಾಸ್ತ್ರಿ ಆರಾದ್ರಿಮಠ, ಬೈಲವಾಡದ ಶ್ರೀಗಳು, ಧರ್ಮರ್ಶಿ ಅಶೋಕ ಶಟ್ಟರ, ವಿ.ಬಿ.ದೇಸಾಯಿ, ಶಿವಗೌಡ ಪಾಟೀಲ, ಸಂತೋಷ ಹಿರೇಮಠ, ಕುಮಾರ ಪೂಜೇರಿ, ವಿಜಯ ಸಾಣಿಕೊಪ್ಪ, ಮಲ್ಲಪ್ಪ ಕುರಬೆಟ್ಟ, ಮಲ್ಲಿಕಾರ್ಜುನ ಸಿದ್ದನಗೌಡರ, ಜಯಶ್ರೀ ಮಲ್ಲಯ್ಯನವರಮಠ, ಮಹಾಂತೇಶ ಬಡಿಗೇರ ಇದ್ದರು.

## ಕನ್ನಡ ಭಾಷೆ ಪರಂಪರೆ, ಆತ್ಮಗೌರವದ ಪ್ರತೀಕ: ಶ್ರೀಗಳು

**ಚನ್ನಮ್ಮನ ಕಿತ್ತೂರು:** ಕನ್ನಡ ಭಾಷೆ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಆತ್ಮಗೌರವದ ಪ್ರತೀಕವಾಗಿದೆ. ಅದನ್ನು ಬೆಳೆಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜವಾಬ್ದಾರಿ ಮಹತ್ವದಾಗಿದೆ ಎಂದು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಶ್ರೀಗಳು ತಿಳಿಸಿದರು.



ಸ್ಥಳೀಯ ಕಲ್ಮಠದ ಶಂಕರ ಚಂದರಗಿ ಸಭಾ ಭವನದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನದ ಅಂಗವಾಗಿ ಕನ್ನಡ ಭಾಷೆ, ಮಾಧ್ಯಮದ ಉಳಿವು-ಬೆಳವಣಿಗೆಯಲ್ಲಿ ಪರಿಷತ್ತಿನ ಪಾತ್ರ ವಿಷಯ ಕುರಿತು ಉಪನ್ಯಾಸದಲ್ಲಿ ಮಾತನಾಡಿ, ತಾಲೂಕು ಎಸ್ಸೆಸ್ಸೆಲ್ಸಿಯಲ್ಲಿ ಸತತ 2ನೇ ಬಾರಿ ಜಿಲ್ಲೆಗೆ ಪ್ರಥಮ ಸ್ಥಾನ ಮತ್ತು ರಾಜ್ಯಕ್ಕೆ 5ನೇ ಸ್ಥಾನ ಪಡೆದುದರ ಜೊತೆಗೆ ವಿದ್ಯಾರ್ಥಿಗಳು ರಾಜ್ಯಕ್ಕೆ ಮೂರು, ನಾಲ್ಕು, ಆರನೇ ಸ್ಥಾನ ಪಡೆದುಕೊಂಡಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ವಾಯ್.ತುಬಾಕಿ ಮಾತನಾಡಿ, ಸರ್ಕಾರಿ ಶಾಲೆ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದಿ ಎಸ್ಸೆಸ್ಸೆಲ್ಸಿಯಲ್ಲಿ ಈ ಸಲವೂ ಕಿತ್ತೂರು ತಾಲೂಕಿಗೆ ಉತ್ತಮ ಫಲಿತಾಂಶ ತಂದಿರುವುದು ಸಂತಸ ತಂದಿದೆ ಎಂದರು.

ಕಸಾಪ ಅಧ್ಯಕ್ಷ ಡಾ.ಎಸ್.ಬಿ.ದಳವಾಯಿ ಮಾತನಾಡಿ, ದಿನಗಳಲ್ಲಿ ಸರ್ಕಾರ ಪರಿಷತಗೆ ಹೆಚ್ಚಿನ ಅನುದಾನ ನೀಡಿ, ಕನ್ನಡಪರ ಕಾರ್ಯಕ್ರಮ ನಡೆಸಲು ಪ್ರೇರೇಪಿಸಬೇಕು ಎಂದರು.

ಕ್ಷೇತ್ರ ಸಮನ್ವಯ ಅಧಿಕಾರಿ ಗಾಯತ್ರಿ ಅಜ್ಜನ್ನವರ, ಮುಖ್ಯಾಧ್ಯಾಪಕ ಬಿ.ಸಿ.ಬಿದರಿ, ಕರ್ನಾಟಕ ರಕ್ಷಣಾ ಮಹಿಳಾ ವೇದಿಕೆ ತಾಲೂಕ ಘಟಕದ ಅಧ್ಯಕ್ಷೆ ಮಂಜುಳಾ ಕಡಕೋಳ ಮಾತನಾಡಿದರು.

ಇತ್ತೀಚೆಗೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 623 ಅಂಕ ಪಡೆದ ಸಂಜನಾ ಉಮೇಶ ಅವರಾದಿ, ರೋಷಿಣಿ ವಿರೂಪಾಕ್ಷಿ ಎಮ್ಮಿ ಮತ್ತು 622 ಅಂಕ ಪಡೆದ ಅನನ್ಯಾ ವೀರಭದ್ರಪ್ಪ ನೇಸರಗಿ ಮತ್ತು 620 ಅಂಕ ಪಡೆದ ಲಕ್ಷ್ಮೀ ಈರಣ್ಣ ಕೋಟಗಿ, ಅನು ಮಹೇಶ ಮೂಲಿಮನಿ ರಾಜ್ಯಕ್ಕೆ ಮೂರು, ನಾಲ್ಕು, ಆರನೇ ಸ್ಥಾನ ಮತ್ತು ಕಿತ್ತೂರು ತಾಲೂಕಿಗೆ ಮೊದಲ ಮೂರು ಸ್ಥಾನ ಪಡೆದುದಕ್ಕಾಗಿ ಅಭಿನಂದಿಸಿ ಸತ್ಕರಿಸಲಾಯಿತು. ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ತಾಲೂಕಿನ ಪ್ರತಿಭಾವಂತ ಮಕ್ಕಳನ್ನು ಮತ್ತು ಉತ್ತಮ ಸಾಧನೆ ತೋರಿದ ರಾಜಗುರು ಶಾಲಾ ಮಕ್ಕಳನ್ನು ಗೌರವಿಸಿ ಶುಭ ಕೋರಲಾಯಿತು. ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು.

ಮಹೇಶ್ವರಹೊಂಗಲ, ಶೀಲಾ ಗಂಗಾಧರಮಠ, ರಾಜೇಶ್ವರಿ ಕಳಸಣ್ಣವರ ರಾಘವೇಂದ್ರ, ಬಸವರಾಜ ದಳವಾಯಿ, ರಾಜಗುರು ಶಾಲೆಯ ಶಿಕ್ಷಕರು ಮತ್ತು ಮಕ್ಕಳು, ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು, ಕನ್ನಡ ಅಭಿಮಾನಿಗಳು ಉಪಸ್ಥಿತರಿದ್ದರು.

ಮಂಜುನಾಥ ಕಳಸನ್ನವರ ನಿರೂಪಿಸಿರು. ನಾಗಯ್ಯಾ ಹುಲೆಪ್ಪನವರಮಠ ಸ್ವಾಗತಿಸಿದರು. ವಿ.ಎಸ್.ನಂದೀಹಳ್ಳಿ ವಂದಿಸಿದರು.

## ಭಕ್ತಿಯಿಂದ ಪರಶಿವನ ಒಲಿಸಿಕೊಳ್ಳಲು ಸಾಧ್ಯ

**ಗೋಕಾಕ:** ಅನುಭವ, ಜ್ಞಾನದಿಂದ ಭಕ್ತಿ ಹುಟ್ಟುತ್ತದೆ. ಭಕ್ತಿಯಿಂದ ಮಾತ್ರ ಪರಶಿವನ ಒಲಿಸಿಕೊಳ್ಳಲು ಸಾಧ್ಯ ಎಂದು ಶೂನ್ಯ ಸಂಪಾದನ ಮಠದ ಪೀಠಾಽಪತಿ ಮುರುಘರಾಜೇಂದ್ರ ಶ್ರೀಗಳು ಹೇಳಿದರು.

ನಗರದ ಶೂನ್ಯ ಸಂಪಾದನ ಮಠದಲ್ಲಿ ಬಸವೇಶ್ವರ ಧರ್ಮ ಪ್ರಚಾರಕ ಸಂಸ್ಥೆ, ವಚನ ಸಾಹಿತ್ಯ ಚಿಂತನ ಮಂಥನ ವೇದಿಕೆ ಹಾಗೂ ಲಿಂಗಾಯತ ಮಹಿಳಾ ವೇದಿಕೆ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ 196ನೇ ಮಾಸಿಕ ಶಿವಾನುಭವಗೋಷ್ಠಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು.

ನದಿ ಇಂಗಳಗಾವಿಯ ಗುರುಲಿಂಗ ದೇವರ ಮಠದ ಸಿದ್ಧಲಿಂಗ ಶ್ರೀಗಳು ಮಾತನಾಡಿ ಭೂಮಿಯ ಮೇಲಿರುವ ಸಕಲ ಪಶು, ಪಕ್ಷಿ, ಪ್ರಾಣಿಗಳು ನೆಮ್ಮದಿಯಿಂದ ಬದುಕುತ್ತಿವೆ. ವಿಶ್ವಾಸ ಮತ್ತು ನಂಬಿಕೆಯಿಂದ ಭಗವಂತನನ್ನು ಕಾಣಬಹುದು ಎಂದರು.

ಬಸನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಲಿಂಗಾಯತ ಮಹಿಳಾ ವೇದಿಕೆ ಅಧ್ಯಕ್ಷ ಸೇವಂತಾ ಅಶೋಕ ಮುಚ್ಚಂಡಿಹಿರೇಮಠ, ನೀಲಕಂಠ ಚನ್ನಬಸಪ್ಪ ತೋಟಗಿ, ಪ್ರಸನ್ನ ತಂಬಾಕೆ, ಮಲ್ಲಪ್ಪ ನೇಸರಗಿ, ಮಲ್ಲಿಕಾರ್ಜುನ್ ರಾಮಯ್ಯ ಮಡ್ಡೇನಿ, ಅಭಿಷೇಕ ಮುಚ್ಚಂಡಿ ಹಿರೇಮಠ, ಆರ್.ಎಲ್.ಮಿರ್ಜಿ, ಎಸ್. ಕೆ.ಮಠದ ಉಪಸ್ಥಿತರಿದ್ದರು.




## ಮಹಾಲಕ್ಷ್ಮೀ ದೇವಿ ಜಾತ್ರೆ ಇಂದಿನಿಂದ

**ರಾಯಬಾಗ:** ಇಲ್ಲಿಯ ಮಹಾಲಕ್ಷ್ಮೀ ದೇವಿ ಜಾತ್ರೆ ಮೇ 6ರಂದು ಪ್ರಾರಂಭವಾಗಲಿದ್ದು, ಬೆಳಗ್ಗೆ 10ಕ್ಕೆ ಕೊಲ್ಲಾಪೂರ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳಿಂದ ಹಾಲಗಂಭ ಪೂಜೆ ನೆರವೇರಲಿದೆ.



ಮಧ್ಯಾಹ್ನ 2ಕ್ಕೆ ಮೆರವಣಿಗೆ ಜರುಗಲಿದೆ. ರಾತ್ರಿ 8ರಿಂದ 10ರವರೆಗೆ ಕರಿಕಟ್ಟುವ ಕಾರ್ಯಕ್ರಮ, ರಾತ್ರಿ 10:30ಕ್ಕೆ ಬಜರಂಗ ದಳದ ವತಿಯಿಂದ ಹಿಂದೂ ಸಿಂಹಗರ್ಜನೆ ಕಾರ್ಯಕ್ರಮ. ಮುಖ್ಯ ವಕ್ತಾರರು ಚಕ್ರವರ್ತಿ ಸೂಲಿಬೆಲೆ,ಡ್ರೈವರ್ ಅಸೋಸಿಯೇಶನ್ ವತಿಯಿಂದ ಅರ್ಕೆಸ್ಟ್ರಾ ಕಾರ್ಯಕ್ರಮ.

ಮೇ 7ರಂದು ಬೆಳಗ್ಗೆ 9ಕ್ಕೆ ದೇವಿ ವಾದ್ಯಮೇಳದೊಂದಿಗೆ ಪಲ್ಲಕ್ಕಿ ಉತ್ಸವ ಜರುವುದು. ನಂತರ ದೇವಿ ಪ್ರತಿಷ್ಠಾಪನೆ. ರಾತ್ರಿ 9.30ರಿಂದ 11ರವರೆಗೆ ದೇವಿ ಜಾತ್ರಾ ಹಕ್ಕುದಾರರಿಂದ ಉಡಿ ತುಂಬುವ ಕಾರ್ಯಕ್ರಮ. ರಾತ್ರಿ 11ಕ್ಕೆ ಭಕ್ತಾಧಿಗಳಿಂದ ದಂಡವತ ಹಾಕುವದು, ಡೊಳ್ಳಿನ ಪದಗಳು ಜರುಗುವುದು. ಮಹಾಪ್ರಸಾದವಿರುವುದು.

ಮೇ 8ರಂದು ಬೆಳಗ್ಗೆ 8ಕ್ಕೆ ಕುಂಭಮೇಳ ವಾದ್ಯಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ. ತಳಲಕ್ಷ್ಮೀದೇವಿ, ಧ್ಯಾಮವ್ವಾ (ಕಾಳಿಕಾ) ದೇವಿತೆಯರಿಗೆ ಕಮೀಟಿ, ಗ್ರಾಮಸ್ಥರಿಂದ ಉಡಿ ತುಂಬುವುದು. ಮಹಾನೈವೇದ್ಯ, ಮಹಾಪ್ರಸಾದ ಜರುಗಲಿದೆ. ರಾತ್ರಿತ 10ಕ್ಕೆ ದೇವಿ (ಹೊನ್ನಾಟ) ಪಂಜಿನ ಮೆರವಣಿಗೆ ಪ್ರಮುಖ ಬೀದಿಗಳಿಂದ ಅಂಭಾಭವಾನಿ ಮಂದಿರಕ್ಕೆ ರಾತ್ರಿ 2 ಗಂಟೆಗೆ ಆಗಮನ. ಹಕ್ಕುದಾರರಿಂದ ಉಡಿ ತುಂಬುವುದು. ವಾದ್ಯಮೇಳ, ಪೀಪಿಮ್ಯೂಸಿಕ್ ಕಾರ್ಯಕ್ರಮ. 3ಕ್ಕೆ ಮುಖ್ಯರಸ್ತೆಯಿಂದ ಹನುಮಾನ ಮಂದಿರಕ್ಕೆ ಆಗಮಿಸುವುದು.

ಮೇ 9ರಂದು ಬೆಳಗ್ಗೆ 6ಕ್ಕೆ ನಗರದ ಹನುಮಾನ ಮಂದಿರದ ಎದುರು ಭವ್ಯಮಂಟಪದಲ್ಲಿ ದೇವಿ ಆಸೀನಳಾಗುವಳು. ದಾನ್ಯದಿಂದ ಮಂಡಲ ಮಾಡಿ (ರಂಗಾಹೊಯು) ಮಗಿ, ಕುಂಭಪೂಜೆ ನೆರವೇರಿಸಲಾಗುವುದು. 8ಕ್ಕೆ ಪಂಜಿನ ಮೆರವಣಿಗೆ ಸಿಡಿಮದ್ದು, ವಾದ್ಯಮೇಳದೊಂದಿಗೆ ಶ್ರೀದೇವಿಯ ವಿಸರ್ಜನೆ ಕಾರ್ಯಕ್ರಮ ಜರುಗಲಿದೆ. ಮೇ 10 ರಂದು ಕುದುರೆ, ಸೈಕಲ್, ಜೋಡು ಕುದುರೆ, ಜೋಡೆತ್ತಿನ ಗಾಡಿ, ಶರ್ಯತ್ತು ಜರುಗಲಿವೆ.

## ಕಿರುಸುದ್ದಿ

### ಇಂಗಳಗಿಗೆ ಪಿಎಚ್‌ಡಿ ಪದವಿ

**• ಬಾಗಲಕೋಟೆ:** ಇಲ್ಲಿನ ವಿನಾಯಕ ನಗರದ ನಿವಾಸಿ ರಾಧಿಕಾ ಪವನ ಕಟ್ಟಿಮನಿ (ಇಂಗಳಗಿ) ಅವರಿಗೆ ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿದೆ. ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಸೆಲ್ವಾ ಸ್ಟಿವನ್ ಇವರ ಮಾರ್ಗದರ್ಶನದಲ್ಲಿ ಡಾ.ರಾಧಿಕಾ ಪವನ ಕಟ್ಟಿಮನಿ ಅವರು ಕ್ರೈಂ ಆ್ಯಂಡ್ ಮಿಸ್ಟ್ರಿ ಇನ್ ದಿ ಸೆಲೆಕ್ಟ್ ನಾವೆಲ್ಸ್ ಆಫ್ ಸಾರಾ ಪ್ಯಾರೆಟ್ಸ್ಕಿ ಮಹಾ ಪ್ರಬಂಧ ಮಂಡಿಸಿದ್ದರು. ಈ ಹಿನ್ನೆಲೆಯಲ್ಲಿ ಧಾರವಾಡ ಕವಿವಿಯ 75 ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಪಿಎಚ್‌ಡಿ ಪದವಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಸಚಿವ ಡಾ.ಎಂ.ಸಿ.ಸುಧಾಕರ ಇದ್ದರು.



### ಉಮೇಶ ಮೇಟಿ ಗೆಲುವು: ಹರ್ಷ



**• ಇಳಕಲ್:** ನಿರೀಕ್ಷೆಯಂತೆ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಈ ಗೆಲುವಿನ ಬೆನ್ನಲ್ಲೇ ಹುನಗುಂದ ಕ್ಷೇತ್ರದ ಶಾಸಕ ವಿಜಯಾನಂದ ಎಸ್. ಕಾಶಪ್ಪನವರ ಪತ್ರಿಕೆಯೊಂದಿಗೆ ಮಾತನಾಡಿ ಹರ್ಷ ವ್ಯಕ್ತಪಡಿಸಿದರು. ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯ ಜಿದ್ದಾಜಿದ್ದಿನಲ್ಲಿ ಕೊನೆಗೂ 'ಕೈ' ಮೇಲಾಗಿದೆ. ಮತ ಎಣಿಕೆಯ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡಿದ್ದ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರು, ದೊಡ್ಡ ಅಂತರದಿಂದ ಜಯಭೇರಿ ಬಾರಿಸಿದ್ದಾರೆ. ಬಾಗಲಕೋಟೆಯ ಜನತೆ ಅಭಿವೃದ್ಧಿ ಮತ್ತು ಸರ್ಕಾರದ ಜನಪರ ಯೋಜನೆಗಳನ್ನು ಮತ್ತು ಜಾತ್ಯತೀತವಾಗಿ ಎಲ್ಲಾ ಸಮುದಾಯದ ಬಾಂಧವರು ಒಟ್ಟಾಗಿ ಉಮೇಶ ಮೇಟಿ ಅವರಿಗೆ ಆಶೀರ್ವದಿಸಿದ್ದಾರೆ. ನಮ್ಮ ನಾಯಕತ್ವ ಹಾಗೂ ಕಾರ್ಯಕರ್ತರ ಸಂಘಟಿತ ಹೋರಾಟಕ್ಕೆ ದಕ್ಕಿದ ಪ್ರತಿಫಲವಿದು ಎಂದು ಹೇಳಿದರು.

### ಅಬಕಾರಿ ನಿರೀಕ್ಷಕಿ ವಿರುದ್ಧ ಜಾತಿ ನಿಂದನೆ ಪ್ರಕರಣ

**• ರಬಕವಿ-ಬನಹಟ್ಟಿ:** ಆರೋಪಿಗಳ ಬಂಧನ ಸಂದರ್ಭ ಅಸಭ್ಯ ವರ್ತನೆಯೊಂದಿಗೆ ನಿಮ್ಮ ಮಕ್ಕಳನ್ನು ಕರೆಯಿಸಿಯೆಂದು ಕೈಯಿಂದ ಹೊಡೆ ಬಡಿ ಮಾಡಿ ಜಾತಿ ನಿಂದನೆ ಮಾಡಿದ್ದಾರೆಂದು ನಾವಲಗಿ ಗ್ರಾಮದ ಚಂದ್ರವ್ವ ಬಸಪ್ಪ ಕದಮ ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

**ಆಗಿದ್ದೇನು?:** ಮೇ 3ರಂದು ನಸುಕಿನ ಜಾವ 3 ಗಂಟೆ ಸಂದರ್ಭ ಅಕ್ರಮ ಸಾರಾಯಿ ಮಾರಾಟದ ಆರೋಪಿತರಾದ ಚಂದ್ರವ್ವ ಕದಮ ಎಂಬುವರ ಮಕ್ಕಳಿಬ್ಬರ ಮೇಲೆ ಪ್ರಕರಣ ದಾಖಲು ಕಾರಣ ಬಂಧಿಸಲು ನಾವಲಗಿ ಗ್ರಾಮದ ಅವರ ಮನೆಗೆ ತೆರಳಿದ್ದ ಜಮಖಂಡಿ ಅಬಕಾರಿ ನಿರೀಕ್ಷಕಿ ಗೀತಾ ತಗ್ಗಿಯವರಿಗೆ ಆರೋಪಿಗಳು ಸಿಗದಿದ್ದಾಗ ಮನೆಯಲ್ಲಿದ್ದ ಅವರ ತಾಯಿ ಚಂದ್ರವ್ವಳಿಗೆ ನಿಮ್ಮ ಮಕ್ಕಳನ್ನು ಕರೆಯಿಸಿ ಇಲ್ಲದಿದ್ದಾರೆ ಮುಂದೆ ಪರಿಣಾಮ ನೆಟ್ಟಗಿರೋದಿಲ್ಲವೆಂದು ಕೈಯಿಂದ ಹೊಡೆ-ಬಡಿ ಮಾಡಿ ಜಾತಿ ಮೇಲೆ ಬೈದು ಜಾತಿ ನಿಂದನೆ ಮಾಡಿರುತ್ತಾರೆಂದು ಪ್ರಾಥಮಿಕ ವರದಿಯಲ್ಲಿ ಫಿರ್ಯಾದಿ ಚಂದ್ರವ್ವ ಕದಮ ತಿಳಿಸಿದ್ದಾರೆ ಈ ಪ್ರಕರಣದ ಕುರಿತು ಅಬಕಾರಿ ನಿರೀಕ್ಷಕ ಗೀತಾ ತಗ್ಗಿ ಸೇರಿದಂತೆ ಒಟ್ಟು 7 ಜನರ ಸಿಬ್ಬಂದಿ ಮೇಲೆ ಜಾತಿ ನಿಂದನೆ ಪ್ರಕರಣ ದಾಖಲಾಗಿದೆ.ಈ ಕುರಿತು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಡಿವೈಎಸ್ಪಿ ರೋಷನ್ ಜಮೀರ್, ಸಿಪಿಐ ಮಹಾದೇವ ಶಿರಹಟ್ಟಿ ಪಿಎಸ್‌ಐ ಶಿವಾನಂದ ದರಗೋಳ ತನಿಖೆ ಮುಂದುವರಿಸಿದ್ದಾರೆ.

## ನಿಧನ ಸುದ್ದಿ

### ಶಿವಪುತ್ರಯ್ಯ ಹಿರೇಮಠ



**• ಬಾದಾಮಿ:** ಪಟ್ಟಣದ ಸದಾಶಿವನಗರದ ಹಿರಿಯರಾದ ನಿವೃತ್ತ ಸೈನಿಕ ಶಿವಪುತ್ರಯ್ಯ ರಾಚಯ್ಯ ಹಿರೇಮಠ(88) ನಿಧನರಾದರು. ಮೃತರು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.

ಸಂತಾಪ: ಮೃತರ ನಿಧನಕ್ಕೆ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಕುಮಾರಗೌಡ ಜನಾಲಿ, ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ ಸೇರಿದಂತೆ ಇತರರು ಸಂತಾಪ ಸೂಚಿಸಿದ್ದಾರೆ.



ರಬಕವಿ-ಬನಹಟ್ಟಿ: ಇಲ್ಲಿನ ಹಳೆಯ ನೀರಿನ ಟ್ಯಾಂಕ್ ಹತ್ತಿರದ ಗಣೇಶ ದೇವಸ್ಥಾನದಲ್ಲಿ ಮಂಗಳವಾರ ಅಂಗಾರಿಕಾ ಸಂಕಷ್ಟಿಯ ಅಂಗವಾಗಿ ನವಗ್ರಹ ಪೂಜೆ ಮತ್ತು ಹೋಮ ಹವನ, ಬೆಳಗ್ಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ ನಂತರ ಅಭಿಷೇಕ ನಡೆಯಿತು. ಅರ್ಚಕರಾದ ಚನಬಸಯ್ಯ ಮಠಪತಿ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮಗಳು ನಡೆದವು. ಗಣಪತಿ ದೇವಸ್ಥಾನ ಟ್ರಸ್ಟ್ ಸಮಿತಿಅಧ್ಯಕ್ಷ ಈರಯ್ಯ ಪರಾಳಮಠ, ಈರಪ್ಪ ಮಡಿವಾಳರ, ಗಣಪತಿ ಕಾಮಗೊಂಡ, ನೀಲಕಂಠ ಯಾದವಾಡ, ಈಶ್ವರ ಜವಳಗಿ, ರಾಜು ಬಾಬಾನಗರ, ಕಾಡಪ್ಪ ಚಿಕ್ಕೋಡಿ ಸೇರಿದಂತೆ ಅನೇಕರಿದ್ದರು.

## ಶೂನ್ಯ ನೆರಳು ದಿನ ಕಾರ್ಯಕ್ರಮ

**• ಬಾಗಲಕೋಟೆ:** ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಬ್ರಿಲಿಯಂಟ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಶೂನ್ಯ ನೆರಳು ದಿನದ ಕಾರ್ಯಕ್ರಮಕ್ಕೆ ಬ್ರಿಲಿಯಂಟ್ ಅಕಾಡೆಮಿಯ ಕಾರ್ಯದರ್ಶಿ ಆನಂದ ರಾಠೋಡ ಚಾಲನೆ ನೀಡಿದರು. ನಂತರ ಮಾತನಾಡಿದ ಆನಂದ ರಾಠೋಡ ಅವರು ಶೂನ್ಯ ನೆರಳಿನ ದಿನದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತಿಳಿಸುವ ಮಾಹಿತಿಯನ್ನು ವಿದ್ಯಾರ್ಥಿಗಳು ವಿವರವಾಗಿ ತಿಳಿದುಕೊಂಡು ಖಗೋಳ ವಿಜ್ಞಾನದಲ್ಲಿ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಕರೆ ನೀಡಿದರು. ಸದರಿ ಕಾರ್ಯಕ್ರಮದ ತಮ್ಮ ವಿದ್ಯಾ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಕೇಂದ್ರದ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವಿಜಯಕುಮಾರ ಕೆ, ವಿಜ್ಞಾನ ಶಿಕ್ಷಕರು, ಶಂಕ್ರಪ್ಪ ಸಕ್ರಿ ಪ್ರೌಢಶಾಲೆ, ಬಾಗಲಕೋಟೆ ರವರು ಮಾತನಾಡಿ ಶೂನ್ಯ ನೆರಳಿನ ದಿನದ ಸ್ವಾರಸ್ಯಕರ ಮಾಹಿತಿಗಳನ್ನು ವಿವರವಾಗಿ ತಿಳಿಸಿದರು. ಅದರಂತೆ, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಆಕಾಶ ಕಾಯಗಳು, ನಕ್ಷತ್ರ ಪುಂಜಗಳ ಅಧ್ಯಯನದ ಬಗ್ಗೆ ಅರ್ಥೈಸಿದರು. ಮಧ್ಯಾಹ್ನ 12.24 ಘಂಟೆಗೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುವ ಮೂಲಕ ಸಂಭವಿಸಿದ ಶೂನ್ಯ ನೆರಳನ್ನು ಪ್ರಾಯೋಗಿಕ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ತಿಳಿಸಿಕೊಡಲಾಯಿತು. ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕ್ಯೂರೇಟರ್ ಈರಣ್ಣ ಬುಳ್ಳಾ, ತಾಂತ್ರಿಕ ಸಹಾಯಕ ಆಸೀಫ ಬಾಗವಾನ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಾಗಲಕೋಟೆ: ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಬ್ರಿಲಿಯಂಟ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಶೂನ್ಯ ನೆರಳು ದಿನದ ಕಾರ್ಯಕ್ರಮಕ್ಕೆ ಬ್ರಿಲಿಯಂಟ್ ಅಕಾಡೆಮಿಯ ಕಾರ್ಯದರ್ಶಿ ಆನಂದ ರಾಠೋಡ ಚಾಲನೆ ನೀಡಿದರು.

# ಕೆರೆಗಳ ಅಭಿವೃದ್ಧಿಗೆ ಬದ್ಧ: ಖಂಡ್ರೆ

**• ಜಮಖಂಡಿ:** ಕೇರಳ ಮತ್ತು ರಾಜ್ಯ ಎರಡು ಉಪ ಚುನಾವಣೆಯಲ್ಲಿ ಮತದಾರರು ನಮ್ಮ ಕೈ ಹಿಡಿದಿದ್ದಾರೆ. ಮುಂದೆ ದೇಶದಲಿಯೂ ಸಹ ನಮ್ಮ ಪಕ್ಷ ಮತೇ ಅಧಿಕಾರಕ್ಕೆ ಬರುತ್ತದೆ. ಕೋಮುವಾದಿ ಪಕ್ಷವು ಹೋಗುತ್ತದೆ ಎಂದು ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರ ಕಟ್ಟೆ ಕೆರೆಯ ಆವರಣದಲ್ಲಿ ಸಸಿ ನೆಟ್ಟು ಉದ್ಯಾನವನ ವೀಕ್ಷಿಸಿ ಮಾತನಾಡಿದ ಅವರು, ರಾಷ್ಟದಲ್ಲಿ ನಮ್ಮ ಅದ್ಯಕ್ಷರು ಸರಿಯಾದ ಕರ್ತವ್ಯ ಮಡುತ್ತಿದ್ದಾರೆ. ಪಕ್ಷದ ರಾಷ್ಟೀಯ ಅಧ್ಯಕ್ಷರಾದ ಪ್ರೀಯಾಂಕಾ ಗಾಂಧಿಯವರಿಂದ ಪಕ್ಷಕ್ಕೆ ಉತ್ತಮ ಬೂಸ್ಟರ್ ಸಿಗುತ್ತಿದೆ ಎಂದರು. ರಾಜ್ಯದಲ್ಲಿ ಮುಖ್ಯಮಂತ್ರಿಗಳ ಬದಲಾವಣೆ ಅಪ್ರಸ್ತುತವಾಗಿದೆ. ಯಾವುದಕ್ಕೂ ನಮ್ಮ ಪಕ್ಷದ ವರಿಷ್ಟರೇ ತೀರ್ಮಾನ ಕೈಗೊಳ್ಳುತ್ತಾರೆ. ರಾಜ್ಯ ಅಭಿವೃದ್ಧಿಪಡಿಸುವುದೇ ನಮ್ಮ ಮುಖ್ಯ ಗುರಿಯಾಗಿದೆ ಎಂದರು.

ನಗರದ ಕಟ್ಟೆ ಕೆರೆಯ ಅಭಿವೃದ್ಧಿಗೆ ಸಂಪೂರ್ಣ ಬದ್ದರಾಗಿದ್ದು, ಮಾಜಿ ಶಾಸಕ ಆನಂದ ನ್ಯಾಮಗೌಡ ಅಭಿವೃದ್ಧಿಗೆ ಮನವಿ ಮಾಡಿದ್ದಾರೆ. ಪ್ರಾಮಾಣಿಕವಾಗಿ ಮನವಿ ಪುರಸ್ಕರಿಸಿ ಅನುದಾನ ನೀಡುತ್ತೇವೆ. ದಿ ಸಿದ್ದು ನ್ಯಾಮಗೌಡರ ಕನಸನ್ನು ಅವರ ಪುತ್ರ ನನಸು ಮಾಡಲು ಶ್ರಮಿಸಿದ್ದಾರೆ. ಅದಕ್ಕೆ ಪೂರಕವಾಗಿ ನಾವೂ ಸಹ ಸಹಾಯ ಮಾಡುತ್ತೇವೆ. ಕಟ್ಟೆ ಕೆರೆಯು ಪ್ರವಾಸಿ ತಾಣವಾಗಿ ಮಾಡುವ ಗುರಿ ಹೊಂದಿದ್ದು, ಈಗ ಮತ್ತೇ ಅದಕ್ಕೆ ಕಲಾವಕಾಶ ಕೂಡಿ ಬಂದಿದೆ ಎಂದರು.



ಅರಣ್ಯ ಪ್ರದೇಶದ ಅಂಚಿನಲ್ಲಿ ಅನೇಕ ಜನ ವಸತಿಗಳಿದ್ದು, ಅವರ ಜೊತೆಗೆ ಸೌಹಜಾರ್ದತೆಯಿಂದ ಇರಲು ಅಧಿಕರಿಗಳಿಗೆ ಸೂಚಿಸಿದ್ದೇವೆ. ಇನ್ನು ಅರಣ್ಯ ಒತ್ತಿವರಿಯಾದರೆ ಅದರಲ್ಲಿ ವಸತಿ ಪ್ರದೇಶದ ಜನತೆ ವಿಶ್ವಾಸಕ್ಕೆ ತೆಗೆದುಕೊಳ್ಳಲು ಹೇಳಿದ್ದೇವೆ. ಆದರೆ ಇನ್ನಿತರ ಒತ್ತುವರಿಯಾದರೆ ತೆರವೊಲಿಸಲು ಸೂಚಿಸುತ್ತೇವೆ ಎಂದರು. ನಮ್ಮ ಇಲಾಖೆಯಲ್ಲಿ 2000 ಹುದ್ದೆಗಳ ನೇಮಕಾತಿಗಾಗಿ ಸಚಿವ ಸಚಿವ ಸಂಪುಟ ಸಭೆಯಲ್ಲಿ ತೀರ್ಮನವಾಗಿದೆ. ಅದನ್ನು ಶೀಘ್ರದಲ್ಲಿ ಪೂರ್ಣಗೊಳಿಸುತ್ತೇವೆ. ಈಗಾಗಲೇ ಮೊನ್ನೆ ಸುಮಾರು 540 ಇವತ್ತು ಹುದ್ದೆಗಳು ಭರ್ತಿ ಮಾಡಿಕೊಂಡಿದ್ದೇವೆ ಎಂದರು. ಬೆಳಗಾವಿ ಮುಖ್ಯ ಅರಣಯ ಸಂರಕ್ಷಣಾಧಿಕಾರಿ ಮಂಜುನಾಥ ಚವ್ಹಾನ, ಅರಣ್ಯ ಉಪಸಂರಕ್ಷಣಧಿಕಾರಿಗಳಾದ ಸ್ವಪ್ನಿಲ, ಕೆ.ಎಸ್.ಗೊರವರ ಮತ್ತು ಎಲ್ಲ ಉಪರಣ್ಯಾಧಿಕಾರಿಗಳು ಇದ್ದರು.

## ಕಾಂಗ್ರೆಸ್ ಕಾರ್ಯಕರ್ತರಿಂದ ವಿಜಯೋತ್ಸವ

**• ಕಲಾದಗಿ:** ಬಾಗಲಕೋಟೆ, ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆ ಕಲಾದಗಿ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಸಂಜೆ ಡಾ.ಅಂಬೇಡ್ಕರ್ ವೃತ್ತದಲ್ಲಿ ವಿಜಯೋತ್ಸವ ಆಚರಿಸಿದರು. ಕಲಾದಗಿ ಬ್ಲಾಕ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸಂಶಿ ಮಾತನಾಡಿ ಉಪಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ಕ್ಷೇತ್ರದ ಮತದಾರರು ಕಾಂಗ್ರೆಸ ಸರ್ಕಾರದ ಪಂಚ ಗ್ಯಾರಂಟಿಗಳಿಗೆ ಹಾಗೂ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಮನ್ನಣೆ ನೀಡಿ ಮತವನ್ನು ನೀಡಿದ್ದು ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಗೆ ಈ ಫಲಿತಾಂಶ ದೊಡ್ಡ ಮಟ್ಟದ ಮುಖಭಂಗ ತಂದಿದೆ. ಜಿಪಂ, ತಾಪಂ ಚುನಾವಣೆಗಳು ಸೇರಿದಂತೆ ಮುಂದಿನ 2028ರ ಸಾರ್ವತ್ರಿಕ ಚುನಾವಣೆಯಲ್ಲಿಯೂ ರಾಜ್ಯದಲ್ಲಿ ಕಾಂಗ್ರೆಸ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ ಎಂದರು. ಮುಖಂಡರಾದ ನಾಗಪ್ಪ ಗಾಣಿಗೇರ, ಶಿವಪ್ಪ ಆರಕೇರಿ, ಗುರುಸಿದ್ದಪ್ಪ ಸಾರವಾಡ, ಮಲ್ಲಪ್ಪ ಜಮಖಂಡಿ, ಶ್ರೀಕಾಂತ ಪಾಟೀಲ, ಶಿಡ್ಲಪ್ಪ ಮಾದರ, ಅಕ್ರಂ ಸೌದಾಗರ, ಬಸವರಾಜ ಬಿಲಕೇರಿ, ಅಂಜಲಿ ಬಾನು, ಮುಕ್ತುಮ್ ಬಾವಾಖಾನ, ವೆಂಕಟೇಶ ಬೋಜಗಾರ, ರಿಯಾಜ ಪೀರಜಾದೆ, ಶ್ರೀಧರ ಮಾದರ, ಅಶ್ಪಾಕ ಬೀಳಗಿ, ಸೈಯದ ಚೌದರಿ ಇದ್ದರು.

## ‘ನೋವುಂಡು ನಲಿದವರು’ ಗ್ರಂಥ ಲೋಕಾರ್ಪಣೆ

**• ಗುಳೇದಗುಡ್ಡ:** ಇನ್ನೊಬ್ಬರಿಗಾಗಿ ಬದುಕುವುದು ಆಧ್ಯಾತ್ಮ. ಅದು ನಿಜವಾದ ಬದುಕು. ಹಾಗೆ ಬದುಕಿದ ನಮ್ಮ ಹಿರಿಯರ ಬದುಕಿನ ಮೌಲ್ಯಗಳು ಕುಟುಂಬದಲ್ಲಿಯೇ ಉಳಿಯಬಾರದು ಅವು ನಮ್ಮ ಮುಂದಿನ ಪೀಳಿಗೆಗೆ ಆದರ್ಶವಾಗಬೇಕು ಎಂಬ ನಿಟ್ಟಿನಲ್ಲಿ ಹಿರಿಯ ಜೀವನಚರಿತ್ರೆ ಪುಸ್ತಕ ಪ್ರಕಟಣೆಯಾಗಿದೆ. ರಂಗಪ್ಪ ಶೇಬಿನಕಟ್ಟಿ ಅವರ ಬದುಕು ಜೀವನ ನಮಗೆಲ್ಲ ಮಾರ್ಗದರ್ಶನವಾಗಿದೆ ಎಂದು ಭಾರತೀಯ ಶಿಕ್ಷಣ ಮಂಡಳಿಯ ಅಖಿಲಭಾರತೀಯ ಸಂಘಟನಾ ಮಂತ್ರಿ ಶಂಕರಾನಂದಜೀ ಹೇಳಿದರು.

ಮಂಗಳವಾರ ಪಟ್ಟಣದ ಶಿವಕೃಪಾ ರಂಗಮಂದಿರದಲ್ಲಿ ಹಿರಿಯ ಸ್ವಯಂಸೇವಕ ರಂಗಪ್ಪ ಶೇಬಿನಕಟ್ಟಿ ಅವರ ಅಭಿನಂದನಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸಹಸ್ರ ಚಂದ್ರದರ್ಶನ, ನೋವುಂಡು ನಲಿದವರು ಹಾಗೂ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯವಕ್ತಾರರಾಗಿ ಮಾತನಾಡಿ, ಎಂದರು.

ಸಂಸದ ಜಗದೀಶ ಶೆಟ್ಟರ ಮಾತನಾಡಿ, ನಿಷ್ಠೆ ಹಾಗೂ ಶ್ರಮದಿಂದ ಕೆಲಸ ಮಾಡುವ ರಂಗಪ್ಪ ಶೇಬಿನಕಟ್ಟಿ ಅವರದು ಸರಳತೆ, ಸಜ್ಜನತೆಯ ಜೀವನ. ನೇಕಾರಿಕೆಯ ಕಾಯಕ ನಿಷ್ಠೆಯಿಂದತೊಡಗಿಕೊಳ್ಳುವುದರ ಜೊತೆಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಮಾನ್ಯ ಕಾರ್ಯಕರ್ತನಾಗಿ ಸಾಮಾಜಿಕವಾಗಿ ಚಟುವಟಿಕೆಗಳಲ್ಲಿ ಇಳಿವಯಸ್ಸಿನಲ್ಲೂ ಪಾಲ್ಗೊಳ್ಳುವ ಇವರ ವ್ಯಕ್ತಿತ್ವ ಸಮಾಜಕ್ಕೆ ಮಾದರಿಯಾಗಿದೆ ಎಂದರು.

ರಂಗಪ್ಪ ಶೇಬಿನಕಟ್ಟಿ ಅವರ ಅಭಿನಂದನಾ ಗ್ರಂಥ ನೋವುಂಡು ನಲಿದವರು, ಡಾ.ವಿ.ಎ.ಬೆನಕನಾಳ ಅವರ ರಾಷ್ಟ್ರ ನೇತಾರ ಅಟಲ್ ಬಿಹಾರಿ ವಾಜಪೇಯಿ, ಎಸ್.ವಿ.ಚೌಡಾಪೂರ ಅವರ ದೇವರ ದಾಸಿಮಯ್ಯನವರ ಆಯ್ದ 50 ವಚನಗಳು ಇಂಗ್ಲಿಷ್ ಅವೃತ್ತಿ ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಸಾನ್ನಿಧ್ಯವಹಿಸಿದ್ದ ಹಂಪಿಹೇಮಕೂಟ ಗಾಯತ್ರಿ ಪೀಠದ ದಯಾನಂದಪುರಿ ಸ್ವಾಮೀಜಿ, ಗುರುಸಿದ್ದೇಶ್ವರ ಮಠದ ಗುರುಸಿದ್ಧಪಟ್ಟದಾರ್ಯ ಸ್ವಾಮಿಜಿ, ಅಧ್ಯಕ್ಷತೆವಹಿಸಿದ್ದಸಂಸದಪಿ.ಸಿ.ಗದ್ದಿಗೌಡರ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಸಂಘ ಚಾಲಕ ಬಸವರಾಜ ಡಂಬಳ ಮಾತನಾಡಿದರು. ಗದ್ದನಕೇರಿ ಮಳೆರಾಜೇಂದ್ರ ಮಠದ ಭಾಸ್ಕರ ಸ್ವಾಮೀಜಿ, ದೇವಾಂಗಮಠದ ರಾಘವೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಗ್ರಂಥ ಸಮಿತಿ ಅಧ್ಯಕ್ಷ ಡಾ. ರಾಜಶೇಖರ ಶೀಲವಂತ, ದೇವಾಂಗ ಸಮಾಜದ ರಾಜ್ಯಾಧ್ಯಕ್ಷ ರವೀಂದ್ರ ಕಲ್ಬುರ್ಗಿ, ಪ್ರಧಾನ ಸಂಪಾದಕ ಡಾ.ವಿ.ಎ.ಬೆನಕನಾಳ, ವಿಶ್ರಾಂತಪ್ರಾಧ್ಯಾಪಕಎಸ್.ವಿ.ಚೌಡಾಪುರ, ಅಮಾತೆಪ್ಪ ಕೊಪ್ಪಳ, ರವೀಂದ್ರ ಪಟ್ಟಣಶೆಟ್ಟಿ ಉಪಸ್ಥಿತರಿದ್ದರು.



## ಕಾಂಗ್ರೆಸ್‌ಗೆ ಗೆಲುವು: ಸಂಭ್ರಮಾಚರಣೆ

**• ಜಮಖಂಡಿ:** ರಾಜ್ಯದಲ್ಲಿ ಎರಡು ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ ಹಿನ್ನೆಲೆ ಕಾಂಗ್ರೆಸ್ ಕಾರ್ಯಕರ್ತರಿಂದ ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ವಿಜಯೋತ್ಸವ ಆಚರಸಿ ಸಂಭ್ರಮಿಸಿದರು.

ನಂತರ ಮಾತನಾಡಿದ ಮಾಜಿ ಶಾಸಕ ಆನಂದ ನ್ಯಾನಗೌಡ ಅವರು, ಕಾಂಗ್ರೆಸ್‌ನ ಜನಪರ ಆಡಳಿತಕ್ಕೆ ಜನರು ಮನ್ನಣೆ ನೀಡಿದ್ದು, ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಇಬ್ಬರೂ ನೂತನ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ದಿ.ಎಚ್.ವೈ.ಮೇಟಿ ಅವರ ಕನಸುಗಳನ್ನು ಉಮೇಶ ಮೇಟಿ ಪೂರ್ಣ ಮಾಡಲಿದ್ದಾರೆ. ದಾವಣಗೆರೆಯ ದಿ.ಶಾಮನೂರು ಶಿವಶಂಕರಪ್ಪ ಅವರಂತೆ ಅವರ ಮೊಮ್ಮಗ ಸಮರ್ಥರಾಗಿದ್ದು, ಉತ್ತಮ ಸೇವೆ ಸಲ್ಲಿಸಲಿದ್ದಾರೆ. ಮುಖ್ಯಮಂತ್ರಿ,



ಉಪಮುಖ್ಯಮಂತ್ರಿ ಸೇರಿ ಕಾಂಗ್ರೆಸ್‌ನ ಎಲ್ಲ ಸಚಿವರು, ಶಾಸಕರು, ಕಾರ್ಯಕರ್ತರು, ಗೆಲುವಿಗಾಗಿ ಶ್ರಮಿಸಿದ್ದಾರೆ ಎಂದರು.

ಮಹೇಶ ಕೋಳಿ, ಪರಮಾನಂದ ಗೌರೋಜಿ, ಅನ್ವರ್ ಮೋಮಿನ್, ರವಿ ಯಡಳ್ಳಿ, ಈಶ್ವರ ವಾಳೆಣ್ಣವರ, ದಿಲಾವರ ಶಿರೋಳ, ಸುನೀಲ ಸಿಂಧೆ, ಯುವ ಕಾಂಗ್ರೆಸ್ ಕುಮಾರ ಆಲಗೂರ, ಬಿ.ಬಿ.ಪಾಟೀಲ, ಗುರುಲಿಂಗಪ್ಪ, ಶಶಿಧರ ನ್ಯಾಮಗೌಡ, ಬಸು ಹರಕಂಗಿ, ಸಾಧಿಕ ಬಂಟನೂರ, ಕಿರಣ ಪಿಸಾಳ, ಲಿಂಗರಾಜ ಪಾಟೀಲ, ನಾನಾ ಮೋರೆ, ಖಾಜಾ ಅವಟಿ ಸೇರಿದಂತೆ ಕಾರ್ಯಕರ್ತರು ಇದ್ದರು.

## ಉಮೇಶ ಮೇಟಿ ಗೆಲುವು: ಶಾಸಕ ಜೆಟಿಪಾ ಸಂತಸ

**• ಬೀಳಗಿ:** ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಜಯಶಾಲಿಯಾಗಿರುವ ಉಮೇಶ ಮೇಟಿ ಅವರ ಗೆಲುವಿನಲ್ಲಿ ಬೀಳಗಿ ಮತಕ್ಷೇತ್ರದ ಕಾರ್ಯಕರ್ತರ ಸೇವೆ ಹಾಗೂ ಪಾಲು ದೊಡ್ಡದಿದೆ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಜೆ.ಟಿ.ಪಾಟೀಲ ತಿಳಿಸಿದರು. ಪತ್ರಿಕೆಯೊಂದಿಗೆ ಮಾತನಾಡಿ, ನನಗೆ ಕೊಟ್ಟಿರುವ 7 ಹಳ್ಳಿಗಳಲ್ಲಿ ಪ್ರತಿಯೊಂದು ಹಳ್ಳಿಗೂ ಕಾರ್ಯಪಡೆಯನ್ನು ನಿಯೋಜಿಸಲಾಗಿತ್ತು. ಅವರೆಲ್ಲರೂ ಅತ್ಯಂತ ಪ್ರಾಮಾಣಿಕವಾಗಿ ಯಾರಿಂದಲೂ ಹಣ ಪಡೆಯದೇ ಸತತ 10 ರಿಂದ 12 ದಿವಸ ಪ್ರತಿ ಮನೆ ಮನೆಗೆ ತೆರಳಿ ಪ್ರಚಾರ ಮಾಡಿದರು. ಅದರ ಫಲವಾಗಿ ಚುನಾವಣೆ ಫಲಿತಾಂಶ ನೋಡಿದಾಗ ಪ್ರತಿಹಳ್ಳಿಯಲ್ಲಿಯೂ ಕಳೆದ ಚುನಾವಣೆಯಲ್ಲಿದ್ದ ಕಾಂಗ್ರೆಸ್ ಪಕ್ಷದ ಲೀಡ್ ಮತಗಳಿಗಿಂತ ದುಪ್ಪಟ್ಟು ಲೀಡ ಮತಗಳು ಬಂದಿದ್ದಕ್ಕೆ ಕಾರ್ಯಕರ್ತಗೆ ಧನ್ಯವಾದ ತಿಳಿಸಿದರು. ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಉಮೇಶ ಮೇಟಿ ಗೆಲುವಿಗೆ ಸಂತಸ ವ್ಯಕ್ತಪಡಿಸಿದರು.

## ವಿಶ್ವವಿದ್ಯಾಲಯಗಳಲ್ಲಿ ಏಕೀಕೃತ ಶೈಕ್ಷಣಿಕ ವೇಳಾಪಟ್ಟಿ ರೂಪಿಸಿ

**• ಬಾಗಲಕೋಟೆ** : ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕೀಕೃತ ಶೈಕ್ಷಣಿಕ ವೇಳಾಪಟ್ಟಿ ರೂಪಿಸಬೇಕು. ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಅವಧಿಯನ್ನು ಸೇವಾ ಅವಧಿ ಎಂದು ಪರಿಗಣಿಸಬೇಕು. ಕೃಪಾಂಕ ಮತ್ತು ವೇತನ ನೀಡಬೇಕು ಎಂದು ಅತಿಥಿ ಉಪನ್ಯಾಸಕ ಡಾ.ಸಂತೋಷ ಗಾಣಿಗೇರ ಆಗ್ರಹಿಸಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅತಿಥಿ ಉಪನ್ಯಾಸಕರಿಗೆ ಸಲ್ಲಬೇಕಾದ ಗೌರವ ಮತ್ತು ಭದ್ರತೆಯನ್ನು ಒದಗಿಸಬೇಕು. ಉತ್ಕೃಷ್ಟ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಯುಜಿಸಿ ನಿಯಮಾವಳಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಯುಜಿಸಿ ನಿಯಮದ ಪ್ರಕಾರ ಕನಿಷ್ಠ ಅತಿಥಿ ಉಪನ್ಯಾಸಕರಿಗೆ 56,000 ರೂ.ಗೌರವ ವೇತನ ನೀಡಬೇಕು ಎಂದು ಆಗ್ರಹಿಸಿದರು. ಪರೀಕ್ಷಾ ಮೌಲ್ಯಮಾಪನದಿಂದ ಅತಿಥಿ ಉಪನ್ಯಾಸಕರು ದೂರು ಉಳಿಯಲಿದ್ದಾರೆ. ಪರೀಕ್ಷೆಯಿಂದ ಕೂಡ ನಾವು ದೂರ ಉಳಿದಿದ್ದರಿಂದ ಈಗ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪರೀಕ್ಷೆಗೆ ಸುಪ್ರವೈಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನೂ ಮೌಲ್ಯಮಾಪನಕ್ಕೂ ಕೂಡ ಅವರನ್ನೇ ಬಳಸಿಕೊಳ್ಳಲಿ ಎಂದು ಹೇಳಿದರು.



ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ ಪಾಠ ಮುಗಿದ ಬಳಿಕ ನಮಗೆ ವೇತನ ಕುಡ ನೀಡುವುದಿಲ್ಲ. ಸೇವಾ ಅವಧಿಯ ವೇತನ ನೀಡದೇ ಇರುವುದರಿಂದ ಕುಟುಂಬ ಜೀವನಕ್ಕೆ ತುಂಬಾ ತೊಂದರೆ ಆಗುತ್ತಿದೆ. ಈಗಿರುವ ಕನಿಷ್ಠ 10 ತಿಂಗಳ ಸೇವಾ ಅವಧಿಯನ್ನು 12 ತಿಂಗಳಿಗೆ ವಿಸ್ತರಿಸಬೇಕು ಎಂದು ಆಗ್ರಹಿಸಿದರು. ಸರ್ಕಾರ, ಉನ್ನತ ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾಯ ಸಂಬಂಧಿತ ಅಧಿಕಾರಿಗಳು ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ತಕ್ಷಣ ಪರಿಗಣಿಸಿ, ನ್ಯಾಯಸಮ್ಮತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಮಂಜುನಾಥ ಪ್ರಜಾರ, ಡಾ.ಘೋಮಸಿಂಗ್ ಕಾರಬಾರಿ, ಮಾರುತಿ ನಡುಕಟ್ಟಿನ, ಅಶೋಕ ಪೂಜಾರಿ ಇದ್ದರು.

## ಇಂದು ಮಹಾಲಿಂಗೇಶ್ವರ ಶ್ರೀಗಳ ಜನ್ಮಶತಾಬ್ಧಿ, ತುಲಾಭಾರ

**• ಮಹಾಲಿಂಗಪುರ:** ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಗುರುಲಿಂಗೇಶ್ವರ ಸ್ವಾಮಿಗಳ ಪುಣ್ಯಾರಾಧನೆ ನಿಮಿತ್ತ ಮೇ 6ರಂದು ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಮಹಾಲಿಂಗೇಶ್ವರ ಸಿದ್ದಸಂಸ್ಥಾನ ಮಠದ ಪೀಠಾಧಿಪತಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಜನ್ಮಶತಾಬ್ದಿ ಹಾಗೂ ತುಲಾಭಾರ ಸಮಾರಂಭ ಜರುಗಲಿದೆ ಎಂದು ಜಂಗಮ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಸಾಗರ ಮಠದ ಹೇಳಿದರು.

ಪಟ್ಟಣದ ಜವಳಿ ಬಜಾರನಲ್ಲಿನ ಪುರಸಭೆ ಮಾಜಿ ಅಧ್ಯಕ್ಷಬಸವರಾಜ ಹಿಟ್ಟಿನಮಠ ಅವರಕಚೇರಿಯಲ್ಲಿ ನಡೆದಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 6ರಂದು ಮಹಾಲಿಂಗೇಶ್ವರ ಮಠದಲ್ಲಿ ಬೆಳಗ್ಗೆ 6ಕ್ಕೆ ಗುರುಲಿಂಗೇಶ್ವರ ಗದ್ದುಗೆಗೆ ರುದ್ರಾಭಿಷೇಕ, 7ಕ್ಕೆ



ಜಂಗಮ ವಟುಗಳಿಗೆ ಅಯ್ಯಾಚಾರ, ಬೆಳಗ್ಗೆ 10 ಗಂಟೆಗೆ ಪೂಜ್ಯರಿಗೆ ತುಲಾಭಾರ ಮತ್ತು ಜನ್ಮಶತಾಬ್ದಿ ಜರುಗಲಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ ಮಾತನಾಡಿ, ಬಹಳ ವರ್ಷಗಳ ನಂತರ ಮಹಾಲಿಂಗಪುರದಲ್ಲಿ ಜಂಗಮ ವಟುಗಳಿಗೆ ಉಚಿತವಾಗಿ ಅಯ್ಯಾಚಾರ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಜಂಗಮ ಸಮಾಜದವರ ಇದರ ಸದುಪಯೋಗ ಪಡೆದುಕೊಳ್ಳಬೇಕು.

ಸಾಲಹಳ್ಳಿಯ ಅಭಿನವ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳು ಸಾನಿಧ್ಯದಲ್ಲಿ, ಅಧ್ಯಕ್ಷ ಗುರುಪಾದಯ್ಯ ಭಟ್ಟಿಮಠ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಜಂಗಮ ಸಮಾಜದ ಹಿರಿಯರಾದ ಗುರಲಿಂಗಯ್ಯಾ ಮಠಪತಿ ಮಾತನಾಡಿ, ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಜನ್ಮಶತಾಬ್ದಿ ಹಾಗೂ ತುಲಾಭಾರ ಕಾರ್ಯಕ್ರಮಕ್ಕೆ ಮಹಾಲಿಂಗಪುರದ ಎಲ್ಲಾ ಸಮಾಜಗಳು ಮತ್ತು ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತ ಮಂಡಳಿಗೆ ಆಮಂತ್ರಣ ನೀಡುತ್ತಿದ್ದೇವೆ. ಎಲ್ಲರೂ ಒಗ್ಗಟ್ಟಾಗಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದರು.

ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗುರುಪಾದಯ್ಯ ಭಟ್ಟಿಮಠ, ಕುಮಾರ ಮನ್ನಯ್ಯನವರಮಠ, ಮಹಾಂತೇಶ ಮನ್ನಯ್ಯನವರಮಠ, ಚನ್ನಯ್ಯಾ ಮಸಗುಪ್ಪಿಮಠ, ಮಹೇಶ ಮನ್ನಯ್ಯನವರಮಠ ಇದ್ದರು.

## ಮೇ 8, 9ರಂದು ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ

**• ಬಾದಾಮಿ:** ಸಮೀಪದ ಬನಶಂಕರಿಯಲ್ಲಿ ಮೇ 8, 9ರಂದು ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತಿ ಸಮಾವೇಶ-2026, ದಯಾನಂದ ಪುರಿ ಸ್ವಾಮಿಜಿಯವರ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತಿ ಸಮಾವೇಶದ ಸಮಿತಿಯ ಅಧ್ಯಕ್ಷ ರವೀಂದ್ರ ಕಲಬುರ್ಗಿ ತಿಳಿಸಿದರು.

ನಗರದ ಕಾನಿಪ ಭವನದಲ್ಲಿ ಕರೆದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದರು. ಮೇ 8 ರಂದು ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಬನಶಂಕರಿದೇವಿಗೆ ಅಭಿಷೇಕ, 6 ಗಂಟೆಗೆ ಸಣ್ಣಕ್ಕಿ ಬಾಗೂರು ಬನಶಂಕರಿದೇವಿಉ ಉತ್ಸವ ಮೂರ್ತಿಯ ಆಹ್ವಾನದೊಂದಿಗೆ ಚೌಡೇಶ್ವರಿ ದೇವಿಯ ಕತ್ತಿ ಹಬ್ಬದ ಉದ್ಘಾಟನೆಯನ್ನು ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಭೀಮಸೇನ ಚಿಮ್ಮನಕಟ್ಟಿ ನೆರವೇರಿಸುವರು. ಬೆಳಗ್ಗೆ 9ರಿಂದ 11 ಗಂಟೆಯವರೆಗೆ ಮಹಿಳೆಯರ ಕುಂಭ ಮೇಳದ ಉದ್ಘಾಟನೆಯನ್ನು ಮಹಿಳಾ ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ, ವಿಪ ಸದಸ್ಯ ಉಮಾಶ್ರೀ ಉದ್ಘಾಟಿಸುವರು. ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮಗಳು ಆರಂಭವಾಗಲಿದ್ದು, ದಯಾನಂದ ಪುರಿ, ಬಸವರಾಜ ಪಟ್ಟದಾರ್ಯ ಶ್ರೀಗಳು ಸೇರಿದಂತೆ ಆರು ಜನ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸುವರು. ಸಮಾರಂಭವನ್ನು ಕೇಂದ್ರದ ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸುವರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಚನಕಾರ ದೇವರದಾಸಿಮಯ್ಯನವರ ಇಂಗ್ಲೀಷ್ ವಚನಗಳ ಕೃತಿ ಬಿಡುಗಡೆ ಮಾಡುವರು. ರಾಜ್ಯ ಬಿಜೆಪಿ ಅಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ಅವರು ದಾಸೋಹ ಭವನ 1 ಮತ್ತು 2ನೇ ಮಹಡಿ ಉದ್ಘಾಟಿಸುವರು. ಸಂಸದರಾದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ ಇವರು ದಾನಿಗಳಿಗೆ ಸನ್ಮಾನಿಸುವರು. ರಾಜ್ಯಸಭಾ ಸದಸ್ಯ ಕೆ.ನಾರಾಯಣ್ ಅಧ್ಯಕ್ಷತೆ ವಹಿಸುವರು.



ಮೇ 9 ರಂದು ಶನಿವಾರ ಬೆಳಗ್ಗೆ 10.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಮಠದ ಡಾ.ನಿರ್ಮಲಾನಂದನಾಥ ಸ್ವಾಮಿಗಳು ಸೇರಿದಂತೆ ಇತರ ಶ್ರೀಗಳು ದಿವ್ಯ ಸಾನಿಧ್ಯ ವಹಿಸುವರು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭದ ಉದ್ಘಾಟನೆ ಮತ್ತು ದಯಾನಂದ ಪುರಿ ಶ್ರೀಗಳು ತುಲಾಭಾರ ಕಾರ್ಯಕ್ರಮ ಉದ್ಘಾಟಿಸುವರು. ಡಿಸಿಎಂ ಡಿ.ಕೆ.ಶಿವಕುಮಾರ ಅವರು ಬನಶಂಕರಿ ಐಟಿಐ ಕಾಲೇಜು ಆವರಣದಲ್ಲಿ ಮತ್ತು ಬನಶಂಕರಿ ಶಾಖಾಮಠದ ಆವರಣದಲ್ಲಿ ಕಾನೂನು ಸಚಿವ ಎಚ್. ಕೆ.ಪಾಟೀಲ ಅವರು ಅತಿಥಿ ಗೃಹಗಳ ಶಂಕುಸ್ಥಾಪನೆ ನೆರವೇರಿಸುವರು. ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ಸಕ್ಕರೆ ಸಚಿವ ಶಿವಾನಂದ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಅವರು ವಸ್ತುಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸುವರು. ಸಚಿವ ಆರ್.ಬಿ.ತಿಮ್ಮಾಪೂರ, ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ದಾನಿಗಳಿಗೆ ಸನ್ಮಾನಿಸುವರು ಎಂದು ರವೀಂದ್ರ ಕಲಬುರ್ಗಿ ತಿಳಿಸಿದರು.

ಟಿ ರಾಜೇಶ, ಸಂಕಣ್ಣ ಕರಡಿಗುಡ್ಡ, ಪ್ರಕಾಶ ಪಟ್ಟದಕಲ್ಲ, ಕಂದಗಲ್ಲ, ಮಹೇಶ ಶೇಬನಕಟ್ಟಿ ಪಿತಾಂಬ್ರಪ್ಪ ಹವೇಲಿ, ಬಸವರಾಜ ಕುದರಿ, ವಿಜಯಕುಮಾರ್ ಭಾಪ್ರಿ ಉಪಸ್ಥಿತರಿದ್ದರು.

## ಪಿಡಿಒ ಆತ್ಮಹತ್ಯೆ ಪ್ರಕರಣ: ಸಮಗ್ರ ತನಿಖೆಗೆ ಆಗ್ರಹ

**• ಬಾಗಲಕೋಟೆ:** ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲಿನ ಅಮಾನವೀಯ ಕೆಲಸದ ಒತ್ತಡ, ಬಾಕಿ ವೇತನ ಬಿಡುಗಡೆ ವಿಳಂಬ ಹಾಗೂ ಮಾನಸಿಕ ಕಿರುಕುಳದಿಂದಾಗಿ ಕೊತಬಾಲ ಗ್ರಾಪಂ ಪಿಡಿಒ ಮುಕ್ತುಂಹುಸೇನ ಕರಡಿಗುಡ್ಡ ಆತ್ಮಹತ್ಯೆ ಪ್ರಕರಣದ ಸಮಗ್ರ ತನಿಖೆ ಹಾಗೂ ರಾಜ್ಯದ ಎಲ್ಲಾ ಪಿಡಿಒಗಳ ಸೇವಾ ರಕ್ಷಣೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ ಅಧ್ಯಕ್ಷ ಸಿದ್ದಾರ್ಥ ಗೋಠೆ, ಪಿಡಿಒ ಮುಕ್ತಂಹುಸೇನ್ ಕರಡಿಗುಡ್ಡ ಅವರ ಆತ್ಮಹತ್ಯೆ ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆಯಾಗಬೇಕು. ಅವರ ಕುಟುಂಬಕ್ಕೆ ಇಲಾಖೆಯಿಂದ ಸಿಗಬೇಕಾದ ಎಲ್ಲಾ ಆರ್ಥಿಕ ಸೌಲಭ್ಯ, ಬಾಕಿ ವೇತನ ತಕ್ಷಣವೇ ಬಿಡುಗಡೆ ಮಾಡಬೇಕು. ಕುಟುಂಬದ ಓರ್ವ ಸದಸ್ಯರಿಗೆ ಅನುಕುಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಸುರೇಶ ನಾಯಕ



ಮಾತನಾಡಿ, ಮೇಲಾಧಿಕಾರಿಗಳು ಪಿಡಿಒಗಳ ಮೇಲೆ ಕೇವಲ ದಬ್ಬಾಳಿಕೆ ಮಾಡುವ ಬದಲು ಅವರಿಗೆ ಮಾರ್ಗದರ್ಶಕರಾಗಿ ಮತ್ತು ಸಹಕಾರಿಯಾಗಿ ವರ್ತಿಸುವಂತೆ ಇಲಾಖೆಯಿಂದ ಕಟ್ಟುನಿಟ್ಟಿನ ಸೂಚನೆ ಹೊರಡಿಸಬೇಕು.ಸಣ್ಣಪುಟ್ಟ ಸಮಸ್ಯೆಗಳಿಗೆ ರಾಜಕೀಯ ಒತ್ತಡಕ್ಕೆ ಮಣಿದು ಪಿಡಿಒಗಳ ಅಮಾನತ್ತು ಮಾಡುವ ಅವೈಜ್ಞಾನಿಕ ಪದ್ಧತಿಯನ್ನು ಕೂಡಲೇ ಕೈಬಿಡಬೇಕು ಎಂದು ಒತ್ತಾಯಿಸಿದರು.

ಯಾವುದೇ ಅಧಿಕಾರಿಯ ಮೇಲೆ ಇಲಾಖೆ ವಿಚಾರಣೆ ಅಥವಾ ಲೋಕಾಯುಕ್ತ ಪ್ರಕರಣ ದಾಖಲಾದರೆ ನಿರ್ದಿಷ್ಟ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ವಿಚಾರಣೆ ನೆಪದಲ್ಲಿ ಅಮಾನತ್ತಿನಲ್ಲಿಟ್ಟು ಸ್ಥಳ ನಿಯುಕ್ತಗೊಳಿಸದೇ ವೇತನ ಕೂಡ ನೀಡದೇ ಕುಟುಂಬವನ್ನು ಉಪವಾಸ ಇಡುವ ವ್ಯವಸ್ಥೆ ಬದಲಾಗಬೇಕು ಎಂದು ತಿಳಿಸಿದರು.

ಕೂಡಲೇ ಮೀನಾಕ್ಷಿ ಸುಂದರಂ ಸಮಿತಿಯಿಂದ ವರದಿ ಪಡೆದು ಅದರಲ್ಲಿನ ಶಿಫಾರಸ್ಸು ಜಾರಿಗೊಳಿಸುವ ಮೂಲಕ ನೌಕರರ ಸುರಕ್ಷತೆ ಮತ್ತು ಹಿತರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಸಂಘದ ಗೌರವಾಧ್ಯಕ್ಷ ರಾಜು ವಾರದ, ಖುಬಾಸಿಂಗ್ ಜಾಧವ, ರಂಜಿತಾ ಹತ್ತಿ, ಕವಿತಾ ಬಾರಕೋಲ, ವಿಮಲಾ ಕಲ್ಮನಿ, ಶಿವಾನಂದ ನರಸನ್ನವರ ಸೇರಿದಂತೆ ಜಿಲ್ಲೆಯ ವಿವಿಧ ಭಾಗದಿಂದ ಆಗಮಿಸಿದ್ದ ಪಿಡಿಒಗಳು ಭಾಗವಹಿಸಿದ್ದರು.

## ಕಿರುಸುದ್ದಿ

### ಕಾಂಗ್ರೆಸ್‌ನಿಂದ ವಿಜಯೋತ್ಸವ



**ಬಸವನಬಾಗೇವಾಡಿ:** ಬಾಗಲಕೋಟೆ, ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಸಂಗಮೇಶ ಓಲೇಕಾರ ಮಾತನಾಡಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ಜನಪರ ಆಡಳಿತ ಹಾಗೂ ಪಂಚಗ್ಯಾರಂಟಿ ಯೋಜನೆಗಳಿಂದ ಎರಡು ವಿಧಾನಸಭೆ ಮತಕ್ಷೇತ್ರದ ಮತದಾರರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಅಭೂತಪೂರ್ವವಾಗಿ ಆಯ್ಕೆ ಮಾಡಿದ್ದಾರೆ. ಬಾಗಲಕೋಟೆ ಕ್ಷೇತ್ರದಲ್ಲಿ ಸಚಿವರಾದ ಶಿವಾನಂದ ಪಾಟೀಲ, ಸತೀಶ ಜಾರಕಿಹೊಳಿ, ಆರ್.ಬಿ.ತಿಮ್ಮಾಪೂರ, ಸಚಿವರ ಸುಪುತ್ರ ಸಂಯುಕ್ತಾ ಪಾಟೀಲ ಸೇರಿದಂತೆ ಅನೇಕ ಸಚಿವರು ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಹೇಳಿದರು. ರಷ್ಮೀನ ರಾಠೋಡ, ನಗರ ಘಟಕದ ಅಧ್ಯಕ್ಷ ಸುರೇಶಗೌಡ ಪಾಟೀಲ, ಮಹಿಬೂಬ ನಾಯಕೋಡಿ ಮಾತನಾಡಿದರು.

ಮುಖಂಡರಾದ ಬಸವರಾಜ ಹಾರಿವಾಳ, ಬಸಣ್ಣ ದೇಸಾಯಿ,ಶೇಖರ ಗೊಳಸಂಗಿ, ಚಂದ್ರಶೇಖರಗೌಡ ಪಾಟೀಲ, ಸಂಕನಗೌಡ ಪಾಟೀಲ, ರಮೇಶ ಯಳಮೇಲಿ, ಸಂಗನಬಸು ಪೂಜಾರಿ, ಮುರುಗೇಶ ನಾಯ್ಕೋಡಿ, ಅನಿಲ ಪವಾರ, ಜಟ್ಟಿಂಗರಾಯ ಮಾಲಗಾರ, ಪರಶುರಾಮ ಜಮಖಂಡಿ, ಪ್ರವೀಣ ಪೂಜಾರಿ, ಜಗದೇವಿ ಗುಂಡಳ್ಳಿ, ಮಡಬಾ ಬೊಮ್ಮನಳ್ಳಿ, ಕಮಲಸಾಬ ಕೊರಬು, ಹಣಮಂತ ಅಡಿಗಿಮನಿ ಭದ್ರು ಮಣ್ಣೂರ, ಸುಭಾಸ ಗಾಯಕವಾಡ, ದಸ್ತಗೀರ ವಜ್ಜಲ, ಸೇರಿದಂತೆ ಇತರರು ಪಾಲ್ಗೊಂಡಿದ್ದರು.

### ತಾಳಿಕೋಟೆಯಲ್ಲಿ 71ನೇ ದಿನಕ್ಕೆ ಮುಂದುವರಿದ ಧರಣಿ

**ತಾಳಿಕೋಟೆ:** ಪಟ್ಟಣದ ನಾಗರಿಕರ ಅನುಕೂಲಕ್ಕಾಗಿ ನಿರ್ಮಾಣವಾಗಬೇಕಿರುವ 'ಪ್ರಜಾಸೌಧ'ವನ್ನು ಪಟ್ಟಣದ ವ್ಯಾಪ್ತಿಯನ್ನು ಬಿಟ್ಟು ಮೈಲೇಶ್ವರ ಗ್ರಾಮದ ಸಮೀಪ ನಿರ್ಮಿಸುತ್ತಿರುವುದನ್ನು ವಿರೋಧಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಮಂಗಳವಾರಕ್ಕೆ 70ನೇ ದಿನ ಪೂರೈಸಿದೆ. ದೀರ್ಘಕಾಲದ ಈ ಹೋರಾಟಕ್ಕೆ ಸರ್ಕಾರ ಹಾಗೂ ಆಡಳಿತ ವರ್ಗ ಮೌನ ವಹಿಸಿರುವುದು ಹೋರಾಟಗಾರರ ಕೆಂಗಣ್ಣಿಗೆ ಗುರಿಯಾಗಿದೆ. ಮಾತನಾಡಿದ ಹೋರಾಟ ಸಮಿತಿಯ ಮುಖಂಡರಾದ ಶಾಹಿನಾಥ ಮುರಾಳ ಮತ್ತು ಅಮಿತ್ ಮನಗೂಳಿ, ಸಾರ್ವಜನಿಕ ಹಿತಾಸಕ್ತಿಗಾಗಿ ನಡೆಯುತ್ತಿರುವ ಈ ಹೋರಾಟ 70 ದಿನಗಳು ಗಡಿ ದಾಟಿದೆ. ಇಲ್ಲಿ ಭಾಗವಹಿಸಿರುವ ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಕೆಲಸಗಳನ್ನು ಬದಿಗಿಟ್ಟು ಊರಿನ ಹಿತಕ್ಕಾಗಿ ಹೋರಾಡುತ್ತಿದ್ದಾರೆ. ಆದರೆ, ಸರ್ಕಾರ ಕೇವಲ ಪ್ರಸ್ತಾವನೆಗಳಲ್ಲೇ ಕಾಲಹರಣ ಮಾಡುತ್ತಿರುವುದು ವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುತ್ತಪ್ಪ ಚಮಲಾಪುರ, ಮಡು ಸಾಹುಕಾರ, ಮಯಾರ ಪಾಟೀಲ, ಅಮಿತ ಮನಗೂಳಿ, ಪ್ರಕಾಶ ಹಜೇರಿ, ಸುರೇಶ ಹಜೇರಿ, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ಸದ್ದಾಂ ಬೀಳಗಿ, ನಾಗೇಶ ಕಟ್ಟಿಮನಿ, ರವಿ ಕಟ್ಟಿಮನಿ, ಕಳಕುಸಾ ರಂಗರೇಜ್, ಸುರೇಶ ಫುಲೂಸ್, ಸಿರಸ ಕುಮಾರ ಹಜೇರಿ, ಮಹೇಶ ಭಲವಾದಿ, ವಿಶ್ವನಾಥ್ ಹಜೇರಿ ಸೇರಿದಂತೆ ಹೋರಾಟಗಾರರು ಪಾಲ್ಗೊಂಡಿದ್ದರು.

### ವಿದ್ಯುತ್ ಅವಘಡ: ಹಾನಿ

**ಇಂಡಿ:** ನಗರದ ರೈಲ್ವೆ ನಿಲ್ದಾಣದಲ್ಲಿ ವಿದ್ಯುತ್ ಅವಘಡ ಸಂಭವಿಸಿ ಎರಡು ಅಂಗಡಿಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ನಜೀರ ಕುಮಸಗಿ ಅವರಿಗೆ ಸೇರಿದ ಮೊಬೈಲ್ ಅಂಗಡಿ ಹಾಗೂ ಕಟ್ಟಿಮನಿ ಅವರಿಗೆ ಸೇರಿದ ಚಪ್ಪಲ್ ಅಂಗಡಿ ಬೆಂಕಿಗೆ ಆಹುತಿಯಾಗಿವೆ. ಮೊಬೈಲ್ ಅಂಗಡಿಯಲ್ಲಿ ಸುಮಾರು ಒಂದು ಲಕ್ಷ ರೂ. ಮೌಲ್ಯದ ಫೋನುಗಳು ಹಾಗೂ ಇತರೆ ಸಾಮಾನುಗಳು ಸುಟ್ಟು ಹೋಗಿವೆ. ಎಂದು ತಿಳಿದು ಬಂದಿದೆ. ಚಪ್ಪಲ್ ಅಂಗಡಿಯಲ್ಲಿ ಸುಮಾರು ಎರಡು ಲಕ್ಷ ರೂ. ಮೌಲ್ಯದ ಚಪ್ಪಲಗಳು ಹಾಗೂ ಇತರೆ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಆಗಮಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಚನ್ನಪ್ಪ ಬೋಡಿ ನಿಧನ

**ಇಂಡಿ:** ನಗರದ ನೂತನ ಇಂಡಿ ನಗರಾಭಿವೃದ್ಧಿ ಸದಸ್ಯ ದಿ.ಚನ್ನಪ್ಪ ಮಲ್ಲಪ್ಪ ಬೋಡಿ (68) ನಿಧನರಾದರು.



ಮೃತರಿಗೆ ಓರ್ವ ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗ ಇದ್ದಾರೆ. ಶಾಸಕ ಯಶವಂತರಾಯಗೌಡ ಪಾಟೀಲ. ನಗರಾಭಿವೃದ್ಧಿ ಅಧ್ಯಕ್ಷ ಅಜಿತ ಧನಶೆಟ್ಟಿ ಸಂತಾಪ ಸೂಚಿಸಿದ್ದಾರೆ.



ನಿಡಗುಂದಿ: ಪಟ್ಟಣದ ಗ್ರಾಮದೇವತೆ(ದ್ಯಾಮವ್ವ ದೇವಿ) ಜಾತ್ರೆ ನಿಮಿತ್ತ ಮಂಗಳವಾರ ಗ್ರಾಮದೇವತೆ ಮೂರ್ತಿ ಮೆರವಣಿಗೆ ನಾನಾ ವಾದ್ಯವೈಭವಗಳೊಂದಿಗೆ ಅದ್ದೂರಿಯಾಗಿ ನಡೆಯಿತು.

## ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳಿ: ಪಟ್ಟಣಶೆಟ್ಟಿ

**ವಿಜಯಪುರ:** ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆ ವಿಜಯಪುರ ನಗರ ಮಂಡಲದ ವತಿಯಿಂದ ಮಂಗಳವರ ಪೂರ್ವಭಾವಿ ಸಭೆಯು ಜರುಗಿತು. ಈ ಸಭೆಯಲ್ಲಿ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಕರ್ನಾಟಕ ಕಂಡ ಧೀಮಂತ ರಾಜಕೀಯ ಮುತ್ಸದ್ದಿಗಳು ಅವರು, ಮುಖ್ಯಮಂತ್ರಿಗಳಾಗಿ ಭಾಗ್ಯಲಕ್ಷ್ಮೀ ಯೋಜನೆ, ಶಾಲಾ ಮಕ್ಕಳಿಗೆ ಸೈಕಲ್, ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಹೀಗೆ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ವಿಜಯಪುರ ಜಿಲ್ಲೆಗೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದು ಯಡಿಯೂರಪ್ಪನವರು ಅಜಾತಶತ್ರುವಾಗಿದ್ದು ಎಲ್ಲ ಸಮುದಾಯದ ಜನರನ್ನು ಸಮಾನರಾಗಿ ಕಂಡವರಾಗಿದ್ದಾರೆ. ಅವರ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕರೆಕೊಟ್ಟರು. ಸುರೇಶ ಬಿರಾದಾರ, ಮಳುಗೌಡ ಪಾಟೀಲ, ಸಂದೀಪ ಪಾಟೀಲ, ಭೀಮಾಶಂಕರ ಹದನೂರ, ಸ್ವಪ್ನಾ ಕಣಮುಚನಾಳ, ಭರತ ಕೋಳಿ, ವಿಜಯ ಜೋಷಿ, ಪಾಪುಸಿಂಗ ರಜಪೂತ, ರಾಜೇಶ ತಾವಸೆ, ಶರಣಬಸಪ್ಪ ಕುಂಬಾರ, ಅಪ್ಪು ಕುಂಬಾರ, ರಾಜು ಬಿರಾದಾರ, ಜಗದೀಶ ಮುಚ್ಚಂಡಿ, ಸಂತೋಷ ಯಂಕಪ್ಪಗೂಳ, ಪ್ರಹ್ಲಾದ ಕಾಂಬಳೆ, ವಿವೇಕ ತಾವರಗೇರಿ, ಶಿವರಾಜ ಮಡಿವಾಳ, ಮಂಥನ ಗಾಯಕವಾಡ, ಭಾರತಿ ಭುಯ್ಯಾರ, ಶಾಂತಾ ಉತ್ಲಾಸಕರ, ಶಾಂತಾ ಯಳಮೇಲಿ, ಶ್ರೀದೇವಿ ಅವಧಿ, ಬಸಮ್ಮಾ ಗುಜರಿ, ಪ್ರಿಯಾಂಕಾ ಶೇರಖಾನೆ ಉಪಸ್ಥಿತರಿದ್ದರು.



ವಿಜಯಪುರ: ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆ ವಿಜಯಪುರ ನಗರ ಮಂಡಲದ ವತಿಯಿಂದ ಮಂಗಳವರ ಪೂರ್ವಭಾವಿ ಸಭೆಯಲ್ಲಿ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿದರು. ಶಾಂತಾ ಯಳಮೇಲಿ, ಶ್ರೀದೇವಿ ಅವಧಿ, ಬಸಮ್ಮಾ ಗುಜರಿ, ಪ್ರಿಯಾಂಕಾ ಶೇರಖಾನೆ ಉಪಸ್ಥಿತರಿದ್ದರು.

# ಕೆರೆಗಳನ್ನು ಭರ್ತಿ ಮಾಡಲು ಆಗ್ರಹ

**ಆಲಮಟ್ಟಿ:** ಜಿಲ್ಲೆಯ ಎಲ್ಲ ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲು ಕೂಡಲೆ ಎಲ್ಲ ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಹಾಗೂ ಕ್ಲೋಜರ್ ಕಾಮಗಾರಿ ಸರಿಯಾಗಿ ನಿರ್ವಹಿಸುವಂತೆ ಒತ್ತಾಯಿಸಿ ಮಂಗಳವಾರ ಅಖಂಡ ಕರ್ನಾಟಕ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಂಟಿಯಾಗಿ ಬೃಹತ್ ಪ್ರತಿಭಟನೆ ನಡೆಸಿ ಸಿಇ ಕಚೇರಿಗೆ ತಲುಪಿ ಮುಖ್ಯ ಅಭಿಯಂತರ ಡಿ.ಬಸವರಾಜ ರವರಿಗೆ ಮನವಿ ಸಲ್ಲಿಸಿದರು.



ಅ.ಕ.ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ತಾಲೂಕಾಧ್ಯಕ್ಷ ಸೀತಪ್ಪ ಗಣಿ ಮಾತನಾಡಿ, ಲಾಲ್ ಬಹದ್ದೂರ್ ಶಾಸ್ತ್ರೀ ಜಲಾಶಯದ ವ್ಯಾಪ್ತಿಗೆ ಬರುವ ಮುಳವಾಡ ಹಾಗೂ ಚಿಮ್ಮಲಗಿ ಏತ ನೀರಾವರಿ ಯೋಜನೆ ವ್ಯಾಪ್ತಿಗೆ ಬರುವ ಕಾಲುವೆಗಳಿಗೆ ಇಲ್ಲಿಯವರೆಗೂ ಹಿಂಗಾರು ಬೆಳೆಗಳಿಗೆ ನೀರು ಹರಿಸಿ ನಂತರ ಬೆಳೆಗೆ ನೀರು ಪೂರೈಸುವದನ್ನು ಸ್ಥಗಿತಗೊಳಿಸಲಾಗಿದೆ. ನಂತರ ಬೇಸಿಗೆ ಸಂದರ್ಭದಲ್ಲಿ ಜನ ಹಾಗೂ ಜಾನುವಾರಗಳಿಗೆ ಕುಡಿಯುವ ನೀರಿನ ಅನುಕೂಲತೆ ಕಲ್ಪಿಸಲು ಜಿಲ್ಲೆಯಲ್ಲಿರುವ ಎಲ್ಲ ಕೆರೆಗಳಿಗೆ ನೀರು ಹರಿಸಲು ಪ್ರಾದೇಶಕ ಆಯುಕ್ತರು ಅನುಮತಿ ನೀಡಿದ್ದರಿಂದ ಏಪ್ರಿಲ್ 30 ರ ವರೆಗೆ ನೀರು ಹರಿಸಿ ಈ ಸದ್ಯ ಸ್ಥಗಿತಗೊಳಿಸಲಾಗಿದೆ ಇಲ್ಲಿಯವರೆಗೂ ಕೇವಲ 30% ರಿಂದ 35% ರಷ್ಟು ಮಾತ್ರ ಕೆರೆಗಳಿಗೆ ನೀರು ಬಿಡಲಾಗಿದೆ ಈ ಭಾರಿ ಬೇಸಿಗೆ ಬಿಸಲಿನ ಪ್ರಖರತೆ ಹೆಚ್ಚಿರುವದರಿಂದ ಅಲ್ಪ ಪ್ರಮಾಣದಲ್ಲಿ ಹರಿಸಿದ ನೀರು ಬೇಗನೆ ಭಾಷ್ಪಿಕರಣ ಹೊಂದಿ ಖಾಲಿಯಾಗುತ್ತವೆ ಎಂದರು.

ಬೇಸಿಗೆ ಒಂದು ತಿಂಗಳು ಇರುವದರಿಂದ ಕೆರೆಗಳಲ್ಲಿಯ ನೀರು ಬೇಗನೆ ಬರಿದಾಗುತ್ತದೆ. ಮುಂದೆ ಜಾನುವಾರುಗಳಿಗೆ ಕುಡಿಯಲು ನೀರು ಸಿಗುವುದಿಲ್ಲ ಆದ್ದರಿಂದ ತುರ್ತಾಗಿ ಕಾಲುವೆಗಳಿಗೆ ನೀರು ಹರಿಸುವದನ್ನು ಪ್ರಾರಂಭಿಸಿ ಪೂರ್ಣ ಪ್ರಮಾಣದಲ್ಲಿ ಜಿಲ್ಲೆಯ ಎಲ್ಲ ಕೆರೆಗಳನ್ನು ಭರ್ತಿ ಮಾಡಬೇಕು. ಕಾಲುವೆಗೆ ನೀರು ಹರಿಸುವದನ್ನು ಸ್ಥಗಿತಗೊಳಿಸಿದ ಕೂಡಲೆ ಕ್ಲೋಜರ ಕಾಮಗಾರಿ ಪ್ರಾರಂಭಿಸಬೇಕು. ಪ್ರತಿ ವರ್ಷವು ಕ್ಲೋಜರ್ ಕಾಮಗಾರಿಯು ಕುಂಠಿತಗೊಳುತ್ತಿದೆ. ಕಾಲುವೆಯ ಕೊನೆಯ ಅಂಚಿನವರೆಗೂ ನೀರು ತಲುಪದೆ ಕೊನೆಯಭಾಗದ ರೈತರು ನೀರಿನಿಂದ ವಂಚಿತರಾಗುತ್ತಿದ್ದಾರೆ ಎಂದರು.

ಪ್ರತಿ ವರ್ಷ ಕಾಲುವೆ ಸ್ವಚ್ಛ ಗೊಳಿಸಲು ಒಟ್ಟು ಎರಡು ರೀತಿಯ ಕಾಮಗಾರಿಗಳ ಯೋಜನೆ ಹಮ್ಮಿಕೊಳ್ಳುತ್ತೀರಿ ಒಂದು ಕ್ಲೋಜರ್ ಕಾಮಗಾರಿಯಂತ ಮಾಡುತ್ತೀರಿ ಇನ್ನೊಂದು ವಾರ್ಷಿಕ ನಿರ್ವಹಣ ವೆಚ್ಚವೆಂದು ಅಂತಾ ಪ್ರತಿ ವರ್ಷವು ಈ ಯೋಜನೆಗಳಡಿ ಕೋಟ್ಯಾಂತರ ಹಣ ವ್ಯಯವಾಗುತ್ತಿದೆ. ಈ ಎರಡು ಯೋಜನೆಗಳ ಉದ್ದೇಶವೇನು ಎರಡು ಯೋಜನಗಳ ಕಾರ್ಯ ಮಾಡುವುದು ಒಂದೆಯಾಗಿದೆ ಕಾಲುವೆಯಲ್ಲಿ ಹೂಳು ಹಾಗೂ ಗಿಡ ಗಂಟಿಗಳ ತೆರುವಗೊಳಿಸುವ ಕಾರ್ಯ ನಡೆಸುವ ಉದ್ದೇಶವಾಗಿದ್ದರಿಂದ ಇಲ್ಲಿ ಅನಾವಶ್ಯಕವಾಗಿ ಎರಡು ಯೋಜನೆಗಳ ನೆಪದಲ್ಲಿ ಸಾರ್ವಜನಿಕರ ಹಣ ದುರುಪಯೋಗ ಆಗುತ್ತಿದೆ ಎಂದು ಅನುಮಾನ ಬರುತ್ತಿದೆ ಎಂದರು ಹೆಸರಿಗೆ ಮಾತ್ರ ಕ್ಲೋಜರ ಕಾಮಗಾರಿ ಹಾಗೂ ವಾರ್ಷಿಕ ನಿರ್ವಹಣ ವೆಚ್ಚವೆಂದು (ಂ,ಒ,ಇ) ನೆಪ ಮಾತ್ರಕ್ಕೆ ಇದೆ. ಆದರೆ ವಾಸ್ತವಿಕವಾಗಿ ಕಾಲುವೆಗಳೆ ಸ್ವಚ್ಛಗೊಳಿಸುವ ಕಾರ್ಯ ನಡೆಯುವದಿಲ್ಲ ಉದ್ದೇಶಿತ ಯೋಜನೆ ಹಳ್ಳ ಹಿಡಿದಂತಾಗಿದೆ. ಕ್ಲೋಜರ ಕಾಮಗಾರಿ ಪ್ರಾಮಾಣಿಕವಾಗಿ ಕಾರ್ಯ ರೂಪಕ್ಕೆ ತರಬೇಕೆಂದು ಆಗ್ರಹಿಸಿದ್ದಾರೆ.

ಉಮೇಶ ವಾಲೀಕಾರ, ಪ್ರಲ್ಹಾದ ನಾಗರಾಳ, ಸಾಯಬಣ್ಣ ಅಂಗಡಿ, ಇಬ್ರಾಹೀಂ ವಾಲೀಕಾರ, ಮಲ್ಲಪ್ಪ ಹಳೆನಿಡಗುಂದಿ, ಬಸಪ್ಪ ತೋಳಮಟ್ಟಿ, ಶ್ರೀಶೈಲ ಕಲಾದಗಿ, ಗುರಪ್ಪ ಪೂಜಾರಿ, ಸಂದೀಪ ನಾಗರಡ್ಡಿ, ಸೋಮೇಶ ನಾಗರಡ್ಡಿ, ಮುದಕಪ್ಪ ಮೇಟಿ,ಮಂಜು ಬಿರಾದಾರ, ಅಶೋಕ ಹಡಪದ ಸೇರಿದಂತೆ ಮತ್ತಿತರರಿದ್ದರು.

## ಗರ್ಭಿಣಿಯರ ಆರೈಕೆ, ಸುರಕ್ಷತೆಗೆ ಆದ್ಯತೆ ನೀಡಿ

**ವಿಜಯಪುರ:** ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಯೋಜನೆಯನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಗರ್ಭಿಣಿಯರ ಆರೈಕೆ ಮತ್ತು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ.ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಆರೋಗ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗರ್ಭಿಣಿಯರ ಆರೋಗ್ಯ ತಪಾಸಣೆಯನ್ನು 12 ರಿಂದ 14 ಬಾರಿ ನಿಯಮಿತವಾಗಿ ಕೈಗೊಳ್ಳಬೇಕು. ಅನಿಮಿಯಾ, ಅಧಿಕ ರಕ್ತದೊತ್ತಡ, ಮಾನಸಿಕ ಆರೋಗ್ಯ ಮತ್ತು ವಿವಿಧ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿ ಗುರುತಿಸಿ ಉಚಿತ ಆರೋಗ್ಯ ಚಿಕಿತ್ಸೆಯನ್ನು ಒದಗಿಸಬೇಕು ಎಂದರು.

ಜಿಲ್ಲೆಯಲ್ಲಿ ತಾಯಿ-ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಆರ್.ಸಿ.ಚ್ ತಂತ್ರಾಂಶದಲ್ಲಿ ಗರ್ಭಿಣಿಯರಿಗೆ ಕಾಲ-ಕಾಲಕ್ಕೆ ಆರೋಗ್ಯದ ಕುರಿತು ತಿಳಿವಳಿಕೆ ನೀಡುವಂತೆ ಸೂಚನೆ ನೀಡಿದರು. ಹೆರಿಗೆಯ ನಂತರ ಮಗುವಿಗೆ ಒಂದು ವರ್ಷ ತುಂಬುವವರೆಗೆ ಪಡೆದುಕೊಳ್ಳಬೇಕಾದ ಚಿಕಿತ್ಸೆ, ಔಷಧೋಪಚಾರ, ಲಸಿಕೆ ಸೌಲಭ್ಯಗಳ ಮಾಹಿತಿಯನ್ನು ಒದಗಿಸಬೇಕು. ಜೊತೆಗೆ ಆರೋಗ್ಯ ಸೇವಾ ಸೌಲಭ್ಯಗಳ ಮಾಹಿತಿ ನೀಡಬೇಕೆಂದು ಸೂಚಿಸಿದರು.

ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣ ಕಡಿಮೆ ಮಾಡುವದಕ್ಕೆ ಗುಣಾತ್ಮಾಕ ಆರೋಗ್ಯ ಸೇವೆ, ಪ್ರಸವ ಪೂರ್ವ ಆರೈಕೆ, ಗಂಡಾಂತರ ಗರ್ಭಿಣಿ ಹೆರಿಗೆಗಳನ್ನು ಗುರುತಿಸಿ ಅವರಿಗೆ ಪ್ರಸೂತಿ ತಜ್ಞ ವೈದ್ಯರಿಂದ ಆರೈಕೆ ಹಾಗೂ ಆಪ್ತ ಸಮಾಲೋಚನೆ ಮೂಲಕ ಶೇ.100ರಷ್ಟು ಹೆರಿಗೆಗಳನ್ನು ಆರೋಗ್ಯ ಸಂಸ್ಥೆಗಳಲ್ಲಿ ಮಾಡಲಾಗುತ್ತಿದೆ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಶಿವಾನಂದ ಮಾಸ್ತಿಹೊಳಿ, ಡಿಎಚ್‌ಇ, ಡಬ್ಲೂಎಚ್‌ಒ ಅಧಿಕಾರಿಗಳಾದ ಡಾ.ಮುಕುಂದ ಗಲಗಲಿ, ಆರ್.ಸಿಎಚ್‌ಒ ಬಿ.ಎಲ್.ಡಿ.ಈ ಸಂಸ್ಥೆಯ ಪ್ರಸೂತಿ ತಜ್ಞರು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಎಲ್ಲ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಎಲ್ಲ ತಾಲೂಕಾ ಆರೋಗ್ಯಾಧಿಕಾರಿಗಳು, ಮುಖ್ಯ ಆಡಳಿತ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.



## ಸೇತುಬಂಧ ಕಾರ್ಯಕ್ರಮದ ಸದುಪಯೊಗ ಪಡೆಯಿರಿ

**ವಿಜಯಪುರ:** ಸೇತುಬಂಧ ಕಾರ್ಯಕ್ರಮ ನಿಮ್ಮ ಬದುಕಿನಲ್ಲಿರುವ ನಿರಾಸೆಯ ಸಂಹಾರವಾಗಿ ಸಾಧನೆಯ ಸಾಕರ ಮಾಡಿಸುತ್ತದೆ ಎಂದು ಪ್ರಾಂಶುಪಾಲ ಮಂಜುನಾಥ ಮ ಜುನಗೊಂಡ ಹೇಳಿದರು.

ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಸಲಾಗಿದ್ದ 2026-27ನೇ ಸಾಲಿಗೆ ದಾಖಲಾತಿ ಪಡೆದುಕೊಂಡ ಪಿಯುಸಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಬ್ರಿಡ್ಜ ಕೋಸ್‌ರ್ ಉದ್ಘಾಟನೆ ಹಾಗೂ ಶಾರದಾಮಾತೆಯ ಪೂಜಾ ಕಾರ್ಯಕ್ರಮದ ಕುರಿತು ಮಾತನಾಡಿದ ಅವರು, ಸೇತುಬಂಧ ಕಾರ್ಯಕ್ರಮವು ಇಂದಿನ ಕ್ಷಣಗಳನ್ನು ಮುಂದಿನ ಬದುಕಿನೊಂದಿಗೆ ಬೆಸೆಯುವ ಕಾರ್ಯಕ್ರಮವಾಗಿದೆ. ಮಕ್ಕಳಲ್ಲಿ ಅಡಗಿರುವ ಸೂಪ್ತವಾದ ಅಂತಃಶಕ್ತಿ ಜಾಗೃಗೊಳಿಸಿ ವಿಜ್ಞಾನ ವಿಭಾಗದಲ್ಲಿ ಬರುವ ಸವಾಲುಗಳನ್ನು ಎದುರಿಸುವುದಕ್ಕೆ ತಯಾರು ಮಾಡುವ ಗರಡಿ ಮನೆಯಾಗಿದ್ದು, ಇಂದು ಕಲಿತಿದ್ದು ಮುಂದೆ ತುಂಬ ನೆರವಿಗೆ ಬರುವ ಕಾರಣ ಈ ಸೇತುಬಂಧವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು.

ಎಕ್ಸಲಂಟ್ ಕಾಲೇಜು ಮೊದಲಿನಿಂದಲೂ ಅತ್ಯುತ್ತಮ ಫಲಿತಾಂಶ ನೀಡುವ ಮೂಲಕವೇ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದಿಗೂ ಸಹ ಇಲ್ಲಿ ದಾಖಲಾತಿ ಪಡೆಯಬೇಕು ಎನ್ನುವುದು ಬಹಳಷ್ಟು ವಿದ್ಯಾರ್ಥಿಗಳ ಹಾಗೂ ಪಾಲಕರ ಅಪೇಕ್ಷೆಯಾಗಿರುತ್ತದೆ. ಆ ಅಪೇಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುವ ಸಂಸ್ಥೆಯ ಭಾಗವಾಗಿ ಬಂದಿರುವ ಈ ಮಕ್ಕಳು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಸಾಧನೆ ಮಾಡುತ್ತಾರೆ ಎಂದು ಆಸೆಯು ವ್ಯಕ್ತಪಡಿಸಿದರು.

ಶೈಕ್ಷಣಿಕ ಸಂಯೋಜಕ ಹಾಗೂ ಗಣಿತ ವಿಭಾಗದ ಮುಖ್ಯಸ್ಥ ಮಂಜುನಾಥ ತುಮ್ಮರಮಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಒಂದೊಂದು ಕನಸನ್ನು ಇಟ್ಟುಕೊಂಡು ಬಂದಿರುತ್ತಾರೆ. ಅಥವಾ ಬಂದ ಮೇಲೆ ಕನಸನ್ನು ಕಟ್ಟಿಕೊಳ್ಳುತ್ತಾರೆ. ಅವರ ಕನಸುಗಳಿಗೆ ಸಹಕಾರಿಯಾಗಿದುಡಿಯುವ ಹೆಮ್ಮೆಯ ಸಂಸ್ಥೆ ನಮ್ಮದಾಗಿದ್ದು ಇಂದು ನಿಮ್ಮ ಕನಸನ್ನು ನನಸು ಮಾಡುವಕಡೆಗೆನಾವುಸದಾತುಡಿತ ಹೊಂದಿರುತ್ತೇವೆ. ಒಂದು ವರ್ಷದ ಅವಧಿಯಲ್ಲಿ ನಾವೇನು ಮಾಡಬಹುದು ಹಾಗೂ ನಮ್ಮಲ್ಲಿ ಇರುವ ಸಾಮರ್ಥ್ಯಎಂತದು ಎನ್ನುವುದನ್ನು ಕಂಡುಕೊಳ್ಳುವುದಕ್ಕೆ ಈ ಸೇತುಬಂಧಕಾರ್ಯಕ್ರಮ ನೆರವಾಗಲಿದೆ ಎಂದರು.

ಲಾಂಗ್‌ಟರ್ಮ ವಿಭಾಗದಶೈಕ್ಷಣಿಕಸಂಯೋಜಕ ಯಗ್ನೇಶ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ರೇವಣಸಿದ್ದಪ್ಪ ರಾಜಾಪೂರ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರಭುರೇಷ್ಮೆ, ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಮಂಜುನಾಥ ನಿಂಬಿಕಾಯಿ, ಕನ್ನಡ ವಿಭಾಗದ ಮುಖ್ಯಸ್ಥಶರಣಗೌಡ ಪಾಟೀಲ್, ಹಿಂದಿ ವಿಭಾಗದ ಮುಖ್ಯಸ್ಥೆ ನೇತ್ರಾವತಿ ಕನಮಡಿ ಉಪಸ್ಥಿತರಿದ್ದರು. ಸೌಜನ್ಯಾ ಚಿಣ್ಣನಗೌಡರ ಪ್ರಾರ್ಥಿಸಿದರು. ಆಂಗ್ಲ ಉಪನ್ಯಾಸಕ ಮುಸ್ತಾಕ್ ಮಲಘಾಣ ನಿರೂಪಿಸಿದರು.




## ರೈತರ ಜಾಗೃತಿ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ

**ದೇವರಹಿಪ್ಪರಗಿ:** ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಆಗ್ರಹಿಸಿ ಮೇ 8ರಂದು ವಿಜಯಪುರದಲ್ಲಿ ರಾಜ್ಯಮಟ್ಟದ ರೈತರ ಜಾಗೃತಿ ಸಮಾವೇಶ ಜರುಗಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಅಧ್ಯಕ್ಷ ಈರಪ್ಪ ಕುಳೆಕುಮಟಗಿ ತಿಳಿಸಿದ್ದಾರೆ.

ತಾಲೂಕಿನ ದೇವರಹಿಪ್ಪರಗಿ, ದೇವೂರ, ಮಣೂರ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ರಾಜ್ಯಮಟ್ಟದ ರೈತರ ಸಮಾವೇಶಕ್ಕೆ ಆಗಮಿಸುವಂತೆ ಕರೆ ನೀಡಿ ಮಾತನಾಡಿದ ಅವರು, ಈ ಸಮಾವೇಶದಲ್ಲಿ ರಾಜ್ಯದ ಎಲ್ಲ ಕಡೆಯಿಂದ ಲಕ್ಷಾಂತರ ರೈತರು ಭಾಗವಹಿಸಲಿದ್ದಾರೆ. ಕಬ್ಬು ಬೆಳೆಗಾರರಿಗೆ 3.5 ನೂರು ಕೋಟಿ 5.5ನೂರು ಕೋಟಿ ರೂ. ಮೀಸಲು ಇಡಬೇಕು. ಉಳ್ಳಾಗಡ್ಡಿ ಬೆಳೆದ ರೈತರು ಬೆಲೆ ಇಲ್ಲದೆ ಬೀದಿಗೆ ಬರುವಂತಾಗಿದೆ, ರೈತರ ಶ್ರಮಕ್ಕೆ ಬೆಲೆ ಸಿಗುವಂತ್ತಾಗಬೇಕು, ರಾಜ್ಯ ಹಾಗೂ ಕೇಂದ್ರ ಸರಕಾರ ಡಿಸಿಸಿ ಬ್ಯಾಂಕ್‌ದಿಂದ ಸೊನ್ನೆ ಬಡ್ಡಿದರದಲ್ಲಿ ಸಾಲ ಸಿಗುವಂತೆ 1 ಲಕ್ಷ ಕೋಟಿ ಇಡಬೇಕು. ಈ ನಿಟ್ಟಿನಲ್ಲಿ ಸಮಾವೇಶದಲ್ಲಿ ಸರ್ಕಾರವನ್ನು ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಗೌರವಾಧ್ಯಕ್ಷ ಶಿವಾನಂದ ಹಿರೇಮಠ ಮಾತನಾಡಿ, ರೈತ ಸಮಾವೇಶ ಕುರಿತು ಪ್ರತಿ ಗ್ರಾಮ ಗ್ರಾಮಕ್ಕೆ ಹೋಗಿ ರೈತರನ್ನು ಜಾಗೃತಿ ಮಾಡುತ್ತಿದ್ದೇವೆ. ರೈತ ಜಾಗೃತಿ ಸಮಾವೇಶಕ್ಕೆ ದೇವರಹಿಪ್ಪರಗಿ ತಾಲೂಕಿನಿಂದ ಸಹಸ್ರಾರು ಸಂಖ್ಯೆಯಲ್ಲಿ ರೈತರು ಪಾಲ್ಗೊಂಡು ಬೆಂಬಲ ಸೂಚಿಸುತ್ತೇವೆ ಎಂದು ಹೇಳಿದರು.



ಉಪಾಧ್ಯಕ್ಷ ಸಿ.ಎಸ್.ಪ್ಯಾಟಿ, ಸಿದ್ದನಗೌಡ ಪಾಟೀಲ, ಹಣಮಂತ್ರಾಯಗೌಡ ಪಾಟೀಲ, ಮಲ್ಲನಗೌಡ ಪಾಟೀಲ, ಸಾಹೇಬಗೌಡ ಪಾಟೀಲ, ಮಾತನಾಡಿದರು. ರೈತರ ಜಾಗೃತಿ ಮುಖಂಡರಾದ ರುದ್ರಯ್ಯ ಹಿರೇಮಠ, ಶಾಕಿರಾ ಹೆಬ್ಬಾಳ, ಸಂಪತ್ ಜಮಾದಾರ, ಕಾಶೀಪತಿ ಕುದರಿ, ಬಾಬು ವಗ್ಗರ, ರಾಜು ನಾಟೀಕಾರ, ಸಿದ್ದು ಬಾವಿಮನಿ, ಧುಳಪ್ಪ ಮೆಟಗಾರ, ಭಲಭೀಮ ಮೆಟಗಾರ, ಸೇರಿದಂತೆ ಪದಾಧಿಕಾರಿಗಳು, ರೈತರು ಉಪಸ್ಥಿತರಿದ್ದರು.

## ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಕಾರ್ಯಕರ್ತರು ಭಾಗಿಯಾಗಿ

**ಕೊಲ್ಹಾರ:** ದನಿವರಿಯದ ಧೀಮಂತ ನಾಯಕ, ರಾಜಕೀಯ ಮುತ್ಸದ್ದಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಚಿತ್ರದುರ್ಗದಲ್ಲಿ ನಡೆಯುತ್ತಿದ್ದು, ಅಭಿಮಾನಿಗಳು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಬಿಜೆಪಿ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಮನವಿ ಮಾಡಿದರು.

ಪಟ್ಟಣದಲ್ಲಿ ಮಂಗಳವಾರ ಬಿಜೆಪಿ ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಜನಸೇವೆಯಲ್ಲಿ ಸಾರ್ಥಕ 50ನೇ ವರ್ಷದ ಅಭಿಮಾನೋತ್ಸವದ ಸಿದ್ಧತಾ ಪೂರ್ವಭಾವಿ ಸಭೆಗೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ನಡೆದು ಬಂದ ದಾರಿ ಕಲ್ಲು, ಮುಳ್ಳಿನ ಹಾದಿಯಾಗಿತ್ತು. ತಳಮಟ್ಟದಿಂದ ಪಕ್ಷಕ್ಕಾಗಿ ದುಡಿದು, ಹಳ್ಳಿಗಳಲ್ಲಿ ಸೈಕಲ್‌ನಲ್ಲಿ ಸಂಚಾರ ಮಾಡಿ ಪಕ್ಷ ಸಂಘಟನೆ ಮಾಡಿದ್ದಾರೆ. ತಾವು ಮುಖ್ಯಮಂತ್ರಿಯಾಗಿದ್ದ ಅವದಿಯಲ್ಲಿ ರಾಜ್ಯಕ್ಕೆ ಅಷ್ಟೇ ಅಲ್ಲ ನಮ್ಮ ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಡೋಣಿ ನದಿಯಲ್ಲಿ ಮುಳುಗಡೆಯಾದ ಡೋಣೂರು, ಹುಣಶ್ಯಾಳ, ಗರಸಂಗಿ ರೋಣಿಹಾಳ ಗ್ರಾಮಗಳಿಗೆ ಪುನರ್ವಸತಿ ಕಲ್ಪಿಸಿದ್ದಾರೆ. ಹೆಣ್ಣುಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್ ಆಗಿರಬಹುದು ಇನ್ನು ಅನೇಕ ಜನಪರ ಕೆಲಸಗಳನ್ನು ಮಾಡಿದ ಯಡಿಯೂರಪ್ಪ ಅವರಿಗೆ ಗೌರವ ಸಲ್ಲಿಸಲು ಅಭಿಮಾನೋತ್ಸವ ನಡೆಸಲಾಗುತ್ತಿದೆ ಎಂದರು.



ಮಂಡಲ ಅಧ್ಯಕ್ಷ ಸಿದ್ದರಾಮ ಕಾಖಂಡಕಿ, ಮುಖಂಡರಾದ ಸಂಗಮೇಶ ಹೌದೇ, ಪರಮಾನಂದ ತನಿಕೆದಾರ್, ಚಿನ್ನಪ್ಪ ಗಿಡ್ಡಪ್ಪಗೋಳ, ತುಳಸಿಗೇರಿ ಹಗೆದಾಳ, ಮಲ್ಲಿಕಾರ್ಜುನ್ ದೇವರಮನಿ, ಸಂಗಮೇಶ ಮೂರನಾಳ, ಇಸ್ಮಾಯಿಲ್ ತಹಸಿದ್ದಾರ್ ಸೇರಿದಂತೆ ಇತರರು ಇದ್ದರು.

## ಸರ್ವಾಂಗೀಣ ಅಭಿವೃದ್ಧಿ ಹೊಂದಲು ಕ್ರೀಡೆಗೆ ಮಹತ್ವ ನೀಡಿ

**ಸಿಂದಗಿ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಜಯಪುರ ವಲಯದಲ್ಲಿ 50ಕ್ಕೂ ಹೆಚ್ಚು ಪದವಿ ಕಾಲೇಜುಗಳಿದ್ದರೂ, ಕ್ರೀಡಾ ಸ್ಪರ್ಧೆಯಲ್ಲಿ ಕೇವಲ 6 ತಂಡಗಳು ಮಾತ್ರ ಭಾಗವಹಿಸಿರುವುದು ವಿಷಾದನೀಯ ಸಂಗತಿ ಎಂದು ಕೃಷಿಕ ಸಮಾಜದ ತಾಲೂಕಾಧ್ಯಕ್ಷ, ಸಂಸ್ಥೆಯ ನಿರ್ದೇಶಕ ಶಿವಪ್ಪಗೌಡ ಬಿರಾದಾರ ಕಳವಳ ವ್ಯಕ್ತಪಡಿಸಿದರು.

ನಗರದ ತಾ.ಶಿ.ಪ್ರಮಂಡಳಿಯ ಸಿ.ಎಂ.ಮನಗೂಳಿ ಪದವಿ ಮಹಾವಿದ್ಯಾಲಯ ಹಾಗೂ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ವಿಜಯಪುರ ದ್ವಿತೀಯ ವಲಯದ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ ಮಾತನಾಡಿ, ಕ್ರೀಡೆಗಳು ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅತ್ಯಂತ ಅಗತ್ಯ. ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಹಿರಿಯ ಪತ್ರಕರ್ತ ಶಾಂತು ಹಿರೇಮಠ, ಆಲಮೇಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಾದಿಕ ಸುಂಬಡ, ಎಚ್.ಎಂ.ಉತ್ನಾಳ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಎಸ್.ಎಂ.ಬಿರಾದಾರ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ರವಿ ಗೋಲಾ, ಉಪನ್ಯಾಸಕರಾದ ರಮೇಶ ಯಂಕಂಚಿಕರ, ಎಸ್.ಎ.ಜಾಗೀರದಾರ್, ಎಂ.ಎಂ. ಕೆಂಭಾವಿ, ಕೆ.ಎಚ್.ಸೋಮಾಪೂರ, ಕ್ರೀಡಾಕೂಟದ ಸಂಘಟನಾ ಕಾರ್ಯದರ್ಶಿ ಡಾ.ಅಂಬರೀಶ ಬಿರಾದಾರ, ರಾಹುಲ ಕಾಂಬಳೆ, ಸತೀಶ ಬಿರಾದಾರ ಇದ್ದರು. ಉತ್ತಮ ಪ್ರದರ್ಶನ ನೀಡಿದ 3 ತಂಡಗಳಿಗೆ ಸಂಸ್ಥೆಯ ನಿರ್ದೇಶಕ ಭೀಮಾಶಂಕರ ನೆಲ್ಲಗಿ, ಪ್ರಥಮ ದರ್ಜೆ ಗುತ್ತಿಗೆದಾರ ಮುತ್ತು ಮುಂಡೇವಾಡಗಿ ಕ್ರೀಡಾಪಟುಗಳಿಗೆ ಟ್ರೋಫಿ, ಬಹುಮಾನ ವಿತರಿಸಿದರು. ಪ್ರಥಮ ಸ್ಥಾನ ತಾಳಿಕೋಟೆಯ ಎಚ್.ಎಸ್.ಪಾಟೀಲ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ದ್ವಿತೀಯ ಸ್ಥಾನವನ್ನು ಸಿಂದಗಿಯ ಸಿ.ಎಂ.ಮನಗೂಳಿ ಪದವಿ ಮಹಾವಿದ್ಯಾಲಯ, ತೃತೀಯ ಸ್ಥಾನ ಜೆ.ಎಚ್.ಪಟೇಲ್ ಶಿಕ್ಷಣ ಮಹಾವಿದ್ಯಾಲಯವು ಗಿಟ್ಟಿಸಿಕೊಂಡಿತು. ಸಂತೋಷ ಬಳಗೊಂಡ ಉತ್ತಮ ಹೊಡೆತಗಾರ, ಉಮಾಕಾಂತ ಚವ್ಹಾಣ ಉತ್ತಮ ತೂರುಗಾರ, ಅಮೀತ ಕನವಳ್ಳಿ ಸರ್ವಾಂಗೀಣ ಆಟಗಾರ, ಸತೀಶ ಹೂನಳ್ಳಿ ಉತ್ತಮ ಲಿಬ್ರೋ ಪ್ರದರ್ಶಿಸಿ ಪಾರಿತೋಷಕ ಪಡೆದುಕೊಂಡರು.



## ನಾಡಗೌಡರಿಗೆ ಸಚಿವ ಸ್ಥಾನ ನೀಡಲು ಆಗ್ರಹ

**ಮುದ್ದೇಬಿಹಾಳ:** ಕಳೆದ ಏಳು ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರಾಗಿ ಪಕ್ಷದ ನಿಷ್ಠೆ ಇಟ್ಟುಕೊಂಡು, ಆರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಸಿ.ಎಸ್.ನಾಡಗೌಡ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನಮಾನ ನೀಡಿ ಗೌರವಿಸಬೇಕು ಎಂದು ರಾಷ್ಟ್ರೀಯ ಯುವ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ ವಿನಂತಿಸಿದ್ದಾರೆ.

ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವಿನ ಸಂದರ್ಭದಲ್ಲಿ ಪತ್ರಿಕಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ನಾಯಕರು ತೀರ್ಮಾನಿಸಿದಂತೆ ಚುನಾವಣೆ ನಂತರ ಕೆಲವು ಸಚಿವರು ಬದಲಾವಣೆ ಮಾಡಿ ಹಿರಿಯ ಮತ್ತು ಪಕ್ಷಕ್ಕಾಗಿ ದುಡಿದ ಶಾಸಕರನ್ನು ಸಚಿವ ಸ್ಥಾನಕ್ಕೆ ಗುರುತಿಸುವ ಬಗ್ಗೆ ಚರ್ಚೆಯಾಗಿತ್ತು. ನಾಡಗೌಡ ಅವರು ಸಚಿವ ಸ್ಥಾನಕ್ಕೆ ಅರ್ಹ ಅಭ್ಯರ್ಥಿಯಾಗಿದ್ದು ಪಕ್ಷಕ್ಕೆ ಹೊಸ ಚೈತನ್ಯ ನೀಡುತ್ತಾರೆ. ಮತಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ, ಸರಳ ಸಜ್ಜನಿಕೆಯ ರಾಜಕಾರಣಿ ಎಂದು ಹೆಸರು ಮಾಡಿದ್ದರೆ. ಹೀಗಾಗಿ ಜಿಲ್ಲೆಯ ಇಬ್ಬರು ಸಚಿವರಲ್ಲಿ ಒಬ್ಬರನ್ನು ಬದಲಿಸಿ ಆದರೂ ಅವರಿಗೆ ಸ್ಥಾನ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಮುಖಂಡರಾದ ರಫೀಕ್ ಶಿರೋಳ, ಸಿಕಂದರ್ ಜಾನ್ವೇಕರ, ರಾಮಣ್ಣ ನಾಯಕಾಮಕ್ಕಳ, ಜಾಕಿರಹುಸೇನ್ ಮೂಲಿಮನಿ ಇತರರು ಉಪಸ್ಥಿತರಿದ್ದರು.



## ಮೇ 8ರಂದು ರೈತ ಜಾಗೃತಿ ಬೃಹತ್ ಸಮಾವೇಶ

**ನಾಲತವಾಡ:** ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮೇ 8ರಂದು ವಿಜಯಪುರದಲ್ಲಿ ನಡೆಯಲಿರುವ 4ನೇ ಬೃಹತ್ ರೈತ ಜಾಗೃತಿ ಸಮಾವೇಶದ ಹಿನ್ನಲೆ ತಾಲೂಕಿನ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರೈತ ಮುಖಂಡರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಮುಖಂಡ ಶಶಿಧರ ಬಂಗಾರಿಗೌಡ್ರು, ರೈತರ ಬದುಕಿಗೆ ಸಂಬಂಧಿಸಿದ ಅನೇಕ ತುರ್ತು ಸಮಸ್ಯೆಗಳು ಇನ್ನೂ ಪರಿಹಾರ ಕಂಡಿಲ್ಲ. ಈ ಹಿನ್ನೆಲೆಯಲ್ಲಿ ಸಮಾವೇಶ ಆಯೋಜಿಸಲಾಗಿದ್ದು, ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ರೈತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಕೃಷಿ ಉತ್ಪನ್ನಗಳಿಗೆ ನ್ಯಾಯಸಮ್ಮತ ಬೆಲೆ, ಜಮೀನು ಕಳೆದುಕೊಂಡ ರೈತರಿಗೆ ಶೀಘ್ರ ಪರಿಹಾರ, ನೀರಾವರಿ ಯೋಜನೆಗಳ ಸಮರ್ಪಕ ಜಾರಿ, ಸೇರಿದಂತೆ ರೈತರ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗುವುದು ಎಂದು ಹೇಳಿದರು.

ರೈತ ಮುಖಂಡ ಜಿ.ಮಹಾಂತಗೌಡ ಗಂಗನಗೌಡರ ಮಾತನಾಡಿ, ತಾಲೂಕಿನಲ್ಲಿ ರೈತರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸಮರ್ಪಕ ನೀರಾವರಿ ವ್ಯವಸ್ಥೆ ಜಾರಿಯಾದರೆ ರೈತರ ಬದುಕು ಹಸನಾಗಲಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ನಡೆಯುವ ರೈತ ಸಮಾವೇಶದಲ್ಲಿ ಭಾಗವಹಿಸಿ ರೈತರ ಸಮಸ್ಯೆಗಳನ್ನು ಸಂಘದ ಅಧ್ಯಕ್ಷರ ಗಮನಕ್ಕೆ ತರಲಾಗುವುದು ಎಂದರು.



ರೈತ ಮುಖಂಡ ಸಂಗಣ್ಣ ಕುಳಗೇರಿ ಮಾತನಾಡಿದರು.

ರೈತ ಮುಖಂಡರಾದ ಮುತ್ತುಸೌಕಾರ ಅಂಗಡಿ, ಬಾಪುಗೌಡ ಪಾಟೀಲ, ಚಂದ್ರಶೇಖರ್ ಗಂಗನಗೌಡರ, ಪರಸಪ್ಪ ಕಸಬೇಗೌಡರ, ಚನ್ನಪ್ಪ ಹಂಪನಗೌಡರ, ಮುತ್ತು ಸ್ಥಾವರಮಠ, ಶರಣಗೌಡ ಇಂಗಳಗಿ, ಸಿದ್ದಪ್ಪ ಗಡ್ಡಿ, ಮಲ್ಲಣ್ಣ ನಾಗರಬೆಟ್ಟ, ಲಕ್ಷ್ಮಣ ಡಿಗ್ಗಿ, ಶಾಂತಪ್ಪ ದೇಶಮುಖ, ತಿಪ್ಪಣ್ಣ ಕೆಂಭಾವಿ, ಬಸ್ಸು ಹಂಪನಗೌಡರ, ಮುದಕಪ್ಪ ವಡಗೇರಿ, ವೀರೇಶ ರಕ್ಕಸಗಿ, ಅಮರೇಶ ಹಟ್ಟಿ, ಶಂಕ್ರಪ್ಪ ಹುದ್ದಾರ, ಭೀಮನಗೌಡ ಬಿರಾದಾರ (ಇಂಗಳಗಿ), ವೀರೇಶ ಗುಳೆದ, ಅಜಯ ಕೋಟಿಕನ್, ಶೇಖರ ಲೋಟಗೇರಿ ಉಪಸ್ಥಿತರಿದ್ದರು.

## ಕಿರುಸುದ್ದಿ

### ಸದೃಢ ಭಾರತ ನಿರ್ಮಾಣಕ್ಕೆ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ದಿಕ್ಸೂಚಿ

**ಗಂಗಾವತಿ:** ದೇಶದ ಕೋಟ್ಯಂತರ ಜನಸಾಮಾನ್ಯರ ಚಿತ್ತ ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಮೇಲೆ ಕೇಂದ್ರಿಕೃತವಾಗಿ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದ್ದರು. ಅದರಂತೆ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಮತದಾರ ಪ್ರಭುಗಳು ಎನ್‌ಡಿಎ ಬೆಂಬಲಿಸುವುದರ ಮೂಲಕ ಸದೃಢ ಭಾರತ ನಿರ್ಮಾಣಕ್ಕೆ ದಿಕ್ಸೂಚಿ ನೀಡಿದ್ದಾರೆ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು.ಈ ಕುರಿತು ಪ್ರಕಟಣೆ ನೀಡಿದ ಅವರು, ಚುನಾವಣಾ ಫಲಿತಾಂಶ ಅಭಿವೃದ್ಧಿ, ಸ್ಥಿರತೆ ಮತ್ತು ದೇಶದ ಭದ್ರತೆಯ ಪರ ಜನರ ಸ್ಪಷ್ಟ ಅಭಿಪ್ರಾಯ ವ್ಯಕ್ತವಾಗಿದ್ದು, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ಅತಿಯಾದ ಅಲ್ಪಸಂಖ್ಯಾತರ ತೃಷ್ಟಿಕರಣ ಹಾಗೂ ದುರಾಡಳಿತದಿಂದ ಜನರು ನಮ್ಮ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಹಾಗೂ ಕೇಂದ್ರಗೃಹ ಸಚಿವ ಅಮಿತ ಷಾ ಜೀ ಯವರ ನಾಯಕತ್ವದ ಮೇಲೆ ನಂಬಿಕೆ ಇಟ್ಟು ಈ ಬಾರಿ ಬಿಜೆಪಿಗೆ ಅತಿದೊಡ್ಡ ಬಹುಮತ ನೀಡಿದ್ದಾರೆ ಎಂದರು. ಅಸ್ಸಾಂ ಮತ್ತು ಪುದುಚೇರಿಯಲ್ಲಿ ಮೊತ್ತೊಮ್ಮೆ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದು, ಮುಂದಿನ ದಿನಗಳಲ್ಲಿ ದೇಶದಲ್ಲಿ ಕಾಂಗ್ರೆಸ್ ಸಂಪೂರ್ಣವಾಗಿ ನಿರ್ನಾಮವಾಗಿ ಎನ್‌ಡಿಎ ಮೈತ್ರಿಕೂಟ ದೇಶವ್ಯಾಪಿಯಾಗಿ ಅಧಿಕಾರಕ್ಕೆ ಬರಲಿದೆ ಎಂದು ತಿಳಿಸಿದರು.



### ಜೆಸ್ಕಾಂ ಎಂಡಿ ಆಗಿ ಜಹೀರಾ ನಸೀಮ್ ಅಧಿಕಾರ ಸ್ವೀಕಾರ

**ಕಲಬುರಗಿ:** ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾಗಿರುವ ಜಹೀರಾ ನಸ್ಲೀಮ್ ಅವರು ಮಂಗಳವಾರ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಿಕೊಂಡರು. ಜೆಸ್ಕಾಂ ಎಂ.ಡಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಕೃಷ್ಣ ಭಾಜಪೇಯಿ ಅವರನ್ನು ಸರ್ಕಾರ ಕೇಂದ್ರ ಸೇವೆಗೆ ನಿಯೋಜನೆ ಮಾಡಿದ್ದರಂದ ತೆರವಾದ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸುವಂತೆ ಜಹೀರಾ ನಸ್ಲೀಮ್ ಅವರಿಗೆ ಸರ್ಕಾರ ಆದೇಶಿಸಿತ್ತು.



### ರಾಯಚೂರು ನೂತನ ಜಿಲ್ಲಾಧಿಕಾರಿ ಆಗಿ ಪೂವಿಥಾ

**ರಾಯಚೂರು:** ಪೂವಿಥಾ ಎಸ್. ಅವರು ರಾಯಚೂರು ನೂತನ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಆಗಿದ್ದಾರೆ. ಇವರು ಕೆಎನ್-2016 ಐಎಎಸ್ ಅಧಿಕಾರಿಯಾಗಿದ್ದು, ಇವರು ಪ್ರಸ್ತುತ ಬೆಂಗಳೂರಿನ ಕರ್ನಾಟಕ ಅರ್ಬನ್ ಇನ್ಫಾಸ್ಟಕ್ಚರ್ ಡೆವೆಲ್ಪಮೆಂಟ್ ಅಂಡ್ ಫೈನಾನ್ಸ್ ಕಾರ್ಪೋರೇಷನ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕಾರ್ಯನಿರ್ವಹಣೆ ಮಾಡುತ್ತಿದ್ದರು. ಇವರ ವರ್ಗಾವಣೆ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಹೊರಡಿಸಿದೆ. ಪ್ರಸಕ್ತ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ನಿತೀಶ ಕೆ ಅವರನ್ನು ವರ್ಗಾವಣೆ ಮಾಡಲಾಗಿದೆ.



### ವಾಲಿಬಾಲ್ ತರಬೇತಿ ಶಿಬಿರ ಯಶಸ್ವಿ

**ಮುನಿರಾಬಾದ್:** ಹುಲಿಗಿ ಗ್ರಾಮದಲ್ಲಿ ನಡೆದ 35 ದಿನಗಳ ವಾಲಿಬಾಲ್ ತರಬೇತಿ ಸಮಾರೋಪ ಸಮಾರಂಭವನ್ನು ಸೋಮವಾರ ಸಂಜೆ ಯಶಸ್ವಿಯಾಗಿ ನೆರವೇರಿತು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಕೊಪ್ಪಳ ಜಿಲ್ಲಾ ಅಸೋಸಿಯೇಷನ್ ವತಿಯಿಂದ ಬಾಲಕರ ವಸತಿ ನಿಲಯ ಆವರಣದಲ್ಲಿ ಏ.1ರಿಂದ ಮಾ.4 ವರೆಗೆ ಬಾಲಕರ ಉಚಿತ ವಾಲಿಬಾಲ್ ತರಬೇತಿ ಶಿಬಿರ ನಡೆಯಿತು. ತರುಬೇತಿದಾರರಿಗೆ ವಸತಿ ಸಹಿತ ಉಪಹಾರ, ಊಟ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಮೊದಲನೆ ಬಾರಿಗೆ ಶಿಬಿರ ಯಶಸ್ವಿ ಪಡೆಯಿತು ಎಂದು ಆಯೋಜಕ ರಾಜು ಜವಳಿ ಅಭಿಪ್ರಾಯ ವ್ಯಕ್ತಪಡಿಸಿದರು. ಶಿಬಿರದ ಕೊನೆಯ ದಿನ ತರಬೇತಿದಾರರಿಗೆ ವಾಲಿಬಾಲ್ ಪಂದ್ಯಾಟ ನಡೆಯಿತು.ಪಂದ್ಯ ಉದ್ಘಾಟನೆಯನ್ನು ಪಿಎಸ್‌ಐ ಮಲ್ಲಪ್ಪ ವಜ್ರದ ಮಾಜಿ ಸೈನಿಕ ಸಂಜೀವ್ ತೋಟಗಂಟಿ ನೆರವೇರಿಸಿದರು. ಹನುಮಂತಪ್ಪ ಹ್ಯಾಟಿ, ಅನಿಲ್ ಈಡಿಗೇರ, ಶಿವು ದಳಪತಿ, ಚಂದನ್, ರಾಜು ಮಾಸ್ಟರ್, ವೆಂಕಟೇಶ್, ಮಾರ್ಕಂಡೇಪ್ಪ ಪೂಜಾರ, ಬಲರಾಮ್, ದೈಹಿಕ ಉಪನ್ಯಾಸಕ ತಿರುಪತಿ ನಾಯಕ, ತರುಬೇತುದಾರ ಸುರೇಶ್ ಉಪಸ್ಥಿತರಿದ್ದರು.



ಮುನಿರಾಬಾದ್: ಹುಲಿಗಿ ಗ್ರಾಮದಲ್ಲಿ ನಡೆದ 35 ದಿನಗಳ ವಾಲಿಬಾಲ್ ತರಬೇತಿ ಸಮಾರೋಪ ಸಮಾರಂಭವನ್ನು ಸೋಮವಾರ ಸಂಜೆ ಯಶಸ್ವಿಯಾಗಿ ನೆರವೇರಿತು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಕೊಪ್ಪಳ ಜಿಲ್ಲಾ ಅಸೋಸಿಯೇಷನ್ ವತಿಯಿಂದ ಬಾಲಕರ ವಸತಿ ನಿಲಯ ಆವರಣದಲ್ಲಿ ಏ.1ರಿಂದ ಮಾ.4 ವರೆಗೆ ಬಾಲಕರ ಉಚಿತ ವಾಲಿಬಾಲ್ ತರಬೇತಿ ಶಿಬಿರ ನಡೆಯಿತು.

## ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಒ ಭೇಟಿ

**ರಾಯಚೂರು:** ಜಿಲ್ಲೆಯ ರಾಯಚೂರು ತಾಲ್ಲೂಕಿನ ಚಂದ್ರಬಂಡಾ ಗ್ರಾಮ ಪಂಚಾಯತಿಯ ಅರಸಿಗೇರಾ ತಾಂಡದಲ್ಲಿ ನಡೆಯುತ್ತಿರುವ ನರೇಗಾದಡಿ ಅರಣ್ಯ ಪ್ರದೇಶದಲ್ಲಿ ಕಂದಕ, ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಒ ಈಶ್ವರ ಕಾಂದೂ ಭೇಟಿ ನೀಡಿ ಪರಿಶೀಲಿಸಿದರು.

ಮಂಗಳವಾರ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕೂಲಿ ಕಾರ್ಮಿಕರಿಗೆ ಬೇಸಿಗೆ ಸಮಯದಲ್ಲಿ ಕನಿಷ್ಠ ಸೌಲಭ್ಯಗಳಾದ ಕುಡಿಯುವ ನೀರು, ನೆರಳು ಮತ್ತು ಪ್ರಥಮ ಚಿಕಿತ್ಸಾ ವ್ಯವಸ್ಥೆ ನೀಡುತ್ತಿರುವ ಬಗ್ಗೆ ಕೂಲಿಕಾರರಿಂದ ಮಾಹಿತಿ ಪಡೆದುಕೊಂಡರು.

ಕೂಲಿಕಾರರ ಹಾಜರಾತಿಯನ್ನು ಎನ್‌ಎಂಎಂಎಸ್ ಆ್ಯಪ್ ಮುಖಾಂತರವೇ ಎರಡು ಬಾರಿ ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಬಿಸಿಲಿನ ತಾಪಮಾನ ಹೆಚ್ಚುತ್ತಿರುವದರಿಂದ ಕೆಲಸಕ್ಕೆ ಬೇಗನೆ ಬರಬೇಕು. ನಿಮ್ಮಗೆ ನೀಡಿರುವ ಅಳತೆ ಪ್ರಕಾರ ಕೆಲಸ ಮಾಡಬೇಕೆಂದು ತಿಳಿಸಿದರು.

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಲ್ಯಾಬ್ ಟೆಸ್ಟ್, ಲಸಿಕೆ ಸಂಗ್ರಹ ಕೋಣೆ, ಹೆರಿಗೆಯ ಕೋಣೆ, ಪುರಷ, ಮಹಿಳೆಯರ ವಾರ್ಡ್ ಹಾಗೂ ಶಸ್ತ್ರಚಿಕಿತ್ಸೆ ಕೋಣೆಗಳಿಗೆ ಭೇಟಿ ನೀಡಿ ಸಿಬ್ಬಂದಿಯಿಂದ ಮಾಹಿತಿ ಪಡೆದರು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾರ, ಕಾರ್ಯನಿರ್ವಾಹಕ ಅಭಿಯಂತರ ಸತೀಶ, ಸಹಾಯಕ ನಿರ್ದೇಶಕರಾದ ಹನುಮಂತ, ಶಿವಪ್ಪ, ಪಿಡಿಒ ಮೋಹಿನುದ್ದೀನ್ ಸೇರಿದಂತೆ ಇತರರಿದ್ದರು.



ರಾಯಚೂರು: ಜಿಲ್ಲೆಯ ರಾಯಚೂರು ತಾಲ್ಲೂಕಿನ ಚಂದ್ರಬಂಡಾ ಗ್ರಾಮ ಪಂಚಾಯತಿಯ ಅರಸಿಗೇರಾ ತಾಂಡದಲ್ಲಿ ನಡೆಯುತ್ತಿರುವ ನರೇಗಾದಡಿ ಅರಣ್ಯ ಪ್ರದೇಶದಲ್ಲಿ ಕಂದಕ, ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಜಿಪಂ ಸಿಇಒ ಈಶ್ವರ ಕಾಂದೂ ಭೇಟಿ ನೀಡಿ ಪರಿಶೀಲಿಸಿದರು.

### ಕೋಲ್ಡ್ ಸ್ಟೋರೇಜ್ ಉದ್ಘಾಟನೆ | ಸಚಿವ ಪಾಟೀಲ ಹೇಳಿಕೆ

## ಕಾಂಗ್ರೆಸ್ ಸರ್ಕಾರ ರೈತರ ಬೆನ್ನೆಲುಬು

**ಕುಕನೂರ:** ರಾಜ್ಯದಲ್ಲಿ ಒಟ್ಟಾರೆ 20 ಶೀತಲ ಗೃಹ ಉದ್ಘಾಟನೆ ಮಾಡಲಾಗುತ್ತಿದೆ. ಈ ಹಿಂದೆ ನಷ್ಟದಲ್ಲಿದ್ದ ಎಪಿಎಂಸಿಗಳನ್ನು ಬಿಜೆಪಿ ಸರ್ಕಾರ ಮುಚ್ಚುತ್ತಿತ್ತು. ಅದನ್ನು ವಿರೋಧಿಸಿ ಕಾಂಗ್ರೆಸ್ ಸರ್ಕಾರ ಎಪಿಎಂಸಿಗಳನ್ನು ಉಳಿಸಿ ರೈತರಿಗೆ ಬೆನ್ನೆಲುಬಾಗಿ ನಿಂತಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದಲ್ಲಿ ಕೋಲ್ಡ್ ಸ್ಟೋರೇಜ್ ಉದ್ಘಾಟನೆ, ಬಸವೇಶ್ವರ ಮೂರ್ತಿ, ಅಂಬೇಡ್ಕರ್‌ಮೂರ್ತಿ, ಸಂಗೊಳ್ಳಿ ರಾಯಣ್ಣ ಮೂರ್ತಿ ನಿರ್ಮಾಣದ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಎಪಿಎಂಸಿಯಿಂದ 20 ಕೋಲ್ಡ್ ಸ್ಟೋರೇಜ್, ತೋಟಗಾರಿಕೆಯಿಂದ 9 ಕೋಲ್ಡ್ ಸ್ಟೋರೇಜ್ ನಿರ್ಮಾಣ ಈ ವರ್ಷವಾಗುತ್ತಿದೆ. ಸದ್ಯ ರಾಜ್ಯದಲ್ಲಿ 36 ಸಾವಿರ ಕೋಟಿ ಕ್ವಿಂಟಲ್ ಆಹಾರ ಪದಾರ್ಥ ಹಾಳಾಗದಂತೆ ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಲಾಗಿದೆ. ರೈತ ಬೆಳೆದ ಬೆಳೆಗೆ ಉತ್ತಮ ಬೆಲೆಯನ್ನು ನೀಡಲಾಗುತ್ತಿಲ್ಲಾ ಇದು ದುರ್ದೈವ ಸಂಗತಿ ಚಪಲಿಗೇ ಒಂದು ನಿಖರ ಬೆಲೆ ಇದೆ ರೈತನ ಬೆಳೆಗೆ ಬೆಲೆ ಇಲ್ಲದಿರುವುದು ಸೂಚನಿಯ ಸಂಗತಿ ಅದು ಬದಲಾಗಬೇಕು ಮತ್ತು ತಾಲೂಕಿನಲ್ಲಿ ಆಡು ಮುಟ್ಟದ ಸೊಪ್ಪಿಲ್ಲಾ ರಾಯರಡ್ಡಿ ಮಾಡದೇ ಇರುವ ಅಭಿವೃದ್ಧಿ ಕೆಲಸವಿಲ್ಲ ಅಂತಹ ಶಾಸಕ ಪಡೆದಿರುವುದು ನಿಮ್ಮ ಪುಣ್ಯ ಮುಂದಿನ ದಿನಮಾನಗಳಲ್ಲಿ ಶ್ರಮಿಕ ಭವನ, ಇತರೆ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು ಎಂದರು.

ನಂತರ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರು, ಶಾಸಕ ಬಸವರಾಜ ರಾಯರಡ್ಡಿ ಮಾತನಾಡಿ, ಸಮ ಸಮಾಜವನ್ನು ನಿರ್ಮಾಣ ಮಾಡಲು ಹೋರಾಡಿದ ಮಹಾನ್ ವ್ಯಕ್ತಿ ಬಸವೇಶ್ವರ ಅಂತವರ ವಚನಗಳು ಇಂದಿನ ಯುವ ಪೀಳಿಗೆಗೆ ಆದರ್ಶವಾಗಿದೆ ಅಂತವರ ಮೂರ್ತಿ ಅನಾವರಣ ಮಾಡಿ ಅವರ ವಚನಗಳನ್ನು ಮೆಲಕು ಹಾಕಲು ಅನುಕೂಲ ಮಾಡಲಾಗಿದೆ.ರುದ್ರಮುನೇಶ್ವರ ಮಠ ಯಾವುದೇ ಖಾಸಗಿ ಮಠವಲ್ಲಾ ಅದು ಸರ್ಕಾರಿ ಮಠ ಸರ್ಕಾರಕ್ಕೆ ಅದರ ಜಾಗವನ್ನು ಉಪಯೋಗ ಮಾಡಲು ಬಿಡಿ ಹಾಗೇನಾದರೂ ನಾವು ಆ ಮಠದ ಜಾಗವನ್ನು ಹೊಡೆಯಬೇಕಿದ್ದು ಅಂದುಕೊಂಡಿದ್ದರೆ ಮಾಜಿ ಸಚಿವ ಹಾಲಪ್ಪ ಆಚಾರ್ ಮತ್ತು ನಾನು ಸೇರಿ ಕಬಳಿಕೆ ಮಾಡುತ್ತಿದ್ದವು ಹಾಲಪ್ಪ ಯಾವತ್ತು ಕೆಟ್ಟ ವ್ಯಕ್ತಿ ಅಲ್ಲಾ ಕಾನೂನುಬಾಹಿರ ಕೆಲಸ ಮಾಡುವ ವ್ಯಕ್ತಿ ಅಲ್ಲಾ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವ ವ್ಯಕ್ತಿ.ಅದಕ್ಕಾಗಿ ಆ ತರ ಕೆಲಸವನ್ನು ನಾವು ಮಾಡಿಲ್ಲಾ ಎಂದು ಹೇಳಿದರು.

ದಿವ್ಯಸಾನಿಧ್ಯ ಮುಂಡರಗಿಯ ಅನ್ನದಾನೀಶ್ವರ ಮಠದ ಜಗದ್ಗುರು ಡಾ.ನಾಡೋಜ ಅನ್ನದಾನೀಶ್ವರ ಮಹಾಶಿವಯೋಗಿಗಳು ಜಗದ್ಗುರು ಅಭಿನವ ಗವಿಸಿದ್ದೇಶ್ವರ ಮಹಾ ಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ಪಟ್ಟಣ ಪಂಚಾಯತ ಅಧ್ಯಕ್ಷ ಲೀಲಾವತಿ ಮುಧೋಳ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಡಾ.ರಾಮ್ ಎಲ್. ಅರಿಸಿದ್ಧಿ, ಜಿಲ್ಲಾ ಕೆಡಿಪಿ ಸದಸ್ಯ ಹನುಮಂತಗೌಡ ಪಾಟೀಲ ಚಂಡೂರ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗಪ್ಪ ವಿ.ಗುತ್ತಿ, ತಹಶೀಲ್ದಾರರು ಬಸವರಾಜ ಬೆಣ್ಣೆಶಿರೂರು, ಮಂಜುನಾಥ ಕಡೆಮನಿ, ಯಂಕಣ್ಣ ಯರಾಶಿ, ಹಾಗೂ ಇತರರು ಇದ್ದರು.



> ಜಿಲ್ಲೆಗೆ ಆಗುವಷ್ಟು ಬಜೆಟ್ಟನ್ನ ಒಂದು ತಾಲೂಕಿಗೆ ತರುವಂತ ವ್ಯಕ್ತಿ ಶಾಸಕ ರಾಯರಡ್ಡಿ ಮೂಲಭೂತ ಸೌಕರ್ಯಗಳನ್ನು ನಿಗಿಸುವ ವ್ಯಕ್ತಿ ವೈಯಕ್ತಿಕ ಕೆಲಸ ಅವರ ಕೆಲಸವಲ್ಲಾ ಅವರದು ಮುಂದಿನ ಯುವ ಪೀಳಿಗಳಿಗೆ ಮಾದರಿಯಾಗುವ ಕೆಲಸ ಅವರದು.
> ■ ಕೆ.ರಾಜಶೇಖರ್ ಹಿಟ್ನಾಳ, ಸಂಸದ

## ಪಶ್ಚಿಮ ಬಂಗಾಳ ಬಿಜೆಪಿ ಗೆಲುವು: ರ‍್ಯಾಲಿ

**ಕಲಬುರಗಿ:** ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಸಾಧಿಸಿದ ಭರ್ಜರಿ ಗೆಲುವನ್ನು ಸಂಭ್ರಮಿಸಲು ನಗರದ ಬಿಜೆಪಿ ಘಟಕದ ವತಿಯಿಂದ ಮಂಗಳವಾರ ಬೈಕ್ ರ‍್ಯಾಲಿ ನಡೆಯಿತು.

ನಗರದ ಜಗತ್ ವೃತ್ತದಿಂದ ಪ್ರಾರಂಭವಾದ ವಿಜಯೋತ್ಸವ ರ‍್ಯಾಲಿಯು ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತದವರೆಗೆ ಸಾಗಿತು. ನೂರಾರು ಬಿಜೆಪಿ ಕಾರ್ಯಕರ್ತರು ಕೇಸರಿ ಧ್ವಜಗಳನ್ನು ಹಿಡಿದು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬಿನ್ ಅವರ ಭಾವಚಿತ್ರಗಳೊಂದಿಗೆ ಜೈಘೋಷ ಕೂಗುತ್ತಾ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಗ್ರಾಮಾಂತರ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಪಶ್ಚಿಮ ಬಂಗಾಳದ ಫಲಿತಾಂಶವು ರಾಷ್ಟ್ರ ರಾಜಕಾರಣದಲ್ಲಿ ಹೊಸ ದಿಕ್ಸೂಚಿಯಾಗಿದ್ದು, ಜನವಿರೋಧಿ ಆಡಳಿತಕ್ಕೆ ಅಲ್ಲಿನ ಜನತೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಉಮೇಶ್ ಪಾಟೀಲ, ಶಿವಯೋಗಿ ನಾಗನಹಳ್ಳಿ ಹಾಗೂ ಪ್ರಮುಖ ಮುಖಂಡರಾದ ಶರಣಪ್ಪ ತಳವಾರ್, ಮಹದೇವ್ ಬೆಳಮಗಿ, ಬಸವರಾಜ್ ಬೆಣ್ಣೂರ್, ಧರ್ಮಣ್ಣ ಇಟಗಾ, ಗಿರಿರಾಜ್ ಯಳಮೇಲಿ ಮತ್ತು ಅಶೋಕ್ ಮಾನಕರ್, ಯುವ ಘಟಕದ ಜಿಲ್ಲಾಧ್ಯಕ್ಷ ಮಹೇಶ್ ಚವ್ಹಾಣ, ವಿನೋದ್ ಪಾಟೀಲ್ ಸೇರಿದಂತೆ ನೂರಾರು ಯುವ ಕಾರ್ಯಕರ್ತರಿದ್ದರು.

> ಪಶ್ಚಿಮ ಬಂಗಾಳದ ಈ ಗೆಲುವು ಕೇವಲ ಒಂದು ರಾಜ್ಯದ ಜಯವಲ್ಲ, ಇದು ಅಖಂಡ ಭಾರತದ ವಿಜಯ. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಯುವಶಕ್ತಿ ಜಾಗೃತಗೊಂಡಿದ್ದು, ದೇಶವಿರೋಧಿ ಶಕ್ತಿಗಳು ಮತ್ತು ಅಕ್ರಮ ನುಸುಳುಕೋರರಿಗೆ ಅಂತ್ಯಕಾಲ ಶುರುವಾಗಿದೆ. ಪ್ರತಿ ಹಂತದಲ್ಲೂ ಕೇಸರಿ ಬಾವುಟ ರಾರಾಜಿಸಲಿದೆ.
> ■ ಮಹೇಶ್ ಚವ್ಹಾಣ, ಜಿಲ್ಲಾಧ್ಯಕ್ಷ, ಬಿಜೆಪಿ ನಗರ ಯುವ ಘಟಕ



## ಯುವ ಜನತೆ ದುಶ್ಚಟಗಳಿಂದ ದೂರವಿರಲಿ

**ಲಿಂಗಸುಗೂರು:** ವಿದ್ಯಾರ್ಥಿಗಳು ಓದಿನ ಕಡೆಗೆ ಗಮನ ಹರಿಸಿ ಭವಿಷ್ಯದ ಕನಸ್ಸನ್ನು ನನಾಗಿಸಲು ದುಶ್ಚಟಗಳಿಂದ ದೂರವಿರಬೇಕೆಂದು ಶಾಸಕ ಮಾನಪ್ಪ ವಜ್ಜಲ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ, ಬಿಕಾಂ, ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡಗೆ ಮತ್ತು ವಾರ್ಷಿಕ ಕಾರ್ಯ ಚಟುವಟಿಕೆಗಳ ಸಮಾರೋಪ ಹಾಗೂ ಚಿನ್ನದ ಭಾವಣಿ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳ ಸೃಜಶೀಲ ಬರವಣಿಗೆಗೆಕಾಲೇಜು ಅವಕಾಶಕಲ್ಪಿಸಿದೆ. ಹೆಚ್ಚಿನ ಅಧ್ಯಯನದಿಂದ ಬರಹಗಾರರಾಗಲು ಸಾಧ್ಯ ಆ ದಿಶೆಯಲ್ಲಿ ವಾರ್ಷಿಕ ಸಂಚಿಕೆ ತರುವ ಮೂಲಕ ನಿಮ್ಮ ಪ್ರತಿಭಾನ್ವೇಷಣೆಗೆ ಕಾಲೇಜು ವಿಪುಲ ಅವಕಾಶ ಒದಗಿಸಿದೆ. ಸರ್ಕಾರಿ ಕಾಲೇಜು ಎಂದರೆ ಮೂಗು ಮುರಿಯುವವರಿಗೆ ಈ ಕಾಲೇಜು ತನ್ನ ಸಾಧನೆಯ ಮೂಲಕ ಖಾಸಗಿ ಕಾಲೇಜಿಗಳಿಗೆ ಸೆಡ್ಡು ಹೊಡೆದು ಕ್ರೀಡಾ ಕ್ಷೇತ್ರದಲ್ಲಿ, ಪಠ್ಯ ಚಟುವಟಿಕೆಯಲ್ಲಿ ಘನತೆ ಹೆಚ್ಚಿಸಿಕೊಂಡಿದೆ. ಸ್ಕೌಟ್ಸ್ ಗ?ಡ್ ರೋವರ್ ರೇಂಜರ್ ಘಟಕವು ಉತ್ತಮ ಸಾಧನೆ ಮಾಡಿದ್ದು ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ರೋವರ್ಸ್ ರಾಜ್ಯಪಾಲರಿಂದ ಪ್ರಶಸ್ತಿ ಪಡೆಯುತ್ತಿರುವುದು ಕಾಲೇಜಿಗೆ ಕಳಶಪ್ರಾಯವಾಗಿದೆ ಎಂದು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಕಾಲೇಜಿನ ಲೋಗೋ ಬಿಡುಗಡೆ ಮಾಡಿದರು.

ಉಪನ್ಯಾಸ ನೀಡಿದ ಸಿಂಧನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹನುಮಗೌಡ ಅವರು ವಿದ್ಯಾರ್ಥಿಗಳಿಗೆ ಮನೋಸ್ಥೈರ್ಯ ತುಂಬುವ ಮಾತುಗಳನ್ನಾಡಿದರು. ಸಹ ಪ್ರಾಧ್ಯಾಪಕರಾದ ಡಾ.ಹನುಮಂತಪ್ಪ, ಡಾ.ಸಯ್ಯದ್ ಆರೀಫ್ ಉಲ್ಲಾ, ಡಾ.ಸಂಗನಗೌಡ, ಐಕ್ಯೂಎಸಿ ಸಂಯೋಜಕ ಗಣೇಶ ದರ್ಬೆ, ಸಾಂಸ್ಕೃತಿಕ ಸಂಯೋಜಕ ಆಂಜನೇಯ ರಾಮತ್ನಾಳ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ನಾರಾಯಣಪ್ಪ ನಾಯಕ,ಮುದುಕಪ್ಪ ನಾಯಕ, ಭೀಮಸೇನ್ ಕಲಕರ್ಣಿ, ಪರಶುರಾಮ ಕೆಂಭಾವಿ, ಅಮರೇಶ ಅಂಗಡಿ, ಯಮನೂರ ಭೋವಿ, ಸುಜಾತಾ ಶಿವುಕುಮಾರ, ಮಲ್ಲಿಕಾರ್ಜುನಗೌಡ ಮೇಲಿನಮನಿ ಇತರರಿದ್ದರು.




## ಬೇಸಾಯದ ಜತೆ ಜೇನುಕೃಷಿ ಆರಂಭಿಸಲು ಸಲಹೆ

**ಕುಷ್ಟಗಿ:** ಅನ್ನದಾತರು ಬೇಸಾಯದ ಜತಗೆ ಜೇನು ಕೃಷಿ ಸಾಕಣಿಕೆ ಮುಂದಾಗಬೇಕು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ್ ಕಾತರಕಿ ಹೇಳಿದರು.

ಪಟ್ಟಣದ ಕೃಷಿ ಇಲಾಖೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಎಣ್ಣೆಕಾಳು ಬೆಳೆಗಾರರಿಗೆ ಹಾಗೂ ಅನ್ನದಾತರಿಗೆ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಂಗಳವಾರ ಮಾತನಾಡಿದರು.

ಎಣ್ಣೆಬೀಜದ ಬೆಳೆಗಳ ಇಳುವರಿ ಮತ್ತು ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಜೇನು ನೊಣಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಪರಿಕರ ಎಣ್ಣೆಬೀಜದ ಬೆಳೆಗಳಲ್ಲಿ ಜೇನುನೊಣಗಳ ಪರಾಗಸ್ಪರ್ಶದ ಮೂಲಕ ಇಳುವರಿ ಹೆಚ್ಚಳ ಸೂರ್ಯಕಾಂತಿ, ಸಾಸಿವೆ, ಕುಸುಬೆ ಮತ್ತು ಸಾಸಿವೆಯಂತಹ ಬೆಳೆಗಳಲ್ಲಿ ಜೇನುನೊಣಗಳು ಪರಾಗಸ್ಪರ್ಶ ಕ್ರಿಯೆಯನ್ನು ಸುಲಭಗೊಳಿಸುತ್ತವೆ. ಇದರಿಂದ ಕೇವಲ ನೈಸರ್ಗಿಕ ಗಾಳಿಯಿಂದ ಆಗುವ ಪರಾಗಸ್ಪರ್ಶಕ್ಕಿಂತ ಕೃಷಿಕರು ತಮ್ಮ ಹೊಲಗಳಲ್ಲಿ ಜೇನು ಪೆಟ್ಟಿಗೆಗಳನ್ನು ಇಡುವುದರಿಂದ ಕೇವಲ ಹೆಚ್ಚುವರಿ ಜೇನು ತುಪ್ಪವೇ ಅಲ್ಲದೆ, ಬೆಳೆಗಳ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು. ಹೀಗಾಗಿ ಉಪ ಕಸುಬು ಆರಂಭಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.



ತಾಂತ್ರಿಕ ಅಧಿಕಾರಿ ರಾಜಶೇಖರ್, ಹೋಬಳಿಯ ಕೃಷಿ ಇಲಾಖೆ ಅಧಿಕಾರಿಗಳಾದ ಆಶಾ ರಾಠೋಡ್, ಪ್ರಮೋದ್ ಹಾದಿಮನಿ, ಡಿ.ವೈ. ಕಡಿವಾಲ, ಆಕಾಶ ಡಾಣಿ, ಮಹಾನಂದಿ, ಆತ್ಮ ಮತ್ತು ಸಂಜೀವಿನಿ ಸಿಬ್ಬಂದಿ ಬಸವರಾಜ ಪಾಟೀಲ, ಸಂದೀಪ್, ವೀರನಗೌಡ ಚಿಜ್ಜೇರಿ, ನಾಗರಾಜ್, ರೈತರಾದ ಶಿವಪುತ್ರಪ್ಪ ಗುರಿಕಾರ್, ತಿಮ್ಮಣ್ಣ ಕುರ್ನಾಳ್, ವೀರಭದ್ರಪ್ಪ ನವಲಹಳ್ಳಿ, ಮಲ್ಲಪ್ಪ ಬಂಡೇರ್ ಇನ್ನಿತರರು ಇದ್ದರು.

## ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಒತ್ತಾಯ

**ಯಲಬುರ್ಗಾ:** ಪಟ್ಟಣದಲ್ಲಿ ಮತ್ತು ಕುಕನೂರು ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿ ನಿರ್ಮಾಣ ಮಾಡಬೇಕೆಂದು ಮಹರ್ಷಿ ವಾಲ್ಮೀಕಿ ನಾಯಕ ಮಹಾ ಸಭಾ ತಾಲೂಕ ಅಧ್ಯಕ್ಷ ಯಲ್ಲಪ್ಪ ಹಡಗಲಿ ಅವರು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರಿಗೆ ಮನವಿ ಮಾಡಿದರು.

ನಂತರ ಮಾತನಾಡಿದ ಅವರು ತಾಲೂಕಿನಲ್ಲಿ ಮಹರ್ಷಿ ವಾಲ್ಮೀಕಿ ನಾಯಕ ಸಮಾಜದ ನಿರ್ಣಾಯಕ ಮತದಾರರಿದ್ದು ತಾಲೂಕಿನಲ್ಲಿ ಶೇ.75ರಷ್ಟು ಮತಗಳು ಕಾಂಗ್ರೆಸ್ ಪರವಾಗಿದ್ದು ಬಸವರಾಜ ರಾಯರೆಡ್ಡಿ ರವರ ಗೆಲುವಿಗೆ ಪ್ರಮುಖ ಪಾತ್ರ ವಹಿಸುತ್ತವೆ. ತಪಸ್ಸಿನ ಮೂಲಕ ಜ್ಞಾನಿಯಾಗಿ 24,000 ಶ್ಲೋಕಗಳನ್ನು ರಚಿಸಿ ರಾಮಾಯಣವನ್ನು ಬರೆದು ಶ್ರೀರಾಮನನ್ನು ಜಗತ್ತಿಗೆ ಪರಿಚಿಸಿದ ಮಹಾನ್ ಪುರುಷ ಜಗತ್ತಿನ ಮೊದಲೇ ಋಷಿ ಮಹಾಕಾವ್ಯದ ಕರ್ತೃ ಮಹರ್ಷಿ ವಾಲ್ಮೀಕಿ ಅವರ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕೆಂದರು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರರ ಬಸವರಾಜ ರಾಯರೆಡ್ಡಿ ಅವರು ಮಾತನಾಡಿ ಮಹರ್ಷಿ ವಾಲ್ಮೀಕಿ ಅವರು ಬಗ್ಗೆ ನನಗೆ ಅಪಾರವಾದ ಗೌರವವಿದೆ ಖಂಡಿತವಾಗಿ ಪುತ್ಥಳಿ ನಿರ್ಮಾಣ ಮಾಡುತ್ತೇನೆ ಎಂದು ಭರವಸೆ ನೀಡಿದರು ಸಮಾಜ ಮುಖಂಡರಾದ ಓಬಳಪ್ಪ ಕುಲಕರ್ಣಿ, ಬಸವರಾಜ್ ಜಂಬಳ್ಳಿ, ಲಕ್ಷ್ಮಣ ಕುಲಕರ್ಣಿ, ಭೀಮಪ್ಪ ಹಾವಳಿ, ಶ್ರೀಕಾಂತ್ ಗೌಡ ಮಾಲಿ ಪಾಟೀಲ, ಸಂಗಣ್ಣ ತೆಂಗಿನಕಾಯಿ, ಕೆರಿಬಸಪ್ಪ ನಿಡುಗುಂದಿ ಇತರರು ಇದ್ದರು.



## ಕಾನೂನು ಅರಿವು ನೆರವು ಕಾರ್ಯಕ್ರಮ

**ಮಾನ್ವಿ:** ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಕಾನೂನು ಸೇವಾ ಸಮಿತಿ ಮಾನ್ವಿ ಹಾಗೂ ತಾಲೂಕು ನ್ಯಾಯವಾದಿಗಳ ಸಂಘ ಮತ್ತು ಕಾರ್ಮಿಕ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಕಾರ್ಮಿಕ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಸಿವಿಲ್ ನ್ಯಾಯಧೀಶರಾದ ಆನಂದ ಎಚ್.ಕೊಣ್ಣೂರು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಶೋಷಿತ ವರ್ಗವಾಗಿರುವ ಕಾರ್ಮಿಕರು ದೇಶದ ಬೆನ್ನೆಲುಬಾಗಿರುವ ಕಾರ್ಮಿಕರಿಗೆ ಸಂವಿಧಾನದಲ್ಲಿ ಅನೇಕ ಹಕ್ಕುಗಳನ್ನು ,ಗೌರವವನ್ನು ಕಾರ್ಮಿಕ ಕಾಯ್ದೆಯಡಿಯಲ್ಲಿ ನೀಡಲಾಗಿದೆ ಸಮಾನ ಕೆಲಸಕ್ಕೆ ಸಮಾನವಾದ ವೇತನ, ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷತೆ, ಕೆಲಸದ ನಿಗದಿತ ಸಮಯದ ಮಿತಿ,ಸೇರಿದಂತೆ ಕಾರ್ಮಿಕರಿಗೆ ಅನೇಕ ಕಾಯ್ದೆಗಳನ್ನು ನೀಡಲಾಗಿದೆ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಕಟ್ಟಡ ಕಾರ್ಮಿಕರ ಕಾಯ್ದೆಗಳಿದ್ದು ಕಾರ್ಮಿಕರಿಗೆ ಬಹುಳಷ್ಟು ಅನುಕೂಲವಾಗುತ್ತಿದೆ ಕಟ್ಟಡ ಕಾರ್ಮಿಕರ ಮಕ್ಕಳ ಮದುವೆ,ವಿದ್ಯಾಭ್ಯಾಸಕ್ಕೆ ,ಹೆರಿಗೆ,ಸೇರಿದಂತೆ ಕೆಲಸದ ಸ್ಥಳದಲ್ಲಿ ಅಪಘಾತ ಸಂದರ್ಭದಲ್ಲಿ ಸೌಲಭ್ಯ ಮತ್ತು ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ನೀಡಲಾಗಿದೆ. ಕಾರ್ಮಿಕರು ತಮ್ಮಗೆ ಅನುಕೂಲವಾಗಿರುವ ಕಾನೂನುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಾಗ ಮಾತ್ರ ಅವುಗಳಿಂದ ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಆರ್ಥಿಕವಾಗಿ ಹಿಂದುಳಿದಿರುವ ಕಾರ್ಮಿಕರು ಉಚಿತ ಕಾನೂನು ನೆರವನ್ನು ತಾಲೂಕು ಕಾನೂನುಸೇವಾಸಮಿತಿಯ ಮೂಲಕಪಡೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ತಿಳಿಸಿದರು.

ತಾಲೂಕು ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ ದೊರೆ, ಸಹಾಯಕ ಸರ್ಕಾರಿ ಅಭಿಯೋಜಕರಾದ ಅರ್ಚನಾಯಾದವ್ ಮಾತನಾಡಿದರು. ತಾಪಂ ಇಒ ಖಾಲಿದ್ ಅಹ್ಮದ್, ಪಿ.ಐ.ಸೋಮಶೇಖರ ಎಸ್. ಕೆಂಚರೆಡ್ಡಿ, ತಾಲೂಕು ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷರಾದ ವಿಶ್ವನಾಥ ರಾಯಪ್ಪ, ಪ್ರ.ಕಾರ್ಯದರ್ಶಿ ಯಲ್ಲಪ್ಪ ಹಿರೆಬಾದರದಿನ್ನಿ, ಹಿರಿಯ ವಕೀಲರಾದ ಶ್ರೀದೇವಿ ಬಳಿಗಾರ, ಅಮೃತ ವಕೀಲರು ಹಾಗೂ ಕಾರ್ಮಿಕ ಮುಖಂಡರಾದ ಪರಶುರಾಮ ಬಾಗಲವಾಡ, ಎಂ.ಡಿ.ಜಾಫರ್, ತಾಯಪ್ಪ,ಆಂಜನೇಯ್ಯ ಕೋಟೆ, ವೆಂಕಣ್ಣ ಇತರರಿದ್ದರು.



## ಗಂಗಾಧರ ಕಂಬಾಳಿಮಠ ನೇಮಕ

**ಮಸ್ಕಿ:** ಪಟ್ಟಣದ ಬಸವೇಶ್ವರ ನಗರದ ಬಿಜೆಪಿ ಪಕ್ಷದ ಕಚೇರಿಯಲ್ಲಿ ಇಂದು ವಿವಿಧ ಮೋರ್ಚಾ ಪದಾಧಿಕಾರಿಗಳ, ಪದಗ್ರಹಣ ಸಮಾರಂಭ ಕಾರ್ಯಕ್ರಮಜರಗಿತು.

ಈ ವೇಳೆ ನೂತನ ಬಿಜೆಪಿ ಪಕ್ಷದ ಮಸ್ಕಿ ಮಂಡಲದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಗಂಗಾಧರ ಕಂಬಾಳಿಮಠ, ಎಸ್‌ಸಿ ಘಟಕ ಮೋರ್ಚಾದ ಪ್ರಧಾನಕಾರ್ಯದರ್ಶಿ ನಾಗಲಿಂಗತಿರ್ಥಬಾವಿ, ಮಂಜುನಾಥ್ ಬೆಳಗಲ್, ಮಹಿಳಾ ಮೋರ್ಚಾದ ಪ್ರ.ಕಾರ್ಯದರ್ಶಿಯಾಗಿ ದುರುಗಮ್ಮ, ಅಕ್ಕಮಹಾದೇವಿ ಅವರನ್ನು ನೇಮಕ ಮಾಡಲಾಯಿತು.

ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ ಗುಡಿಹಾಳ,ರಮೇಶ ಉದ್ಬಾಳ, ಪುರಸಭೆ ಸದಸ್ಯರಾದ ಮೌನೇಶ ಮುರಾರಿ,ಮಲ್ಲಯ್ಯ ಅಂಬಾಡಿ, ಗೀತಾ ಶಿವರಾಜ ಬುಕ್ಕಣ್ಣ, ಭರತ ಸೇಠ್, ಮಂಜುನಾಥ ನಂದಿಹಾಳ, ಮಲ್ಲಿಕಾರ್ಜುನ ಬ್ಯಾಳಿ, ಶಿವಪುತ್ರಪ್ಪ ಹರಳಹಳ್ಳಿ ಪಕ್ಷದ ಹಿರಿಯರಾದ ಮಲ್ಲಪ್ಪ ಅಂಕುಶದೊಡ್ಡಿ, ಬಸವರಾಜ ಸ್ವಾಮಿ ಹಸಮಕಲ್, ಜಿಲ್ಲಾ ಪಂ.ಮಾಜಿ ಸದಸ್ಯ ದುರುಗಪ್ಪ ಗುಡಗಲದಿನ್ನಿ,ಬಸವರಾಜ ಬುಕ್ಕಣ್ಣ,ಮಲ್ಲಪ್ಪ ಗೋನಾಳ ಸೇರಿದಂತೆ ಇತರರಿದ್ದರು.




## ಮೂಲ ಸಮಸ್ಯೆ ಬಗೆಹರಿಸುವಲ್ಲಿ ನಿರ್ಲಕ್ಷ್ಯ: ಆರೋಪ

**ಕಲಬುರಗಿ:** ಜಿಲ್ಲೆಯ ಜೇವರ್ಗಿ ತಾಲೂಕಿನ ಆಂದೋಲ ಗ್ರಾಮದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಶಾಸಕರು, ಅಧಿಕಾರಿಗಳು ತೋರುತ್ತಿರುವ ನಿರ್ಲಕ್ಷ್ಯ ಧೋರಣೆಯಿಂದಾಗಿ ಗ್ರಾಮಸ್ಥರು ಹನಿ ನೀರಿಗಾಗಿ ಪರದಾಡುವಂತಾಗಿದೆ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಕಿಡಿ ಕಾರಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಅಭಿವೃದ್ಧಿ ಮರೆತು ಅಧಿಕಾರಿಗಳು ಹಾಗೂ ಶಾಸಕರು ಜನರ ಜೀವದ ಜತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಂದೋಲ ಗ್ರಾಮದಲ್ಲಿ ಕಳೆದ ಹಲವಾರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ತಾಂಡವವಾಡುತ್ತಿದೆ. ಜೆಜೆಎಂ ಕಾಮಗಾರಿ ಪೂರ್ಣಗೊಂಡು ಎರಡು ವರ್ಷ ಕಳೆದರೂ ಭೀಮಾ ನದಿಯಿಂದ ನೀರು ಸರಬರಾಜು ಆಗುತ್ತಿಲ್ಲ. ಈ ಬಗ್ಗೆ ಕಳೆದ ಡಿಸೆಂಬರ್‌ನಲ್ಲಿ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿದಾಗ ಅಧಿಕಾರಿಗಳು ನೀಡಿದ 15 ದಿನಗಳ ಭರವಸೆ ಐದು ತಿಂಗಳಾದರೂ ಈಡೇರಿಲ್ಲ. ಶಾಸಕರು ಕೇವಲ ಮೂರು ತಿಂಗಳಿಗೊಮ್ಮೆ ಪ್ರವಾಸಕ್ಕೆ ಬಂದಂತೆ ಬಂದು ಹೋಗುತ್ತಾರೆಯೇ ಹೊರತು, ಹನಿ ನೀರಿಗಾಗಿ ಬವಣೆ ಪಡುತ್ತಿರುವ ಜನರ ನೋವು ಅವರಿಗೆ ಕೇಳಿಸುತ್ತಿಲ್ಲ ಎಂದು ಸ್ವಾಮೀಜಿ ದೂರಿದರು.

ಜಿಲ್ಲಾಡಳಿತ ಕೂಡಲೇ ಎಚ್ಚೆತ್ತು ಮುಂದಿನ 5 ದಿನಗಳಲ್ಲಿ ಆಂದೋಲ ಗ್ರಾಮದ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಇಲ್ಲದಿದ್ದರೆ ಬೀದರ್-ಬೆಂಗಳೂರು (ಶ್ರೀರಂಗಪಟ್ಟಣ) ರಸ್ತೆ ತಡೆದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಶಿವಸೇನೆಯ ಜಿಲ್ಲಾಧ್ಯಕ್ಷ ಗುರುಶಾಂತ ಟೆಂಗಳಿ, ರಾಕೇಶ್ ಜಮಾದಾರ್, ಮಲ್ಲಣ್ಣ ಹಿರೇಪೂಜಾರಿ, ಪ್ರಭಾಕರ ವಿಶ್ವಕರ್ಮ, ರೋಹಿತ್ ಪಿಷ್ಕೆ ಇದ್ದರು.



> ಶಾಸಕ ಡಾ.ಅಜಯ್ ಸಿಂಗ್ ಅವರಿಗೆ ಕ್ಷೇತ್ರದ ಅಭಿವೃದ್ಧಿಯ ಕಡೆ ಗಮನವಿಲ್ಲ. ಜೇವರ್ಗಿ ತಾಲೂಕಿನಲ್ಲಿ ಮತ್ತೊಮ್ಮೆ ನಿಜಾಮನ ಕಾಲದ ಅರಾಜಕತೆ ಕಾಣಿಸುತ್ತಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸದ ಶಾಸಕರ ಬಾಲಬಡುಕರು ಸರ್ಕಾರಿ ಜಮೀನು ಕಬಳಿಸುವಲ್ಲಿ ನಿರತರಾಗಿದ್ದಾರೆ.
> ■ ಸಿದ್ಧಲಿಂಗ ಸ್ವಾಮೀಜಿ, ರಾಜ್ಯಾಧ್ಯಕ್ಷ, ಶಿವಸೇನಾ

## ಕಿರುಸುದ್ದಿ

### ಉಪಚುನಾವಣೆಯಲ್ಲಿ 'ಕೈ' ಹಿಡಿದ ಗ್ಯಾರಂಟಿ: ಗವಿಯಪ್ಪ



**ವಿಜಯನಗರ:** ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನತೆ ಒಪ್ಪಿಕೊಂಡಿದ್ದಾರೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು. ಹೊಸಪೇಟೆಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ ಸೇರಿದಂತೆ ದೇಶದಲ್ಲಿ ಕಾಂಗ್ರೆಸ್ ಬೇರುಗಳು ಗಟ್ಟಿಯಾಗಿವೆ ಎಂಬುದಕ್ಕೆ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಫಲಿತಾಂಶವೇ ಸಾಕ್ಷಿಯಾಗಿವೆ. ಪಂಚರಾಜ್ಯ ಚುನಾವಣೆ ಕುರಿತ ಪ್ರಶ್ನೆಗೆ ಉತ್ತರಿಸದ ಅವರು, ತಮಿಳುನಾಡಿನಲ್ಲಿ ನಟ ವಿಜಯ್ ದಳಪತಿ ಅವರ ಪಕ್ಷ ಪಿವಿಕೆ ಜಯಭೇರಿ ಬಾರಿಸುವ ವಿಶ್ವಾಸವಿತ್ತು. ತಮಿಳುನಾಡಿನಲ್ಲಿ ಸಿನಿಮಾ ತಾರೆಯರನ್ನು ಆರಾಧಿಸುತ್ತಾರೆ. ಈ ಹಿಂದೆ ಎಂಜಿಆರ್ ಹಾಗೂ ಜಯಲಲಿತಾ ಅವರು ಕೂಡಾ ಸಿನಿ ರಂಗದಿಂದ ರಾಜಕೀಯ ಪ್ರವೇಶಿಸಿದ್ದರು. ತಮಿಳುನಾಡಿನಲ್ಲಿ ಜಯಲಲಿತಾ ಜನಪ್ರಿಯ ನಾಯಕಿಯಾಗಿ ಹೊರಹೊಮ್ಮಿದ್ದರು. ಅವರ ನಂತರ ಕೆಲ ವರ್ಷಗಳ ಕಾಲ ನಿರ್ವಾತ(ವ್ಯಾಕ್ಯೂಮ್) ಆವರಿಸಿತ್ತು. ಈಗ ವಿಜಯ್ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಆ ಗ್ಯಾಪ್ ತುಂಬಲಿದ್ದಾರೆ. ಉತ್ತಮ ಆಡಳಿತ ನೀಡಿ, ಜಯಲಲಿತಾ ಅವರಂತೆ ಜನಪ್ರಿಯತೆ ಗಳಿಸುವರು. ತಮಿಳುನಾಡು, ಕೇರಳದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಜನತೆ ಮನ್ನಣೆ ನೀಡುತ್ತಾರೆ. ಪಶ್ಚಿಮ ಬಂಗಳಾದಲ್ಲಿ ತೃಣಮೂಲ ಕಾಂಗ್ರೆಸ್ ಸತತ ಮೂರು ಬಾರಿ ಅಧಿಕಾರ ನಡೆಸಿದ್ದರಿಂದ ಸಹಜವಾಗಿಯೇ ಅಲ್ಲಿ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗಿತ್ತು ಎಂದು ಹೇಳಿದರು.

### ಜೋಡೆತ್ತಿನ ಗೆಲುವು



**ವಿಜಯನಗರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಆಡಳಿತಕ್ಕೆ ಹಿಡಿದ ಕನ್ನಡಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೋಡೆತ್ತಿನಂತೆ ರಾಜ್ಯದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಮುಂಬರುವ ಜಿ.ಪಂ., ತಾ.ಪಂ. ಹಾಗೂ ವಿಧಾನ ಪರಿಷತ್‌ನ ಎರಡು ಪದವೀಧರ ಹಾಗೂ ಎರಡು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲೂ ಮತದಾರರು ಕಾಂಗ್ರೆಸ್ ಪಕ್ಷವನ್ನು ಕೈಹಿಡಿಯಲಿದ್ದಾರೆ ಎಂಬುದಕ್ಕೆ ಉಪಚುನಾವಣೆ ಫಲಿತಾಂಶ ಸಾಕ್ಷಿಯಾಗಿದೆ ಎಂದು ಕೆಪಿಸಿಸಿ ಪದವಿಧರ ಘಟಕ ರಾಜ್ಯ ಉಪಾಧ್ಯಕ್ಷ ಕೆ.ಬಿ.ಶ್ರೀನಿವಾಸ ರೆಡ್ಡಿ ಹೇಳಿದ್ದಾರೆ.

### ಮತದಾರರ ಶಕ್ತಿ ಪ್ರದರ್ಶನ



**ವಿಜಯನಗರ:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಮತ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲವು ಸಾಧಿಸಿದ್ದು, ಇದು ಮತದಾರರ ಐತಿಹಾಸಿಕ ತೀರ್ಪು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳಿಂದಾಗಿ ಮತದಾರ ಪ್ರಭು ಕೈ ಹಿಡಿದಿದ್ದಾರೆ. ಉಪ ಚುನಾವಣೆಯ ಗೆಲುವಿಗಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು, ಸಚಿವರ ಶ್ರಮ ಮರೆಯಲಾಗದು. ಯುವಜನತೆ, ಮಹಿಳಾ ಮತದಾರರು ತಮ್ಮ ಮತದಾನದ ಶಕ್ತಿ ಪ್ರದರ್ಶಿಸಿರುವುದು ಸಂತೋಷ ಸಂಗತಿ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ರಾಣಿ ಸಂಯುಕ್ತ ತಿಳಿಸಿದ್ದಾರೆ.

### ಮತ್ತೆ 'ಕೈ' ಹಿಡಿದ ಅಹಿಂದ



**ವಿಜಯನಗರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಓಟ ಮುಂದುವರಿಸಿದೆ. ಈ ಬಾರಿ ಉಪಚುನಾವಣೆ ಸಂದರ್ಭದಲ್ಲಿ ವಿಪಕ್ಷಗಳು ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟಲು ನಡೆಸಿದ ಪ್ರಯತ್ನಗಳು ಫಲಿಸಲಿಲ್ಲ, ದೇಶದ ಇತಿಹಾಸದುದ್ದಕ್ಕೂ ಕಾಂಗ್ರೆಸ್ ಪರವಾಗಿರುವ ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಾಂಪ್ರದಾಯಿಕ ಮತಗಳು ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದು, ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬ ಸ್ಪಷ್ಟ ಸಂದೇಶ ಸಾರಿದ್ದಾರೆ ಎಂದು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಎಫ್. ಮೊಹಮ್ಮದ್ ಇಮಾಮ್ ನಿಯಾಜಿ ಹೇಳಿದ್ದಾರೆ.



ಹೂವಿನಹಡಗಲಿ: ತಾಲೂಕಿನ ಹೊಳಗುಂದಿಯಲ್ಲಿ ಅಗಿ ಹುಣ್ಣಿಮೆ ನಂತರ ಊರಮ್ಮದೇವಿ ಮತ್ತು ದೊಣ್ಣೆಮ್ಮ ದೇವಿ ಪಲ್ಲಕ್ಕಿ ಉತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು. ದೇವಸ್ಥಾನದ ಅಧ್ಯಕ್ಷ ಎನ್.ಎಸ್.ಸುರೇಶ್, ಚಾವಡಿ ಮಂಜುನಾಥ ಸೇರಿದಂತೆ ಪದಾಧಿಕಾರಿಗಳಿದ್ದರು.

## ಬಿಜೆಪಿ ಗೆಲುವು: ಸಂಭ್ರಮಾಚರಣೆ

**ಹೂವಿನಹಡಗಲಿ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ 206 ಕ್ಷೇತ್ರಗಳಲ್ಲಿ ಜಯಗಳಿಸಿದ ಹಿನ್ನೆಲೆ ಪಟ್ಟಣದ ಕಾಯಕ ಭವನದಲ್ಲಿ ಮಂಗಳವಾರ ತಾಲೂಕು ಬಿಜೆಪಿ ಮಂಡಲದ ಅಧ್ಯಕ್ಷ ಪೂಜಾರ ಮಲ್ಲಿಕಾರ್ಜುನ ಹಾಗೂ ಬಿಜೆಪಿ ಹಿರಿಯ ಮುಖಂಡರು ಹಾಗೂ ಮಹಿಳಾ ಮೋರ್ಚಾ ಪದಾಧಿಕಾರಿಗಳು ಸಂಭ್ರಮಿಸಿದರು.

ಬಿಜೆಪಿ ಮಂಡಲದ ತಾಲೂಕು ಅಧ್ಯಕ್ಷ ಪೂಜಾರ ಮಲ್ಲಿಕಾರ್ಜುನ ಮಾತನಾಡಿ, ಈ ಗೆಲುವು ಕೇಸರಿ ಪಕ್ಷಕ್ಕೆ ಮತ ಲೆಕ್ಕ ಹಾಕುವ ಕ್ಷಣವಷ್ಟೇ ಅಲ್ಲ, ಹೆಮ್ಮೆಯ ಕ್ಷಣವೂ ಆಗಿದೆ. ಏಕೆಂದರೆ ಬಿಜೆಪಿಯ ಪೂರ್ವಾಶ್ರಮ 'ಜನಸಂಘದ' ಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ತವರಿನಲ್ಲಿ ಗೆದ್ದು ಬೀಗಿದೆ. ದೇಶದ ಉದ್ದಗಲಕ್ಕೂ ಗೆಲುವಿನ ಪತಾಕೆ ಹಾರಿಸಿದ ಬಿಜೆಪಿ, ಬಂಗಾಳದಲ್ಲಿ ಅಧಿಕಾರ ಪಡೆಯುವುದಕ್ಕೆ ಸಾಧ್ಯವಾಗಿರಲಿಲ್ಲ. ಈಗ ಅಲ್ಲೂ ಗೆಲ್ಲುವ ಮೂಲಕ ಪಕ್ಷದ ಸ್ಥಾಪಕರ ತವರಲ್ಲಿ ಚುಕ್ಕಾಣಿಗೇರಿದಂತಾಗಿದೆ ಎಂದರು.

ದೇಶದ ಹೆಮ್ಮೆಯ ಪ್ರಧಾನಮಂತ್ರಿ ಮೋದಿಜಿ ಮತ್ತು ಅಮಿತ್ ಶಾ 'ಬಿಜೆಪಿಯ ಡಿಎನ್‌ಎ ಬಂಗಾಳದ ಮಣ್ಣಿನಲ್ಲಿದೆ ಎಂದು ಹೇಳುವುದಕ್ಕೂ ಇದೇ ಕಾರಣ ಎಂದು ಹೇಳಿದರು. ಈ ವೇಳೆ ಬಿಜೆಪಿ ಹಿರಿಯ ಮುಖಂಡರು, ಕಾರ್ಯಕರ್ತರು, ಮಹಿಳಾ ಕಾರ್ಯಕರ್ತರು, ಇತರರಿದ್ದರು.



ಹೂವಿನಹಡಗಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ 206 ಕ್ಷೇತ್ರಗಳಲ್ಲಿ ಜಯಗಳಿಸಿದ ಹಿನ್ನೆಲೆ ಪಟ್ಟಣದ ಕಾಯಕ ಭವನದಲ್ಲಿ ಮಂಗಳವಾರ ತಾಲೂಕು ಬಿಜೆಪಿ ಮಂಡಲದ ಅಧ್ಯಕ್ಷ ಪೂಜಾರ ಮಲ್ಲಿಕಾರ್ಜುನ ಹಾಗೂ ಬಿಜೆಪಿ ಹಿರಿಯ ಮುಖಂಡರು ಹಾಗೂ ಮಹಿಳಾ ಮೋರ್ಚಾ ಪದಾಧಿಕಾರಿಗಳು ಸಿಹಿಹಂಚಿ ಸಂಭ್ರಮಿಸಿದರು.

### ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆ

## ಸಮರ್ಥ ಸಂಘಟನಾಕಾರನೂ ಅಧ್ಯಕ್ಷರಾಗಬಹುದು: ಇಮಾಮ್

**ಕೊಟ್ಟೂರು:** ಸರ್ ಎಂ.ವಿಶ್ವೇಶ್ವರಯ್ಯ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಹಿರಿಯ ಸಾಹಿತಿಗಳು ನಿರಂತರವಾಗಿ ನಡೆಸಿದ ಶ್ರಮದ ಫಲವಾಗಿ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾಗಲು ಕಾರಣವಾಯಿತು ಎಂದು ಕೂಡ್ಲಿಗಿ ಸರ್ಕಾರಿ ಪಪೂ ಕಾಲೇಜು ಉಪನ್ಯಾಸಕ ಇಮಾಮ್ ಸಾಹೇಬ್ ಹಡಗಲಿ ಹೇಳಿದರು.

ಪಟ್ಟಣದ ತುಂಗಭದ್ರ ಬಿಇಡಿ ಕಾಲೇಜಿನಲ್ಲಿ ತಾಲೂಕು ಕಸಾಪ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್‌ನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸಕರಾಗಿ ಮಂಗಳವಾರ ಮಾತನಾಡಿದರು.

1938ರಲ್ಲಿ ರಂ.ರಾ.ದಿವಾಕರ ಅಧ್ಯಕ್ಷತೆಯಲ್ಲಿ ಬಳ್ಳಾರಿಯಲ್ಲಿ ನಡೆದ ಬಳ್ಳಾರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಎಂದು ಮರುನಾಮಕರಣಗೊಂಡಿತು. ಬಿಎಂಟಿಸಿ ಪ್ರತಿ ವರ್ಷ ನೃಪತುಂಗ ಹೆಸರಲ್ಲಿ ಪ್ರಶಸ್ತಿ ನೀಡುತ್ತಿದೆ. 1760 ಪುಸ್ತಕಗಳನ್ನು ಪ್ರಕಟಿಸಿರುವ ಪರಿಷತ್‌ನ ಭಂಡಾರದಲ್ಲಿ 70 ಸಾವಿರ ಪುಸ್ತಕಗಳಿವೆ ಎಂದರು.

ಕಸಾಪಕ್ಕೆ ಸಾಹಿತಿಗಳೇ ಅಧ್ಯಕ್ಷರಾಗಬೇಕು ಎಂಬುದಕ್ಕೆ ನನ್ನ ಆಕ್ಷೇಪವಿದೆ. ಪರಿಷತ್‌ನ್ನು ಸಂಘಟಿಸಿ, ಕನ್ನಡ ಕಾರ್ಯಕ್ರಮಗಳನ್ನು ಭಾಷಾ ವಿಚಾರವನ್ನು ವಿಸ್ತರಿಸಲು ಸಮರ್ಥವಾದ ಸಂಘಟನಾಕಾರನೂ ಅಧ್ಯಕ್ಷರಾಗಬಹುದು. ಕೇವಲ 400 ರೂ.ಗಳನ್ನು ನೀಡಿ ಪರಿಷತ್‌ನ ಸದಸ್ಯರಾಗಬೇಕು. ಕೊಟ್ಟೂರು ತಾಲೂಕು ಸಾಹಿತ್ಯ ಭವನಕ್ಕೆ ಜಾಗ ನಿಗದಿ ಮಾಡಿಕೊಂಡರೆ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ಕಲ್ಪಿಸಿಕೊಡುವೆ ಎಂದರು.



> ಪಟ್ಟಣದಲ್ಲಿ ತಾಲೂಕು ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲು ಎಲ್ಲ ತಯಾರಿ ನಡೆಸಿತ್ತು. ಆದರೆ ಕಸಾಪ ರಾಜ್ಯಾಧ್ಯಕ್ಷರ ಹುದ್ದೆ ಗೊಂದಲದಿಂದ ಸ್ಥಗಿತವಾಗಿದೆ. ಈ ಭಾಗದ ಸಾಹಿತ್ಯಾಸಕ್ತರು ಹಾಗೂ ದಾನಿಗಳ ಸಹಕಾರದಿಂದ ಕಸಾಪ ಹೋಬಳಿ ಘಟಕವಿದ್ದಾಗಲೇ ಜಿಲ್ಲಾ ಸಮ್ಮೇಳನ ಮಾಡಲಾಗಿತ್ತು.
>
> ■ ದೇವರಮನಿ ಕೊಟ್ರೇಶ್, ಕಸಾಪ ತಾಲೂಕು ಅಧ್ಯಕ್ಷ

ಪಪಂ ಮುಖ್ಯಾಧಿಕಾರಿ ಎ.ನಸರುಲ್ಲಾ ಮಾತನಾಡಿ, ನಮ್ಮ ಕಚೇರಿಯಲ್ಲಿ ಕನ್ನಡಕ್ಕೆ ಆದ್ಯತೆ ನೀಡಿದ್ದೇವೆ. ಪರಿಷತ್‌ನ ಎಲ್ಲ ಕಾರ್ಯಕ್ರಮಕ್ಕೆ ಬೆಂಬಲ ನೀಡುತ್ತೇವೆ. ಕನ್ನಡ ಭವನ ನಿರ್ಮಾಣಕ್ಕೆ ಪಪಂ ಜಾಗ ಗುರುತಿಸಲು ಕ್ರಮ ವಹಿಸುತ್ತೇನೆ ಎಂದರು.

ತುಂಗಭದ್ರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಶಿವಣ್ಣ ಮಾತನಾಡಿ, ಕನ್ನಡ ಭಾಷೆ ಉಳಿವಿಗೆ ಸರ್ಕಾರ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಾಲೇಜು ಪ್ರಾಚಾರ್ಯ ಎಂ.ಶ್ಯಾಮರಾಜ ಅಧ್ಯಕ್ಷತೆ ವಹಿಸಿದ್ದರು. ಪರಿಷತ್ ಕಾರ್ಯದರ್ಶಿ ಎಸ್.ರಾಜಣ್ಣ ಇದ್ದರು. ಹಳ್ಳಿ ಅಶೋಕ್, ಜಿ.ಆರ್.ಬಸವರಾಜೇಶ್ವರಿ, ಡಾ.ಸತೀಶ್ ಬಾಲನಗೌಡನ್ನು ಸನ್ಮಾನಿಸಲಾಯಿತು.

ಕಸಾಪ ಗೌರವ ಕಾರ್ಯದರ್ಶಿ ಅರವಿಂದ ಬಸಾಪುರ ಪ್ರಾಸ್ತಾವಿಕ ಮಾತನಾಡಿದರು. ಖಜಾಂಚಿ ಈಶ್ವರಪ್ಪ ತುರಕಾಣಿ, ಸದಸ್ಯ ಶೆಟ್ಟಿ ಶಶಿಕಲಾ ನಿರ್ವಹಿಸಿದರು.

## ಅಭಿಮಾನೋತ್ಸವ: 15 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ

**ಕೂಡ್ಲಿಗಿ:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಾರ್ಥಕ 50 ವರ್ಷಗಳ ರಾಜಕೀಯ ಹೋರಾಟ ನಡೆಸಿದ ಕಾರಣ ನಾಡಿನಲ್ಲಿರುವ ಅವರ ಅಭಿಮಾನಿಗಳು ಚಿತ್ರದುರ್ಗದಲ್ಲಿ ಮೇ 9ರಂದು ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕೂಡ್ಲಿಗಿ ತಾಲೂಕಿನಿಂದ 15 ಸಾವಿರಕ್ಕೂ ಹೆಚ್ಚು ಜನರು ಸೇರಲಿದ್ದಾರೆ ಎಂದು ಬಿಜೆಪಿ ವಿಜಯನಗರ ಜಿಲ್ಲಾ ಉಸ್ತುವಾರಿ ಪಿ.ಚನ್ನಬಸವನಗೌಡ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ವಿಜಯನಗರ ಜಿಲ್ಲೆಯಿಂದ ಚಿತ್ರದುರ್ಗದ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಬಿಜೆಪಿ ಕಾರ್ಯಕರ್ತರು ಸೇರಿದಂತೆ 50 ಸಾವಿರಕ್ಕೂ ಹೆಚ್ಚಿನ ಜನರು ತೆರಳಿದ್ದಾರೆ. ಬಿಎಸ್‌ವೈ ಅವರು ರೈತರ ಪರ ಹೋರಾಟ, ಬಿಜೆಪಿಯ ತಳಮಟ್ಟದ ಸಂಘಟನೆಯ ಮೂಲಕ ಹಂತ ಹಂತವಾಗಿ ಬೆಳೆದು ಬಂದಿರುವ ರಾಜಕೀಯದ ಹೆಜ್ಜೆ ಗುರುತುಗಳು ಇಂದಿನ ಯುವ ನಾಯಕರಿಗೆ ಸ್ಫೂರ್ತಿಯಾಗಿದೆ. ಹೀಗಾಗಿ, ಗ್ರಾಮಗಳ ಬೂತ್ ಮಟ್ಟದ ಕಾರ್ಯಕರ್ತರು ಸೇರಿ ಎಲ್ಲಾ ವರ್ಗದವರನ್ನು ಸಂಪರ್ಕಿಸಲು ಬಿಜೆಪಿ ಸ್ಥಳೀಯ ಮುಖಂಡರು ಮುಂದಾಗಿದ್ದಾರೆ ಎಂದರಲ್ಲದೆ, ಬಿಜೆಪಿಯು ಪಶ್ಚಿಮಬಂಗಾಳ, ಪುದುಚೇರಿ, ಅಸ್ಸಾಂ ಸೇರಿ ಮೂರು ರಾಜ್ಯಗಳಲ್ಲಿ ಅಭೂತ ಗೆಲವು ಸಾಧಿಸಿರುವುದು ಮೋದಿ ಸಂಕಲ್ಪವಾದ ಕಾಂಗ್ರೆಸ್ ಮುಕ್ತ ಭಾರತವಾಗಲಿದೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಬಲ್ಲಾಹುಣಸಿ ರಾಮಣ್ಣ, ಮಂಡಲ ಅಧ್ಯಕ್ಷ ಬಣವಿಕಲ್ಲು ಕೆ.ನಾಗರಾಜ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುಳಿಗಿ ವೀರೇಂದ್ರ, ಜಿಲ್ಲಾ ಕಾರ್ಯದರ್ಶಿ ಎಲ್.ಪವಿತ್ರಾ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ದೀನಾ ಮಂಜುನಾಥ, ಮಹಿಳಾ ಮೋರ್ಚಾ ಜಿಲ್ಲಾ ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕಾಂತರಾಜ್, ಎಸ್.ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಾಣೆಹಳ್ಳಿ ಹನುಮಂತಪ್ಪ, ಮಂಡಲ ಪ್ರಧಾನ ಕಾರ್ಯದರ್ಶಿ ಪಿ.ಮಂಜುನಾಥ ನಾಯಕ, ಯುವ ಮೋರ್ಚಾ ಅಧ್ಯಕ್ಷ ಅಜಯ್‌ಕುಮಾರ್, ಮುಖಂಡರಾದ ವಾಗೀಶ್ ಮೂರ್ತಿ, ಪ್ರಕಾಶ್‌ನಾಯಕ್, ಹಗರಿಬೊಮ್ಮನಹಳ್ಳಿ ಎಸ್.ಸಿ ಮೋರ್ಚಾ ಮಂಡಲ ಅಧ್ಯಕ್ಷ ಮರಿಯಪ್ಪ ಸೇರಿ ಇತರರಿದ್ದರು.



## ಕನ್ನಡ ಸಾಹಿತ್ಯ ಪರಿಷತ್ ಕೊಡುಗೆ ಅಪಾರ

**ಬಳ್ಳಾರಿ:** ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ 112 ವರ್ಷಗಳಿಂದಲೂ ಸಾರ್ಥಕ ಸೇವೆ ಸಲ್ಲಿಸುತ್ತಿದೆ ಎಂದು ಸನ್ಮಾರ್ಗ ಗೆಳೆಯರ ಬಳಗದ ಅಧ್ಯಕ್ಷ ಎಚ್.ಲಕ್ಷ್ಮಿಕಾಂತ ರೆಡ್ಡಿ ಅಭಿಪ್ರಾಯಪಟ್ಟರು.

ನಗರದ ಸನ್ಮಾರ್ಗ ಗೆಳೆಯರ ಬಳಗದ ಸಭಾ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬಳ್ಳಾರಿ ಜಿಲ್ಲಾ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಜೀವಂತವಾಗಿ ಇಡುವಲ್ಲಿ ಪರಿಷತ್ತಿನ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆಯ ಹೆಜ್ಜೆಗಳು ಕುರಿತು ಕುರುಗೋಡು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ತಿಪ್ಪೇರುದ್ರ ಸಂಡೂರು ಅವರು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಡಾ.ಶಿವಲಿಂಗಪ್ಪ ಹಂದಿಹಾಳು ಮಾತನಾಡಿ, ಬಳ್ಳಾರಿ ಜಿಲ್ಲೆಗೆ 69 ವರ್ಷಗಳ ನಂತರ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಲಭ್ಯವಾಗಿದ್ದು, ಕಾನೂನಿನ ತೊಡಕಿನಿಂದಾಗಿ ಸಮ್ಮೇಳನ ವಿಳಂಬವಾಗುತ್ತಿದೆ. ಆದಷ್ಟು ಶೀಘ್ರ ಸಮ್ಮೇಳನ ಬಳ್ಳಾರಿಯಲ್ಲಿ ನಡೆಸಲು ಸರ್ವ ರೀತಿಯ ಪ್ರಯತ್ನವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಕಾರ್ಯಕಾರಿ ಸಮಿತಿ ಪ್ರಯತ್ನಶೀಲವಾಗಿದೆ ಎಂದು ತಿಳಿಸಿದರು.

ಕಥೆಗಾರರಾದ ವೀರೇಂದ್ರ ರಾವಿಹಾಳ್, ಚಿತ್ರ ಕಲಾವಿದ ಮಂಜುನಾಥ ಗೋವಿಂದವಾಡ ಉಪಸ್ಥಿತರಿದ್ದರು. ಕರ್ನಾಟಕ ಲಲಿತ ಕಲಾ ಅಕಾಡೆಮಿ ವರ್ಣ ಶ್ರೀಪ್ರಶಸ್ತಿ ಪುರಸ್ಕೃತರಾದ ಚಿತ್ರಕಲಾವಿಧ ಎಂ ರಫೀ, ಆಲಾಪ್ ಸಂಗೀತ ಕಲಾ ಟ್ರಸ್ಟ್ ಅಧ್ಯಕ್ಷ ಬಿ ರಮಣಪ್ಪ, ವಂದನಾ ಶಾಲೆಯ ಅಧ್ಯಕ್ಷ ಕೆ.ಬಿ.ಈಶ್ವರ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಕ ಹರಿಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು. ಸಂಚಾಲಕ ಕಪ್ಪಗಲ್ಲು ಚಂದ್ರಶೇಖರ್ ಆಚಾರ್ ವಂದಿಸಿದರು.



## ಸಿಎಂ ಬದಲಾವಣೆ ವಿಚಾರದಲ್ಲಿ ಗೊಂದಲವಿಲ್ಲ

**ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ ಬೈಪಾಸ್ ಬಳಿ 71.50 ಲಕ್ಷ ರೂ. ಪಾಯಿಗಳಲ್ಲಿ ಸಂತೆ ಮಾರುಕಟ್ಟೆ ನಿರ್ಮಾಣದ ರಸ್ತೆಗೆ ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಮಂಗಳವಾರ ಭೂಮಿಪೂಜೆ ನೆರವೇರಿಸಿದರು.

ನಂತರ ಪತ್ರಕರ್ತರ ಪ್ರಶ್ನೆಗೆ ಕಾಂಗ್ರೆಸ್ ಪಕ್ಷದ ಆಡಳಿತ ವೈಖರಿ, ಗ್ಯಾರಂಟಿಗಳಿಂದ ರಾಜ್ಯದ ಎರಡು ಸ್ಥಾನಗಳನ್ನು ಗಳಿಸಿದೆ. ರಾಜ್ಯದ ಗ್ಯಾರಂಟಿಗಳನ್ನು ವಿರೋಧಿಸಿ ಜನರನ್ನು ಸೋಮಾರಿಗಳನ್ನಾಗಿಸುತ್ತವೆ ಎಂದು ಆರೋಪಿಸುತ್ತಿದ್ದ ಬಿಜೆಪಿಯವರು ಚುನಾವಣೆಗಳಲ್ಲಿ ರಾಜ್ಯದ ಗ್ಯಾರಂಟಿಗಳನ್ನೇ ಕಾಪಿ ಮಾಡಿ ಜಯವಾಗಿದೆ. ಇವರಿಗೆ ಮಾನ ಮಾರ್ಯಾದೆ ಇದೆಯೇ? ಕಾಂಗ್ರೆಸ್ ಸರ್ಕಾರವನ್ನು ಪ್ರಶ್ನಿಸುವ ನೈತಿಕತೆ ಇದೆಯೇ? ಎಂದು ಪ್ರಶ್ನಿಸಿದರು.

2028ರ ರಾಜ್ಯದ ವಿಧಾನಸಭಾ ಚುನಾವಣೆಯಲ್ಲೂ ನೂರಕ್ಕೆ ನೂರು ಖಾತ್ರಿಯಾಗಿ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಪುನಃ ಬರಲಿದೆ. ಸಿಎಂ ಬದಲಾವಣೆ ವಿಚಾರ ಹೈಕಮಾಂಡಿಗೆ ಬಿಟ್ಟಿದ್ದು ಯಾವುದೇ ಗೊಂದಲ ಇಲ್ಲ. ಜಿಲ್ಲೆಯ ಎರಡು ಸಚಿವ ಸ್ಥಾನ ಖಾಲಿ ಇದ್ದು, ಸಚಿವ ಸಂಪುಟ ವಿಸ್ತರಣೆಯಲ್ಲಿ ನನಗೆ ಸಚಿವ ಸ್ಥಾನ ದೊರಕುವ ಆಶಯ ಇದೆ. ಸಚಿವ ಸ್ಥಾನದೊರಕಿದಲ್ಲಿ ಮಾದರಿ ಸಚಿವನಾಗಿ ಶ್ರಮಿಸುತ್ತೇನೆ ಎಂದರು.



ಈ ವೇಳೆ ಶಾಸಕರಿಗೆ ಸ್ಥಳೀಯ ಮಹಿಳೆಯರು ವಾರ್ಡಿಗಳ ಚರಂಡಿಗಳ ಸಮಾರ್ಪಕವಾಗಿ ನಿರ್ಮಿಸಲು ಒತ್ತಾಯಿಸಿದರು.

ಈ ವೇಳೆ ಮುಖಂಡರಾದ ಮಾಜಿ ತಾಪಂ ಸದಸ್ಯ ಬಿ.ಸದಾಶಿವಪ್ಪ, ವೆಂಕಟರಾಮ ರಾಜು, ಗಾದ್ಲಿ ನಾಗಿರೆಡ್ಡಿ, ವೈ.ಆಶ್ವಥ್ ರೆಡ್ಡಿ, ಹನುಮಂತ ರೆಡ್ಡಿ, ಕಾಂಗ್ರೆಸ್ ಯುವ ಮುಖಂಡರಾದ ಕನಕಪ್ಪ ಸುಣಗಾರ, ಎಳ್ಳಾರ್ಥಿ ವೈ.ರಾಘವೇಂದ್ರ, ಗ್ರಾಪಂ ಹೆಬುಟದ ರಾಮಾಂಜಿನಿ, ವಡ್ಡರ ವೀರೇಶ, ತಿಮ್ಮನಕೇರಿ ಶಿವರಾಮುರಾಜು, ಕಾಗಿ ಈರಣ್ಣ, ಜಡೇಶ ಇತರರಿದ್ದರು.

## ಆಧಾರ್ ತಿದ್ದುಪಡಿ ಕೇಂದ್ರ ತೆರೆಯಲು ಮನವಿ

**ಕುರುಗೋಡು:** ಸಮೀಪದ ಶಿರಿಗೇರಿ ಗ್ರಾಮಕೆರೆ ಅಭಿವೃದ್ಧಿ ಮಾಡುವಂತೆ ಮತ್ತು ಅಟಲ್ ಸೇವಾ ಕೇಂದ್ರ ವನ್ನು ತೆರೆಯುವಂತೆ ಜಿಲ್ಲಾಧಿಕಾರಿಯಾದ ಕೆ ನಾಗೇಂದ್ರ ಪ್ರಸಾದ ರವರನ್ನು ನಿಮಗಾಗಿ ನಾವು ಸಂಸ್ಥೆ ಗ್ರಾಮ ಘಟಕದಿಂದ ಸೋಮವಾರ ಮನವಿ ಸಲ್ಲಿಸಿದರು.

ತಾಲೂಕಿನಲ್ಲಿ ದೊಡ್ಡ ಪಂಚಾಯಿತಿಯಾಗಿದ್ದು,31 ಗ್ರಾ ಪಂ ಹೆಸರನ್ನು ಒಳಗೊಂಡಿದ್ದು 17 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದೆ ಮಕ್ಕಳು, ಮಹಿಳೆಯರು, ವೃದ್ಧರಿಗೆ ಸೇರಿ ಆಧಾರ್ ತಿದ್ದುಪಡಿ ತುಂಬಾ ಅವಶ್ಯಕತೆ ಆಗಿರುತ್ತದೆ. ಕಳೆದ ಆರು ತಿಂಗಳಿಂದ ಆಧಾರ್ ಕೇಂದ್ರವು ಸ್ಥಗಿತಗೊಂಡಿದ್ದು, ಈ ಕುರಿತಾಗಿ ತಹಸಿಲ್ದಾರರಿಗೆ ಮನವಿ ಸಲ್ಲಿಸಿದರು ಪ್ರಯೋಜನಗೊಂಡಿಲ್ಲ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಸಮಸ್ಯೆ ಬಗೆಹರಿಸಿ, ಹಾಗೆಯೇ ಗ್ರಾಮದ ಹೃದಯ ಭಾಗದಲ್ಲಿರುವ ಊರುಕೆರೆ ಗಿಡ ಗಂಟಗಳಿಂದ ಬೆಳೆದು ಸಾಂಕ್ರಾಮಿಕ ರೋಗಗಳಿಗೆ ದಾರಿ ಮಾಡಿಕೊಟ್ಟಿದೆ, ಮಳೆಗಾಲ ಬಂತಂದರೆ ಸಾಕು ಕೆರೆಯ ನೀರು ಮೂರನೇ ವಾರ್ಡಿನ ರಸ್ತೆಯಲ್ಲಿ ಹರೆದು ಮನೆಗಳಿಗೆ ನಗ್ಗುತ್ತವೆ. ಅವಾಂತರಗಳನ್ನ ಸೃಷ್ಟಿಮಾಡುತ್ತದೆ. ಈ ಕುರಿತಾಗಿ ಕಳೆದ ವರ್ಷ ಪ್ರತಿಭಟನೆ ಮಾಡಿದರೂ ಪ್ರಯೋಜನವಾಗಿಲ್ಲ, ಶಾಸಕರು ಸ್ಥಳಕ್ಕೆ ಆಗಮಿಸಿ 4.75 ಕೋಟಿ ಅನುದಾನ ಒದಗಿಸುವುದಾಗಿ ಭರವಸೆ ನೀಡಿದ್ದರು ಎಂದರು.



ನಿಮಗಾಗಿ ನಾವು ಸಂಸ್ಥೆಯ ಗ್ರಾಮ ಘಟಕದ ಅಧ್ಯಕ್ಷರಾದ ಕೊಳ್ಳಿ ಶೇಖರ್, ಉಪಾಧ್ಯಕ್ಷರಾದ ಹಳ್ಳಿ ಮರದ ನಾಗರಾಜ್ ಖಜಾಂಚಿ ಶಿವಾಜಿ ರಾವ್ ಇದ್ದರು.

## ಬಿಸಿಲಿನ ತೀವ್ರತೆ: ಜನರು ಆರೋಗ್ಯದ ಕಡೆ ಗಮನಹರಿಸಲಿ

**ಬಳ್ಳಾರಿ:** ಜಿಲ್ಲಾದ್ಯಂತ ದಿನದಿಂದ ದಿನಕ್ಕೆ ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಏರುತ್ತಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರು ತಮ್ಮ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಡಿಎಚ್‌ಓ ಡಾ.ರಮೇಶ್ ಬಾಬು ತಿಳಿಸಿದ್ದಾರೆ.



ವಿಶೇಷವಾಗಿ ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಹಾಗೂ ವಯೋವೃದ್ಧರು ಬಿಸಿಲಿನಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಿಂದ ರಕ್ಷಿಸಿಕೊಳ್ಳಬೇಕು. ಬಾಯಾರಿಕೆ ಇಲ್ಲದಿದ್ದರೂ ದಿನವಿಡೀ ಅತಿ ಹೆಚ್ಚು ನೀರನ್ನು ಕುಡಿಯುತ್ತಿರಬೇಕು. ನಿರ್ಜಲೀಕರಣ ತಡೆಯಲು ಇದು ಅತಿ ಮುಖ್ಯವಾಗಿದೆ. ಅಂಗಡಿಯ ಕೃತಕ ಪಾನೀಯಗಳ ಬದಲು ಮನೆಯಲ್ಲಿ ತಯಾರಿಸಿದ ನಿಂಬೆ ಹಣ್ಣಿನ ರಸ, ಮಜ್ಜಿಗೆ ಹಾಗೂ ನೈಸರ್ಗಿಕ ಎಳೆನೀರನ್ನು ಹೆಚ್ಚಾಗಿ ಸೇವಿಸಬೇಕು ಎಂದು ತಿಳಿಸಿದ್ದಾರೆ.

ಆಹಾರ ಕ್ರಮ: ಸೌತೆಕಾಯಿ, ಕಲ್ಲಂಗಡಿ, ಕಿತ್ತಳೆ ಹಾಗೂ ದ್ರಾಕ್ಷಿಯಂತಹ ನೀರಿನ ಅಂಶ ಹೆಚ್ಚಿರುವ ಹಣ್ಣು ಮತ್ತು ತರಕಾರಿಗಳನ್ನು ದಿನನಿತ್ಯದ ಆಹಾರದಲ್ಲಿ ಸೇರಿಸಿಕೊಳ್ಳಬೇಕು. ಹಗುರವಾದ, ತಿಳಿ ಬಣ್ಣದ ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸುವುದು ದೇಹವನ್ನು ತಂಪಾಗಿರಿಸಲು ಸಹಕಾರಿಯಾಗಲಿದೆ.

ಮ.12ರಿಂದ 3ರ ವರೆಗೆ ಬಿಸಿಲಿನ ತೀವ್ರತೆ ಹೆಚ್ಚಿರುವುದರಿಂದ ಆ ಸಮಯದಲ್ಲಿ ಹೊರಗೆ ಹೋಗುವುದನ್ನು ಸಾಧ್ಯವಾದಷ್ಟು ತಪ್ಪಿಸಿ. ಅನಿವಾರ್ಯವಿದ್ದಲ್ಲಿ ಛತ್ರಿ, ಟೋಪಿ, ಕಪ್ಪು ಕನ್ನಡಕ ಹಾಗೂ ಚಪ್ಪಲಿಗಳನ್ನು ಕಡ್ಡಾಯವಾಗಿ ಬಳಸಿ. ಸಭೆ-ಸಮಾರಂಭಗಳನ್ನು ನಡೆಸುವವರು ಜನರಿಗೆ ನೆರಳು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಬಿಸಿಲಿನಿಂದ ಯಾರಾದರೂ ಪ್ರಜ್ಞೆ ತಪ್ಪಿ ಬಿದ್ದರೆ, ಕೂಡಲೇ ಅವರನ್ನು ತಂಪಾದ ಸ್ಥಳಕ್ಕೆ ಸ್ಥಳಾಂತರಿಸಬೇಕು. ಒದ್ದೆ ಬಟ್ಟೆಯಿಂದ ಮೈ ಒರೆಸಿ, ತಕ್ಷಣವೇ ವೈದ್ಯಕೀಯ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು.

ಮನುಷ್ಯರಷ್ಟೇ ಅಲ್ಲದೆ ಸಾಕು ಪ್ರಾಣಿಗಳ ಬಗ್ಗೆಯೂ ಕಾಳಜಿ ವಹಿಸಬೇಕು. ಅವುಗಳನ್ನು ನೆರಳಿನಲ್ಲಿರಿಸಿ, ಕುಡಿಯಲು ಸಾಕಷ್ಟು ನೀರಿನ ವ್ಯವಸ್ಥೆ ಮಾಡಬೇಕು. ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕು ಪ್ರಾಣಿಗಳನ್ನು ಒಂಟಿಯಾಗಿ ಬಿಟ್ಟು ಹೋಗಬಾರದು ಎಂದು ತಿಳಿಸಿದ್ದಾರೆ.

ಆಲ್ಕೋಹಾಲ್, ಅತಿಯಾದ ಚಹಾ, ಕಾಫಿ ಮತ್ತು ಕಾರ್ಬೊನೇಟೆಡ್ (ತಂಪು ಪಾನೀಯ) ಪಾನೀಯಗಳು ದೇಹವನ್ನು ಶೀಘ್ರವಾಗಿ ನಿರ್ಜಲೀಕರಣಗೊಳಿಸುವುದರಿಂದ ಅವುಗಳ ಸೇವನೆಯನ್ನು ಆದಷ್ಟು ಕಡಿಮೆ ಮಾಡಬೇಕು.

ವಿಶೇಷವಾಗಿ ಕೆರೆ, ಬಾವಿ ಅಥವಾ ಕಾಲುವೆಗಳ ಹತ್ತಿರ ಮಕ್ಕಳು ಹೋಗದಂತೆ ಪಾಲಕರು ಹೆಚ್ಚಿನ ನಿಗಾವಹಿಸಬೇಕು ಎಂದು ತಿಳಿಸಿದ್ದಾರೆ.

## ರಾಜ್ಯ ಬಿಜೆಪಿ ಸಮಿತಿ ವಿಸರ್ಜನೆಗೆ ಒತ್ತಾಯ

**ಕೊಟ್ಟೂರು:** ರಾಜ್ಯದಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಪಕ್ಷದ ಸೋಲಿಗೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರ ಸಂಘಟನೆ ಕೊರತೆ ಕಾರಣವಾಗಿದೆ. ವಿಪಕ್ಷ ನಾಯಕರಾಗಿ ಆರ್.ಅಶೋಕ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸಮಿತಿ ವಿಸರ್ಜಿಸಿ ಸಮರ್ಥರಾದವರನ್ನು ನೇಮಿಸಬೇಕು ಎಂದು ಬಿಜೆಪಿ ಕೇಂದ್ರ ಸಮಿತಿ ಮಾಜಿ ಸದಸ್ಯ ಶೆಟ್ಟಿ ತಿಂದಪ್ಪ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಈ ಕುರಿತು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಂಗಳವಾರ ಮಾತನಾಡಿದರು. ದಾವಣಗೆರೆ ಕ್ಷೇತ್ರ ಸಾಮಾನ್ಯ ವರ್ಗಕ್ಕಿದ್ದರೂ ಎಸ್‌ಟಿ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ಹೈಕಮಾಂಡ್ ತಪ್ಪು ನಿರ್ಧಾರವೇ ಕ್ಷೇತ್ರದಲ್ಲಿ ಪಕ್ಷದ ಸೋಲಿಗೆ ಕಾರಣ. ಮುಸ್ಲಿಂ ಮತದಾರರು ಕಾಂಗ್ರೆಸ್‌ಗೆ ವಿರೋಧವಿದ್ದರೂ ಆ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳ ನಾಯಕರು ಎಡವಿದ್ದಾರೆ ಎಂದರು. ಪ್ರಧಾನಿ ನರೇಂದ್ರ ಮೋದಿ, ಸಚಿವ ಅಮಿತ್ ಷಾ ಅವರ ನಿರಂತರ ಹೋರಾಟದ ಫಲದಿಂದ ಪಶ್ಚಿಮ ಬಂಗಾಳದಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ. ಅಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಾರದೇ ಇದ್ದಲ್ಲಿ ದೇಶಕ್ಕೆ ದೊಡ್ಡ ಗಂಡಾಂತರ ಎದುರಾಗುತ್ತಿತ್ತು. ಹಿಂದುತ್ವ ವಿರೋಧ ಮಾಡುತ್ತಾ ಬಂದಿದ್ದ ಮಮತಾ ಬ್ಯಾನರ್ಜಿ, ಎಂಕೆ ಸ್ಟಾಲಿನ್‌ರಿಗೆ ಮತದಾರ ತಕ್ಕ ಪಾಠ ಕಲಿಸಿದ್ದಾರೆಂದರು. ಬಿಜೆಪಿ ಮುಖಂಡರಾದ ಹರಾಳು ಬಸವರಾಜ, ಸಿದ್ದಪ್ಪ ಇದ್ದರು.

## ನಿಗದಿತ ದರದಲ್ಲಿ ರಸಗೊಬ್ಬರ ಮಾರಾಟ ಮಾಡಿ

**ಸಿರುಗುಪ್ಪ:** ತಾಲೂಕಿನಲ್ಲಿರುವ ಎಲ್ಲ ರಸಗೊಬ್ಬರ, ಬಿತ್ತನೆ ಬೀಜ ಮಾರಾಟದ ಅಂಗಡಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ಯಾವುದೇ ಕಾರಣಕ್ಕೂ ರೈತರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್ ರೆಡ್ಡಿ ಹೇಳಿದರು.



ನಗರದ ವಿವಿಧ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದರು. ನಮ್ಮ ಉದ್ದೇಶ ರೈತರಿಗೆ ಯಾವುದೇ ತೊಂದರೆಯಾಗಬಾರದು, ಅಕ್ರಮವಾಗಿ ರಸಗೊಬ್ಬರಗಳನ್ನು ಸಂಗ್ರಹಿಸಿ ಕೃತಕ ಅಭಾವ ಸೃಷ್ಟಿಸಬಾರದು, ಯಾವುದೇ ಕಾರಣಕ್ಕೂ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಕೂಡದು, ಗುಣಮಟ್ಟದ ವಿಚಾರದಲ್ಲಿ ರಾಜಿ ಇಲ್ಲವೇ ಇಲ್ಲ, ಅಂಗಡಿಕಾರರು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ವಹಿಸುವಂತಿಲ್ಲ, ಕಂಡು ಬಂದಲ್ಲಿ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಮುಖ್ಯವಾಗಿ ಅಕ್ರಮ ದಾಸ್ತಾನು ಮಾಡುವುದು, ಕೃತಕ ಅಭಾವ ಸೃಷ್ಟಿ, ಹೆಚ್ಚಿನ ಬೆಲೆಗೆ ಮಾರಾಟಕ್ಕೆ ಕಡಿವಾಣ ಹಾಕುವುದು ನಮ್ಮ ಮೂಲ ಉದ್ದೇಶವಾಗಿದೆ. ಇದಕ್ಕಾಗಿ ಮೇಲಧಿಕಾರಿಗಳ ಸೂಚನೆಯಂತೆ ಅನಿರೀಕ್ಷಿತವಾಗಿ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಾಗುತ್ತಿದೆ. ನಮ್ಮಲ್ಲಿ ಇನ್ನೂ ಬಿತ್ತನೆ ಕಾರ್ಯ, ಭತ್ತ ಸಸಿ ನಾಟಿ ಕಾರ್ಯ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗುವವರೆಗೆ ಯೂರಿಯ ರಸಗೊಬ್ಬರವನ್ನು ಮಾರಾಟ ಮಾಡಕೂಡದು ಎಂದರು.

ಯಾವುದೇ ಕಾರಣಕ್ಕೂ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವಂತಿಲ್ಲ, ನಿಗಧಿತ ದರದಲ್ಲಿ ಮಾರಾಟ ಮಾಡಬೇಕು. ನಕಲಿ ಉತ್ಪನ್ನಗಳ ಮಾರಾಟದ ಮೇಲೆ ಹದ್ದಿನ ಕಣ್ಣಿಡಲಾಗಿದೆ. ನಕಲಿ ಗೊಬ್ಬರ, ಅವಧಿ ಮುಗಿದ ಉತ್ಪನ್ನಗಳ ಮಾರಾಟಕ್ಕೆ ಕಡಿವಾಣ ಹಾಕಲು ನಮ್ಮ ಕೃಷಿ ಇಲಾಖೆ ಕಟ್ಟುನಿಟ್ಟಿನ ಕ್ರಮಕೈಗೊಂಡಿದೆ. ಅಂಗಡಿ, ಗೋದಾಮುಗಳಲ್ಲಿನ ರಸಗೊಬ್ಬರ ಸಂಗ್ರಹದ ರಿಜಿಸ್ಟರ್, ದರದ ಪಟ್ಟಿ, ನಾಮ ಫಲಕ, ಬೋರ್ಡ್, ಮಾರಾಟಕ್ಕೆ ಸಂಬಂಧಿಸಿ ಪಡೆದ ಪರವಾನಿಗೆಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ತಾಲೂಕಿನಲ್ಲಿ ರಸಗೊಬ್ಬರ ಕೊರತೆಯಿಲ್ಲ, ಬೇಡಿಕೆಯಷ್ಟು ದಾಸ್ತಾನಿದೆ, ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದರು.